Digitization by eGangotri and Sarayu Trust. Funding by MoE-IKS

ಶ್ರೀಃ

ಶ್ರೀಮತೇ ರಾಮಾನುಜಾಯ ನಮಃ

ಮಹಾಮಂಗಳಾರತಿ
ಶಾತ್ತುಮರೈ

(ಆಗಮಾಧ್ಯಯನಂ)

ಸಂಪಾದಕರು :
ಶ್ರೀ ಯದುಗಿರಿ ಯತಿರಾಜ ಸಂಪತ್ಕುಮಾರ
ರಾಮಾನುಜ ಜೀಯರ್ ಸ್ವಾಮಿಗಳು

R61
33N4

ಪ್ರಕಾಶಕರು :
ಶ್ರೀ ಮಣ್ಣಯಂ ಅಣ್ಣಾದೊರೈ ಶ್ರೀನಿವಾಸಯ್ಯಂಗಾರ್–
ಯದುಗಿರಮ್ಮ ಟ್ರಸ್ಟ್
ಅಪ್ಪಾಜಪ್ಪ ಅಗ್ರಹಾರ, ಚಾಮರಾಜಪೇಟೆ, ಬೆಂಗಳೂರು–560018

1994

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

RG1 8788
33N4

Jeeyar, Sampathi
Kumara Ramanuja
Mahamagalarathi.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

• ಶ್ರೀಮತೇ ರಾಮಾನುಜಾಯ ನಮಃ

Jangamawadimath, Varanasi
Acc. No.

ॐ

ಶ್ರೀವೈಷ್ಣವ ೧೦೮ ದಿವ್ಯಕ್ಷೇತ್ರಗಳಲ್ಲಿ
ಆಗಮಶಾಸ್ತ್ರಾನುಸಾರವಾಗಿ ನಡೆಯುವ

ಮಹಾಮಂಗಳಾರತಿ (ಶಾತ್ತುಮರೈ)

(ಆಗಮಾಧ್ಯಯನ)

ಸಂಪಾದಕರು :
ಶ್ರೀ ಯದುಗಿರಿ ಯತಿರಾಜ ಸಂಪತ್ಕುಮಾರ
ರಾಮಾನುಜ ಜೀಯರ್ ಸ್ವಾಮಿಗಳು

1994

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

MAHAMAGALARATHI (Kannada) writen by
Sri Sampathkumara Ramanuja Jeeyar,
Yadugiri Yatiraj Mutt, Karnataka
11th Cross' Malleswaram, Bangalore-560 003
PP 160 + 18 Price : Rs. 30-00

ಶ್ರೀ ಮೇಲುಕೋಟೆ ಶ್ರೀಯತಿರಾಜ ಮಠ

R61
33N4

ಎಲ್ಲ ಹಕ್ಕುಗಳೂ ಕಾದಿರಿಸಲ್ಪಟ್ಟಿವೆ.

S.J.V.J. PRATISHTHAN
LIBRARY
Jangamawadimath, Varanasi
Acc. No

ಬೆಲೆ : ರೂ. 30-00

ಪ್ರಕಟಣೆ : 1994 (ಆಗಸ್ಟ್)

SRI JAGADGURU VISHWARADHYA
JNANA SIMHASAN JNANAMANDAL
LIBRARY
Jangamwadi Math, Varanasi
ACC No. 8768

ಮುದ್ರಕರು ,
ವೇದಸೇವನಿರತ ಬ್ರಹ್ಮತೇಜ ಎಸ್. ವೆಂಕಟರಾಮಯ್ಯ
ಶ್ರೀ ಶಿವಜ್ಯೋತಿ ಆಫ್‌ಸೆಟ್ ಪ್ರಿಂಟರ್ಸ್
ನಂ. 1646, 21ನೇ ಮುಖ್ಯರಸ್ತೆ
ಬನಶಂಕರಿ ಮೊದಲನೆ ಹಂತ, 2ನೇ ವಿಭಾಗ
ಬೆಂಗಳೂರು – 560 050 ದೂರವಾಣಿ : 600259

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಅಭಿನಂದನೆ

ಶ್ರೀಮಠದ ಶಿಷ್ಯರೂ, ಅಭಿಮಾನಿಗಳೂ ಆಗಿದ್ದು ಅನೇಕ ಧರ್ಮಕಾರ್ಯಗಳನ್ನು ನಡೆಸಿರುವ ಗುರುಸೇವಾಧುರೀಣ, ಶ್ರೀವೈಷ್ಣವಸೇವಾನಿರತ ಡಾ॥ ಬಿ. ಕೆ. ಕೃಷ್ಣಯ್ಯನವರು ನಮ್ಮ ಹಿಂದೂ ಸಂಸ್ಕೃತಿಯ ವಿಷಯವಾಗಿ ಎಲ್ಲರಿಗೂ ತಿಳಿಯುವಂತೆ ಒಂದು ಗ್ರಂಥವನ್ನು ಬರೆಯಬೇಕೆಂದು ನಮಗೆ ಬಹಳ ದಿನಗಳಿಂದ ಹೇಳುತ್ತಿದ್ದರು. ಇದು ಸ್ವಲ್ಪ ಶ್ರಮಸಾಧ್ಯವಾದ ಕೆಲಸ, ಅದೇ ಸಮಯದಲ್ಲಿ ನಮಗೂ ಸಹ ಆಚಾರ್ಯರ ಪ್ರೇರಣೆಯಾದ್ದರಿಂದ ನಮ್ಮ ಹಿಂದೂ ಸಂಸ್ಕೃತಿಯವಾಗಿ ಬರೆಯಲು ಮಂಗಳಕರವಾಗಿರಬೇಕೆಂದು ದೇವಸ್ಥಾನದಲ್ಲಿ ನಡೆಯುವ ಪ್ರತಿಯೊಂದು ಕಾರ್ಯವನ್ನೂ ಕ್ರೋಡೀಕರಿಸಿ ಮಹಾಮಂಗಳಾರತಿ – ಶಾತ್ತುಮರೈ ಎಂಬ ಈ ಗ್ರಂಥವನ್ನು ಬರೆದೆವು. ಈ ಗ್ರಂಥವನ್ನು ಬರೆಯಲು ಪ್ರೋತ್ಸಾಹ ಕೊಟ್ಟ ಶ್ರೀಮಾನ್ ಡಾ॥ ಬಿ. ಕೆ. ಕೃಷ್ಣಯ್ಯ ಅವರಿಗೂ ಅವರ ಕುಟುಂಬಕ್ಕೂ

2. ಈ ಗ್ರಂಥ ಮುದ್ರಣ ವಿಷಯದಲ್ಲಿ ವಿಷಯ ಸಂಗ್ರಹ ಕಾರ್ಯಗಳ ಅರ್ಥ ಮುಂತಾದವುಗಳಲ್ಲಿ ಬರೆದು ಸಹಕರಿಸಿದ ರಾಜಾಜಿನಗರ ನಿವಾಸಿ ಶ್ರೀಮಠದ ಶಿಷ್ಯರಾದ ಶ್ರೀಮಾನ್ ರಾ. ಆ. ಶ್ರೀನಿವಾಸನ್ ಅವರ ಧರ್ಮಪತ್ನಿ ವಾಗಮೃತವರ್ಷಿಣಿ, ಉಪನ್ಯಾಸ ಕೇಸರಿ ಬಿರುದಾಂಕಿತ ಶ್ರೀಮತಿ ವಿದುಷಿ ರಮಾಮಣಿ ಅವರು ಅವರ ಕುಟುಂಬ ವಿಷಯದಲ್ಲೂ

3. ಈ ಗ್ರಂಥ ಬೆಳಕಿಗೆ ಬರಲು ಪ್ರಧಾನವಾಗಿ ಮುದ್ರಣ ವೆಚ್ಚ ಇತ್ಯಾದಿ ದ್ರವ್ಯ ಸಹಾಯ ಮಾಡಲು ಒಪ್ಪಿದ ಮಂಡಯಂ ಅಣ್ಣಾದೊರೆ ಶ್ರೀನಿವಾಸ ಅಯ್ಯಂಗಾರ್ – ಯದುಗಿರಮ್ಮ ಟ್ರಸ್ಟ್ ಅಧಿಕಾರಿವರ್ಗ ಮುಖ್ಯಸ್ಥರಾದ ಶ್ರೀ ಕೃಷ್ಣ ಅವರಿಗೂ

4. ಈ ಗ್ರಂಥದಲ್ಲಿ ವಿಶೇಷ ಅಭಿಮಾನವಿಟ್ಟು ಇದೇ ರೀತಿ ಇನ್ನೂ ಇತರ ಗ್ರಂಥಗಳನ್ನು ಬರೆಯಬೇಕೆಂದು ಪ್ರೋತ್ಸಾಹಿಸುವುದಲ್ಲದೆ ದ್ರವ್ಯ ಸಹಾಯವನ್ನು ಮಾಡುತ್ತಿರುವ ಶ್ರೀಮಠದ ಶಿಷ್ಯರಾದ ಜ್ಯೋತಿಷರತ್ನ ದೇವಶಿಖಾಮಣಿ ರಾಮಾನುಜ ಅವರಿಗೂ

5. ಈ ಗ್ರಂಥವನ್ನು ಬರೆಯಲು ಸಹಕಾರಿಯಾಗಿ ತಮ್ಮಲ್ಲಿದ್ದ ಆಗಮ ಮತ್ತು ಸಂಪ್ರದಾಯ ಗ್ರಂಥಗಳನ್ನು ನಮಗೆ ಕೊಟ್ಟು ಸಹಕರಿಸಿದ ವಕೀಲರೂ, ಶಿಷ್ಯರೂ ಆದ ಶ್ರೀಮಾನ್ ಮುತ್ತುರಾಜು ಅವರಿಗೂ

ಭಗವಂತನು ಇತೋಪ್ಯತಿಶಯವಾಗಿ ಭಗವಂತನಲ್ಲಿ ಭಕ್ತಿ ಧರ್ಮಕಾರ್ಯ, ನಮ್ಮ ಹಿಂದು ಸಂಸ್ಕೃತಿ ಕಾರ್ಯಗಳಲ್ಲಿ ಶ್ರದ್ಧೆ, ಆಸಕ್ತಿ, ಅದಕ್ಕನುಗುಣವಾಗಿ ಆಯುರಾರೋಗ್ಯ ಐಶ್ವರ್ಯಾದಿಗಳನ್ನು ಅನುಗ್ರಹಿಸಲೆಂದು ಆಶಿಸಿ ಮಾಡುವ ಮಂಗಲಾಶಾಸನಗಳು

ಶ್ರೀ ಯದುಗಿರಿ ಯತಿರಾಜ ರಾಮಾನುಜ ಜೀಯರ್ ಸ್ವಾಮಿಗಳು

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ವಿಷಯಸೂಚಿ

೧. ಇಷ್ಟಾಪೂರ್ತ, ಸಾಕಾರ–ನಿರಾಕಾರ ಪುಟ – ೩, ಅರ್ಚಾವತಾರ ೫. ಪ್ರತಿಷ್ಠಾ ೭, ದೇವಾಲಯ ಪೂರ್ವಚರಿತ್ರೆ ೧೦, ಆಲಯಾರ್ಚಾ–ಗೃಹಾರ್ಚಾ ೧೪, ಪೂಜಾ–ಉತ್ಸವಾದಿಗಳು ೧೬, ಪಂಚವಿಧಭಕ್ತರು ೧೭, ಗುರುಗಳು–ಆಚಾರ್ಯರುಗಳು ೨೦.

೨. ಸ್ಥಾನಾಚಾರ್ಯಲಕ್ಷಣ ೨೪, ಸನ್ಯಾಸಿ–ಮಠಾಧಿಪತ್ಯವಿಷಯ ೨೬.

೩. ಅರ್ಚಕ ಲಕ್ಷಣಂ ೨೬, ಅರ್ಚಕ–ಹಸ್ತಕರು (ಒಳ ಪರಿಚಾರಕರು) ೨೮, ಅರ್ಚಕ ಶ್ರೇಷ್ಠತ್ವ ೩೦, ೩೪, ಪಾಂಚರಾತ್ರ ದೀಕ್ಷಿತರು ೩೨, ಅರ್ಚಕರ ಪ್ರಥಮ ಮರ್ಯಾದೆ–ತೀರ್ಥ–ಪ್ರಸಾದ ವಿನಿಯೋಗ ಸಮನ್ವಯ ೩೬–೪೦.

೪. ಅಧ್ಯಾಪಕಾಃ ಶ್ರೇಷ್ಠತ್ವ–ಸನ್ಮಾನಾದಿ, ಅಧ್ಯಯನ ಪ್ರಶಸ್ತಿ, – ಅಧ್ಯಾಪಕರ ಸಂಖ್ಯಾನಿರ್ಣಯ ೪೧, ಮಂತ್ರ ಪುಷ್ಪಕಾಲ ೪೩, ಆಧ್ಯಾಪಕರ ಪ್ರಥಮ ಮರ್ಯಾದೆ ೪೪, ಪಾಚಕರು, ಇತರ ಪರಿಚಾರಕರು ೪೬, ಧರ್ಮ ಕರ್ತೃ ಲಕ್ಷಣ ೫೦.

೫. ಶ್ರೀ ಭಗವತ್ಪಾದುಕಾ (ಶ್ರೀಶಠಕೋಪ) ಚರಿತ್ರೆ ೫೩.

೬. ಆಗಮಾಧ್ಯಯನ – ಮಹಾಮಂಗಳಾರತಿ – ಶಾತ್ತುಮರೈ ಶಬ್ದಾರ್ಥವು (ದ್ರಾವಿಡ ಪ್ರಬಂಧ) ಶೇಷಶೇಷೀಭಾವ ೬೮.

೭. ಬಲಿಪೀಠ–ದೇವದಾಸೀ ವಿಚಾರ–ಬಲಿಪ್ರಧಾನಕ್ರಮ ೭೧, ವಿವಿಧ ನೃತ್ಯಗಳ ಹೆಸರು ೭೬.

೮. ನಮಸ್ಕಾರ ಪ್ರಕರಣವು, ಸಾಷ್ಟಾಂಗ – ಪಂಚಾಂಗ ಇತ್ಯಾದಿ ಪಂಚವಿಧ ಪ್ರಣಾಮ ಪ್ರಕಾರವು ೭೮, ಏಕಹಸ್ತ ನಮಸ್ಕಾರ ೮೧.

೯. ಪ್ರದಕ್ಷಿಣವಿಧಿ ೮೫, ಛಾಯಾಲಂಘನ ವಿಷಯ ೯೩, ಜಾನು ಪ್ರದಕ್ಷಿಣಂ ೯೬, ಶಿವಾಲಯೇ ಪ್ರದಕ್ಷಿಣ ಪ್ರಕಾರ ೯೭, ಅಂಗ ಪ್ರದಕ್ಷಿಣ ೧೦೩, ಶಿವಲಿಂಗ ದರ್ಶನ ಪ್ರಕಾರ ೧೦೭,

೧೦. ಪ್ರದಕ್ಷಿಣ ಕಾರಣ, ಭಗವಂತನ ದರ್ಶನಕ್ಕೆ ಮೊದಲು ಪುರುಷಕಾರಿ ಸ್ವರೂಪಿಣಿಶ್ರೀಯಾದ ದರ್ಶನವು ೧೧೦.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

೧೧. ಭಗವಂತನ ಸಮೀಪದಲ್ಲಿ ಅವನ ಅನುಗ್ರಹಕ್ಕಾಗಿ ನಿಲ್ಲುವ ಕ್ರಮ ೧೧೧.

೧೨. ವ್ಯೂಹಾಮಂಗಳಾರತಿ – ದೀಪವಿಷಯ, ಕುಂಭಾರ್ತಿ (ಘಟದೀಪ), ನಕ್ಷತ್ರಾರತಿ – ಆರತಿಭ್ರಮಣ ಕ್ರಮ, ಆರತಿ ವಿಸರ್ಜನ ಕ್ರಮ – ಕರ್ಪೂರಾರತಿ – ನಿರಾಜನ ಆರತಿ – ಅರ್ಥ ಅದರ ಫಲ ೧೧೨.

೧೩. ಶಾತ್ತುಮರೈ – ವೇದ – ಉಪನಿಷತ್ ಭಾಗ – ಪಠನ – ದ್ರಾವಿಡವೇದ – ಶಾತ್ತುಮರೈ

೧೪. ಭಗವಂತನ ಅನುಗ್ರಹರೂಪ ಪಾದುಕಾ (ಶ್ರೀಶಠಕೋಪ) ತ್ರಿವಾರ, ಪಂಚವಾರ ಮರ್ಯಾದೆ ೧೩೩, ನಿರ್ಮಾಲ್ಯ ಭಗವತ್ತೀರ್ಥ ಪ್ರಾಶನ ಕ್ರಮ ಅಗ್ರಮರ್ಯಾದೆ – ಪ್ರಸಾದ ವಿನಿಯೋಗ ಕ್ರಮ ೧೪೦.

೧೫. ಭಗವತ್ಪಾದುಕಾ (ಶ್ರೀಶಠಕೋಪ) ವನ್ನು ಗರ್ಭಗೃಹದಿಂದ ಹೊರಕ್ಕೆ ಬರುವ ಕ್ರಮ – ಮಠಾಧಿಪತಿಗಳು ಆಚಾರ್ಯ ಪುರುಷರ ಮರ್ಯಾದಕ್ರಮವು, ಸನ್ಮಾನಾದಿಗಳು, ಸನ್ಮಾನಾದಿ ಮಠಾಧಿಪತಿಗಳಿಗೆ ಭಗವಂತನ ಅನುಗ್ರಹ ಮರ್ಯಾದಾ ಕ್ರಮವು. ೧೪೯.

೧೬. ಸಂಸ್ಕೃತ ವೇದ – ದ್ರಾವಿಡ ವೇದ ಸಮರ್ಥನೆ ೧೫೨

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಈ ಗ್ರಂಥದಲ್ಲಿ ಉದಹರಿಸಿರುವ ಪ್ರಮಾಣ ಗ್ರಂಥಗಳು

ಪಾಂಚರಾತ್ರ

೧. ಪಾದ್ಮ ಸಂಹಿತಾ
ಹಿರಣ್ಯಗರ್ಭ ಸಂ
ಅನಿರುದ್ಧ ಸಂ
ಪುರುಷೋತ್ತಮ ಸಂ

❋

೫. ಪರಮಪುರುಷ ಸಂ
ಪಾರಮೇಶ್ವರ ಸಂ
ಪೌಷ್ಕರಸಂ(ಅಮುದ್ರಿತಭಾಗ
ಪದ್ಮೋದ್ಭವ ಸಂ
ಬೃಹನ್ನಾರದೀಯ ಸಂ

❋

೧೦. ಮಾರ್ಕಂಡೇಯ ಸಂ
ವಿಷ್ಣು ಸಂ
ಶ್ರೀ ವಿಷ್ಣುತಿಲಕ ಸಂ
ಶಾಂಡಿಲ್ಯ ಸಂ

❋

೧೫. ಶೌನಕ ಸಂ
ಶ್ರೀಪ್ರಶ್ನ ಸಂ
ತಪಿಂಜಲ ಸಂ
ಶೈವಾಗಮವು

❋

೧. ಸುಪ್ರಭೇದ
ಶೈವಾಗಮ ಸಾರ
ಕಪರ್ದಿಸಂ
ಪೂರ್ವಕಾರಣಾಗಮ

ವೈಖಾನಸಗ್ರಂಥಗಳು

೧. ವಾಸಾಧಿಕಾರ
ಪ್ರಕೀರ್ಣಾಧಿಕಾರ
ಅರ್ಚನಾನವನೀತ
ಕ್ರಿಯಾಧಿಕಾರ

❋

೫. ವಿಮಾನಾರ್ಚನಾಕಲ್ಪ
ಅರ್ಚನಾತಿಲಕ
ಯಜ್ಞಾಧಿಕಾರ
ಸಮೂರ್ತಾರ್ಚನ
ಆನಂದ ಸಂ

❋

೧೦. ಶಾಂಡಿಲ್ಯ ಧರ್ಮಶಾಸ್ತ್ರ
ವಿಶಿಷ್ಟ ಧರ್ಮಶಾಸ್ತ್ರ
ಭಗವದ್ವಿಷಯ
ಕುರಾಶರ ವಿಶಿಷ್ಟ
ಧರ್ಮಶಾಸ್ತ್ರ

ಪುರಾಣ

೧. ವಿಷ್ಣುಧರ್ಮೋತ್ತರ
ಬ್ರಹ್ಮಾಂಡಪುರಾಣ
ಕೂರ್ಮಪುರಾಣ
ಪದ್ಮಪುರಾಣ

ಸ್ಮೃತಿ ರತ್ನಾಕರ
ವೈದ್ಯನಾಥೀಯ
ಆಹ್ನಿಕಾಂಡ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಶ್ರೀಮತೇ ರಾಮಾನುಜಾಯ ನಮಃ

ಶ್ರೀರಂಗ ಸದ್ಗುರುವೇ ನಮಃ

ಶ್ರೀಮತ್ಪರಮಹಂಸೇತ್ಯಾದಿ ಪರಮಪೂಜ್ಯ ಶ್ರೀ ಯತಿರಾಜ ಸಂಪತ್ಕುಮಾರ ರಾಮಾನುಜ ಜೀಯರ್ ಶ್ರೀ ಶ್ರೀಗಳವರು ಆಸ್ತಿಕ ಭಕ್ತಜನರ ಮತ್ತು ಹಿಂದು ಸಂಸ್ಕೃತಿ ಪ್ರೇಮಿಗಳ ಆತ್ಮವಿಕಾಸ ಪ್ರಕಾಶ ಮತ್ತು ಆನಂದಾನುಭವಕ್ಕಾಗಿ ರಚಿಸಿ ಅನುಗ್ರಹಿಸಿರುವ ಈ ಹಿರಿಯ ಶ್ರೇಷ್ಠ ವಿಷಯಗಳನ್ನೊಳಗೊಂಡ ಕಿರು ಹೊತ್ತಗೆಯ ಮೊದಲನೆಯ ಓದುಗನಾಗಿರುವ ಭಾಗ್ಯ ನನಗೆ ದೊರಕಿರುವುದು ತುಂಬಾ ಸಂತೋಷದ ವಿಷಯ, ಭಾರತೀಯ ದೇವಾಲಯಗಳು, ದೇವತಾ ಸಾನ್ನಿಧ್ಯ ವಿದ್ಯೆ ಮತ್ತು ಕಲೆಗಳ ಕೇಂದ್ರಗಳಾಗಿವೆ. ಇಂತಹ ಅತಿ ಪ್ರಮುಖವಾಗಿ ಅಮೂಲ್ಯವಾಗಿರುವ ವಿಷಯವನ್ನು ಕುರಿತು ಗ್ರಂಥ ಬರೆಯುವವರಿಗೆ ಆಗಮ ಶಾಸ್ತ್ರಗಳ ಅರಿವು, ಶಿಲ್ಪ ಕಲಾ ವಿಜ್ಞಾನ, ಸಂಶೋಧನೆಯ ಅನುಭವ ಮತ್ತು ಸಂಪ್ರದಾಯಗಳ ತಿಳುವಳಿಕೆ ಇಷ್ಟೆಲ್ಲಾ ಅರ್ಹತೆಗಳೂ ಇರಬೇಕು. ಎಲ್ಲಾ ವೈಭವಗಳಿಂದಲೂ ಸಂಪನ್ನರಾಗಿರುವರು ಶ್ರೀಶ್ರೀಗಳವರು.

ಈ ಶ್ರೀಕೋಶದಲ್ಲಿ ದೇವಾಲಯಗಳ ಪೂರ್ವ ಚರಿತ್ರೆ, ಭಗವಂತನ ಅರ್ಚಾವತಾರ ವಿಮರ್ಶೆ. ಆಚಾರ್ಯರು ಗುರುಗಳ ಅವಶ್ಯಕತೆ ಅಪರ ಪ್ರತಿಷ್ಠೆ, ಶ್ರೀಶಠಕೋಪ ಭಗವತ್ಪಾದುಕಾ ವಿಷಯ ಅನುಗ್ರಹ, ಎಲ್ಲದಕ್ಕೂ ಶಾಸ್ತ್ರಪಂಕ್ತಿ ಅವುಗಳ ಅರ್ಥ, ಭಾವ ಮತ್ತು ಉಪಪತ್ತಿಗಳಿಂದ ಸಂಕ್ಷಿಪ್ತವಾಗಿ ಪರಿಚಯ ಮಾಡಿಕೊಟ್ಟಿರುವುದನ್ನು ನೋಡುತ್ತೇವೆ.

ಅರ್ಚಕ, ಆಚಾರ್ಯ, ಅಧ್ಯಾಪಕರೇ ಮುಂತಾದ ಪದಾಧಿಕಾರಿಗಳ ಮರ್ಯಾದೆಯನ್ನು ತಿಳಿಸುತ್ತಾ ಅದಕ್ಕೆ ತಕ್ಕಂತೆ ಅವರ ಯೋಗ್ಯತೆ, ಅಧಿಕಾರ, ಮರ್ಯಾದೆಗಳನ್ನು ಖಚಿತವಾದ ಅಭಿಪ್ರಾಯಗಳಲ್ಲಿ ಸ್ಪಷ್ಟ ಪಡಿಸಿರುವುದು ತುಂಬಾ ಉಚಿತವಾಗಿದೆ. ಆಚಾರ್ಯ ಪುರುಷರು ಮರ್ಯಾದೆಯನ್ನು ಸ್ವೀಕರಿಸುವುದು ತಮಗೋಸ್ಕರವಲ್ಲ. ಆಳ್ವಾರಾಚಾರ್ಯರ ಪ್ರತಿನಿಧಿಗಳಾಗಿ ಮಾತ್ರವೇ–

ಈ ಗ್ರಂಥದಲ್ಲಿ ಯಾವುದೇ ಒಂದು ಆಗಮದ ಪ್ರಕಾರ ವಿಷಯವನ್ನು ನಿರೂಪಣೆ ಮಾಡದೆ ಅನೇಕ ಆಗಮಗಳ ಅಭಿಪ್ರಾಯಗಳನ್ನು ಮಂಡಿಸಿರುವುದು ಗೊಂದಲಕ್ಕೆ ಕಾರಣವಾಗಿದೆ. ಈ ಆಕ್ಷೇಪವನ್ನು ಯಾರೂ ಮಾಡಬಾರದು ಉಳಿದ ಆಗಮಗಳ ಪರಿಚಯವಿಲ್ಲದೆ ಯಾವುದೇ ಆಗಮದ ಬಗೆಗೂ ಖಚಿತವಾದ ತಿಳುವಳಿಕೆ ಬರುವುದಿಲ್ಲ. ಅನ್ಯ ತಂತ್ರವಿದಶ್ಚೈವ ಎಂದು ಅರ್ಚಕ ಲಕ್ಷಣಗಳಲ್ಲಿ ಪುರಾಣಗಳಲ್ಲಿ ಪುರಾವೆಯೇ ಇದೆಯಲ್ಲವೇ! ಇತರ ಆಗಮ ವಿಷಯಗಳನ್ನೂ ತಿಳಿದಿರುವುದು

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಒಳ್ಳೆಯದಲ್ಲವೇ ? ಆಗಮ ಸಾಂಕರ್ಯವಾಗದಂತೆ ತಂತ್ರಗಳನ್ನು ಕಾಪಾಡುವುದಕ್ಕೆ ಸಹಾಯವಾಗುತ್ತದೆ. ಈ ವಿಷಯದಲ್ಲಿ ರಾಷ್ಟ್ರಕವಿ ಕಾಳಿದಾಸರ ವಚನವನ್ನು ಗಮನಿಸಬಹುದು.

ಬಹುಧಾಪ್ಯಾಗಮ್ಯೆರ್ಭಿನ್ನಾಃ ಪಂಥಾನನ್ಯೇ ದ್ಧಿಹೇತವಃ ।
ತ್ವಯ್ಯೇವ ನಿಪತನ್ತ್ಯೋಘಃ ಜಾಹ್ನವೀವ ಇವಾರ್ಣವೇ ॥

ಶಾತ್ತುಮರ್ರೈ ಶಬ್ದಾರ್ಥವನ್ನು ಸಂಸ್ಕೃತ, ದ್ರಾವಿಡ ವೇದಗಳೆರಡಕ್ಕೂ ಸಮನ್ವಯ ಮಾಡಿರುವುದು ಶಾಸ್ತ್ರ ಸಂಪ್ರದಾಯಗಳಿಗೆ ಅತ್ಯಂತ ಸಮುಚಿತವಾಗಿದೆ.

ಸಹಸ್ರ ಶಾಖೋಪನಿಷತ್ಸಮಾಗಮಂ
ನಮಾಮ್ಯಹಂ ದ್ರಾವಿಡ ವೇದ ಸಾಗರಂ

ಭಾಷಾ ಗೀತಃಪ್ರಶಸ್ತಾ ಎಂಬ ಭಗವತದ್ವಚನಾತ್ ರಾಜವಚ್ಚೋಪಚಾರಾತ್ ಸಾಚಾಗನ್ತ್ಯಾ ಪ್ರಸೂತಾವ್ವೇತಿ ಪರಿದಗ್ಭೃಹೇ ಭೂಮಿಕಾಖೇದಯೋಗ್ಯಾಃ–

ಎಂಬ ಶ್ರೀಮದಾಚಾರ್ಯ ವಚನವೂ ಈ ವಿಷಯಕ್ಕೆ ಪೋಷಕವಾಗಿದೆ.

ಈ ಗ್ರಂಥವನ್ನು ಶೀಘ್ರಕಾಲದಲ್ಲಿ ಪ್ರಕಟಿಸುವ ರಭಸದಲ್ಲಿ ಮುದ್ರಣ ದೋಷಗಳು ಆಗಿವೆಯೆಂದು ಭಾವಿಸುತ್ತೇವೆ. ಮುಂದಿನ ಸಂಸ್ಕರಣಗಳಲ್ಲಿ ಈ ದೋಷಗಳು ಇರುವುದಿಲ್ಲವೆಂದು ಆಶಿಸುತ್ತೇವೆ. ಈ ಅಮೂಲ್ಯ ಗ್ರಂಥವು ತಮಿಳು, ತೆಲುಗು ಮುಂತಾದ ಇತರ ಭಾಷೆಗಳ ಮೂಲಕವೂ ಪ್ರಾಚುರ್ಯಕ್ಕೆ ಬಂದು ಬಹು ಜನರಿಗೆ ಉಪಯೋಗವಾಗಲೆಂಬುವುದು ನಮ್ಮ ಹಾರೈಕೆ.

ಗ್ರಂಥ ಪ್ರಕಾಶಕರಿಗೆ ಎಲ್ಲ ಸಂಸ್ಕೃತಿ ಪ್ರೇಮಿಗಳ ಕೃತಜ್ಞತೆಗಳು.

ಬೆಂಗಳೂರು
ಶ್ರಾವಣಶುದ್ಧ ಪೌರ್ಣಮಿ
21–8–1994

ಇತಿ ನಾರಾಯಣ ಸ್ಮೃತಯಃ
ಶ್ರೀ ಶ್ರೀರಂಗಪ್ರಿಯ ಶ್ರೀಪಾದ ಶ್ರೀಶ್ರೀಃ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಮುನ್ನುಡಿ

ಶ್ರೀಃ
ಶ್ರೀಮತೇ ರಾಮಾನುಜಾಯ ನಮಃ
ಧರ್ಮೋರಕ್ಷತಿ ರಕ್ಷಿತಃ

ಭಾರತೀಯ ಹಿಂದೂ ಸನಾತನ ಧರ್ಮವನ್ನು ಕಾಪಾಡಿದರೆ, ರಕ್ಷಿಸಿದರೆ ಕಾಪಾಡುವವರಿಗೆ ಸಹಾಯ ಮಾಡಿದರೆ, ಆ ಧರ್ಮವು ನಮ್ಮನ್ನೂ, ನಮ್ಮ ಕುಟುಂಬ, ಮಕ್ಕಳು, ನಮ್ಮ ಗ್ರಾಮ, ದೇಶ, ರಾಜ್ಯ, ನಮ್ಮ ರಾಷ್ಟ್ರ ಈ ಅಖಿಲ ಚರಾಚರ ಪ್ರಪಂಚವನ್ನೂ ರಕ್ಷಿಸಿ ಕಾಪಾಡುತ್ತವೆ.

ಪ್ರತಿಯೊಬ್ಬ ವ್ಯಕ್ತಿಯೂ ತನ್ನ ಧರ್ಮ ಸಂಪ್ರದಾಯ, ನಂಬಿಕೆಗಳಿಗೆ ಅನುಗುಣವಾಗಿ ಭಗವಂತನ ಯಾವುದಾದರೊಂದು ರೂಪದ ಸ್ಮರಣೆ, ಧ್ಯಾನ ಪೂಜಾದಿಗಳನ್ನು ಮಾಡುವುದಲ್ಲದೆ ಸಾರ್ವಜನಿಕರು ಸಾಮೂಹಿಕವಾಗಿ ಒಂದೆಡೆ ಸೇರಿ ಭಗವಂತನ ಆರಾಧನೆಗಳಲ್ಲಿ ಭಾಗವಹಿಸಿ ತಮ್ಮ ಐಹಿಕ ಮತ್ತು ಆಮು ಷ್ಮಿಕ ಪ್ರಯೋಜನಗಳನ್ನು ಪಡೆಯುವುದು ಭಾರತದ ಸಂಸ್ಕೃತಿಯ ಒಂದು ಅಂಗವಾಗಿದೆ. ಕಲಿಯುಗದಲ್ಲಿ ಭಗವಂತನು ಅರ್ಚಾವತಾರವಾಗಿ ಮೂರ್ತಿಗಳ ರೂಪದಲ್ಲಿ ಭಕ್ತರನ್ನು ಅನುಗ್ರಹಿಸುವನಾದ್ದರಿಂದ ಆ ಮೂರ್ತಿಗಳಿಗೆ ಆಲಯಗ ಳನ್ನು ನಿರ್ಮಿಸಿ, ಸೇವಾವಕಾಶ ದೊರಕುವಂತೆ ರಾಜರುಗಳು ಮತ್ತು ಧರ್ಮ ದೃಷ್ಟಿಯುಳ್ಳ ಶ್ರೀಮಂತರು ಆ ವಿಧದ ಅವಕಾಶಗಳನ್ನು ಕಲ್ಪಿಸುವುದು ರೂಢಿ ಯಾಗಿ ಭಾರತದಲ್ಲಿ ಪ್ರಾಯಃ ಒಂದು ದೇವಾಲಯವಾದರೂ ಇಲ್ಲದ ಊರು ಕಾಣಿಸಲಾರದು.

ಭಾರತ ದೇಶದಲ್ಲಿ ನಮ್ಮ ದೇವಾಲಯಗಳು ಪುನರುಜ್ಜೀವನವನ್ನು ಹೊಂದಿ ನಿಂತಿರುವುದಕ್ಕೆ ನಮ್ಮ ಆಮುಷ್ಮಿಕ ಶ್ರದ್ಧೆಯೇ ಕಾರಣವಾಗಿರುವುದು. ಭಾರತೀಯ ರಾದ ನಮ್ಮ ಸಂಸ್ಕೃತಿಯ ಪ್ರತೀಕವೇ ದೇವಾಲಯಗಳು. ನಮ್ಮ ಸಂಸ್ಕೃತಿಯ ಬಲದಿಂದಲೇ ದೇವಾಲಯಗಳು ನಿರ್ಮಿಸಲ್ಪಟ್ಟು ಆ ಸೇತು ಹಿಮಾಚಲ ಪರ್ಯಂತ ಒಂದು ಜನಾಂಗವಾಗಿ ಭಾರತದೇಶ ಎಂಬುದಾಗಿ ಪ್ರಸಿದ್ಧಿ ಪಡೆದಿ ರುವುದು. ಭಾರತೀಯ ಹಿಂದುಸಂಸ್ಕೃತಿಗೆ ಆಧಾರಭೂತವಾದ ದೇವಾಲಯಗಳ ನಿರ್ಮಾಣ, ವಿಗ್ರಹ ಪ್ರತಿಷ್ಠೆ, ಧ್ಯಾನ ಪೂಜಾದಿಗಳು ಇಲ್ಲವಾದಲ್ಲಿ ಸಂಸ್ಕೃ ತಿಯೂ ಇಲ್ಲ, ತದನುಗುಣವಾಗಿ ಒಂದು ಜನಾಂಗವೂ ಇಲ್ಲ. ನಾವು ಭಾರ ತೀಯರೆಂದು ಹೇಳಿಕೊಳ್ಳಲು ಸಾಧ್ಯವೂ ಇರುವುದಿಲ್ಲ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

॥

ಈ ರೀತಿ ಪೂಜಾ ವಿಧಾನಗಳನ್ನು ವಿವರಿಸಲು ಆಗಮಶಾಸ್ತ್ರಗಳು, ಮಂದಿರಾದಿಗಳ ನಿರ್ಮಾಣ ವಿಧಿಗಳ ವಿವರಣೆಗೆ ಶಿಲ್ಪಶಾಸ್ತ್ರಗಳೂ ಏರ್ಪಟ್ಟಿವೆ. ಯಾವ ಕಾರ್ಯವನ್ನೂ ನಿಯಮಬದ್ಧವಾಗಿ ಮಾಡುವುದರಿಂದ ಸುಗಮವಾಗಿಯೂ ಸುಖಕರವಾಗಿಯೂ ಕೆಲಸವು ಕೈಗೂಡುತ್ತದೆ.

ಶಿಲ್ಪಶಾಸ್ತ್ರ, ಆಗಮಶಾಸ್ತ್ರ, ಪುರಾಣ, ಧರ್ಮಶಾಸ್ತ್ರ ಇತ್ಯಾದಿ ಗ್ರಂಥಗಳನ್ನು ಪರಿಶೀಲಿಸಬೇಕು. ಜೊತೆಗೆ ಪ್ರತ್ಯಕ್ಷ ಜ್ಞಾನವೂ, ಪರಂಪರಾ ಜ್ಞಾನವೂ ಆವಶ್ಯಕವು. ವಜ್ರ ವೈಢೂರ್ಯಾದಿ ನವರತ್ನಗಳು ಪ್ರಕಾಶಮಾನವಾಗಿದ್ದರೂ ಸ್ವರ್ಣ ಸಹಾಯವಿಲ್ಲದೆ ಶೋಭಾಯಮಾನವಾಗುವುದಿಲ್ಲ. ಅಂತೆಯೇ ಆಗಮ ಪುರಾಣ ಧರ್ಮಶಾಸ್ತ್ರಗಳ ಆವಶ್ಯಕತೆ ಪರಿಶೀಲಿಸಿದಲ್ಲಿ ವಿಷಯಗಳು ಸಮಂಜಸವಾಗಿ ತಿಳಿಯಬರುವುದು.

ಮುಖ್ಯವಾಗಿ ಮಹಾಮಂಗಳಾರತಿ- ಶಾತ್ತುಮರೈ ಸಮಯದಲ್ಲಿ ಇಂತಿಂಥವರಿಗೆ ಅಗ್ರಮರ್ಯಾದೆ -ಅಗ್ರತೀರ್ಥ ಎಂಬುದಾಗಿ ಆಗಮಶಾಸ್ತ್ರದಲ್ಲಿ ಎಲ್ಲೂ ಹೇಳಿರುವುದಿಲ್ಲ. ದೇವಸ್ಥಾನದಲ್ಲಿ ಪ್ರತಿಷ್ಠಿತವಾಗುವುದು, ಪ್ರತಿಷ್ಠಿತವಾಗಿರುವುದು ಕೇವಲ ಮೂರು ವಿಗ್ರಹ = ಮೂರ್ತಿಗಳು. 1. ಪರಾತ್ಪರವಸ್ತು ದೇವರು 2. ಶ್ರೀಮಹಾಲಕ್ಷ್ಮೀ (ಪುರುಷಕಾರ ಭೂತೆ) 3. ಭಕ್ತಬಿಂಬ. ಇತರ ವಿಗ್ರಹ = ಮೂರ್ತಿಗಳು ಇದ್ದಲ್ಲಿ ಅದು ವಿಭವ ಎಂದರೆ ಐಶ್ವರ್ಯ ಮತ್ತು ಜನ ಸಹಾಯ ಇದ್ದಲ್ಲಿ ಆಗಬಹುದು. ಪರಿವಾರ ದೇವತೆಗಳೆಂದೂ ಹೇಳುವರು. ಇವುಗಳಲ್ಲಿ ಭಕ್ತ ಬಿಂಬದ ವಿಷಯವಾಗಿ ಪೂರ್ಣ ವಿವರವನ್ನು - ಪುಟ 17 ರಿಂದ 23ರ ವರೆಗೆ ಬರೆದಿರುವುದು. ಅದರಲ್ಲಿ ಭಕ್ತಬಿಂಬ ಎಂದರೆ ಆಳ್ವಾರಾಚಾರ್ಯರ ವಿಗ್ರಹ ಪ್ರತಿಷ್ಠಿತವಾಗಿಲ್ಲದಿದ್ದಲ್ಲಿ ಆ ದೇವಸ್ಥಾನದಲ್ಲಿ ತೀರ್ಥ ಪರಿಗ್ರಹಕ್ಕೆ ಅವಕಾಶವಿಲ್ಲವೆಂದು ತಿಳಿಸಿರುವುದು. ಅಲ್ಲದೆ ತೀರ್ಥ ಪ್ರಸಾದ ಸ್ವೀಕರಿಸುವುದಕ್ಕೂ ಕಾರಣವನ್ನು ತಿಳಿಸಿರುವುದಲ್ಲದೆ, ದೇವಸ್ಥಾನದಲ್ಲಿ ನಡೆಯುವ ಮಹಾ ಮಂಗಳಾರತಿ ಕಾಲದಲ್ಲಿ ನಡೆಯುವ ತೀರ್ಥ ಪ್ರಸಾದ ಶ್ರೀಶಠಕೋಪ ಮರ್ಯಾದೆಗಳು ಅವರಿಗೆ ಸೇರಿದುದೆಂದು ಸಕಾರಣವಾಗಿ ಪುಟ 19 ರಿಂದ 23ನೇ ಪುಟದವರೆಗೂ ವಿವರಿಸಿರುವುದು. ಈ ಆಗಮಶಾಸ್ತ್ರ ಪ್ರಕ್ರಿಯೆಯನ್ನೆಲ್ಲಾ ಕ್ರೋಢೀಕರಿಸಿ ವಿಶಿಷ್ಟಾದ್ವೈತ ವೇದಾಂತದ ಸ್ಥಾಪನೆಗಾಗಿ 74 ಚತುಸಪ್ತತಿ ಸಿಂಹಾಸನಾಧಿಪತಿಗಳನ್ನು ಏರ್ಪಡಿಸಿದಾಗ ಆಳ್ವಾರಾಚಾರ್ಯರುಗಳಿಗೆ ಪ್ರತಿನಿಧಿಯಾಗಿ ದೇವಸ್ಥಾನಗಳನ್ನು ನೋಡಿಕೊಂಡು ತೀರ್ಥ ಪ್ರಸಾದ ಶ್ರೀಶಠಕೋಪ ಮರ್ಯಾದೆಗಳನ್ನು ಹೊಂದುವುದೆಂದು ಏರ್ಪಡಿಸಿದರು. ತದಾರಭ್ಯ ಏತತ್ಪರ್ಯಂತವಾಗಿ ನಡೆದುಬರುತ್ತಿರುವುದು.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಆಳ್ವಾರಾಚಾರ್ಯರ ಪ್ರತಿನಿಧಿಯಾಗಿ ಮರ್ಯಾದೆಯನ್ನು ಸ್ವೀಕರಿಸುವುದಕ್ಕೆ ಯಾರುಬೇಕಾದರೂ ಆಗಬಹುದು. ಆಗ ಮೊದಲು ಅಗ್ರತೀರ್ಥ - ಅಗ್ರಮರ್ಯಾದೆ ಎಂದರ್ಥವಲ್ಲ. ಹಾಗೆ ಹೇಳಿದರೂ ಅದು ಆಳ್ವಾರಾಚಾರ್ಯರಿಗೆ ಸಲ್ಲುವುದೇ ಹೊರತು ಪ್ರತಿನಿಧಿಯಾಗಿ ನಿಂತವರಿಗೆ ಅಲ್ಲ. ಪ್ರತಿದಿನವೂ ಪ್ರತಿನಿಧಿಗಳನ್ನು ಬದಲಾಯಿಸುತ್ತಿದ್ದರೆ ಅವ್ಯವಸ್ಥೆಯುಂಟಾಗಬಹುದೆಂದು ಪ್ರತಿನಿಧಿಯಾಗಿ ನಿಂತವರ ವಂಶ ಪರಂಪರೆ ಅಥವಾ ಶಿಷ್ಯ ಪರಂಪರೆ ಇತ್ಯಾದಿ ನಿಯಮಗಳನ್ನೇರ್ಪಡಿಸಿದರು. ಕಾರಣ ಅವರಿಗೆ ದೇವಸ್ಥಾನವು ಸಕ್ರಮವಾಗಿ ನಡೆಯಲು ಅಭಿಮಾನ, ಪ್ರೀತಿ ಬರಲೆಂದು ಮಾಡಿದ ಕ್ರಮವೇ ಹೊರತು ಬೇರೆಯಲ್ಲ. ಕಾಲಕ್ರಮದಲ್ಲಿ ಪ್ರತಿನಿಧಿಯಾಗಿ ಅಗ್ರಮರ್ಯಾದೆಯನ್ನು ಸ್ವೀಕರಿಸುತ್ತಿದ್ದುದನ್ನು ಮರೆತು ತಾವೇ ತಮ್ಮ ವಂಶದವರೇ ಅಗ್ರತೀರ್ಥ ಮರ್ಯಾದೆ ಹೊಂದತಕ್ಕವರೆಂದು ಹೇಳುವುದಾಯಿತು. ಇವರಿಗೆ ಅಗ್ರಮರ್ಯಾದೆ ಏರ್ಪಡಿಸಿದವರಾರು ? ಕಾರಣವೇನು ? ಇದಕ್ಕಾಗಿ ಆಗಮಶಾಸ್ತ್ರದಲ್ಲಿ ಈ ವಿಷಯವನ್ನು ಸ್ಪಷ್ಟವಾಗಿ ತಿಳಿಸಲು 1. ಸ್ಥಾನಾಚಾರ್ಯರು -ಮಠಾಧಿಪತಿಗಳು, ಆಚಾರ್ಯ ಪುರುಷರು, ಅಧ್ಯಾಪಕರು ಇತ್ಯಾದಿಗಳಿಗೆ ಮೊದಲುತೀರ್ಥ ಮರ್ಯಾದೆಯನ್ನು ವಿವರಿಸಿರುವುದು ಈ ವಿಷಯದಲ್ಲಿ ವಿವರವಾಗಿ ಈ ಪುಟ್ಟ ಗ್ರಂಥದಲ್ಲಿ ಬರೆಯಲಾಗಿದೆ.

ಸ್ಥಾನಾಚಾರ್ಯ ವಿಷಯ ಪುಟ 24-30 |
| ವಿವರಿಸಿರುವುದು
ಅಧ್ಯಾಪಕರ ವಿಷಯ 41-46ವರೆಗೆ |

ಅರ್ಚಕರ ವಿಷಯವು ಈ ಅಗ್ರತೀರ್ಥಮರ್ಯಾದೆ ಇತ್ಯಾದೆ ವಿಷಯಗಳಿಗೆ ಸಂಬಂಧಪಟ್ಟಿರುವುದಿಲ್ಲ. ಆದರೂ ಅವರ ವಿಷಯವಾಗಿ 26-40 ಪುಟ. ಈ ವಿಷಯದಲ್ಲಿ ಸಮನ್ವಯ, ಸಮಾಧಾನವನ್ನು ಪುಟ 38ರಲ್ಲೂ ಅವರಿಗೆ ಪ್ರಥಮ ಮರ್ಯಾದೆಯೆಂದು ತಿಳಿಸುವುದನ್ನೂ, ಪುಟ 40ರಲ್ಲೂ ವಿವರವಾಗಿ ತಿಳಿಸಿರುತ್ತೆ.

ಇನ್ನೊಂದು ವಿಷಯ - ಆಳ್ವಾರಾಚಾರ್ಯರಿಗೆ ಪ್ರತಿನಿಧಿಯಾಗಿ ಸ್ವೀಕರಿಸುವವರೆಲ್ಲಾ ಒಂದೇ ಸಮವಾಗಿರುವಾಗ ಮಠಾಧಿಪತಿ ಅಥವ ಆಚಾರ್ಯ ಪುರುಷರು, ಚತುಸಪ್ತತಿ ಪೀಠಾಧಿಪತಿಗಳ ವಿಚಾರ ತಿಳಿಸುವಾಗ ಅವರವರ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಅಧಿಕೃತತೆಗೆ ಅನುಗುಣವಾಗಿ ಮರ್ಯಾದೆಯು ಪ್ರಥಮಾವರಣ, ದ್ವಿತೀಯಾವರಣ ತ್ರಿತೀಯಾವರಣ ಎಂದು ಹೇಳುವ ಅರ್ಥವೇನು ? ಉದ್ದೇಶವೇನು ? ಈ ವಿಷಯವು ಕೇವಲ ರಾಜತಾಂತ್ರಿಕ, ದ್ರವ್ಯ ಬಲದ ಮಾತೇ ವಿನಃ ಮತ್ತೆ ಬೇರೆ ಯಲ್ಲವು. ಅದು ಅಷ್ಟು ಪ್ರಾಮುಖ್ಯವಲ್ಲವು. ಇವೆಲ್ಲವೂ ದ್ರವ್ಯಾನುಕೂಲ ಮತ್ತು ಪರಿವಾರ ವರ್ಗದ ಬಲಾಬಲವನ್ನನುಸರಿಸಿ ಅಧಿಕ ಸಂಭ್ರಮ ಮಾಡುವುದೇ ಹೊರತು ಮತ್ತೆ ಬೇರೆಯಲ್ಲವು. ಈ ವಿಷಯವನ್ನು ಲಂಬಿಸಿ ಬರೆಯುವುದು ಅನವಶ್ಯಕವಾದ್ದರಿಂದ ಇಲ್ಲಿಗೆ ನಿಲ್ಲಿಸಲಾಗಿದೆ. ಅಧಿಕಾರ, ದ್ರವ್ಯದ ಬಲಾಬಲ ಪರಿವಾರವರ್ಗ ಇವುಗಳನ್ನನುಸರಿಸಿ ಸಂದರ್ಭವನ್ನನುಸರಿಸಿ ಅಧಿಕ ಸಂಭ್ರಮ ಪಡಬಹುದು.

ಈ ಗ್ರಂಥದಲ್ಲಿ ಇನ್ನೂ ಅನೇಕ ವಿಷಯಗಳನ್ನು ತಿಳಿಸಬೇಕೆಂಬ ಆಶೆ ಇದ್ದರೂ ಗ್ರಂಥವಿಸ್ತರ ಭಯದಿಂದ ಬರೆದಿರುವುದಿಲ್ಲ. ಪ್ರಸಾದ ವಿನಿಯೋಗ ವಿಷಯದಲ್ಲಿ ಕೆಲವು ವಿಷಯಗಳು ಬಿಟ್ಟುಹೋಗಿವೆ. ಅವುಗಳನ್ನು ಬರೆಯಬೇಕಾಗಿದ್ದಿತು. ಆ ವಿಷಯಗಳು ತಿಳಿದಿದ್ದರೂ ಪ್ರಮಾಣ ಪುರಸ್ಸರವಾಗಿ ಬರೆಯಬೇಕಾದ ಸಂಹಿತಾ ಗ್ರಂಥಗಳು ಸಮಯಕ್ಕೆ ದೊರಕದ್ದರಿಂದ ಬರೆಯಲಾಗಲಿಲ್ಲ.

ಪ್ರಕೃತ ಶ್ರೀವೈಷ್ಣವ ಅಷ್ಟೋತ್ತರಶತ ೧೦೮ ದಿವ್ಯ ದೇಶಗಳಲ್ಲಿರುವ ದೇವಸ್ಥಾನಗಳಲ್ಲಿ ಮಹಾ ಮಂಗಳಾರತಿ ಅಥವ ಶಾತ್ತುಮರೈ (ಆಗಮಾಧ್ಯಯನ) ಎಂಬುದನ್ನು ನಡೆಸುವರು. ಅದು ಆಗಮಶಾಸ್ತ್ರದಲ್ಲಿ ಹೇಗೆ ? ಯಾವ ರೀತಿ ಯಲ್ಲಿ ವಿವರಿಸಿರುವುದು ? ಭಕ್ತರಾದ ನಾವು ದೇವಸ್ಥಾನಕ್ಕೆ ಹೋದಲ್ಲಿ ಹೇಗೆ ನಡೆದುಕೊಳ್ಳಬೇಕು ? ಎಂಬುದನ್ನು ಪರಿಶೀಲಿಸೋಣ. ಅಲ್ಲದೆ ದೇವಸ್ಥಾನದಲ್ಲಿ ನಡೆಯುವ ಆಯಾ ಕೆಲಸ ಕಾರ್ಯಗಳಿಗೆ ಅರ್ಥವೇನು ? ಎಂದು ತಿಳಿದುಕೊಳ್ಳುವುದು ಅತ್ಯಾವಶ್ಯಕವು. ದೇವಸ್ಥಾನದಲ್ಲಿ ನಡೆಯುವ ಪ್ರತಿಯೊಂದು ಕಾರ್ಯಕ್ಕೂ ಪ್ರಮಾಣವಚನ ಅಂದರೆ ಶಾಸ್ತ್ರವಾಕ್ಯ ಮತ್ತು ಆ ಕೆಲಸದ ಅರ್ಥ, ಭಾವ ಸಕಲರಿಗೂ ತಿಳಿಯಲೆಂದು ಆಶಿಸಿ ಈ ಲೇಖನವನ್ನು ಬರೆಯಲಾಗಿದೆ. ಇದು ಸ್ವಲ್ಪ ಕಷ್ಟತರವಾದ ಕೆಲಸ. ಹಲವಾರು ಸಂಹಿತಾ ಗ್ರಂಥಗಳನ್ನು ನೋಡದೆ ಒಂದು ವಿಷಯವನ್ನು ಪೂರ್ಣವಾಗಿ ಅರ್ಥದೊಂದಿಗೆ ಬರೆಯಲು ಸಾಧ್ಯವಿರುವುದಿಲ್ಲ. ಕೆಲವು ಸಾಂಪ್ರದಾಯಕವಾದ ಪಾರಿಭಾಷಿಕ ಶಬ್ದಗಳು ಉಪಯೋಗಿಸಲ್ಪಟ್ಟಿದ್ದರೆ ಅದರ ಅರ್ಥವು ನಿಘಂಟುವಿನಲ್ಲಿ ದೊರಕುವುದಿಲ್ಲ. ಆ ಶಬ್ದಾರ್ಥಗಳು ಪರಂಪರಾಗತವಾಗಿ ಹಿರಿಯರಿಂದ ಕೇಳಿ ತಿಳಿಯಬೇಕು. ಕೇವಲ ಸಂಸ್ಕೃತಪದ ಅರ್ಥವನ್ನು ಹೇಳಬಹುದು. ಎಂದರೆ ಆ ಕಾರ್ಯದ ಭಾವವು ತಿಳಿಯುವುದಿಲ್ಲ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಆಗ ಸಂಪ್ರದಾಯ ಅಥವಾ ಪದ್ಧತಿ ಎಂಬ ಹೇಳಿ ಅದನ್ನು ಅನುಸರಿಸುತ್ತೇವೆ. ಒಟ್ಟಿನಲ್ಲಿ ಮಹಾಮಂಗಳಾರತಿ ನಡೆಯುವುದಕ್ಕೆ ಮೊದಲು ಬಲಿಕರ್ಮ (ಪರಿವಾರ ಪೂಜೆ) ಎಂಬುದು ನಡೆಯುವುದು. ಅದಕ್ಕೆ ಸಂಬಂಧಪಟ್ಟಂತೆ ದೇವದಾಸೀ ವಿಚಾರ -ಅನಂತರ ಪ್ರದಕ್ಷಿಣ ಕ್ರಮ -ಶ್ರೀಮಹಾಲಕ್ಷ್ಮೀ ಪುರುಷಕಾರ ತಿಳಿಸುವುದು. ಇದು ಶ್ರೀವೈಷ್ಣವರಿಗೆ ಅತಿ ಮುಖ್ಯವಾದ ವಿಷಯವು. ಅನಂತರ ಮಹಾಮಂಗಳಾರತಿ (ಆಗಮಾಧ್ಯಯನ) ಆ ಕಾಲದಲ್ಲಿ ವೇದ (ಉಪನಿಷತ್ ಭಾಗ) ಆಳ್ವಾರಾಚಾರ್ಯರುಗಳ ಪ್ರತಿನಿಧಿ ಶ್ರೀಆಂಡಾಳ್ (ಗೋದಾದೇವಿ) ಅವರು ರಚಿಸಿದ ತಿರುಪ್ಪಾವೈ , ಶಿತ್ತಂ ಶಿರುಕಾಲೆ ಎಂಬ ದ್ರಾವಿಡ ಪ್ರಬಂಧ. ತದನಂತರ ಗೋಷ್ಠೀ ಜನಗಳಿಗೆ ತೀರ್ಥ ಪ್ರಸಾದ -ಶ್ರೀಶಠಕೋಪ ಮರ್ಯಾದೆಗಳೂ ನಡೆಯುತ್ತವೆ.

ಆಳ್ವಾರಾಚಾರ್ಯರುಗಳು ಪ್ರತ್ಯಕ್ಷ ಇಲ್ಲದ್ದರಿಂದ ಅವರ ಪ್ರತಿನಿಧಿಗಳಾದ ಮಠಾಧಿಪತಿಗಳು , ಆಚಾರ್ಯಪುರುಷರು , ಅರ್ಚಕರು . ಅಧ್ಯಾಪಕರು . ಗೋಷ್ಠಿ ಜನಗಳು ಇವರ ಮರ್ಯಾದಾ ಕ್ರಮವು ತಿಳಿಸಿರುವುದು. ಈ ಗ್ರಂಥದಲ್ಲಿ ಅನೇಕ ಕಾರಣಗಳಿಂದ ಮುದ್ರಣ ತಪ್ಪಿನಿಂದ ವಾಕ್ಯಗಳೂ , ಶ್ಲೋಕಗಳೂ ತಪ್ಪಾಗಿರಬಹುದು. ಪಂಡಿತರು , ತಿಳಿದ ಮಹನೀಯರು , ಆಗಮಿಕರು ಈ ಗ್ರಂಥದಲ್ಲಿ ಬಿಟ್ಟುಹೋದ , ಅನಾವಶ್ಯಕವಾದ , ತಪ್ಪಾಗಿ ಅರ್ಥ ಬರೆದ ವಿಷಯಗಳನ್ನು ತಿಳಿಸುವುದಲ್ಲದೆ ವಿಷಯಗಳು ಹಿಂದು ಮುಂದು ಸರಿಪಡಿಸಿ ಈ ರೀತಿಯಲ್ಲಿರಬೇಕೆಂದು ತಿಳಿಸಿದಲ್ಲಿ ನಾವು ಅತ್ಯಂತ ಕೃತಜ್ಞತೆಯಿಂದ ಸ್ವೀಕರಿಸುತ್ತೇವೆ. ಏಕೆಂದರೆ ನಾವು ಇದೇ ವಿಷಯವನ್ನು ಆಂಧ್ರ ಮತ್ತು ತಮಿಳು ಭಾಷೆಯಲ್ಲೂ ಬರೆದು ಮುದ್ರಿಸಲು ಅಭಿಪ್ರಾಯವಿದೆ. ಲೋಕೋಪಕಾರವಾಗುತ್ತೆ. ನಮ್ಮ ಕೃತಜ್ಞತೆಯುಂಟು.

ಉಪೋದ್ಘಾತ ಓದುವುದಕ್ಕಿಂತ ಗ್ರಂಥವನ್ನು ಓದಿದಲ್ಲಿ ನಮ್ಮ ಭಾರತೀಯ ಸಂಸ್ಕೃತಿಯು ವೇದ್ಯವಾಗುವುದು. ಓದುಗರ ಅಭಿಪ್ರಾಯ ,ಸಹಕಾರ ಬಂದಲ್ಲಿ ಇದೇ ರೀತಿಯ ನಮ್ಮ ಭಾರತೀಯ ಸಂಸ್ಕೃತಿಯ ಎಲ್ಲಾ ವಿಷಯಗಳನ್ನೂ ಒಂದೊಂದಾಗಿ ಚಿಕ್ಕ ಚಿಕ್ಕ ಗ್ರಂಥಗಳಲ್ಲಿ ಬರೆಯಲು ಆಶಿಸುತ್ತೇವೆ. ಅಲ್ಲದೆ ಇದೇ ರೀತಿಯಲ್ಲಿ ತಿಳಿದ ಪಂಡಿತರು ನಮ್ಮ ಭಾರತೀಯ ಸಂಸ್ಕೃತಿ ವಿಷಯವಾಗಿ ಬರೆದು ಬಂದಲ್ಲಿ ಆ ಗ್ರಂಥಗಳನ್ನೂ ಮುದ್ರಿಸಿ ಬೆಳಕಿಗೆ ತರಲು ಸಹಕರಿಸಲು ಸಿದ್ಧರಿದ್ದೇವೆ ಎಂಬುದನ್ನು ಸಂತೋಷದಿಂದ ತಿಳಿಸುತ್ತೇವೆ.

ಸಂಪಾದಕರು.
ಶ್ರೀ ರಾಮಾನುಜ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಭರತಖಂಡದ ದೇವಾಲಯಗಳು

ದೇವಾಲಯಗಳ ನಿರ್ಮಾಣ ,ಮಾನ ,ಲಕ್ಷಣ ,ಜಾತಿ ,ಶೈಲಿ ಇವುಗಳ ವಿಚಾರವಾಗಿ ಈ ಗ್ರಂಥದಲ್ಲಿ ಬರೆಯಲು ಸಮ್ಮಂಧವಿರುವುದಿಲ್ಲ. ಆದರೂ ಓದುಗರಿಗೆ ಕಿಂಚಿತ್ ತಿಳಿದಿರಲೆಂದು ಇಲ್ಲಿ ಬರೆದಿರುವುದು.

ಆಗಮಶಾಸ್ತ್ರ , ಶಿಲ್ಪಶಾಸ್ತ್ರ ,ಪುರಾಣಗಳಲ್ಲಿ ಉಕ್ತವಾದ ದೇವಾಲಯಗಳ ಆಕಾರ ,ರೂಪ ,ಮಾನ ,ಲಕ್ಷಣ ,ವೇದಾಂತ ಸ್ವರೂಪ ಇತ್ಯಾದಿಗಳನ್ನು ಕ್ರೋಢೀಕರಿಸಿ ವಿಭಾಗಿಸಿದುದರ ಫಲವಾಗಿ ನಮಗೆ ಈ ಕೆಳಗೆ ಕಂಡ ಐದುವಿಧ ಆಲಯಗಳು ಕಂಡುಬರುತ್ತವೆ.

1. ಅಧಿಷ್ಠಾನ ದೇವಾಲಯ ಅಥವಾ ಷಡ್ವರ್ಗ ದೇವಾಲಯಗಳು
ಇವು ದಕ್ಷಿಣ ದೇಶದಲ್ಲಿ ಕಂಡುಬರುವುದು.

2. ಶೃಂಗ ದೇವಾಲಯಗಳು - ಉತ್ತರ ದೇಶದಲ್ಲೆಲ್ಲಾ ಕಾಣಬಹುದು.

3. ಲುಥಾ ದೇವಾಲಯಗಳು - ಇದು ಷಡ್ವರ್ಗದಲ್ಲಿ ಸೇರಿದ್ದರೂ ಹೊರಗಿನ ಸ್ವರೂಪ -ಮಾನ ಲಕ್ಷಣಗಳಲ್ಲಿ ವ್ಯತ್ಯಾಸವು. ಬರ್ಮಾ ದೇಶವಲ್ಲೂ , ಮಹಾರಾಷ್ಟ್ರ , ಕರ್ನಾಟಕ , ಕೇರಳ ದೇಶವಲ್ಲಿಯೂ ಕಂಡುಬರುವುದು.

4. ರೇಖಾ -ಖಾಕರಾ-ಗೌರೀಯ - ಪೂರಿ ಜಗನ್ನಾಥ (ಓಡ್ರದೇಶ) ದೇವಾಲಯಗಳು

5. ಶಾಕ್ತ ದೇವಾಲಯಗಳು - ಬಂಗಾಳ ದೇಶದಲ್ಲಿ ಕಾಣಬಹುದು.

6. ಇವಲ್ಲದೇ ಆರನೆಯದಾಗಿ ಜೈನ ದೇವಾಲಯಗಳು - ಈ ದೇವಾಲಯಗಳು ಶೃಂಗ ದೇವಾಲಯದಲ್ಲಿ ಅಂತರ್ಗತವು.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS



ಷಡ್ವರ್ಗ ಅಥವಾ ಅಧಿಷ್ಠಾನ ದೇವಾಲಯ

1. ಶಾಂತಿಕ 2. ಪೌಷ್ಟಿಕ 3. ಜಯದ 4. ಅದ್ಭುತ ಸಾರ್ವಜನಿಕ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS



ಶೃಂಗ ದೇವಾಲಯ



ಜೈನ ದೇವಾಲಯ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS



ರೇಖ ಖಾಕರ ಗೌರೀಯ ದೇವಾಲಯಗಳು— ಪೂರಿ ಜಗನ್ನಾಥ

CC0. In Public Domain. Jangamwadi Math Collection, Varanasi



ಲಘು ದೇವಾಲಯಗಳು— (ಚತುರ್ವರ್ಗ)

1, 2, 3. ಛತ್ರಾಕಾರ 4. ಶಾಲಾಕಾರ 5. ಮಂಟಪಾಕಾರ 6. ಕೂಟಾಕಾರ

Digitization by eGangotri and Sarayu Trust. Funding by MoE-IKS
CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS



ಶಾಕ್ತದೇವಾಲಯ—

ರಾಹ ಅನರ್ತ ಕೋಣಕಃ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS



1. ಭವನ 2. ಯೋಗ 3. ಗೇಹ 4. ವಾಸ 5. ಮಂದಿರ 6. ದ್ವಾತ್ರಿಂಶ 7.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ನಮಸ್ಕಾರ ಪ್ರಕರಣದಲ್ಲಿ ಈ ಭಾಗವನ್ನು ಸೇರಿಸಿಕೊಳ್ಳಬೇಕು.

ಕಾಯಿಕೋ ವಾಗ್ಭವಶ್ಚೈವ ಮಾನಸ ತ್ರಿವಿಧಃ ಸ್ಮೃತಃ ।
ನಮಸ್ಕಾರಸ್ತು ತತ್ತ್ವಜ್ಞೈರುತ್ತಮಾಧಮ ಮಧ್ಯಮಃ ।

ನಮಸ್ಕಾರವೆಂಬುದು ತ್ರಿವಿಧ = ಮೂರು ವಿಧವು. 1.ಕಾಯಿಕ 2.ವಾಚಿಕ 3.ಮಾನಸಿಕ ಎಂಬುದಾಗಿ. ಈ ಮೂರರಲ್ಲೂ ಉತ್ತಮ ,ಮಧ್ಯಮ ,-ಅಧಮ ಎಂಬುದಾಗಿ ವಿಭಾಗಿಸಲ್ಪಟ್ಟಿವೆ.

1.ಪ್ರಸಾರ್ಯ ಪಾದೌ ಹಸ್ತೌಚ ಪತಿತ್ವಾ ದಣ್ಡವತಕ್ಷಿತೌ ।
ಜಾನುಭ್ಯಾಂ ಧರಣೀಂ ಸ್ಪೃಷ್ಟ್ವಾ ಶಿರಸಾ ಸ್ಪೃಶ್ಯ ಮೇದಿನೀಂ।
ಕ್ರಿಯತೇ ಯೋ ನಮಸ್ಕಾರ ಉತ್ತಮಃ ಕಾಯಿಕಸ್ತು ಸಹ ।

2.ಜಾನುಭ್ಯಾಂ ಕ್ಷಿತಿಂ ಸ್ಪೃಷ್ಟ್ವಾ ಶಿರಸಾ ಸ್ಪೃಶ್ಯ ಮೇದಿನೀಂ ।
ಕ್ರಿಯತೇ ಯೋ ನಮಸ್ಕಾರೋ ಮಧ್ಯಮಃ ಕಾಯಿಕಸ್ತು ಸಹ ।

3.ಪುಟೀಕೃತ್ಯ ಕರೌ ಶೀರ್ಷೇ ದೀಯತೇ ಯತ್ ಯಥಾ ತಥಾ ।
ಅಸ್ಪೃಷ್ಟ್ವಾ ಜಾನು ಶೀರ್ಷಾಭ್ಯಾಂ ಕ್ಷಿತಿಂಸೋಽಧಮ ಉಚ್ಯತೇ।

1.ಯಾ ಸ್ವಯಂ ಗದ್ಯಪದ್ಯಾಭ್ಯಾಂ ಘಟಿತಾಭ್ಯಾಂ ನಮಸ್ಕೃತಿಃ ।
ಕ್ರಿಯತೇ ಭಕ್ತಿಯುಕ್ತೈರ್ವಾ ವಾಚಿಕಸ್ತ್ವುತ್ತಮಃ ಸ್ಮೃತಃ ।

2.ಪೌರಾಣಿಕೈಃರ್ವೈದಿಕೈರ್ವಾ ಮಂತ್ರೈರ್ವಾ ಕ್ರಿಯತೇ ನತಿಃ ।
ಮಧ್ಯಮೋಽಸೌ ನಮಸ್ಕಾರೋಭವೇದ್ವಾಚಕಃ ಸದಾ ।

3.ಯತ್ ಮಾನುಷವಾಕ್ಯೇನ ನಮನಂ ಕ್ರಿಯತೇ ಸದಾ ।
ಸವಾಚಿಕೋಽಧಮೋಜ್ಞೇಯೋ ನಮಸ್ಕಾರೇಷು ಪುತ್ರಕೌ ।
ಇಷ್ಟಮಧ್ಯಾನಿಷ್ಟ ಗತೈಮನೋಭಿಸ್ತ್ರಿವಿಧಂ ಪುನಃ ।
ನಮನಂ ಮಾನಸಂ ಪ್ರೋಕ್ತಮುತ್ತಮಾಧಮ ಮಧ್ಯಮಂ ।
ತ್ರಿವಿಧೇಚ ನಮಸ್ಕಾರೇ ಕಾಯಿಕಶ್ಚೋತ್ತಮಃ ಸ್ಮೃತಃ ।
ಕಾಯಿಕಸ್ತು ನಮಸ್ಕಾರೈ ದೇವಾಸ್ತುಷ್ಯಂತಿ ನಿತ್ಯಶಃ ।
ಅಯಮೇವ ನಮಸ್ಕಾರೋ ದನ್ಡಾದಿ ಪ್ರತಿಪತ್ತಿಭಿಃ ।
ಪ್ರಣಾಮ ಇತಿ ವಿಜ್ಞೇಯಃ ಸಪೂರ್ವ ಪ್ರತಿಪಾದಿತಃ ।
ಕಾಲಿಕಾ ಪುರಾಣೇ ೭೦ ಅ(ಶಬ್ದಕಲ್ಪದ್ರುಮ)

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಕಾಯಿಕ ,ವಾಚಿಕ ,ಮಾನಸಿಕ ನಮಸ್ಕಾರ ಒಂದೊಂದರಲ್ಲೂ ಉತ್ತಮ ,-ಮಧ್ಯಮ ,ಅಧಮ ಎನ್ನುವುದನ್ನು ತಿಳಿಸಿರುವುದು. ಇವುಗಳಲ್ಲಿ ಕಾಯಿಕದಲ್ಲಿ (ಶರೀರದಲ್ಲಿ) ನಡೆಸುವ ಕಾರ್ಯವು ಉತ್ತಮವು. ಏಕೆಂದರೆ ಈ ವಿಧದಲ್ಲಿ ಕಾಯಿಕ ,ವಾಚಿಕ ,ಮಾನಸಿಕ ಮೂರೂ ಸೇರಿರುವುದು. ಇಲ್ಲಿ ತಿಳಿಸಿರುವ ಅರ್ಥಗಳು ಸರಿಹೊಂದದಿದ್ದಲ್ಲಿ ಪಂಡಿತರು ಸರಿಯಾದ ಅರ್ಥವನ್ನು ತಿಳಿಸಿದಲ್ಲಿ ಕೃತಜ್ಞರಾಗಿರುತ್ತೇವೆ. ಕಾಯಿಕ ನಮಸ್ಕಾರ ವಿಧದಿಂದ ದೇವರೂ ,ದೇವತೆಗಳೂ ಸಂತೋಷಪಡುವರು. ಇವುಗಳಿಗೆ ಪ್ರಣಾಮ ಎಂದು ಕರೆಯುವರು.

ನಮಸ್ಕಾರವೆಂಬುದು ತ್ರಿವಿಧ = ಮೂರು ವಿಧವು. 1.ಕಾಯಿಕ 2.ವಾಚಿಕ 3.ಮಾನಸಿಕ ಎಂಬುದಾಗಿ. ಈ ಮೂರೂ ಉತ್ತಮ ,ಮಧ್ಯಮ ಅಧಮ ಎಂಬುದಾಗಿ ವಿಭಾಗಿಸಲ್ಪಟ್ಟಿರುವುದು.

ಎರಡು ಪಾದಗಳು , ಎರಡು ಕೈಗಳನ್ನು ನೀಡಿ , ಎರಡು ಮಂಡಿಗಳನ್ನು ನೀಡಿ ಶಿರಸ್ಸನ್ನು ಭೂಮಿಗೆ ತಗಲಿಸಿ ಮನಸ್ಸಿನಲ್ಲಿ ದೇವರನ್ನು ಧ್ಯಾನಿಸಿ ದೀರ್ಘ ದಂಡ ನಮಸ್ಕಾರ ಮಾಡುವುದು. ಇದು ಕಾಯಿಕ ಉತ್ತಮವೆಂದು ಹೇಳಲ್ಪಡುವುದು. ಇದಕ್ಕೆ ಅಷ್ಟಾಂಗ ನಮಸ್ಕಾರವೆಂದು ಹೆಸರು.

2. ಎರಡು ಮೊಣಕಾಲುಗಳನ್ನು ಮಡಿಸಿ ಮೊಣಕಾಲನ್ನು ಭೂಮಿಯ ಮೇಲಿಟ್ಟು ಶಿರಸ್ಸನು ಬಗ್ಗಿಸಿ ಭೂಮಿಗೆ ತಗಲಿಸಿ ಎರಡು ಕೈಗಳಿಂದ ಅಂಜಲಿ ನಮಸ್ಕಾರ ಮಾಡುವುದು. ಇದಕ್ಕೆ ಪಂಚಾಂಗ ನಮಸ್ಕಾರವೆಂದು ಹೆಸರು. ಸ್ಥಳ ಸಂಕೋಚವಾದರೆ ಈ ರೀತಿ ಗಂಡಸರು ಮಾಡಬಹುದು. ಸ್ತ್ರೀಯರ ಶರೀರ ರಚನೆಯು ಬೇರೆಯಾದ್ದರಿಂದ ಅವರು ಪಂಚಾಂಗ ನಮಸ್ಕಾರವನ್ನೇ ಮಾಡಬೇಕು. ಇದು ಶಾರೀರಿಕ ಮಧ್ಯತರವು.

3. ಭೂಮಿಯ ಮೇಲೆ ದಂಡವತ್ ಮಲಗದೆ ನಿಂತು ಎರಡು ಕೈಗಳನ್ನೂ ತಲೆಯ ಮೇಲಕ್ಕೆ ಎತ್ತಿ ಅಂಜಲಿಬದ್ಧನಾಗಿ ನಮಸ್ಕಾರವೆನ್ನುವುದು ಮೂರನೆ ವಿಧವು. ಇವು ಮೂರು ವಿಧವೂ ಕಾಯಿಕ ನಮಸ್ಕಾರವೆನಿಸಲ್ಪಡುವುದು.

ಭಕ್ತಿಯುಕ್ತನಾಗಿ ಸ್ವಯಂ ಭಗವಂತನಿಂದ ಅನುಗ್ರಹಿಸಲ್ಪಟ್ಟ ವಾಕ್ ಮಾತುಗಳನ್ನು ಯಾವುದೇ ಶ್ಲೋಕವಾಗಲಿ , ಅಥವಾ ಗದ್ಯವಾಗಲಿ ಉಚ್ಚರಿಸುತ್ತ ನಮಸ್ಕಾರ ಎನ್ನುವುದು ವಾಚಿಕ ಉತ್ತಮವು. ಉದಾ : ಗೀತಾವಾಕ್ಯ -ಆಗಮ ಸಂಹಿತ -ತಿರುಮಂತ್ರ -ದ್ವಯ -ಚರಮಶ್ಲೋಕ ಇತ್ಯಾದಿ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

2. ಪುರಾಣ ,ವೇದ ,ವೇದಮಂತ್ರ ,ಧರ್ಮಶಾಸ್ತ್ರ ಮತ್ತು ಪೂರ್ವಾಚಾರ್ಯರುಗಳಿಂದ ರಚಿಸಲ್ಪಟ್ಟ ಭಗವಂತನ ಸ್ತೋತ್ರ ಶ್ಲೋಕವನ್ನು ಹೇಳುತ್ತಾ ನಮಸ್ಕಾರ ಎನ್ನುವುದು ವಾಚಿಕ ಮಧ್ಯತರವು.

3. ಮಾನುಷವಾಕ್ಯ ಎಂದರೆ ಆಳ್ವಾರಾಚಾರ್ಯರುಗಳಿಂದೀಚೆಗೆ ಅರ್ವಾಚೀನ ಪಂಡಿತರು ರಚಿಸಿದ ಭಗವಂತನ ವಿಷಯವಾದ ಸ್ತೋತ್ರ ಶ್ಲೋಕವನ್ನುಚ್ಚರಿಸಿ ನಮಸ್ಕಾರ ಎನ್ನುವುದು ಕಾಯಿಕ ಅಧಮ = ಕನಿಷ್ಠವು. ಈವು ಮೂರು ವಿಧವೂ ವಾಚಿಕ ವಿಧಾನದ ನಮಸ್ಕಾರವು.

ಮಾನಸಿಕ ನಮಸ್ಕಾರ - ಇಷ್ಟ - ಭಕ್ತನು ತನ್ನ ಮನೆದೇವರು ಅಥವ ಕುಲ ದೇವರು ಅಥವಾ ಭಗವಂತನ ಅವತಾರ ವಿಶೇಷಗಳಲ್ಲಿ ತನಗೆ ಇಷ್ಟವಾದ ದೇವರನ್ನು ಭಕ್ತಿಪೂರ್ವಕವಾಗಿ ನೆನೆದು ನಮಸ್ಸಿನಲ್ಲೇ ನಮಸ್ಕಾರ ಎಂದು ಹೇಳುವುದು ಉತ್ತಮ ಮಾನಸಿಕ ನಮಸ್ಕಾರವು.

2. ಮಧ್ಯ - ಭಗವಂತನಲ್ಲಿ ಪ್ರೀತಿಭಾವವಾಗಲಿ , ವಿರೋಧಭಾವವಾಗಲಿ ಯಾವುದೂ ಇಲ್ಲದೆ ಭಗವಂತನ ಚರಿತ್ರೆಯನ್ನು ಮಾತ್ರ ನೆನೆದು ಮನಸ್ಸಿನಲ್ಲೇ ನಮಸ್ಕಾರ ಎಂದು ಹೇಳುವುದು ಮಾನಸಿಕ ಮಧ್ಯತರವು. ಉದಾ: ಭಗವಂತನ ಅವತಾರ ಚರಿತ್ರೆ ಅಘಟಿತ ಘಟನಾ ಸಾಮರ್ಥ್ಯ , ಭಾರತದಲ್ಲಿ ತಿಳಿಸುವ ಶ್ರೀಕೃಷ್ಣನ ರಾಜಕೀಯ ಇತ್ಯಾದಿ ಮನಸ್ಸಿಗೆ ತಂದುಕೊಂಡು ಮನಸ್ಸಿನಲ್ಲೇ ನಮಸ್ಕಾರ ಎನ್ನುವುದು ಮಾನಸಿಕ ಮಧ್ಯತರವು.

3.ಅನಿಷ್ಠ - ಭಗವಂತನ ಯಾವ ಅವತಾರ ಚರಿತ್ರೆಗಳೇ ಆಗಲಿ ಗುಣಗಳಿದ್ದರೂ ತಪ್ಪನ್ನೇ ಹುಡುಕಿ ಅದರಿಂದುಂಟಾದ ಮನೋಭಾವದಿಂದ ನಮಸ್ಕಾರ ಮಾಡುವುದು ಅಥವಾ ಹೇಳುವುದು ಯಾವುದೂ ಇಲ್ಲದೇ ಇದ್ದರೂ ನಾಲ್ಕು ಜನರ ಬಲಾತ್ಕಾರಕ್ಕೆ ಅಥವಾ ಗತಾನುಗತಿಕೋಲೋಕಃ = ಅವರು ನಮಸ್ಕಾರ ಮಾಡಿದರು ನಾನೂ ಹಾಗೆಯೇ ನಮಸ್ಕಾರ , ಎನ್ನುವುದು ಇದು ಮಾನಸಿಕ ಕನಿಷ್ಠತರವು. ಉದಾ:ವಾಮನಾವತಾರದಲ್ಲಿ ಬಲಿಚಕ್ರವರ್ತಿಯಲ್ಲಿ ಯಾಚನೆ , ವಂಚನೆ. ಶ್ರೀಕೃಷ್ಣಾವತಾರದಲ್ಲಿ ಕಳ್ಳತನ ,ಗೋಪಿಯರ ವಸ್ತ್ರಗಳನ್ನು ಕದಿಯುವುದು , ಧರ್ಮರಾಜನ ವಿಷಯದಲ್ಲಿ ರಾಜಕೀಯವಾಗಿ ಸುಳ್ಳು =ಅನ್ಯಥಾ ಬೋಧನೆ ಅಧರ್ಮವಾಗಿ ವಾಲಿಯ ಹತ್ಯೆ. ಪ್ರೀತಿಯಿದ್ದರೂ ಸೀತೆಯ ಅಗ್ನಿ ಪ್ರವೇಶ , ತುಂಬು ಗರ್ಭಿಣಿ ಸೀತೆಯನ್ನು ವಿನಾಕಾರಣ ಕಾಡಿಗೆ ಕಳುಹಿಸುವುದು ಇತ್ಯಾದಿ ಚರಿತ್ರೆಗಳನ್ನು ನೆನೆಯುವುದು ಇದಕ್ಕೆಲ್ಲಾ ನಿಂದಾಸ್ತುತಿಯೆಂದು ಹೇಳಿದರೂ ನಂಬದೆ ಇದ್ದರೂ ಇತರರಿಗಾಗಿ ನಮಸ್ಕಾರ ಎನ್ನುವುದು.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಅರ್ಚಕರ ಮರ್ಯಾದೆ

ಓಂ ಗೃಣಾಹಿ । ಘೃತವತೀ ಸವಿತರಾಧಿಪತ್ಯೈಃ ಪಯಸ್ವತೀ ರಂತಿರಾ ಶಾನೋ ಅಸ್ತು । ಧ್ರುವಾದಿಶಾಂ ವಿಷ್ಣುಪತ್ನ್ಯಘೋರಾಽಸ್ಯೇಶಾನಾ ಸಹ ಸೋಯಾ ಮನೋತಾ । ಬೃಹಸ್ಪತಿರ್ಮಾತರಿಶ್ವೋತದಾಯುಸ್ವಂಧುವಾನಾವಾತಾ ಅಭಿ ನೋ ಗೃಣಂತು । ವಿಷ್ಟಂಭೋ ದಿವೋ ಧರುಣಃ ಪೃಥಿವ್ಯಾ ಅಸ್ಯೇಶಾನಾ ಜಗತೋ ವಿಷ್ಣುಪತ್ನೀ.

ಶ್ರೀಮದಖಿಲಾಂಡಕೋಟಿ ಬ್ರಹ್ಮಾಂಡ ನಾಯಕರಾನ ಪೆರಿಯ ಪೆರು ಮಾಳ್, ಪೆರಿಯ ಪಿರಾಟ್ಟಿಯಾರ್ ಸಂಭಾವನಾ.

ಎಂಬುದಾಗಿ ಆಯಾ ಕ್ಷೇತ್ರದ ದೇವರು ಮತ್ತು ಶ್ರೀಮಹಾಲಕ್ಷ್ಮಿಯ ಹೆಸರನ್ನು ಹೇಳಿ ತಾಂಬೂಲ ಮರ್ಯಾದೆ ಮಾಡುವರು. ಆಗ ಆ ಸಭೆಯಲ್ಲಿ ಅರ್ಚಕರಿದ್ದಲ್ಲಿ ಅವರು ಭಗವಂತನ ಪ್ರತಿನಿಧಿಯಾದ್ದರಿಂದ ಅವರಿಗೆ ಅಗ್ರತಾಂಬೂಲವನ್ನು ಕೊಡುವರು. ಇದೇ ಅರ್ಚಕರಿಗಾಗುವ ಮೊದಲು ಮರ್ಯಾದೆಯು ಎಂದು ತಿಳಿಯಬೇಕು. ಈ ವಿಷಯವನ್ನು ವಿವರವಾಗಿ ಪುಟ ೨೬ ರಿಂದ ೪೦ರ ವರೆಗೆ ಅರ್ಚಕರ ಪ್ರಶಸ್ತಿ ,ಶ್ರೇಷ್ಠತೆ ವಿಷಯವಾಗಿ ತಿಳಿಸಿ ರುತ್ತೆ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಓಂ

ಶ್ರೀಮತೇ ರಾಮಾನುಜಾಯ ನಮಃ

ಶ್ರೀರಂಗ ಮಂಗಳಮಣಿಂ ಕರುಣಾನಿವಾಸಂ, ಶ್ರೀ ವೇಂಕಟಾದ್ರಿ, ಶಿಖರಾಲಯ
ಕಾಳಮೇಘಂ
ಶ್ರೀಹಸ್ತಿಶೈಲ ಶಿಖರೋಜ್ವಲ ಪಾರಿಜಾತಂ, ಶ್ರೀಶಂನಮಾಮಿ ಶಿರಸಾ
ಯದುಶೈಲದೀಪಂ

ಧರ್ಮೋ ರಕ್ಷತಿ ರಕ್ಷಿತಃ

ಧರ್ಮಹಾನಿ ನ ಕರ್ತವ್ಯಂ ಕರ್ತವ್ಯಂ ಧರ್ಮಸಂಗ್ರಹಃ
ಧರ್ಮಾಧರ್ಮಂ ಹಿ ಸರ್ವೇಷಾಂ ಸುಖದುಃಖೋಪಪಾದುಕಾಃ
—ಶಾಂಡಿಲ್ಯ ವಿ. ಧರ್ಮಶಾಸ್ತ್ರೇ

ಸನಾತನ ಹಿಂದು ವರ್ಣಾಶ್ರಮ ಧರ್ಮವನ್ನು ಕಾಪಾಡಬೇಕು. ವೇದ ಧರ್ಮಕ್ಕೆ ವಿರೋಧವಾಗಿ ಹೋಗಬಾರದು. ವೇದಧರ್ಮದಂತೆ ನಡೆಯಬೇಕು. ಧರ್ಮಾಧರ್ಮವೇ ನಮ್ಮ ಸುಖ ದುಃಖಕ್ಕೆ ಕಾರಣವಾಗಿರುವುದು.

ಸರ್ವದಾ ಸರ್ವ ಕಾರ್ಯೇಷು ನಾಸ್ತಿಸ್ತ್ರೇಷಾಮಮಂಗಲಂ
ಏಷಾಂ ಹೃದಿಸ್ಥೋ ಭಗವಾನ್ ಮಂಗಲಾಯತನಂ ಹರಿಃ
ಕಿಂ ಕರ್ತವ್ಯಂ ಮನುಷ್ಯೇಣ ಕಿಂ ಕುರ್ವನ್ ಸುಖಮೇಧಸೇ
ಅಸ್ಮಿನ್ ಲೋಕೇ ಪರೇಚೈವ ಕೇನಾಪ್ನೋತಿ ಮಹತ್ಸುಖಂ

ಸುಖವೆನ್ನುವುದು ಪ್ರತಿಯೊಬ್ಬರಿಗೂ ಅವಶ್ಯಕವು. ಸಂಸಾರದಲ್ಲಿ ವಿರಾಗಿಯ ಹೊರತು ಸಮಸ್ತ ಪ್ರಾಣಿಗಳೂ ಸುಖವನ್ನೇ ಆಶಿಸುವದು. ಇದಕ್ಕಾಗಿ ಸಮುದ್ರ ಯಾನ, ಆಕಾಶ ಸಂಚಾರ, ಸಮುದ್ರದೊಳಗೆ ಮುಳುಗಿ ಮುತ್ತು ರತ್ನಾದಿಗಳನ್ನು ತರುವುದು, ಭೂಮಿ ಅಗೆದು ಖನಿಜಾದಿ ಪದಾರ್ಥಗಳನ್ನು ಕಂಡುಹಿಡಿಯುವುದು ಮುಂತಾದ ಅದ್ಭುತ ಕಾರ್ಯಗಳನ್ನು ನಡೆಸುವರು. ಮುಖ್ಯವಾಗಿ ಪೃಥಿವೀ ಅಪ್ ತೇಜೋವಾಯುರಾಕಾಶಗಳನ್ನು ಜಯಿಸಿ ಅವುಗಳ ಸಹಾಯದಿಂದ ಪಂಚೀಕರಣ ಪ್ರಕ್ರಿಯೆಯಿಂದ ರಾಜ, ರಾಜ್ಯಗಳನ್ನು ಜಯಿಸುವುದು ಎಲ್ಲವೂ ಸುಖಕ್ಕಾಗಿ—ಇಷ್ಟು

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಮಾಡಿದರೂ ಸುಖವು ದೊರಕಿತೆ ? ಎಂದು ಪ್ರಶ್ನಿಸಿದಲ್ಲಿ ಇನ್ನೂ ಸುಖ ದೊರಕಲಿಲ್ಲ ವೆನ್ನುವರು.

ಸುಖಕ್ಕಾಗಿ ಬೇಕಾಗುವ ವಸ್ತುಗಳೆಲ್ಲವೂ ದೃಶ್ಯವಾಗಿಯೇ ಇರುವುದು. ಸುಖ ಕ್ಕಾಗಿ ಸ್ಥಳವು ಅಗತ್ಯ. ತನ್ನಿಮಿತ್ತ ಗೃಹಾದಿಗಳ ನಿರ್ಮಾಣ, ಭೋಗ್ಯ ಭೋಗೋಪ ಕರಣಗಳ ಅವಶ್ಯಕತೆ. ಇದಕ್ಕಾಗಿಯೇ ಮನುಷ್ಯನು ಗೃಹಸ್ಥಾಶ್ರಮಿಯಾದನು. ಇದೇ ಇತರ ಪ್ರಾಣಿಗಳಿಗೂ ನಮಗೂ ಇರುವ ವ್ಯತ್ಯಾಸವು. ಮನುಷ್ಯ ಶಬ್ದವೇ ಆ ರೀತಿ ಇರುವುದು.

ಮನಸಃ = ವಿಚಾರಶಕ್ತಿ

ಉಷ್ಯ = ವಸತಿಯೋಗ್ಯ—ಗೃಹಾದಿ ಭವನ ಇದನ್ನನುಸರಿಸಿಯೇ ಬ್ರಹ್ಮಾಂಡ ಸೃಷ್ಟಿ.

ಆದ್ದರಿಂದ ಮನುಷ್ಯ ಜನ್ಮವೆತ್ತಿದ ಮೇಲೆ ಆತನ ಕರ್ತವ್ಯವೇನು ? ಇಹ ಲೋಕದಲ್ಲಿ ಸುಖಪಡುವುದು ಹೇಗೆ ? ತದನಂತರ ಎಂದರೆ ಈ ಶರೀರವನ್ನು ತ್ಯಾಗಮಾಡಿದ ಮೇಲೆ ಪುಣ್ಯಪಾಪ ಫಲಗಳಿಂದ ಬಿಡುಗಡೆಯಾಗಿ ಶಾಶ್ವತ ಸುಖ (ಮೋಕ್ಷ)ವನ್ನು ಹೊಂದಲು ಮಾಡಬೇಕಾದ ಕಾರ್ಯವೇನು ? ಎಂದು ತಿಳಿಯಬೇಕು.

ದೇವತಾ ಪೂಜನಂ ಕಾರ್ಯಂ ಲೋಕದ್ವಯಮಭೀಪ್ಸಿತಾಂ

ದೇವತಾ ಪೂಜನದಿಂದ ಉಭಯ ಲೋಕಗಳೂ ಸಿದ್ಧಿಸುವುದೆಂದು ನಮ್ಮ ಹಿರಿಯರು ಕಂಡುಹಿಡಿದಿರುವರು

ಯಜ್ಞೇಷು ದೇವಯಜನಮಂತರ್ವೇದಿ ಪ್ರಕೀರ್ತಿತಂ
ಬಹಿರ್ವೇದಿ ತಥೈವೋಕ್ತಂ ಉಪವಾಸ ವ್ರತಾದಿಕಂ

ದೇವತಾ ಪೂಜನವು ಎರಡು ವಿಧವಾಗಿರುವುದು. ಯಜ್ಞಯಾಗಾದಿ ಕರ್ಮ ಗಳಿಗೆ ಅಂತರ್ವೇದಿಯೆಂದೂ, ಉಪವಾಸ ವ್ರತಾದಿಗಳಿಗೆ ಬಹಿರ್ವೇದಿ ಎಂದೂ ಹೆಸರು

ಅಗ್ನಿಷ್ಟೋಮಾದಿ ಪಶುಭಿರಿಷ್ಟಂ ಯಜ್ಞಂ ಪ್ರಕೀರ್ತಿತಂ
ವಾಪೀಕೂಪ ತಟಾಕಾದಿ ದೇವತಾಯತನಾನಿಚ
ಸ್ವರ್ಗಸ್ಥಿತಿಂ ಸದಾಕುರ್ಯಾತ್ ತಾದ್ದಾನಂ ಪೂರ್ತಸಂಜ್ಞಿತಂ

ಯಜ್ಞವೆಂದರೆ ಪಶುಸಂಬಂಧವಾದ ಅಗ್ನಿಷ್ಟೋಮ್ಯಾದಿ ಕಾರ್ಯಗಳು. ಇದಕ್ಕೆ ಇಷ್ಟವೆಂದು ಹೆಸರು. ಲೋಕೋಪಕಾರಕವಾದ ವಾಪೀ ಕೂಪತಟಾಕಾದಿ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ನಿರ್ಮಾಣಿ ಕಾರ್ಯಗಳಿಗೆ ಪೂರ್ತ್ತ ಎಂದು ಸಂಜ್ಞೆಯು. ಈ ಉಭಯ ಕಾರ್ಯಗಳಿಂದ ದೇವತೆಗಳು ಪ್ರೀತರಾಗಿ ಸ್ವರ್ಗಾದಿ ಸುಖಗಳನ್ನು ಅನುಗ್ರಹಿಸುವರು.

ಕೃತ, ತ್ರೇತ, ದ್ವಾಪರ ಯುಗಗಳಲ್ಲಿ ಮನುಷ್ಯರು ದೇವತೆಗಳನ್ನು ಕಣ್ಣಿನಿಂದಲೇ ಸಾಕ್ಷಾತ್ಕರಿಸುತ್ತಿದ್ದರು. ಆದರೆ ಕಲಿಯುಗದಲ್ಲಿ ದೇವತೆಗಳನ್ನು ಮನುಷ್ಯರು ಕಣ್ಣಿನಿಂದ ನೋಡಲಾಗುವುದಿಲ್ಲ. ಆದುದರಿಂದ ಆ ದೇವತೆಗಳ ಪೂಜೆಯೆಲ್ಲವೂ ದೇವತಾ ಸಾನ್ನಿಧ್ಯವನ್ನು ಹೊಂದಿದ ವಿಗ್ರಹವನ್ನೇ ಆಶ್ರಯಿಸಿರುತ್ತದೆ. ಆದುದರಿಂದ ಸುಂದರವಾದ ಆಕಾರದಿಂದಲೂ, ಲಕ್ಷಣಗಳಿಂದಲೂ ಕೂಡಿದ ವಿಗ್ರಹಗಳನ್ನು ಪ್ರತಿಷ್ಠಿಸಿ ಪೂಜಿಸುವರು. ಅವರು ಎಲ್ಲಾ ವಿಧವಾದ ಇಷ್ಟಾರ್ಥಗಳನ್ನೂ ಹೊಂದುತ್ತಾರೆ. ಈ ವಿಗ್ರಹ ಪೂಜೆಗಾಗಿ ದೇವಾಲಯ, ಗೋಪುರ, ವಿಮಾನ ಪ್ರಾಕಾರಾದಿಗಳನ್ನು ನಿರ್ಮಿಸಿ ಅದರಲ್ಲಿ ದೇವರ ವಿಗ್ರಹಗಳನ್ನು ಸ್ಥಾಪಿಸಿ ಪೂಜಿಸುವುದರಿಂದ ಇಷ್ಟಾಪೂರ್ತವೆನ್ನುವುದು ಸಿದ್ಧಿಸಲ್ಪಟ್ಟು ಇಹ–ಪರ ಶ್ರೇಯಸ್ಸನ್ನು ಹೊಂದುವರು.

ಸಾಕಾರ–ನಿರಾಕಾರ

"ನಚರೂಪಂ ವಿನಾಧ್ಯಾತುಂ ಕೇನಾಪಿ ಶಕ್ಯತೇ"
"ದೃಶ್ಯಾಭಾವೇ ಕಥಂಜಪಂ"—ವಿಷ್ಣು ಸಂಹಿತೆ 29 (55)
ರೂಪರಸಗಂಧ ರಸ್ಯೈರ್ಹೀನ ಶಬ್ದ ಸ್ಪರ್ಶ ವಿವರ್ಜಿತಃ
ಪುರಷಸ್ತು ತ್ವಯಾ ಪ್ರೊಕ್ತಾ ಸ್ತಸ್ಯರೂಪ ಮಿದಂ ಕಥಂ

ಕಣ್ಣಿಗೆ ಕಾಣಿಸದಿರುವ ವಸ್ತುವನ್ನು ಮನಸ್ಸಿಗೆ ತೆಗೆದುಕೊಂಡು ಧ್ಯಾನಿಸುವುದು ಹೇಗೆ ? ಅಲ್ಲದೆ ಶಾಸ್ತ್ರಗಳಲ್ಲಿ ವಿವರಿಸಿರುವ ಪರಮಾತ್ಮನು ರೂಪ, ರಸ, ಗಂಧ, ಸ್ಪರ್ಶ ಎಂಬ ನಮ್ಮ ಪಂಚೇಂದ್ರಿಯಗಳಿಗೆ ಎಟುಕದ ಆ ವಸ್ತುವಿನ ಸ್ವರೂಪವು ಹೇಗಿರುವುದು ? ಎಂಬುದು ಒಂದು ಪ್ರಶ್ನೆಯು.

ನಿರಾಕಾರೇತು ದೇವೇಶ ಚಿತ್ತಂ ನ ರಮತೇ ಯತಃ
ತಸ್ಮಾದಾಕಾರ ವತ್ಪೂರ್ವಂ ಲಕ್ಷಣಂ ಕೃದ್ವಿಚಕ್ಷಣಃ

ನಿರಾಕಾರವಾದ ಯಾವ ವಸ್ತುವನ್ನೇ ಆಗಲಿ ಮನಸ್ಸಿಗೆ ತೆಗೆದುಕೊಂಡು ಧ್ಯಾನಿಸುವುದು ಸಾಧ್ಯವಿಲ್ಲವಾದ್ದರಿಂದ ಆಕಾರಯುಕ್ತವಾದ ವಸ್ತುವನ್ನು ಮನಸ್ಸಿನಲ್ಲಿ ಧ್ಯಾನಿಸಬೇಕು.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಪ್ರಕೃತಿರ್ವಿಕೃತಿ ಸ್ತಸ್ಯ ರೂಪೇಣ ಪರಮಾತ್ಮನಃ
ಅಲಕ್ಷ್ಯಂ ತಸ್ಯ ತದ್ರೂಪಂ ಪ್ರಕೃತಿಸ್ಸಾಪ್ರಕೀರ್ತಿತಾ
ಸಾಕಾರಂ ವಿಕೃತಿಜ್ಞೇಯಾ ತಸ್ಯ ಸರ್ವಜನ ಸ್ಮೃತಂ
ಪೂಜಾಧ್ಯಾನಾಧಿಕಂ ಕರ್ತುಂ ಸಾಕಾರ ಸ್ಯೈವಕಥ್ಯತೇ

—ವಿಷ್ಣುಧರ್ಮೋತ್ತರ

ಪರಮಾತ್ಮನು ಪ್ರಕೃತಿ ಮತ್ತು ವಿಕೃತಿಯೆಂಬ ಎರಡು ರೂಪದಲ್ಲಿರುವನು. ಕಣ್ಣಿಗೆ ಕಾಣದಿರುವ ಅವನ ರೂಪವು ಪ್ರಕೃತಿಯೆಂದೂ, ಕಣ್ಣಿಗೆ ಕಾಣುವ ರೂಪಕ್ಕೆ ವಿಕೃತಿಯೆಂದೂ ಹೆಸರು. ಆದ್ದರಿಂದ ಪೂಜಾ ಧ್ಯಾನಾದಿಗಳೆಲ್ಲವೂ ಸಾಕಾರ (ಕಣ್ಣಿಗೆ ಕಾಣುವುದು) ನೆಂದು ಕರೆಯಲ್ಪಡುವುದು.

ಆದರೆ ಈ ಚರಾಚರ ಪ್ರಪಂಚವೆಲ್ಲವೂ ಎಂದರೆ ನದೀ, ಪರ್ವತ, ಮರ, ಗಿಡ, ಪಕ್ಷಿಗಳು ಎಲ್ಲವೂ ಪರಮಾತ್ಮನ ಸ್ವರೂಪವೆನಿಸಿದರೆ ಯಾವ ಆಕಾರವನ್ನು ಕುರಿತು ಧ್ಯಾನಿಸಿ ಪೂಜಿಸಬೇಕೆನ್ನುವುದು ಪ್ರಶ್ನೆ.

ಅಂತರ್ಯಾಮಿಯಾಗಿ ನಿಂತಿರುವ ಪರಮಾತ್ಮನ ಸಂಕಲ್ಪದಿಂದ ಪ್ರಕೃತಿಗೆ ಅನೇಕ ವಿಕಾರಗಳು ಉಂಟಾಗುತ್ತವೆ. ಸೂಕ್ಷ್ಮವಾಗಿರುವ ಅಂತರ್ಯಾಮಿಯ ರೂಪವು ಅಗೋಚರವು. ಮೇಲೆ ತೋರುವ ರೂಪವೆಲ್ಲವೂ ಎಂದರೆ ನದೀ, ಪರ್ವತಾದಿ ರೂಪ ಗಳೆಲ್ಲವೂ ಆ ಪ್ರಕೃತಿಯ ವಿಕಾರವು. ನಿರಾಕಾರವಾದ ಆ ಪರಮಾತ್ಮನ ರೂಪದ ಧ್ಯಾನ ಪೂಜಾದಿಗಳು ಸಾಕಾರ ರೂಪದಲ್ಲಿ ಸಂಭವಿಸುವುದು. ಆದರೆ ಈ ಪ್ರಪಂಚದ ಯಾವ ರೂಪವು ಧ್ಯಾನಾದಿ ಪೂಜೆಗಳಿಗೆ ಅರ್ಹವಾಗುವುದು ? ಎಂದರೆ ದೇವತೆಗಳ ಸ್ವಾಭಾವಿಕವಾದ ಆಕಾರವೇ ಯಥಾವಿಧಿಯಾದ ಪೂಜಾವಿಧಿಗಳಿಗೆ ಅರ್ಹವಾಗಿರುತ್ತದೆ. ಅವ್ಯಕ್ತ ರೂಪವಾದ ಪ್ರಕೃತಿಯ ಪೂಜಾ ಧ್ಯಾನಾದಿಗಳು ಅವ್ಯಕ್ತ ಗತಿಗೇ ಕಾರಣ ವಾಗುತ್ತವೆ. ಆದುದರಿಂದ ಆ ರೀತಿಯ ಧ್ಯಾನಾದಿಗಳು ಜೀವರಾಶಿಗಳಿಗೆ ದುಃಖ ಪ್ರದವೇ ಆಗಿರುವುದು. ಆದುದರಿಂದ ದೇವತೆಗಳ ನಿರಾಕಾರವಾದ ಸ್ವರೂಪವು ಪೂಜಾದಿಗಳಿಗೆ ಅರ್ಹವಾಗುವಂತೆ ಅದೇ ದೇವತೆಯ ಇಚ್ಛೆಯಿಂದಲೇ ಒಂದೊಂದು ಆಕಾರದಿಂದ ಪ್ರಕಾಶ ಹೊಂದುತ್ತಾರೆ. ತಮ್ಮ ತಮ್ಮ ಸ್ವರೂಪವನ್ನು ತೋರ್ಪಡಿಸುವ ಕಾಲದಲ್ಲಿ ದೇವತೆಗಳು ಆಯಾ ಆಕಾರವನ್ನು ಪಡೆಯುತ್ತಾರೆ. ಈ ಕಾರಣದಿಂದ ಸಾಕಾರವಾದ ಆಯಾ ರೂಪಗಳಿಗೆ ಪೂಜಾದಿಗಳು ವಿಹಿತವಾಗಿವೆ. ಆದುದರಿಂದ ನಿರಾ ಕಾರವಾದ ಪುರುಷನ ಸ್ವರೂಪವು ಅವನ ಎಂದರೆ ಚೇತನನ ಇಚ್ಛೆಗೆ ಅನುಸಾರವಾಗಿ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಸಕಾರಣಹಾಗಿ ವೇದ ಪುರಾಣ, ಆಗಮಾದಿ ಶಾಸ್ತ್ರಗಳಿಗೆ ಅನುಗುಣವಾಗಿ ಹೊಂದು ವುದು. ಆದ್ದರಿಂದ ಸಕಾರಣವಾದ ಎಂದರೆ ವೇದ, ಪುರಾಣ, ಆಗಮೋಕ್ತ ರೀತಿ ಯಾದ ಆಕಾರದ ಮೂರ್ತಿಯನ್ನೇ ಧ್ಯಾನಿಸಿ ಪೂಜಿಸಬೇಕು.

ಅರ್ಚಾವತಾರ

ಭಗವಂತನು ದುಷ್ಟಶಿಕ್ಷಣ, ಶಿಷ್ಟಪರಿಪಾಲನ ಧರ್ಮಸಂರಕ್ಷಣಕ್ಕಾಗಿ ಅವತಾರ ವನ್ನೆತ್ತುವುದು ಪ್ರಸಿದ್ಧವು. ಕೃಷ್ಣಾವತಾರವಾದ ಮೇಲೆ ಧರ್ಮ ಸಂಸ್ಥಾಪನವು ಪೂರ್ತಿಯಾಗದ್ದರಿಂದ ಕಲಿಯುಗದಲ್ಲಿ ಧರ್ಮ ರೀತಿಯಲ್ಲಿ ಚೇತನರ ಉದ್ಧಾರಕ್ಕಾಗಿ ಅರ್ಚಾವತಾರವು. ಈ ಅವತಾರದ ಮೇಲೆ ಕಲ್ಕ್ಯವತಾರವು. ಈ ಅರ್ಚಾವತಾರದ ವಿಷಯದಲ್ಲಿ ಭಗವಂತನೇ ಈ ರೀತಿ ಹೇಳಿರುವನು.

ಪುಂಸಿ, ಪುಂಸಿ ಭವಿಷ್ಯಾಮಿ ದಾರುಲೋಹ ಶಿಲಾಮಯಃ
ಅರ್ಚಾವತಾರ ರೂಪೇಣ ಲೋಕೇಸ್ಮಿನ್ ಚತುರಾನನ
ಅವತಾರಂ ಕರಿಷ್ಯಾಮಿ ಕ್ರಿಯಾಲಕ್ಷ್ಮ್ಯಾಸಮನ್ವಿತಃ
ಪುಂಸಿ,ಪುಂಸಿ ಭವಿಷ್ಯಾಮಿ ದಾರು ಲೋಹ ಶಿಲಾಮಯಃ

ಅರ್ಚನಾ ನವನೀತಂ

ಅನನ್ಯಾಶ್ಚಿಂತಯಂತೋ ಮಾಂ ಯೇ ಜನಾಃ ಪರ್ಯುಪಾಸತೇ
ತೇಷಾಂ ನಿತ್ಯಾಭಿಯುಕ್ತಾನಾಂ ಯೋಗಕ್ಷೇಮಂ ವಹಾಮ್ಯಹಂ

ಗೀತೆಯಲ್ಲಿ ಚೇತನರ ಉದ್ಧಾರಕ್ಕಾಗಿ "ಸಂಭವಾಮಿ ಯುಗೇ ಯುಗೇ" ಎಂದು ತಿಳಿಸಿದ ಪ್ರಕಾರ ಭಗವಂತನು ಪರತ್ವದಿಂದ, ವ್ಯೂಹ, ವಿಭವಾವತಾರವಾದ ಮೇಲೆ ಅರ್ಚಾವತಾರವನ್ನು ದಾರು ಲೋಹ ಶಿಲಾರೂಪದಲ್ಲಿ ಆಗಿಂದಾಗ್ಯೆ ಲಕ್ಷ್ಮ್ಯಾದಿ ಪರಿವಾರ ದೊಂದಿಗೆ ಈ ಲೋಕದಲ್ಲಿ ಅವತರಿಸುವೆನು ಎಂಬುದಾಗಿ ಪರಮಾತ್ಮನ ಸತ್ಯಸಂಕಲ್ಪವು.

ಅರ್ಚಾವತಾರ ವಿಷಯೇ ಮಮಾಪ್ಯುದ್ದೇಶ ವಸ್ತಥಾ
ಉಕ್ತಗುಣಾನಶಕ್ಯಂ ತೇ ವಕ್ತುಂ ವರ್ಷಶತೈರಪಿ
ದ್ವೀಪವರ್ಷ ವಿಭಾಗೇನ ತೀರ್ಥೇಷ್ವಾಯತನೇಷು ಚ
ವಿಷ್ಣ್ವಾಲಯಂ ಕಲ್ಪಯಿತ್ವಾ ಗ್ರಾಮಮಧ್ಯೇಷು ಪೂಜಯೇತ್
ಅಥವಾ ಪಶ್ಚಿಮೇ ತತ್ರ ಕಲ್ಪಯಿತ್ವಾರ್ಚಯೇದ್ದರಿಂ

ಅರ್ಚನಾ ನವನೀತಂ

ಪರತ್ವಂ ನಿಷ್ಕಳಂ ಪ್ರೋಕ್ತಂ ವ್ಯೂಹಂ ಸಕಳಮುಚ್ಯತೇ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ವೈಭವಾಸ್ತ್ವವತಾರಾಣಿ ಹೃದ್ಗತಂ ಚಾನ್ತರಾತ್ಮಕಂ
ಪ್ರತಿಪಾದಿಷುಸಾನ್ನಿಧ್ಯಂ ವಿಮಾನಾರ್ಚನ ಮುಚ್ಯತೇ.

ಅರ್ಚಾವತಾರದ ವಿಷಯದಲ್ಲಿ ಮಹಾತ್ಮ್ಯವನ್ನೆಷ್ಟು ಹೇಳಿದರೂ ಅಲ್ಪವೇ ಆಗಿರುವುದು. ಬಾಯಲ್ಲಿ ಹೇಳುವುದಕ್ಕಿಂತ ಕೈಯ್ಯಲ್ಲಿ ಆಚರಿಸುವುದು ಉತ್ತಮ ವಾದ್ದರಿಂದ ಅರ್ಚಾವತಾರ ಮೂರ್ತಿಗಾಗಿ ವಿಷ್ಣ್ವಾಲಯವನ್ನು ತೀರ್ಥ, ಕ್ಷೇತ್ರ, ಗ್ರಾಮ, ನಗರಗಳಲ್ಲಿ ಆಗಮ ಶಿಲ್ಪಶಾಸ್ತ್ರಾನುಸಾರವಾಗಿ ನಿರ್ಮಿಸಿ ವಿಗ್ರಹವನ್ನು ಪ್ರತಿ ಷ್ಠಿಸಿ ಧ್ಯಾನ ಪೂಜಾದಿಗಳನ್ನು ನಡೆಸಬೇಕು. ಆ ರೀತಿ ಆಲಯವನ್ನು ನಿರ್ಮಿಸಿ ವಿಗ್ರಹವನ್ನು ಪ್ರತಿಷ್ಠಿಸಿದಲ್ಲಿ, ಆ ಪ್ರತಿಷ್ಠಿತವಾದ ಮೂರ್ತಿಯಲ್ಲಿ ಭಗವಂತನು ಆವಾ ಹಿತನಾಗಿರುವನೆಂದು ಪ್ರಮಾಣಸಿದ್ಧವು.

ಪಂಚಭೂತಯುತಾಮೂರ್ತಿ ಸರ್ವಾಭವತಿ ಮಣ್ಡಿತಾ
ಆದ್ಯಂತಮಧ್ಯ ಸಂಯುಕ್ತಾ ಸರ್ವಸ್ಯೈವ ಯದೂತ್ತಮ
ಪ್ರಾದುರ್ಭಾವತೋ ವಿಷ್ಣುರ್ಯದಾದೇವ ಗಣಸ್ತಥಾ
ಅವಾಹಿತ ಸನ್ನಿಹಿತೋ ಭವತ್ರೀತಿ ನಿಶ್ಚಯಃ

ಭಗವಂತನಿಗೆ ಪರಾ, ಅಪರಾ ಎಂಬ ಎರಡು ವಿಧ ಶಕ್ತಿಯುಂಟು. ಪರಾ ಎಂಬುದನ್ನು ತಿಳಿಯಲು ನಮಗೆ ಸಾಧ್ಯವಿಲ್ಲವು. ಅದು ದೃಷ್ಟಿಗೆ ಗೋಚರವಾಗು ವುದಿಲ್ಲ. ಅಪರಾ ಎನ್ನುವುದೇ ಪುರುಷನಿಂದ ನಿರ್ಮಿತವಾದ ಅರ್ಚಾಮೂರ್ತಿಯು, ಇದು ಪಂಚಭೂತಮಯವಾಗಿಯೇ ಇರುವುದು.

ಅಮೂರ್ತವಾದ ಯಾವ ವಸ್ತುವೂ ಪುರುಷ ಪ್ರಯತ್ನವಿಲ್ಲದೆ ಮೂರ್ತಿವತ್ತಾಗಿ ಮಾಡಲು ಈ ಲೋಕದಲ್ಲಿ ಸಾಧ್ಯವಿಲ್ಲವು. ಅರ್ಚಾರೂಪದಿಂದ ಎಂದರೆ ವಿಗ್ರಹರೂಪ ದಿಂದಿದ್ದರೂ ಭಗವಂತನು ಪರಾತ್ಪರ ವಸ್ತುವೇ ಆಗಿರುತ್ತಾನೆ. ಆತನಿಗೆ ಸರ್ವಜ್ಞತ್ವ, ಸರ್ವಶಕ್ತಿ, ಜಗತ್ಸೃಷ್ಟಿ, ಸರ್ವವ್ಯಾಪಕತ್ವಾದಿಗಳು ಸಿದ್ಧವಾಗಿಯೇ ಇರುವುದು.

ಹಾಗಿದ್ದಲ್ಲಿ ಅರ್ಚಾರೂಪವಾದ ವಿಗ್ರಹ ವಿಶೇಷದಲ್ಲಿ ನಿತ್ಯವೂ, ಸರ್ವವ್ಯಾಪ ಕನೂ ಆಗಿರುವ ಪರಮಾತ್ಮನಿಗೆ ಪ್ರತಿಷ್ಠಾ ಆವಾಹನೆಗಳೇತಕ್ಕೆ ? ಎಂಬ ಪ್ರಶ್ನೆ ಯುಂಟಾಗುವುದು. ಅಲ್ಲದೆ,

ಸರ್ವಗಸರ್ವ ಭೂತೋಽಹಂ ನಾಸ್ತಿ ಕಿಂ ಚಿನ್ಮಯಾ ವಿನಾ

ಭಗವಂತನು ಸರ್ವಜೀವರಾಶಿಯ ಶರೀರದಲ್ಲಿ ಏಕೆ ಸರ್ವವ್ಯಾಪಿಯಾಗಿದ್ದು ಅವನಿಲ್ಲದ ಅಣುಮಾತ್ರ ಸ್ಥಳವೂ ಇರುವುದಿಲ್ಲ ಎಂಬುದಾಗಿ ಭಗವಂತನೇ ಹೇಳಿರು

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ವನು. ಅಲ್ಲದೆ ಅವನ ಪ್ರತಿಕೃತಿಯಾಗಿ ವಿಗ್ರಹವನ್ನು ನಿರ್ಮಿಸಿ ಅದರಲ್ಲಿ ಪ್ರತಿಷ್ಠಾ ಆವಾಹನೆಗಳನ್ನು ಮಾಡ್ಡಿದಲ್ಲಿ ಭಗವಂತನಿಗೆ ಅವಮಾನವಾಗುವುದಿಲ್ಲವೇ?

"ಆವಾಹನೋದ್ವಾಸನಂ ವಿಷ್ಣೋರಯುಕ್ತಂ" ಎಂದು ಹೇಳಿರುವುದು ಅದಕ್ಕಾಗಿ,

ಸರ್ವಸ್ಯಭೂತಜಾತಸ್ಯ ಹರಿರಾತ್ಮಸ್ಥಿತೋಸಿ ಸನ್"
"ಮಂತ್ರವೀರ್ಯಾಶ್ಚ ಮಾಹಾತ್ಮ್ಯಾತ್ ಸ್ಥಾಪಕಸ್ಯಗುರೋಸ್ತಥಾ
ಪ್ರತಿಮಾಯಾಂ ಪ್ರಕರ್ಷೇಣ ಸನ್ನಿಧತ್ತೇ ಹರಿಸ್ಸ್ವಯಂ
ಕಾಮಾನಶೇಷಾಂ ಸ್ತತ್ರೈವ ಹರಿಮರ್ಥಯತೇ ಜನಃ
ತೇನಪ್ರತಿಷ್ಠಾ ನಾವೇದಮನ್ವರ್ಥಂ ವರ್ತತೇ ಭುವಿ
ಯಥಾ ಚ ವಹ್ನಿರ್ದಹನೋ ನ ದಹನ್ತ್ಯಸ್ಯತಿಷ್ಠತಿ
ಅರಣೀಮಥನಾದ್ಭೂಯೋ ಜಾಯಮಾನಃ ಪ್ರದೃಶ್ಯತೇ
ದಹನಾದೀನಿ ಕರ್ಮಾಣಿ ಕರೋತಿ ಚ ಯಥಾತಥಂ
ತಥಾ ಸರ್ವಗತೋ ವಿಷ್ಣುರದೃಶ್ಯ ಪ್ರಾಕೃತೈರ್ಜನೈಃ
ದೃಶ್ಯತೇ ಚ ಪ್ರತಿಕೃತೇ ಮನ್ತ್ರಿಣೋ ಮಂತ್ರಗೌರವಾತ್
ಶಿಲ್ಪಭಿನಿರ್ಮಿತೇ ಬಿಂಬೇಶಾಸ್ತ್ರ, ದೃಷ್ಟೇನವರ್ತ್ಮನಾ

ಪಾದ್ಮಸಂ ಕ್ರಿಯಾ 26

ಪ್ರತಿಷ್ಠಾ

"ಸರ್ವಗಸ್ಸರ್ವ ಭೂತೋಹಂ ನಾಸ್ತಿ ಕಿಂಚಿನ್ಮಯಾವಿನಾ"
"ತೇನವಿನಾ ತೃಣಮಪಿ ನ ಚಲತಿ"
"ಅಣೋರಣೀಯಾನ್ ಮಹತೋ ಮಹೀಯಾನ್"

ಎಂಬಂತೆ ಸಮಸ್ತ ಚರಾಚರ ಭೂತಗಳಲ್ಲಿಯೂ ನೆಲೆಸಿರುವ ಭಗವಂತನನ್ನು ಧ್ಯಾನಿಸಲು ದೇವಸ್ಥಾನವು ಅವಶ್ಯಕವಿಲ್ಲವು. ವಾಸ್ತವವೇ ! ಅಗ್ನಿ ಎಲ್ಲಾ ಕಡೆ ಯಲ್ಲೂ ಇರುವುದು ಪ್ರತ್ಯಕ್ಷ ಪ್ರಮಾಣವು. ಎರಡು ವಸ್ತುಗಳ ಘರ್ಷಣ ವ್ಯಾಪ್ತಿ ಯಿಂದ ಅಗ್ನಿಯುಂಟಾಗುವುದೆಂಬುದು ಪ್ರಸಿದ್ಧವು. ಆ ಎರಡು ವಸ್ತುಗಳಿಗೂ ಸಂಸ್ಕಾರ ಬಲವನ್ನಿತ್ತರೆ ಎಂದರೆ ಅರಣಿ ಮಥನದಿಂದ ಅಗ್ನಿಯುತ್ಪನ್ನವಾಗುವುದು. ಈ ಮರಕ್ಕೆ ಸಂಸ್ಕಾರದಿಂದ ಎಂದರೆ ರಂಜಕ ಮುಂತಾದವುಗಳಿಂದ ಸಂಸ್ಕರಿಸಿ ಘರ್ಷಿಸಿ ದಲ್ಲಿ ಸಂಸ್ಕಾರಬಲದಿಂದ ತಕ್ಷಣ ಬೆಂಕಿಯುಂಟಾಗುವುದು (ರಂಜಕ ಪೆಟ್ಟಿ). ಅದೇ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ರೀತಿಯಲ್ಲಿ ಅರೂಪವಾದ ಶಿಲೆಯು ರೂಪಾಂತರವನ್ನು ಹೊಂದಿ ವೇದ ಮಂತ್ರಾದಿಗಳಿಂದ ಪ್ರತಿಷ್ಠಾ ಸಂಸ್ಕಾರಾದಿಗಳನ್ನು ಹೊಂದಿದಲ್ಲಿ ಅಗ್ನಿಯಂತೆ ಸರ್ವವ್ಯಾಪಿಯಾದರೂ ಅದೃಶ್ಯರೂಪದಿಂದಿರುವ ಭಗವಂತನು ವೇದ, ಮಂತ್ರ, ಪ್ರತಿಷ್ಠಾಸಂಸ್ಕಾರಗಳ ಮೂಲಕ ಅರ್ಚಾವಿಗ್ರಹದಲ್ಲಿ ಆವಾಹನೆ ಮಾಡಲ್ಪಟ್ಟು ಸಾನ್ನಿಧ್ಯವನ್ನು ಹೊಂದಿ ಫಲವನ್ನು ಕೊಡುವನು.

ಆದರೆ ಒಂದು ಶಾಸ್ತ್ರವು,

ಸರ್ವಾಧಾರಂ, ಸನಾತನಮಪ್ರಮೇಯ ಮಚಿನ್ತ್ಯಂ, ನಿರ್ಗುಣಂ, ನಿಷ್ಕಲಂ' ಕ್ಷೀರೇಸರ್ಪಿ, ತಿಲೇತೈಲಂ, ಪುಷ್ಪೇಗನ್ಧಂ, ಫಲೇರಸಂ, ಕಾಷ್ಠೇಗ್ನಿಮಿವ, ಸರ್ವವ್ಯಾಪಿನಂ ಪರಮಾತ್ಮಾನಂ ಮನಸಾ ಸಂಕಲ್ಪ್ಯಾವಾಹಯೇತ್,

ಆವಾಹನೋದ್ವಾಸನಂ ವಿಷ್ಣೋರಯುಕ್ತಮಿತಿ ಯಥಾಹ್ಯರಣ್ಯಾ
ವ್ಯಾಪ್ತೋ ಹಿ ವಹ್ನಿರ್ಮಥನಾತ್ಸನ್ನಿಹಿತೋಭವತಿ ತಥೈವ
ಧ್ಯಾನ ಮಥನೇನ ಭಕ್ತಸ್ಯ ಹೃದಿ ವಿಷ್ಣು ಸನ್ನಿಹಿತೋ ಭವತಿ

ವಿ. ಕ. ಪುಟ 224

ಯಥಾ ಕುಂಡಗತೋ ವಹ್ನಿ ವಾಯುನಾ ಜ್ವಲಿತೋ ಭವೇತ್
ತಥಾ ಬಿಂಬಗತೋ ವಿಷ್ಣು: ಮಂತ್ರೇಣ ಜ್ವಲಿತೋ ಭವೇತ್

ಯಾವ ರೀತಿ ಅಗ್ನಿಕುಂಡಗತವಾದ ಅಗ್ನಿಯು ವಾಯುತಾಡನದಿಂದ ಜ್ವಲಿತವಾಗುವುದೋ, ಆದೇ ರೀತಿಯಲ್ಲಿ ಬಿಂಬದಲ್ಲಿ ಮಂತ್ರವತ್ತಾಗಿ ಆಹ್ವಾನಿಸಲ್ಪಟ್ಟ (ವಿಷ್ಣುವು) ಭಗವಂತನು ಬಿಂಬದಲ್ಲಿ ಪ್ರಕಾಶಿಸಲ್ಪಡುವನು.

ಸುರೂಪಾಂ ಪ್ರತಿಮಾಂ ವಿಷ್ಣೋಃ ಪ್ರಸನ್ನವದನೇ ಕ್ಷಣಾಂ
ಕೃತ್ವಾತ್ಮನಃ ಪ್ರೀತಿಕರಂ ಸುವರ್ಣ ರಜತಾದಿಭಿಃ

ಆದ್ದರಿಂದ ಸುರೂಪನಾದ ವಿಷ್ಣುವಿನ ಮೂರ್ತಿಯನ್ನು ರಜತ ಸುವರ್ಣಾದಿಗಳಿಂದ ನಿರ್ಮಿಸಿ, ಧ್ಯಾನ ಪೂಜಾದಿಗಳಿಂದ ಭಕ್ತಿಯುತರಾದಲ್ಲಿ ಆ ಭಗವಂತನು ಪ್ರೀತನಾಗುವನು. ಇಲ್ಲಿ ಇನ್ನೊಂದು ಪ್ರಶ್ನೆಯುಂಟಾಗುವುದು. ಮೂರ್ತಿಯನ್ನು ನಿರ್ಮಿಸಿ ವೇದಮಂತ್ರಗಳಿಂದ ಪರಮಾತ್ಮನನ್ನು ಆಹ್ವಾನಿಸುವುದರಿಂದ ಉಂಟಾಗುವ ಲಾಭವು ಯಾರಿಗೆ ? ಭಗವಂತನಿಗೋ ? ಅಥವಾ ಚೇತನನಿಗೋ?

ಆವಾಹನಂ ಸ್ವತೃಪ್ತ್ಯರ್ಥಂ ಪುರುಷಸ್ಯ ಯಥಾಸ್ಥಿತಂ
ಕಿಂ ತಸ್ಯ ಕಾರ್ಯಂ ? ಕೇವಲಂ ಭಕ್ತ ತುಷ್ಟ್ಯರ್ಥಂ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಪೂಜಕನಾದ ಭಕ್ತನು 'ನನ್ನಿಂದ ಆವಾಹಿಸಲ್ಪಟ್ಟು ಪರಮಾತ್ಮನು ನಿಜವಾಗಿಯೂ ಈ ವಿಗ್ರಹದಲ್ಲಿ ಸನ್ನಿಹಿತನಾಗಿದ್ದಾನೆ' ಎಂದು ತಿಳಿಯುತ್ತಾನೆ. ಇದು ಅರ್ಚಕರ ಭಕ್ತಿ ಧೃಡತೆಗೆ ಕಾರಣವು ಮತ್ತು ಮಹಾ ವಿಶ್ವಾಸವು.

ಭಕ್ತನಾದ ಯಾವನು ಯಥಾವಿಧಿಯಾಗಿ ಮಾಡುವ ಆಹ್ವಾನವು ತನ್ನ ಮನಃ ಪ್ರೀತಿಗೆ ಹೇಗೆ ಆಗುತ್ತದೆಯೋ ಹಾಗೆಯೇ ಅರ್ಚೆಯಲ್ಲಿ ಉಂಟಾಗುವ ಪೂರ್ಣ ಸಾನ್ನಿಧ್ಯವೂ ಸಹ ಭಗವಂತನ ಪ್ರೀತಿಗಾಗಿಯೇ ಇರುತ್ತದೆ. ಎಂದರೆ 'ಭಕ್ತರು ತನ್ನನ್ನು ವಿಗ್ರಹದಲ್ಲಿ ಸನ್ನಿಹಿತನನ್ನಾಗಿ ತಿಳಿದು ಭಕ್ತ್ಯಾತಿಶಯದಿಂದ ಸಂತುಷ್ಟನಾಗುವುದೇ ಪರಮಾತ್ಮನಿಗೆ ಉಂಟಾಗುವ ಲಾಭವು. ಈ ರೀತಿ ಉಭಯತಃ ಭಗವಂತನೂ, ಭಕ್ತರೂ ತೃಪ್ತಿಪಡುವುದೇ ಇಬ್ಬರಿಗೂ ಫಲವು.

ಈ ರೀತಿಯಾಗಿ ದೇವಸ್ಥಾನ ನಿರ್ಮಿಸುವಿಕೆ, ವಿಗ್ರಹ ನಿರ್ಮಾಣ, ಪ್ರತಿಷ್ಠಾ, ಪೂಜಾ ಧ್ಯಾನ, ಉತ್ಸವಾದಿಗಳನ್ನು ನಡೆಸುವ ವಿಚಾರದಲ್ಲಿ ಆಯಾ ಭಾಗ ಮತ್ತು ಪ್ರಕರಣಗಳಲ್ಲಿ ವಿವರಿಸಲ್ಪಡುವುದು. ಪ್ರಕೃತ ಭಗವಂತನ ಅರ್ಚಾಮೂರ್ತಿಯನ್ನು ಪ್ರತಿಷ್ಠಿಸಲು ಅವರ ಶರೀರರೂಪವಾದ ದೇವಾಲಯದ ಪೂರ್ವಚರಿತ್ರೆ, ಅಧಿಕಾರಿ, ಇತ್ಯಾದಿಗಳನ್ನು ಕ್ರಮವಾಗಿ ತಿಳಿಸಲಾಗುವುದು.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ದೇವಾಲಯ ಪೂರ್ವಚರಿತ್ರಂ

ಕೃತೇ ತು ದೇವತಾಯತನ ವಿಧಾನಂ ಸಾಭವತ್ ಕ್ಷಿತೌ
ಕೇವಲಂ ಹಿ ತದಾಹ್ಯಾಸೀ ತ್ಪ್ರತ್ಯಕ್ಷೇಣ ನರಾಧಿಪ || ೧ ||
ಪ್ರತ್ಯಕ್ಷೇಣಾಪಿ ದೃಶ್ಯಸ್ತೇ ತ್ರೇತಾದ್ವಾಪರಯೋರ್ಜನಾಃ
ದೇವಾನಾಂ ಪ್ರತಿಮಾಂ ಕೃತ್ವಾ ಪೂಜಯಂತಿ ಯಥಾವಿಧಿ
ಗೃಹೇ ಪ್ರತಿಷ್ಠಾ ತತ್ರಾಪಿ ತ್ರೇತಾಯಾಂ ತು ಪ್ರಕೀರ್ತಿತಾಃ
ದ್ವಾಪರೇಚಾಪ್ಯರಣ್ಯೇಷು ಋಷಿಭಿಸ್ತು ತತಃ ಕೃತಾ
ತೇಷಾಂ ಸಂಪೂಜನಂ ನಿತ್ಯಂ ಸಿದ್ಧೈಸ್ತು ಕ್ರಿಯತೇ ನೃಪ
ಪ್ರತಿಷ್ಠಾಮಾತ್ರಕರಣಾನ್ನಿರ್ವೃತಾ ಋಷಯಸ್ತು ತೇ || ೪ ||
ಕಲೌಪ್ರವೃತ್ತಃ ಸರ್ವೋಽಯಂ ಪ್ರತಿಷ್ಠಾ ಕರುಣೋ ಜನಃ

* * *

ಯಸ್ಮಾತ್ತೇಷು ವಿಹಿತಂ ಕುರ್ಯಾದ್ಭೂಮಿ ದಾನಾದಿಭಿಃ ಕಲೌ
ಯೇನ ರಾಜ್ಞಾಹತೋ ರಾಜಾ ನಾನ್ಯೋಽ ಯದಿಭವೇತ್ ಕಲೌ
ಪ್ರತಿಷ್ಟ ತೇನ ಕರ್ತವ್ಯಾ ನಗರೇ ಪೂರ್ವನಿರ್ಮಿತೇ
ಅನುಜ್ಞಾಂ ನೃಪತೇಃ ಪ್ರಾಪ್ಯ ಕುರ್ಯಾದನ್ಯೋಽಪಿ ಯಾದವ
ಸ್ಥಿರಾಂ ಪ್ರತಿಷ್ಠಾಂ ಗೃಹಾಯಾಂ ನೃಪಾನುಜ್ಞಾನ ಕಾರಣಂ
ಪರ ಪ್ರಣೀತಾಂ ಯಸ್ತ್ವರ್ಚಾಃ ಸಂಕುರ್ಯಾತ್ಪುನರೇವ ತು || ೧೫ ||
ವಿಧಾನಂ ಭೂಮಿದಾನಾಧ್ಯಂ ಕುರ್ಯಾತ್ತತ್ರ ನ ಶಕ್ತಿತಃ
ದ್ವಿಗುಣಂ ಫಲಂಮಾಪ್ನೋತಿ ಕುಲಂ ಚಾಪಿ ಸಮುದ್ಧರೇತ್

* * *

ಕೃತೇ ತ್ರೇತಾಯುಗೇ ರಾಜನ್ ದ್ವಾಪರೇ ಚ ಸುರೋತ್ತಮಾಃ
ಲಗಚ್ಛಂತಿ ನೃಲೋಕೇಸ್ಮಿನ್ ಸ ಶರೀರಾ ದಿವೌಕಸಃ
ನಾಗಚ್ಛಂತಿ ಕಲೌ ಯಸ್ಮಾತ್ಸಶರೀರಾ ಕಥಂಚನ
ಆಗಚ್ಛಂತಿ ಪ್ರತಿಷ್ಠಾಸು ದ್ವಿಜೈರಾವಾಹಿತಾ ಸ್ತತಃ
ತಸ್ಮಾತ್ಕಲೌ ಪ್ರಯತ್ನೇನ ಪ್ರತಿಷ್ಠಾಂ ಕಾರಯೇದ್ಬುಧಃ
ಅರ್ಚಾಸ್ಥೈಸ್ತ್ರಿದಿಶೈರ್ಲೋಕಃ ಕಲೌಸರ್ವೋಽಹಿ ಪಾಲ್ಯತೇ
ಅರ್ಚಾಗತಾಶ್ಚ ಗೃಹ್ಣಂತಿ ನೃಪದೇವ ಪ್ರತಿಷ್ಠಿತಾಃ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ತಸ್ಮಾತ್ಕಲೌ ಪ್ರಯತ್ನೇನ ಪ್ರತಿಷ್ಠಾಕರಣಂ ಹಿತಂ . . .
ಯತ್ಕಾಮ್ರಸ್ಸ ವಿಹಿತಂ ಕುರ್ಯಾದ್ಬೂವಿದಾನಾದಿ ಭಿಸ್ಸದಾ
+ + ಯಜ್ಞೇರ್ಯಥಾ ಯಾಂತಿ ಮಾನವಾ ಸ್ತ್ರಿದಿವಾಲಯಂ
ತಥೈವರಾಜನ್ ಗಚ್ಛಂತಿ ಕೃತದೇವ ಪ್ರತಿಷ್ಠಕಾಃ
ತಸ್ಮಾತ್ಕಲೌ ಪ್ರತಿಷ್ಠಾನಂ ಕರ್ತವ್ಯಂ ಬೂರಿದಕ್ಷಿಣಂ

* * *

ಸಮಂತಾಸ್ತು ಜಲಂ ಶಸ್ತಂ ದ್ವೀಪೇ ದೇವಗೃಹೇ ಕೃತೇ
ಯತ್ರದೇವ ಗೃಹಂ ಕಾರ್ಯಂ ತತ್ರ ಭೂಮಿಂ ಪರೀಕ್ಷಯೇತ್

—ಶ್ರೀ ವಿಷ್ಣು ಧರ್ಮೋತ್ತರೇ 3 ಖಂಡ 94

ಕೃತಯುಗದಲ್ಲಿ ದೇವಾಲಯಗಳ ನಿರ್ಮಾಣವೇ ಈ ಭೂಮಂಡಲದಲ್ಲಿರಲಿಲ್ಲ. ಆಗ ದೇವತೆಗಳನ್ನು ಪ್ರತ್ಯಕ್ಷದಿಂದಲೇ ತಿಳಿಯಲು ಅನುಭವಿಸಲು ಅವಕಾಶವಿತ್ತು. ಅನಂತರ ತ್ರೇತಾ ದ್ವಾಪರ ಯುಗಗಳಲ್ಲಿ ಅಂತಹ ದೇವತೆಗಳನ್ನು ಪ್ರತ್ಯಕ್ಷದಿಂದ ತಿಳಿಯಲೂ ಅವಕಾಶವಿತ್ತು. ಅಂತಹ ದೇವತೆಗಳನ್ನು ಪೂಜಿಸುತ್ತಲೂ, ಯಥಾವಿಧಿಯಾಗಿ ಸತ್ಕರಿಸುತ್ತಲೂ ಇದ್ದರು. ಆಲಯಗಳಲ್ಲಿ ಪೂಜಿಸುವ ಪದ್ಧತಿಯೂ, ಪ್ರತಿಷ್ಠಾ ಪದ್ಧತಿಯೂ ತ್ರೇತಾಯುಗಾದಿಯಲ್ಲಿಯೇ ಪ್ರಚಾರಕ್ಕೆ ಬಂದಿತು.

ಉದಾ : ದ್ವಾಪರಯುಗದಲ್ಲಿ ಅಂತಹ ಪ್ರತಿಷ್ಠೆಗಳನ್ನು ಮಹರ್ಷಿಗಳು ತಾವು ವಾಸಿಸುವ ಅರಣ್ಯಗಳಲ್ಲಿ ಮಾಡತೊಡಗಿದರು. ಅಂತಹ ಪ್ರತಿಮೆಗಳ ಪೂಜಾದಿಗಳನ್ನು ಸಿದ್ಧರು ನಿತ್ಯವೂ ಮಾಡುತ್ತಿದ್ದರು.

ಋಷಿಗಳು ಅಂತಹ ಪ್ರತಿಷ್ಠಾ ಮಾತ್ರದಿಂದಲೇ ಪೂಜಾದಿಗಳನ್ನು ನಡೆಸದೇ ಇದ್ದರೂ ಕೃತಕೃತ್ಯರಾದರು. ಅನಂತರ ಆಗಮೋಕ್ತ ಪ್ರತಿಷ್ಠಾಪೂರ್ವಕವಾದ ದೇವ ಪೂಜಾದಿ ವಿಧಿಗಳೆಲ್ಲವೂ ಕಲಿಯುಗದಲ್ಲಿ ಜನರ ಪ್ರಚಾರಕ್ಕೆ ಬಂದವು. ಕೃತಯುಗದಲ್ಲಿ ಜ್ಞಾನವು ಹೆಚ್ಚಾಗಿದ್ದಿತು. ತ್ರೇತಾಯುಗದಲ್ಲಿ ತಪಸ್ಸೇ ಹೆಚ್ಚಾಗಿದ್ದಿತು, ದ್ವಾಪರ ಯುಗದಲ್ಲಿಯೂ, ಕಲಿಯುಗದಲ್ಲಿಯೂ, ಪ್ರತಿಷ್ಠಾ ವಿಧಿಯೇ ಹೆಚ್ಚಾಗಿ ಪ್ರಚಾರಕ್ಕೆ ಬಂದಿದೆ.

ಸ್ವರ್ಗವೆಂಬ ಪುರುಷಾರ್ಥವನ್ನು ಅಪೇಕ್ಷಿಸುವ ರಾಜರು ಕಲಿಯುಗದಲ್ಲಿ ನಗರಗಳನ್ನು ನಿರ್ಮಿಸಬೇಕು. ಹಾಗೆ ನಿರ್ಮಿಸುವಾಗ ಮೊದಲು ದೇವಾಲಯಗಳನ್ನು

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಕಟ್ಟಿಯೋ ನಗರಗಳನು ಕಟ್ಟಬೇಕು. ಎಲ್ಲಾ ರಾಜರೂ ನಗರಗಳನ್ನು ನಿರ್ಮಾಣ ಮಾಡಲು ಅರ್ಹರಾಗುವುದಿಲ್ಲ. ಯಾವ ರಾಜನು ಯುದ್ಧದಲ್ಲಿ ಶತ್ರುಗಳಿಂದ ಕೊಲ್ಲಲ್ಪಡದೇ ಶತ್ರು ವಿಜಯದಿಂದ ಜಯಶಾಲಿಯಾಗುವನೋ ಅಂತಹ ದೊರೆಯೇ ನಗರದ ನಿರ್ಮಾಣಕ್ಕೆ ಅಧಿಕಾರಿಯಾಗುತ್ತಾನೆ. ಇಂತಹ ರಾಜನು ಒಳ್ಳೆಯ ಹೆಸರಿನಿಂದ ಕೂಡಿದ ಸ್ಮಾರಕ ನಗರವನ್ನು ನಿರ್ಮಿಸಬೇಕು.

ದುರ್ಗಸ್ಥಾನಗಳನ್ನು ಮಾತ್ರ ಎಲ್ಲಾ ರಾಜರೂ ನಿರ್ಮಿಸಬಹುದು. ದೇವತಾ ಪ್ರತಿಷ್ಠೆಯನ್ನು ಮಾಡುವ ಅರ್ಹತೆಯುಳ್ಳ ದೊರೆಯು ಭೂಮಿದಾನಾದಿಗಳಿಂದ ಪೂಜಾದಿಗಳಿಗೆ ಸರ್ವವಿಧವಾದ ಅನುಕೂಲವನ್ನು ಉಂಟುಮಾಡಿದ ಮೇಲೆಯೇ ಆಲಯ ನಿರ್ಮಾಣಪೂರ್ವಕವಾದ ಪ್ರತಿಷ್ಠಾದಿಗಳನ್ನು ಸಮಗ್ರ ವಿಧಿಪೂರ್ವಕವಾಗಿ ನಡೆಸಬೇಕು. ಹಾಗಿಲ್ಲವೆಂದರೆ ಅನುಕೂಲ್ಯಗಳನ್ನು ಕಲ್ಪಿಸದೇ ಕೇವಲ ಪ್ರತಿಷ್ಠಾ ಮಾತ್ರದಿಂದ ಅವನು ಪಾಪಭಾಗಿಯೇ ಆಗುತ್ತಾನೆ. ಅವನು ಪ್ರತಿಷ್ಠಾಮಾತ್ರದಿಂದ ನಿರ್ಮಿಸಿದ ದೇವತಾ ವಿಗ್ರಹವು ಕಲಿಯುಗದಲ್ಲಿ ಅನಿಷ್ಟ ಫಲವನ್ನು ಕೊಡುತ್ತದೆ. ಆ ಅನಿಷ್ಟ ಫಲವು ರಾಜನಿಗೆ ಜನ್ಮಜನ್ಮಾಂತರಗಳಲ್ಲಿಯೂ ಅನುವರ್ತಿಸುತ್ತದೆ. ಕೃತ, ತ್ರೇತಾ, ದ್ವಾಪರ ಯುಗಗಳಲ್ಲಿ ಪ್ರತಿಷ್ಠಿತ ದೇವತಾ ವಿಗ್ರಹಗಳನ್ನು ಸಿದ್ಧರು ಪೂಜಿಸುತ್ತಿದ್ದುದರಿಂದ ಇತರರು ಮಾಡಿದ ಪ್ರತಿಷ್ಠಾ ಮಾತ್ರವೇ ಫಲಕಾರಿಯಾಗುತ್ತಿತ್ತು. ಕಲಿಯುಗದಲ್ಲಿ ಪ್ರತಿಷ್ಠಿಸಿದ ದೇವತಾ ವಿಗ್ರಹಗಳಿಗೆ ಸಿದ್ಧರ ಪೂಜೆಯು ಲಭಿಸುವುದಿಲ್ಲ. ಆದುದರಿಂದ ಕಲಿಯುಗದಲ್ಲಿ ರಾಜರು ಮಾಡುವ ದೇವತಾ ವಿಗ್ರಹ ಪ್ರತಿಷ್ಠೆಗಳನ್ನು ಭೂಮಿ ದಾನಾದಿ ಪೂಜಾ ಸೌಕರ್ಯಪೂರ್ವಕವಾಗಿಯೇ ಮಾಡಬೇಕು.

ರಾಜನಾದ ಯಾವನೊಬ್ಬನು ತಾನು ರಾಜನಾಗಿದ್ದು, ರಾಜನಾಗಿರುವ ಮತ್ತೊಬ್ಬನನ್ನು ಯುದ್ಧದಲ್ಲಿ ಜಯಿಸುತ್ತಾನೆಯೋ, ಅಂತಹ ವಿಜಯಶಾಲಿಯಾದ ರಾಜನು ಮೊದಲು ರಾಜನಾಗಿದ್ದವನಿಂದ ನಿರ್ಮಿತವಾಗಿದ್ದ ನಗರದಲ್ಲಿ ದೇವತಾ ಪ್ರತಿಷ್ಠೆಯನ್ನು ನಡೆಸಬೇಕು. ಹೀಗೆ ರಾಜ ವಿಜಯಿಯಾಗದಿರುವ ಮತ್ತಾರೂ ಕಲಿಯುಗದಲ್ಲಿ ನಗರದಲ್ಲಿ ಪ್ರತಿಷ್ಠೆಯನ್ನು ಮಾಡಬಾರದು. ರಾಜನ ಅಪ್ಪಣೆಯನ್ನು ಹೊಂದಿಯೇ ಇತರರು ಸ್ಥಿರವಾದ ಪ್ರತಿಷ್ಠೆಯನ್ನು ಮಾಡಬಹುದು.

ಮನೆಗಳಲ್ಲಿ ಮಾಡಬಹುದಾದ ದೇವತಾ ಪ್ರತಿಷ್ಠೆಗೆ ರಾಜನ ಅಪ್ಪಣೆಯನ್ನು ಹೊಂದಬೇಕಾಗಿಲ್ಲ. ಇಂತಹ ಸಂದರ್ಭದಲ್ಲಿ ಯಾವನು ಮತ್ತೊಬ್ಬನಿಂದ ನಿರ್ಮಿಸಲ್ಪಟ್ಟಿದ್ದ ದೇವಗೃಹ ಪ್ರತಿಮಾದಿಗಳಿಗೆ ಪುನಃ ಪ್ರತಿಷ್ಠಾದಿಗಳನ್ನು ಮಾಡುತ್ತಾನೆಯೋ,

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಅಂತಹವನಿಗೆ ಭೂಮಿ ದಾನಾದಿ ವಿಧಾನಗಳಲ್ಲಿ ಯಥಾಶಕ್ತಿ ಮಾಡಬೇಕಾದ ಅವಶ್ಯಕತೆ ಇರುವುದಿಲ್ಲ. ಈ ವಿಧವಾಗಿ ಪುನಃ ಪ್ರತಿಷ್ಠಾದಿಗಳನ್ನು ನೆರವೇರಿಸಿದವನಿಗೆ ಫಲವೂ ದ್ವಿಗುಣವಾಗಿ ಲಭಿಸುತ್ತದೆ. ಅವನ ವಂಶವೂ ಪಾಪಕೂಪದಿಂದ ಉದ್ಧೃತ ವಾಗುತ್ತದೆ.

ದೇವತೆಯ ಸುಂದರವಾದ ವಿಗ್ರಹಗಳನ್ನು ಮಾಡಿಸಿ ಯಥಾವಿಧಿಯಾಗಿ ಪ್ರತಿಷ್ಠೆ ಯನ್ನು ನೆರವೇರಿಸಿದ ಮಹಾಪುರುಷನು ಯಾಗವೇ ಮೊದಲಾದ ಶ್ರೌತಕರ್ಮ ಗಳಿಂದಲೂ ಪಾಪೀಕೂಪಾದಿ ದೃಷ್ಟೋಪಕಾರಗಳಿಂದಲೂ ಉಂಟಾಗಬಹುದಾದ ಪುಣ್ಯ ವಿಶೇಷವನ್ನು ಹೊಂದುತ್ತಾರೆ. ರಾಜಸೂಯ, ಅಶ್ವಮೇಧ ಮುಂತಾದ ಮಹಾ ಯಾಗಗಳ ಫಲವನ್ನು ಹೊಂದುತ್ತಾನೆ.

ಕೃತ, ತ್ರೇತ, ದ್ವಾಪರ ಯುಗಗಳಲ್ಲಿ ಸುರಶ್ರೇಷ್ಠರಾದ ದೇವತೆಗಳು ತಮ್ಮ ದಿವ್ಯ ಶರೀರದಿಂದಲೇ ಮನುಷ್ಯಲೋಕಕ್ಕೆ ಬರುತ್ತಿದ್ದರು. ಆದರೆ ಕಲಿಯುಗದಲ್ಲಿ ಅವರು ಸಶರೀರವಾಗಿ ಭೂಲೋಕಕ್ಕೆ ಬರುವ ಸಂಭವವಿಲ್ಲ. ಪ್ರತಿಷ್ಠಾದಿ ಸಂಸ್ಕಾರಗಳ ಮೂಲಕ ಬ್ರಾಹ್ಮಣರಿಂದ ಆವಾಹನ ಮಾಡಲ್ಪಟ್ಟು ಅದೃಶ್ಯವಾದ ತಮ್ಮ ಶರೀರದಿಂದ ಇಲ್ಲಿಗೆ ಬಂದು ಪ್ರತಿಮೆಯಲ್ಲಿ ಸಾನ್ನಿಧ್ಯ ಹೊಂದುತ್ತಾರೆ. ಆದುದರಿಂದ ವಿವೇಕಿ ಯಾದವನು ಕಲಿಯುಗದಲ್ಲಿ ದೇವತಾ ಪ್ರತಿಷ್ಠೆಯನ್ನು ಯಥಾವಿಧಿಯಾಗಿ ಮಾಡಿಸಲೇ ಬೇಕು.

ಕಲಿಯುಗದಲ್ಲಿ ವಿಗ್ರಹಗಳಲ್ಲಿ ಸಾನ್ನಿಧ್ಯ ಹೊಂದಿರುವ ದೇವತೆಗಳಿಂದಲೇ ಲೋಕ ಸಂರಕ್ಷಣೆಯುಂಟಾಗುತ್ತದೆ ಪ್ರತಿಷ್ಠೆಯಿಂದ ಸಾನ್ನಿಧ್ಯ ಹೊಂದಿರುವ ದೇವತೆಗಳೇ ವಿಗ್ರಹದಲ್ಲಿದ್ದುಕೊಂಡು ಎಲ್ಲಾ ವಿಧವಾದ ಪೂಜೋಪಚಾರಗಳನ್ನೂ ಸ್ವೀಕರಿಸುತ್ತಾರೆ. ಆದುದರಿಂದ, ಭೂಮಿ ದಾನಾದಿಗಳಿಂದ ಅಂತಹ ಪ್ರತಿಷ್ಠಾದಿಗಳನ್ನು ಪ್ರಯತ್ನಪಟ್ಟಾ ದರೂ ಸರಿಯಾಗಿ ನಡೆಸಬೇಕು.

ಯಜ್ಞಾದಿಗಳನ್ನು ಮಾಡಿದ ಮನುಷ್ಯರು ಹೇಗೆ ಸ್ವರೂಪವನ್ನು ಹೊಂದು ತ್ತಾರೆಯೋ ಹಾಗೆಯೇ ದೇವಪ್ರತಿಷ್ಠೆಯನ್ನು ಮಾಡಿದವರೂ ಸ್ವರ್ಗಸುಖಕ್ಕೆ ಭಾಗಿ ಗಳಾಗುತ್ತಾರೆ. ಆದುದರಿಂದ ಈ ಕಲಿಯುಗದಲ್ಲಿ ಮಹಾದಕ್ಷಿಣೆಯಿಂದೊಡಗೂಡಿದ ಪ್ರತಿಷ್ಠಾವಿಧಿಯನ್ನು ನೆರವೇರಿಸಲೇಬೇಕು. ಭೂಮಿ ದಾನಾದಿಗಳನ್ನು ಪ್ರಯತ್ನದಿಂದ ನಡೆಸಿ ಪರ್ವತಾದಿ ದುರ್ಗಪ್ರದೇಶ ಹಾಗೆಯೇ ಸರಿಯಾಗಿ ನಗರ ಇಂತಹ ಸ್ಥಳಗಳಲ್ಲಿ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ದೇವತಾ ಪ್ರತಿಷ್ಠೆಯನ್ನು ಯಥಾವಿಧಿಯಾಗಿ ನಡೆಸಬೇಕು. ನಗರದಲ್ಲಿ ಮುಂಭಾಗದಲ್ಲೇ ಪ್ರತಿಷ್ಠಿಸಬೇಕು. ನಗರದಂತ್ಯದಲ್ಲಿ ಪ್ರಶಸ್ತವಲ್ಲ.

ಗ್ರಾಮಗಳಲ್ಲಿಯೂ ಸಣ್ಣ ಊರುಗಳಲ್ಲಿಯೂ ಎಲ್ಲಿ ಅಂಗಡಿಗಳೇ ಇರುವುದಿಲ್ಲವೋ ಅಂತಹ ಸ್ಥಳಗಳಲ್ಲಿ ಊರಿನ ಹೊರಗಿನ ಉದ್ಯಾನವನದಲ್ಲಿ ದೇವತಾ ವಿಗ್ರಹವನ್ನು ನಿರ್ಮಿಸಿ ಪ್ರತಿಷ್ಠಿಸಬೇಕು. ಗ್ರಾಮದಲ್ಲಿ ನಿರ್ಮಿಸಬಾರದು. ನದಿಗಳ ತೀರದಲ್ಲಿಯೂ, ಪರ್ವತಗಳ ಶಿಖರದಲ್ಲಿಯೂ, ಪರ್ವತಗಳ ರಮ್ಯವಾದ ತಪ್ಪಲುಗಳಲ್ಲಿಯೂ, ವಿಶೇಷವಾಗಿ ಗುಹೆಗಳಲ್ಲಿಯೂ ಸ್ಥಾಪಿಸಬೇಕು. ಇಂತಹ ದೇವಸ್ಥಾನಗಳಲ್ಲಿ ದೇವತೆಗಳು ಸಾನಿಧ್ಯ ಹೊಂದುತ್ತಾರೆ. ಜಲಾಶಯವಿಲ್ಲದ ದೇಶಗಳಲ್ಲಿ ದೇವತೆಗಳು ಯಾವಾಗಲೂ ಸಾನ್ನಿಧ್ಯ ಹೊಂದುವುದಿಲ್ಲ. ದೇವಾಲಯಕ್ಕೆ ಎಡಭಾಗದಲ್ಲಾಗಲೀ, ಮುಂಭಾಗದಲ್ಲಾಗಲೀ ಜಲಾಶಯವಿರುವಂತೆಯೇ ಆಲಯವನ್ನು ನಿರ್ಮಿಸಬೇಕು. ಬೇರೆ ರೀತಿಯಲ್ಲಿರಬಾರದು.

ಎಲ್ಲಾ ಕಡೆಯಲ್ಲಿಯೂ ನೀರಿರುವ ದ್ವೀಪದಲ್ಲಿ ದೇವಗೃಹ ಪ್ರತಿಷ್ಠೆಯು ಪ್ರಶಸ್ತವು.

ಆಲಯಾರ್ಚ–ಗೃಹಾರ್ಚ

ಯಜ್ = ಪೂಜಾಯಾಂ ಎಂಬ ನಿಷ್ಪತ್ತಿಯಂತೆ ಯಜ್ಞ, ಯಾಗ ಎಲ್ಲವೂ ಭಗವದಾರಾಧನೆಯನ್ನೇ ತಿಳಿಸುತ್ತದೆ. ಗೃಹಾರ್ಚ, ಆಲಯಾರ್ಚ ಎಂಬುದಾಗಿ ಪೂಜೆಯು ಎರಡು ವಿಧವು.

ಸಕಲ ಲೋಕ ಕ್ಷೇಮಾರ್ಥವಾಗಿ ಸಾರ್ವಜನಿಕ ಪೂಜಾ ಪ್ರಕ್ರಿಯೆಯನ್ನು ನಡೆಸಬೇಕಾದರೆ ಪೂರ್ವಭಾವಿಯಾಗಿ ದೇವಾಲಯ ನಿರ್ಮಾಣವಾಗಬೇಕು. ಇದೆಲ್ಲವೂ ಶಾಸ್ತ್ರೋಕ್ತವಾಗಿ ನಡೆಯಬೇಕಾದ ಪ್ರಕ್ರಿಯೆಗಳು. ಸ್ವಲ್ಪವೂ ಕ್ರಿಯಾಲೋಪವಿಲ್ಲದೆ ಈ ನಿರ್ಮಾಣ ಕಾರ್ಯವನ್ನು ನಡೆಸಬೇಕೆಂದು ಶಾಸ್ತ್ರಗಳು ತಿಳಿಸುತ್ತವೆ. ಏಕೆಂದರೆ ಆಗಮಶಾಸ್ತ್ರವು ದೇವಾಲಯವನ್ನು ಸಾಕ್ಷಾತ್ತಾಗಿ ಭಗವಂತನ ಶರೀರವೆಂದೇ ಪರಿಗಣಿಸಲಾಗಿದೆ.

ಪ್ರಾಸಾದಂ ಪುರುಷಂ ಮತ್ವಾ ಪೂಜಯೇತ್ಮಂತ್ರವಿತ್ತಮಃ
ಪರವ್ಯೂಹಾದಿರೂಪಸ್ಯ ದಿವ್ಯಾಲಯಾದಿಷು
ಪಚನಾಲಯ ಪಾನೀಯ ಶಾಲಾ ಪುಷ್ಪಾದಿ ಮಂಟಪಾನ್

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

"ಆಲಯೆಂ ದೇವತಾನಾಂ ತಚ್ಛರೀರಂ ಪರಿಪಠ್ಯತೇ
ಪ್ರಾಸಾದಲಿಂಗಮಿತ್ಯುಕ್ತೋ ಜಗತೀಪೀಠಮೇವ ಚ
ಗರ್ಭಗೇಹಂ ತು ದೇವಸ್ಯ ಶರೀರ ಮಿತಿ ಸ್ಮೃತಂ
ಮದ್ಗೇಹಂ ಶರೀರಂ ಸ್ಯಾತ್ ಪ್ರತಿಮಾ ಜೀವಮುಚ್ಯತೇ

ದೇವಸ್ಥಾನವು ಭಗವಂತನಿಗೆ ಶರೀರವು. ಜೀವಾತ್ಮರೂ, ಅಚೇತನವೂ ಭಗವಂತನಿಗೆ ಅಂಶಗಳಾಗಿರುವಂತೆ–ದೇವಾಲಯಗಳೂ, ಮಂಟಪಗಳೂ, ಪ್ರಾಕಾರ ಗೋಪುರಾದಿಗಳೂ ಭಗವಂತನ ಅಂಗಾಂಗಗಳು–ನಮ್ಮ ಹೃದಯವು ಭಗವಂತನಿಗೆ ಆಲಯವಾಗಿ ಇರುವ ಹಾಗೆಯೇ ಗರ್ಭಗೃಹವು ಭಗವಂತನ ಹೃದಯಸ್ಥಾನವಾಗಿರುವುದು. ಅಂತಹ ದೇವಸ್ಥಾನದಲ್ಲಿ ಪರಮಾತ್ಮನ ದಿವ್ಯಮಂಗಳ ವಿಗ್ರಹವನ್ನು ಪ್ರತಿಷ್ಠಾಪಿಸಿ ಅದನ್ನು ಆರಾಧಿಸುತ್ತೇವೆ. ಶೂನ್ಯಕ್ಕೆ ಆರಾಧನೆ ಮಾಡುವುದೋ–ನಿರಾಕಾರವನ್ನು ಧ್ಯಾನಿಸುವುದೋ ದುಸ್ಸಾಧ್ಯವಾದ್ದರಿಂದ ಶಾಸ್ತ್ರಗಳು ವಿಭುವಾದ ಪರಮಾತ್ಮನನ್ನು ಸಾಕಾರ ಮೂರ್ತಿಯಾಗಿ ನಿರೂಪಿಸುತ್ತದೆ.

ಸ್ವಾರ್ಥಂ ಗೃಹಾರ್ಚನಂ ಪ್ರೋಕ್ತಂ ಪರಾರ್ಥಂ ತ್ವಾಲಯಾರ್ಚನಂ
ಪರಾರ್ಥಂ ಸ್ಯಾ ಜಗಚ್ಚಕ್ಷುಃ ಸ್ವಾರ್ಥಂ ಸ್ಯಾತ್ ಗೃಹದೀಪಿಕಾ
ಗೃಹಾರ್ಚಾಚೇತ್ ಗೃಹಸ್ಯೈವ ಗ್ರಾಮಾರ್ಚಾ ಗ್ರಾಮಮಾತ್ರತಃ
ದಿವ್ಯದೇಶಾರ್ಚನಂ ಯತ್ರ ಸರ್ವಲೋಕ ಸುಖಾವಹಂ

ಗೃಹಾರ್ಚೆಯಲ್ಲಿ ಬಲಿ ಉತ್ಸವಾದಿಗಳಿರುವುದಿಲ್ಲ. ಆಲಯಾರ್ಚನೆಯಲ್ಲಿ ಬಲಿ ಉತ್ಸವಾದಿಗಳನ್ನು ನಡೆಸುವರು. ಆಲಯಾರ್ಚನೆಗೆ **ಪರಾರ್ಥಯಜನವೆಂದು** ಹೆಸರು. ಗೃಹಾರ್ಚನೆಗೆ **ಸ್ವಾರ್ಥಯಜನವೆಂದು** ಹೆಸರು. ಗೃಹಾರ್ಚನೆಯು ತಾನು ಹಾಗೂ ತನ್ನ ಕುಟುಂಬದ ರಕ್ಷಣೆಗಾಗಿ ನಡೆಸತಕ್ಕದ್ದು, ಗೃಹದೀಪದಂತೆ. ಆಲಯಾರ್ಚನೆಯು ಸೂರ್ಯನ ಬೆಳಕಿನಂತೆ, ಗ್ರಾಮ, ನಗರ, ಲೋಕಕ್ಷೇಮಕ್ಕಾಗಿ ನಡೆಸತಕ್ಕದ್ದು. ಇವೆರಡರಲ್ಲಿ ಆಲಯಾರ್ಚನೆಯು ಉತ್ತಮವಾಗಿದ್ದರೂ, ಮೊದಲು ಗೃಹಾರ್ಚನೆಯನ್ನು ಮಾಡಿದ ನಂತರವೇ ಆಲಯಾರ್ಚನೆಯನ್ನು ನಡೆಸಬೇಕು.

ದಿವ್ಯದೇಶದಲ್ಲಿ ನಡೆಸುವ ಪೂಜೆಯಿಂದ ಸಕಲ ಲೋಕವೂ ಮಂಗಳವನ್ನು ಹೊಂದುತ್ತದೆ. ಆದ್ದರಿಂದ ದಿವ್ಯದೇಶದಲ್ಲಿನ ಆಲಯಗಳಲ್ಲಿನ ಪೂಜೆಯು ಪ್ರಾಧಾನ್ಯತೆಯನ್ನು ಹೊಂದಿರುವುದು.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಪೂಜಾ–ಉತ್ಸವಾದಿಗಳು

ನಮ್ಮ ದೈನಂದಿನ ಕಾರ್ಯಕಲಾಪಗಳನ್ನು ಶಾಸ್ತ್ರವು ಐದು ವಿಧವಾಗಿ ಕಾಲಾನುಗುಣವಾಗಿ ವಿಂಗಡಿಸಿದೆ. ಇದನ್ನು ಪಂಚಕಾಲವೆನ್ನುತ್ತಾರೆ. ಅವು ಯಾವುವೆಂದರೆ—

(1) ಅಭಿಗಮನ :— ನಾವು ನಿತ್ಯವೂ ಆಚರಿಸುವ ಬೆಳಗಿನ ಶೌಚ, ದಂತದಾವನ, ಸ್ನಾನ ಸಂಧ್ಯಾ, ನಿತ್ಯಕರ್ಮಗಳ ಕಾಲ.

(2) ಉಪಾದಾನ :— ದೇವರ ಪೂಜಾರ್ಥವಾಗಿ ಸಂಬಾರಗಳನ್ನು ಸಂಪಾದಿಸುವ ಕಾಲ.

(3) ಇಜ್ಯಾ :— ಎಂದರೆ ಸಂಪಾದಿಸಿದ ವಸ್ತುಗಳಿಂದ ಭಗವಂತನನ್ನು ಪೂಜಿಸಿ ಧ್ಯಾನಮಾಡುವ ಕಾಲ.

(4) ಸ್ವಾಧ್ಯಾಯ :— ವೇದಾಧ್ಯಯನ – ಶಾಸ್ತ್ರಪಠನ, ಉಪದೇಶ, ಭಗವಂತನ ಗುಣಾನುಭವ ಇವುಗಳ ಕಾಲ.

(5) ಯೋಗಕಾಲ :— ರಾತ್ರಿ ಮಲಗುವ ಕಾಲದಲ್ಲಿ ಭಗವಂತನ ಸ್ಮರಣೆ–ಧ್ಯಾನ–ಅವನ ರೂಪ ಅವತಾರಾದಿ ಚರಿತ್ರೆಗಳನ್ನು ಚಿಂತಿಸಿ ಭಗವಂತನಲ್ಲಿ ತಲ್ಲೀನನಾಗುವುದು.

3ನೆಯ ಇಜ್ಯಾ ಪೂಜಾ ವಿಧಾನವು 6 ಭಾಗಗಳಲ್ಲಿ ನಡೆಯುತ್ತದೆ :—

1) ಮಂತ್ರಾಸನ	4) ಭೋಜ್ಯಾಸನ
2) ಸ್ನಾನಾಸನ	5) ಪರ್ಯಂಕಾಸನ (ಪುನಃ ಮಂತ್ರಾಸನ)
3) ಅಲಂಕಾರಾಸನ	6) ಶಯ್ಯಾಸನ

ಎಂಬುದಾಗಿ–ಈ ಪೂಜಾವಿಧಾನವನ್ನು ಅನುಸರಿಸಿ ಬ್ರಹ್ಮೋತ್ಸವದ ಕಾಲದಲ್ಲಿ (ಮಹೋತ್ಸವ) 1) ಕುಂಭಪೂಜಾ, 2) ಮಂಡಲಪೂಜಾ, 3) ಹೋಮ, 4) ವಿಗ್ರಹ=ಮೂರ್ತಿಯನ್ನು ಪೂಜಿಸುವುದು, ಇದಕ್ಕೆ ಚತುಸ್ಥಾನಾರ್ಚನೆ ಎಂದು ಹೆಸರು. ಇವು ನಾಲ್ಕೂ ಸೇರಿದಲ್ಲಿ ಪೂಜಾ ಎಂದು ಹೆಸರು.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ವೇದೋಕ್ತವಾದ ಕರ್ಮಗಳನ್ನೇ ಈ ವಿಧಿರೂಪದಲ್ಲಿ ಪರಿವರ್ತಿಸಿರುವರು. ಪೂಜೆ ತದನಂತರದ ವಿಶೇಷ ಕಾಲಗಳಲ್ಲಿ ಉತ್ಸವಗಳನ್ನು ನಡೆಸುವರು. ಆ ಉತ್ಸವದಲ್ಲಿ ವಿವಿಧ ವಾಹನಗಳನ್ನು ಉಪಯೋಗಿಸುವರು. ಈ ಉತ್ಸವಗಳಲ್ಲಿ ರಥೋತ್ಸವವು ಬಹು ಸಂಭ್ರಮವಾಗಿ ನಡೆಯುವುದು. ಇದಕ್ಕಾಗಿ ಅನೇಕ ಭಕ್ತಾದಿಗಳು ಧರ್ಮಗಳನ್ನು ಮಾಡಿರುವರು.

ಗೃಹಗಳಲ್ಲೂ, ಗ್ರಾಮಗಳಲ್ಲೂ, ವಿಧವಿಧವಾದ ಸ್ಥಳಗಳಲ್ಲೂ ದೇವಾಲಯಗಳ ನಿರ್ಮಾಣ, ವಿಗ್ರಹ ಪ್ರತಿಷ್ಠೆ, ಉತ್ಸವಾದಿಗಳು ನಡೆದರೂ ವಿಶೇಷ ಸ್ಥಾನದಲ್ಲಿ ನಡೆಸುವುದೇ ಉತ್ಕೃಷ್ಟವಾಗಿರುತ್ತದೆ.

ಸಂಪ್ರದಾಯ ವಿಶೇಷ :—

ಭಕ್ತರಾದ ನಾವು ದೇವಸ್ಥಾನಕ್ಕೆ ಹೋಗುವುದೂ, ದೇವರನ್ನು ದರ್ಶಿಸುವುದೂ, ಅಲ್ಲಿ ತೀರ್ಥಪ್ರಸಾದವನ್ನು ಸ್ವೀಕರಿಸುವುದು ಸರಿಯಷ್ಟೆ. ಈ ರೀತಿ ನಡೆಯುವುದರಲ್ಲಿ ಶಾಸ್ತ್ರವನ್ನನುಸರಿಸಿ ಪ್ರತಿಷ್ಠಾ ಪೂಜಾದಿಗಳು ಸರಿಯಾಗಿದ್ದರೂ, ಸಂಪ್ರದಾಯವೆಂಬ ವಿಶೇಷವನ್ನು ಅನುಸರಿಸಿ ಕೆಲವು ನಿಯಮಗಳು ಕಂಡುಬರುತ್ತವೆ. ಆಗಮ ಶಾಸ್ತ್ರಗಳನ್ನು ಅನುಸರಿಸಿ ಆಲಯದಲ್ಲಿ ವಿಗ್ರಹಮೂರ್ತಿಗಳು ಪ್ರತಿಷ್ಠಿತವಾಗಿ ಪೂಜಾವಿಧಿಗಳು ನಡೆಯುತ್ತಿದ್ದರೂ, ಗುರುಗಳ ವಿಗ್ರಹಮೂರ್ತಿಯನ್ನು ಪ್ರತಿಷ್ಠಿಸದಿದ್ದಲ್ಲಿ ಆ ದೇವಾಲಯಗಳಲ್ಲಿ ತೀರ್ಥಪ್ರಸಾದ ಸ್ವೀಕರಿಸುವುದಿಲ್ಲ. ಆಗಮಶಾಸ್ತ್ರದ ಪ್ರಕಾರವಾಗಿ ಪೂಜೆ ನಡೆಯುವುದಕ್ಕೂ, ಉಪಾಸನೆ ಮಾಡುವುದಕ್ಕೂ ಯಾವ ಅಡ್ಡಿಯೂ ಇರುವುದಿಲ್ಲ. ತೀರ್ಥಪ್ರಸಾದ ಸ್ವೀಕಾರಕ್ಕೆ ಮಾತ್ರವೇ ಅವಕಾಶವಿರುವುದಿಲ್ಲ. ನಮಗೂ ಭಗವಂತನಿಗೂ ಸಂಬಂಧ ಜ್ಞಾನವನ್ನು ಕಲ್ಪಿಸಿದ ಮಧ್ಯವರ್ತಿಯಾದ ಗುರುಗಳ ಸಂಬಂಧವಿಲ್ಲವಾದಲ್ಲಿ ಭಗವಂತನೂ ಸಹ ನಮ್ಮನ್ನು ಅನುಗ್ರಹಿಸುವುದಿಲ್ಲ ಎಂದು ತಿಳಿಯಬೇಕು.

ಭಕ್ತರು ಪಂಚವಿಧವು :—

ಭಗವಂತನಲ್ಲಿ ಭಕ್ತಿಯುತರಾದವರು, ಸಾಕ್ಷಾತ್ಕರಿಸಿದವರು ಮುಂತಾದವರು ಐದು ಬಗೆಯಲ್ಲಿ ಕಾಣುವರು.

1) ಭಕ್ತೋತ್ತಮರು 2) ಋಷಿಗಳು 3) ಆಳ್ವಾರರುಗಳು 4) ಆಚಾರ್ಯರುಗಳು 5) ರಾಜರುಗಳು.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

1) ಭಕ್ತೋತ್ತಮರು :—

ಪ್ರಹ್ಲಾದ, ನಾರದ, ಆಂಜನೇಯ, ವಿಭೀಷಣ, ಸನಕಾದಿಗಳು, ವಸಿಷ್ಠ ನಾರದರು ಇವರೆಲ್ಲಾ ಭಗವಂತನ ವಿಭವಾವತಾರದಲ್ಲಿ ಪ್ರತ್ಯಕ್ಷ ಕೈಂಕರ್ಯ ಸೇ ಯನ್ನು ನಡೆಸಿದವರು. ಇವರ ವಿಗ್ರಹ=ಮೂರ್ತಿಯನ್ನು ಭಗವಂತನ ಪಾದಪೀ ದಲ್ಲಿ ಅಥವಾ ಪಕ್ಕದಲ್ಲಿ ಪ್ರತ್ಯೇಕವಾಗಿ ಅಥವಾ ಆಗಮಶಾಸ್ತ್ರ ರೀತ್ಯಾ ಗರ್ಭಗೃಹ ಗೋಡೆಯ ಮೇಲೆ ಚಿತ್ರರೂಪವಾಗಿಯೋ ಇರುವುದನ್ನು ಕಾಣಬಹುದು.

ಪ್ರಕೃತ ಕಾಲದಲ್ಲಿ ಗರ್ಭಗೃಹದ ಗೋಡೆಗಳ ಮೇಲೆ ವರ್ಣರಂಜಿತವಾದ ಯಾ ಚಿತ್ರರೂಪವೂ ಕಾಣಬರುವುದಿಲ್ಲ. ಭಕ್ತೋತ್ತಮರ ಸಾಧಾರಣವಾದ ಸ್ಥಿರರೂಪ (ನಿಂತಿರುವಿಕೆ) ಕುಳಿತಿರಲೂಬಹುದು. ಅಂಜಲಿಮುದ್ರೆ ಮತ್ತು ಅಧಿಕಾರಕ್ಕೆ ತಕ್ಕಂ ಉಡುಪು, ಆಭರಣ ಆಯುಧಗಳಿಂದ ಕೂಡಿರುವುದು.

2) ಋಷಿಗಳು :—

2ನೆಯ ಗುಂಪಿನವರು : ಕಪಿಲ, ವಿಶ್ವಾಮಿತ್ರ, ಗಾಲವ, ಅಗಸ್ತ್ಯ, ಭೃಗು ಹೇಮಋಷಿ, ಶಾಂಡಿಲ್ಯ, ಪತಂಜಲಿ, ವಸಿಷ್ಠ, ಅತ್ರಿ, ವೇದವ್ಯಾಸ, ಶೌನಕಾದಿಗ ತಪಸ್ಸು, ಅಧ್ಯಯನ ಮಾಡಿ ಭಗವಂತನ ಅನೇಕ ಅವತಾರಾದಿ ರೂಪಗಳಲ್ಲಿ ತಮ ಇಷ್ಟವಾದ ರೂಪವನ್ನು ಸಾಕ್ಷಾತ್ಕರಿಸಿದವರು. ಇವರ ಮೂರ್ತಿ = ವಿಗ್ರಹಗಳನ ದೇವರ ಮೂಲಬಿಂಬದ ಎದುರಿಗಾಗಲಿ ಅಥವಾ ಪಾದಗಳ ಬಳಿಯಾಗಲಿ ಇರುವುದ ಇವರ ರೂಪಕಿ ಅಂಜಲಿ ಅಥವಾ ಉಪದೇಶ ಮುದ್ರೆಗಳಿಂದ ಕೂಡಿರುವುದು.

3) ಆಳ್ವಾರರುಗಳು :—

ಭಗವಂತನಲ್ಲಿ ಭಕ್ತಿಯ ಪರಾಕಾಷ್ಠತೆಯಿಂದ ಪೂರ್ಣ ಶರಣಾಗತರಾ ತಮ್ಮನ್ನು ತಾವೇ ಪರಮಾತ್ಮನಿಗೆ ಸಮರ್ಪಿಸಿಕೊಂಡವರು. ಆ ಪರಮಾತ್ಮನ ನಿಹೇ ತುಕ ಕೃಪೆಗೆ ಪಾತ್ರರಾದವರು. ಪರಮಾತ್ಮನಿಂದ ಅನುಗ್ರಹೀತರಾಗಿ ಭಕ್ತಿಭಾವಾ ಜ್ಞಾನದಿಂದ ಪರಿಪೂರ್ಣ ಧ್ಯಾನಮಾಡಿ ತಮ್ಮ ಅನುಭವಗಳ ಭಾವಗತಿಯನ್ನು ದಿ ಪ್ರಬಂಧರೂಪವಾಗಿ ಹಾಡಿದ ಭಕ್ತೋತ್ತಮರು. ಇವರ ಮೂರ್ತಿಗಗಳನ್ನು ಪ್ರತ್ಯೇ ಗರ್ಭಗುಡಿ (ಸನ್ನಿಧಿ) ಗಳಲ್ಲಿ ಪ್ರತಿಷ್ಠಿಸಲಾಗಿದೆ. ಅವರ ಲಾಂಚನಗಳು ಅವರ ಕೈಂಕರ್ಯ, ಭಕ್ತಿರೂಪ ಇವುಗಳನ್ನು ತೋರಿಸಲಾಗುವುದು.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

4) ಆಚಾರ್ಯರುಗಳು :—

ಆಳ್ವಾರರುಗಳಿಗಿಂತಲೂ ನಮಗೆ ಸಮೀಪದವರಾಗಿದ್ದು, ಭಕ್ತಿ, ಜ್ಞಾನಸಮಾರ್ಗಗಳು ಕರ್ಮಮಾರ್ಗವನ್ನು ಅನುಸರಿಸಿರುವುದನ್ನೂ, ಆ ಕರ್ಮ ಮಾರ್ಗವಿಲ್ಲದೆ ಭಕ್ತಿ, ಜ್ಞಾನ ಮಾರ್ಗಗಳು ನಿಲ್ಲಲಾರವೆಂದೂ ನಮಗೆ ತಿಳಿಸಿ, ಆ ಭಗವಂತನಿಗೂ ಈ ಜಗತ್ತಿಗೂ ನಮಗೂ ಇರುವ ಸಂಬಂಧವನ್ನು ತಿಳಿಸಿ, ಎಲ್ಲರನ್ನೂ ಸನ್ಮಾರ್ಗಕ್ಕೆ ತರುವ ಕಾರ್ಯದಲ್ಲಿ ನಿರತರಾದ ಸತ್ಪುರುಷರು. ಆಚಾರ್ಯರುಗಳು ಮತ್ತು ಆಳ್ವಾರರುಗಳ ಶ್ರೀಸೂಕ್ತಿಗಳನ್ನು ಸಮತೋಲನಮಾಡಿ ಪರಿಗ್ರಹಿಸಿ ಶಾಸ್ತ್ರ ಸಂಪ್ರದಾಯಗಳನ್ನು ತಹಬಂದಿಗೆ ತಂದು ವ್ಯವಸ್ಥೆಮಾಡಿ ನಮಗೆ ಸುಲಭವಾಗಿ ತಿಳಿಸಿ ವೇದಾಂತ ಮಾರ್ಗವನ್ನು ತೋರಿಸಿಕೊಟ್ಟವರಿಗೆ ಆಚಾರ್ಯರೆಂದು ಹೆಸರು.

5) ರಾಜರುಗಳು ಅಥವಾ ರಾಜರ್ಷಿಗಳು :—

ಈ ಭಕ್ತೋತ್ತಮರು ಮೇಲೆ ಕಂಡ ಆಚಾರ್ಯರುಗಳಿಗೆ ಸಹಾಯಕರಾಗಿದ್ದು, ಮುಂದಿನ ಪ್ರಜೆಗಳಿಗೆ ಸೌಕರ್ಯವಾಗಿರುವಂತೆ, ದೇವಸ್ಥಾನ, ಗುಡಿ, ಗೋಪುರ ಪ್ರಾಕಾರಾದಿಗಳನ್ನು ಕಟ್ಟಿಸಿ, ವಿಗ್ರಹ ಪ್ರತಿಷ್ಠೆ. ಆಗಮಶಾಸ್ತ್ರ ರೀತ್ಯಾ ಪೂಜಾ ನಿವೇದನೆಗಳಿಗೆ ಸೌಕರ್ಯವನ್ನು ಕಲ್ಪಿಸಿ, ಧತ್ತಿಯನ್ನೂ ಕಲ್ಪಿಸಿ ಸಹಾಯ ಮಾಡಿದವರು. ಅಲ್ಲದೆ ದೇವಸ್ಥಾನದ ಕೈಂಕರ್ಯಪರರ ಜೀವನ ಸೌಕರ್ಯಕ್ಕೆ ವೃತ್ತಿಯನ್ನು ಕಲ್ಪಿಸಿದವರು. ಇವರ ಪ್ರತಿಕೃತಿಮೂರ್ತಿಗಳನ್ನು ಕೆಲವು ದೇವಸ್ಥಾನಗಳಲ್ಲಿ ಶಿಲಾರೂಪದಲ್ಲಿ ಅಥವಾ ಲೋಹರೂಪದಲ್ಲಿ ಪ್ರತ್ಯೇಕವಾಗಿಯಾಗಲೀ ಅಥವಾ ಸ್ಥಂಭಗಳಲ್ಲಿ ಕಾಣಬಹುದು. ರಾಜರು ರಾಜಮಹಿಷಿಗಳೊಂದಿಗೂ ಕಾಣಬರುವರು.

1ನೇ ಭಕ್ತೋತ್ತಮರು, 2ನೇ ಋಷಿಗಳು, 5ನೇ ರಾಜಋಷಿಗಳು ವೇದಾಂತೋಪದೇಶಕರಲ್ಲವು. ವೇದಾಂತ ಮತ್ತು ಆಗಮಶಾಸ್ತ್ರ ರೀತ್ಯಾ ಕಟ್ಟುನಿಟ್ಟುಗಳನ್ನು ಏರ್ಪಡಿಸಿ ಬಂದ ಆಚಾರ್ಯರುಗಳು ತಿಳಿಸಿ ಆಜ್ಞೆಮಾಡಿದ ವಿಗ್ರಹ=ಮೂರ್ತಿಗಳನ್ನು ಮಾತ್ರ ದೇವಸ್ಥಾನಗಳಲ್ಲಿ ಪ್ರತಿಷ್ಠಿಸಿ ಪೂಜಿಸಿ ಬರುವರು.

ಈ ಆಳ್ವಾರು ಆಚಾರ್ಯ ಮೂರ್ತಿಗಳು ಪ್ರತಿಷ್ಠಿತವಾಗದ ದೇವಸ್ಥಾನಗಳಲ್ಲಿ ತೀರ್ಥ ಪ್ರಸಾದ ಸ್ವೀಕರಿಸುವುದಿಲ್ಲ ಎಂಬ ನಿಯಮವೂ ಇರುತ್ತದೆ. ಆದ್ದರಿಂದ ಆಳ್ವಾರಾಚಾರ್ಯರುಗಳ ಭಕ್ತಬಿಂಬಗಳನ್ನು ದೇವಸ್ಥಾನದಲ್ಲಿ ಪ್ರತಿಷ್ಠಿಸಿ ಪೂಜಿಸಿ ಬರುವರು.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಗುರುಗಳು–ಆಚಾರ್ಯರು

ಇದುವರೆಗೂ ಭಕ್ತರು, ಭಕ್ತಬಿಂಬದ ವಿಷಯವಾಗಿ ತಿಳಿಸಿ, ಅನಂತರ ಐದು ವಿಧವಾದ ಭಕ್ತರು ಎಂಬುದನ್ನು ತಿಳಿಸಿದೆವು. ಅವರಲ್ಲಿ ವೇದಾಂತೋಪದೇಶಕರು ಇಂತಿಂಥವರು ಎಂದು ತಿಳಿಸಿದ ಮೇಲೆ, ಶ್ರೀ ರಾಮಾನುಜರು ವ್ಯವಸ್ಥೆಮಾಡಿ ತಿಳಿ ದಂತೆ ಆ ಭಕ್ತರಿಗೆ ಇನ್ನೊಂದು ಹೆಸರು ಗುರುಗಳು, ಆಚಾರ್ಯರು ಎಂದು ಹೇ ಲಾಯಿತು. ಆ ಗುರುಗಳು ಆಚಾರ್ಯರ ವಿಷಯದಲ್ಲಿ ಈ ರೀತಿ ಇರುವುದು. ಆ ಭಕ್ತಬಿಂಬ ಎಂದರೂ, ಗುರು ಆಚಾರ್ಯರು ಎಂದರೂ ಒಂದೇ ಅರ್ಥವು.

ಸಕಲ ವೇದಶಾಸ್ತ್ರ ಸಿದ್ಧಾಂತ ರೀತ್ಯಾ ಭಗವಂತನ ಕಟಾಕ್ಷದಿಂದ (ಸುಕೃ ಪರಿಪಾಕ ವಳ್ಳಾಲ್) ಸತ್ಸಂಗ, ಸಹವಾಸ ಉಂಟಾಗುವುದು. ಇದರಿಂದ ಸದಾಚಾ ಪ್ರವೃತ್ತಿಯುಂಟಾಗುವುದು. ಇದರಿಂದ ಅಖಿಲ ದುರಿತಕ್ಷಯವುಂಟಾಗುವುದು. ಅನಂತರ ಅಂತಃಕರಣ ಶುದ್ಧಿಯಾಗಿ ಅದರಿಂದ ಗುರು ಕಟಾಕ್ಷವುಂಟಾಗುವುದು. ತಥಾ—

ಗುರೂಪದೇಶಂ ವಿನಾ ಕಲ್ಪಕೋಟಿ ಶತೈರಪಿ ತತ್ವಜ್ಞಾನಂ ನ ಭವತಿ.

ಗುರೂಪದೇಶವಿಲ್ಲವಾದರೆ ಅವರಿಗೆ ತತ್ವಜ್ಞಾನವುಂಟಾಗುವುದಿಲ್ಲ.

ಸದ್ಗುರು ಕಟಾಕ್ಷೋ ಭವತಿ—ತದಾ ಭಗವತ್ಕಥಾ, ಶ್ರವಣ, ಧ್ಯಾನಾದ ಶ್ರದ್ಧಾ ಜಾಯತೇ.

ಸದ್ಗುರುಗಳ ಕಟಾಕ್ಷದಿಂದ ಗುರೂಪದೇಶವಾದರೆ, ಅಂಥವರಿಗೆ ಭಗವಂತ ವಿಷಯದಲ್ಲಿ ಭಕ್ತಿ, ಪ್ರೀತಿ, ಭಗವಂತನ ಕಥಾಶ್ರವಣ, ಧ್ಯಾನಾದಿಗಳಲ್ಲಿ ಶ್ರದ್ಧೆ ಯುಂಟಾಗುತ್ತದೆ.

ವೇದವು ಹೇಳುವುದೇನೆಂದರೆ :

'ದೇವಮಿವಾಚಾರ್ಯಮುಪಾಸೀತ' 'ಗುರುಹೀನೇ ಗೃಹೇ ವಿಪ್ರಸಕೃತಕಾಲ ನ ವಾಸ್ಯಕಂ' 'ಆಚಾರ್ಯವಾನ್ ಪುರುಷೋ ವೇದ'

'ಯಸ್ಯ ದೇವೇ ಪರಾಭಕ್ತಿ ಯಥಾದೇವೇ ತಥಾಗುರೌ'

'ಮಂತ್ರೇ ತದ್ದೇವತಾಯಾಂ ಚ ತಥಾ ಮಂತ್ರಪ್ರದೇ ಗುರೌ'

'ಶಿಷ್ಯಪಾಪಂ ಗುರೋರಪಿ'

ಭಕ್ತಬಿಂಬ :

ಭಗವಂತನ ವಿಗ್ರಹಗಳನ್ನು ಹೀಗೆ ಪೂಜಿಸಬೇಕು ? ಉತ್ಸವಾದಿಗಳನ್ನು ಯಾ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ರೀತಿ ನಡೆಸಬೇಕು ? ಭಗವಂತನ ಗುಣಗಳೇನು ? ಆಗಿಂದಾಗ್ಗೆ ಲೋಕಕ್ಷೇಮಕ್ಕಾಗಿ ಅವತರಿಸಿ ಆತನು ಮಾಡಿದ ಕೆಲಸಗಳೇನು ? ನಾವಾರು ? ನಮಗೂ ಭಗವಂತನಿಗೂ ಏನು ಸಂಬಂಧವು ? ವೇದವ್ಯಾಸ, ಶೌನಕ, ಭಾರಧ್ವಜ, ಪರಾಶರಾದಿ ಮಹರ್ಷಿಗಳು, ಟಂಕ, ದ್ರಾವಿಡ, ಶಂಕರ, ರಾಮಾನುಜ, ಮಧ್ವ ದೇಶಿಕರೂ ಮುಂತಾಗಿ ಅನೇಕ ಪೂರ್ವಾಚಾರ್ಯ ಮಹನೀಯರುಗಳು ಅವತರಿಸಿ ಶಿಷ್ಯ–ಪ್ರಶಿಷ್ಯ ಕ್ರಮದಿಂದ ನಮಗೆ ಭಗವಂತನ ವಿಚಾರವಾಗಿ ತಿಳಿಸಿರುತ್ತಾರೆ. ಅವರ ವಿಷಯದಲ್ಲಿ ನಾವು ಕೃತಜ್ಞರಾಗಿರ ಬೇಕಾದುದು ಸಹಜ ಸಧರ್ಮವಾಗಿರುವುದು. ರಾಷ್ಟ್ರದಲ್ಲಿ ದೇಶಭಕ್ತರಾದ ಎಲ್ಲಾ ಮುಖಂಡರನ್ನೂ ಮರ್ಯಾದೆ ಮಾಡಲು ಸಾಧ್ಯವಿರುವುದಿಲ್ಲ. ಪ್ರಧಾನರಾದವರನ್ನು ಮಾತ್ರ ಯಾವ ರೀತಿಯಲ್ಲಿ ಮರ್ಯಾದಿಸುವರೋ ಅದೇ ರೀತಿಯಲ್ಲಿ ವೇದಾಂತ ಬೋಧಕರಾಗಿ ನಮ್ಮನ್ನು ಸನ್ಮಾರ್ಗದಲ್ಲಿ ನಡೆಸುವ ಆಳ್ವಾರಾಚಾರ್ಯ–ಶಂಕರ, ಮಧ್ವ, ರಾಮಾನುಜರನ್ನು ದೇವಾಲಯದಲ್ಲಿ ಪ್ರತಿಷ್ಠಾಪಿಸುವುದು ಶಾಸ್ತ್ರಸಮ್ಮತವಾಗಿ ರುವುದು. ಆ ರೀತಿ ಆಚಾರ್ಯ ಭಕ್ತ ಪ್ರತಿಷ್ಠೆಯಿಲ್ಲದ ಸ್ಥಳದಲ್ಲಿ ಗುರುಹಿರಿಯರು ತೀರ್ಥಪ್ರಸಾದ ಸ್ವೀಕರಿಸುವುದಿಲ್ಲವೆಂಬ ನಿಯಮವುಂಟು. ಶ್ರೀವೈಷ್ಣವ ದೇವಾಲಯ ಗಳಲ್ಲಿ ಭಕ್ತಶ್ರೇಷ್ಠರಾದ ಆಳ್ವಾರಾಚಾರ್ಯರುಗಳ ಮೂರ್ತಿಗಳನ್ನು ಪ್ರತಿಷ್ಠಿಸಿ, ಪೂಜಿಸಿ ಅವರ ಜಯಂತಿಗಳನ್ನೂ, ಉತ್ಸವಗಳನ್ನೂ ಸಂಭ್ರಮದಿಂದ ಆಚರಿಸಿ ಬರುತ್ತೇವೆ. ಆಚರಿಸಿ ಬರುತ್ತಾರೆ.

ಭಗವನ್ಮಂದಿರೇ ವಿಷ್ಣೋಸ್ಸ್ಥಾಪಿತಾ ಲೋಕಪೂಜಿತಾಃ
ವಿಷ್ಣು ಭಕ್ತಾಃ ತಥಂ ಪೂಜ್ಯಾಃ

ಈ ರೀತಿ ವ್ಯಾಸರ ಕಾಲದಲ್ಲೇ ಪ್ರಶ್ನೆಯುಂಟಾಗಿ ಅದಕ್ಕೆ ಸಮಾಧಾನವು ಹೇಳ ಲ್ಪಟ್ಟಿರುವುದು.

1) ಅಸುರಾ ರಾಕ್ಷಸಾ ಭೂತಾ ಗರುಡಾ ನಾಗಕನ್ನಿಕಾಃ
ಯಕ್ಷ ವಿದ್ಯಾಧರಾ ಸಿದ್ಧ ಋಷಯೋ ಮಾನವಾಸ್ತಥಾ

2) ಬ್ರಾಹ್ಮಣಾ ಕ್ಷತ್ರಿಯಾವೈಶ್ಯಾಶೂದ್ರಾಸ್ಸ್ಯಾದನ್ಯಜಾತಯಃ
ವಿಷ್ಣುಭಕ್ತ ಸಮಾಯುಕ್ತೇಸ್ತ್ರೈಚಿಹ್ನೈಸ್ತತ್ಪರಾಯಣೈಃ

3) ತದ್ಭಕ್ತೈರರ್ಚನೀಯಾ ಸ್ಯುರೈಹಿಕಾ ಮುಕ್ತಿಕಾಪ್ತಯೇ
ವಾಸಾಧಿಕಾರಃ ೬ —ವಿಷ್ಣುಧರ್ಮೋತ್ತರೇ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ದೇವರಂತೆ ಗುರುಗಳನ್ನು ಕಾಣಬೇಕು. ಅವರಲ್ಲಿ ಭಕ್ತಿಮಾಡಬೇಕು. ಗುರುಗಳಿಲ್ಲದ ಸ್ಥಳದಲ್ಲಿ, ಆ ಗ್ರಾಮದಲ್ಲಿ ವಾಸಮಾಡಬಾರದು. ವೇದಜ್ಞಾನಂತೆ ಆಚಾರ್ಯನು ಭಗವಂತನಲ್ಲಿ ಯಾವ ರೀತಿಯ ಭಯ, ಭಕ್ತಿ, ಶ್ರದ್ಧೆಗಳಿಂದ ವರ್ತಿಸುವನೋ ಅದೇ ರೀತಿಯಲ್ಲಿ ಗುರುವಿನಲ್ಲಿಯೂ ಭಯ, ಭಕ್ತಿ, ಶ್ರದ್ಧೆಗಳಿಂದ ನಡೆದುಕೊಳ್ಳಬೇಕು. ಮಂತ್ರದಲ್ಲಿ ನಂಬಿಕೆ, ಆ ಮಂತ್ರದ ಅಧಿದೇವತೆಯಲ್ಲೂ ನಂಬಿಕೆ. ಅದೇ ರೀತಿಯಲ್ಲಿ ಗುರುಗಳು. ಅವರು ಉಪದೇಶಿಸಿದ ಮಂತ್ರದಲ್ಲಿ ಶ್ರದ್ಧೆ, ಭಕ್ತಿ, ನಂಬಿಕೆಗಳಿರಬೇಕು.

ಅಸುರರು, ರಾಕ್ಷಸರು, ಭೂತಗಣಗಳು, ಗರುಡ ಮತ್ತು ನಾಗಜಾತಿಯವರು, ಕಿನ್ನರರು, ಯಕ್ಷರು, ವಿದ್ಯಾಧರರು, ಸಿದ್ಧರು, ಋಷಿಗಳು, ಮಾನವರಲ್ಲಿ ವರ್ಣಾಶ್ರಮ ಧರ್ಮಕ್ಕೆ ಸೇರಿದ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರರು, ಅನ್ಯಜಾತಿಯವರು, ಯಾವ ಪಂಗಡಕ್ಕೆ ಸೇರಿದ್ದರೂ, ಅವರು ವಿಷ್ಣುಭಕ್ತರಾಗಿದ್ದಲ್ಲಿ ಅವರ ಜ್ಞಾನನಿಷ್ಠೆಯನ್ನನುಸರಿಸಿ ಅವರನ್ನು ಮರ್ಯಾದಿಸಿ ಪೂಜಿಸಬಹುದು. ಅದರಿಂದ ಐಹಿಕ ಆಮುಷ್ಮಿಕ ಫಲವುಂಟು.

(ಅನ್ಯಜಾತಯಃ ಎಂದಿದೆ—ಅರ್ಥಾತ್ ವರ್ಣಾಶ್ರಮದ ನಾಲ್ಕು ವರ್ಣದಲ್ಲಿ ಹುಟ್ಟಿ ಕಾರಣಾಂತರದಿಂದ ಪಂಚಮ ಜಾತಿಯಲ್ಲಿ ಬೆಳೆದು ಪ್ರವೃದ್ಧಮಾನರಾಗಿರಬಹುದು. ಅವರು ವಿಷ್ಣುಭಕ್ತರಾಗಿ ಜ್ಞಾನವಂತರಾಗಿದ್ದಲ್ಲಿ ಅವರನ್ನೂ ಪೂಜಿಸಬಹುದು.)

ಭಕ್ತಪ್ರತಿಷ್ಠಾ ಹೀನೇ ಚ ಧ್ವಜಾರೋಹಣ ಹೀನಕೇ
ತೀರ್ಥಪ್ರಸಾದ ಸ್ವೀಕಾರಂ ಪ್ರಪನ್ನೋ ವರ್ಜಯೇತ್ತಥಾ

(ಹಿರಣ್ಯಗರ್ಭ ಸಂಹಿತೆ)

ಯತ್ರ ಭಕ್ತಪ್ರತಿಷ್ಠಾ ಚ ಪೂಜನಂ ಕುರುತೇಯದಿ ।
ತತ್ರ ಪ್ರಸಾದ ತೀರ್ಥಂ ಚ ಗೃಹ್ಯಂತೇ ವಿಷ್ಣುಪಾರಗಃ ।

—ಹಿರಣ್ಯಗರ್ಭ ಸಂಹಿತೆ

ಭಕ್ತ ಪ್ರತಿಷ್ಠಾ ಇಲ್ಲದೇ ಇರುವ ಮತ್ತು ಮಹೋತ್ಸವ ಕಾಲಗಳಲ್ಲಿ ಧ್ವಜಾರೋಹಣ ಮಾಡದೇ ಇರುವ ದೇವಸ್ಥಾನದಲ್ಲಿ ತೀರ್ಥಪ್ರಸಾದವನ್ನು ಸ್ವೀಕರಿಸಬಾರದು.

ಯಾವ ದೇವಸ್ಥಾನವೇ ಆಗಲಿ, ಅಲ್ಲಿ ಭಕ್ತರಾದ ಗುರುಗಳ ಪ್ರತಿಷ್ಠೆಯಾಗಿ ಪೂಜಾದಿಗಳು ನಡೆಯುತ್ತಿದ್ದಲ್ಲಿ ತೀರ್ಥಪ್ರಸಾದಗಳನ್ನು ಸ್ವೀಕರಿಸಬಹುದು.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಭಕ್ತವಿಗ್ರಹ (ಆಳ್ವಾರು ಆಚಾರ್ಯರುಗಳು) ಮೂರ್ತಿ ಪ್ರತಿಷ್ಠೆಯಿಲ್ಲದ ದೇವಾಲಯಗಳಲ್ಲಿ ತೀರ್ಥಪ್ರಸಾದವನ್ನು ಸ್ವೀಕರಿಸಬಾರದೆಂದು ಹೇಳಿರುವುದರಿಂದ ಅಲ್ಲಿ ಮೊದಲನೆಯ ತೀರ್ಥ–ಎರಡನೆಯ ತೀರ್ಥ ಎಂಬ ಪ್ರಶ್ನೆಯೇ ಉಂಟಾಗುವುದಿಲ್ಲ. ಭಕ್ತಬಿಂಬ ಪ್ರತಿಷ್ಠೆ ಪೂಜೆ ದೇವಸ್ಥಾನದಲ್ಲಿ ನಡೆಯುವುದಾದರೆ, ಆ ದೇವಸ್ಥಾನದಲ್ಲಿ ತೀರ್ಥಪ್ರಸಾದವನ್ನು ಸ್ವೀಕರಿಸಬಹುದು ಎಂದು ಹೇಳಿರುವುದರಿಂದ ಮಹಾ ಮಂಗಳಾರತಿಯ ಸಮಯದಲ್ಲಿ (ಶಾತ್ತುಮರೈ) ಗೋಷ್ಠಿಯು ಆಳ್ವಾರಾಚಾರ್ಯರಿಗೆ ಸೇರಿದುದೆಂದು ಅರ್ಥವಾಗುತ್ತದೆ. ಆಗ ಆಳ್ವಾರಾಚಾರ್ಯರಿಗೆ ಮೊದಲು ತೀರ್ಥಪ್ರಸಾದ ಮರ್ಯಾದೆ ನಡೆಯಬೇಕೆನ್ನುವುದು ಸಿದ್ಧವಾಯಿತು. ಅದನ್ನನುಸರಿಸಿ, ಆಳ್ವಾರಾಚಾರ್ಯರಿಗೆ ಪ್ರಥಮ ತೀರ್ಥವೆಂದು ಏರ್ಪಡುತ್ತದೆ.

ಅನಂತರ ಶ್ರೀ ಭಗವದ್ರಾಮಾನುಜರು ಬಂದ ಮೇಲೆ ಅವರು ಈ ನಿಯಮಗಳನ್ನೆಲ್ಲಾ ಸ್ಥಿರೀಕರಿಸಿ, ಸಿದ್ಧಾಂತ ಸ್ಥಾಪನೆಗಾಗಿ ಚತುಸ್ಸಪ್ತತಿ 74 ಜನ ಸಿಂಹಾಸನಾಧಿಪತಿಗಳೆಂದು ಏರ್ಪಡಿಸಿದರು. ಶಿಷ್ಯರಿಗೆ ವೇದಾಂತ ಕಾಲಕ್ಷೇಪ ಮತ್ತು ಮತಪ್ರಚಾರ ಮಾಡುವುದು, ಆಯಾ ದಿವ್ಯ ದೇಶಗಳ ಆಲಯಗಳಲ್ಲಿ ಕೈಂಕರ್ಯಾದಿಗಳನ್ನು ನಡೆಸಿ, ಆಳ್ವಾರಾಚಾರ್ಯರುಗಳಿಗೆ ಪ್ರತಿನಿಧಿಯಾಗಿ ದೇವಸ್ಥಾನಗಳನ್ನು ನೋಡಿಕೊಂಡು ಪ್ರಥಮ ತೀರ್ಥಪ್ರಸಾದ ಇತ್ಯಾದಿ ಮರ್ಯಾದೆಗಳನ್ನು ಹೊಂದುವುದು ಎಂಬುದಾಗಿ ಏರ್ಪಡಿಸಿದರು. ಅವರಿಗೆ ಮಠಾಧಿಪತಿಗಳೆಂದೂ, ಸಿಂಹಾಸನಾಧಿಪತಿಗಳೆಂದೂ, ಆಚಾರ್ಯ ಪುರುಷರೆಂದೂ, ಸ್ಥಾನಪತಿ ಅಥವಾ ಸ್ಥಾನಾಚಾರ್ಯರೆಂದೂ ಕರೆಯುವರು.

ತದಾರಭ್ಯಾ ಏತತ್ಪರ್ಯಂತವಾಗಿ ಈ ಕ್ರಮವು ನಡೆದುಬರುತ್ತಿದೆ. ಈ 74 ಜನ ಸಿಂಹಾಸನಾಧಿಪತಿಗಳಲ್ಲಿ ಗೃಹಸ್ಥರೂ, ಸನ್ಯಾಸಿಗಳೂ ಇರುವರು.

ಗೃಹಸ್ಥರ ಪಿತಾ ಪುತ್ರ ಪರಂಪರೆಗೆ ಶಾರೀರಿಕ ಸಂತಾನವೆಂದು ಹೆಸರು ಸನ್ಯಾಸಿಗಳ ಗುರು–ಶಿಷ್ಯ ಪರಂಪರೆಗೆ 'ಜ್ಞಾನಸಂತಾನ ಗುರುಪರಂಪರೆ' ಎಂದು ಹೆಸರು. ಗೃಹಸ್ಥರಲ್ಲಿಯೂ ಆಚಾರ್ಯ, ಶಿಷ್ಯಭಾವವೆನ್ನುವ ಜ್ಞಾನಸಂತಾನವೂ ಬೆಳೆದುಬರಬಹುದು. ಇವರಿಗೆ ಆಚಾರ್ಯ ಪುರುಷರು ಎಂದು ಹೆಸರು. ಸನ್ಯಾಸಿ ಗುರು ಶಿಷ್ಯ ಪರಂಪರೆಗೆ ಮಠಾಧಿಪತಿಗಳು–ಶಿಷ್ಯಪರಂಪರೆಯೆಂದು ಹೆಸರು. ಇದೇ ವಿಷಯಗಳನ್ನು ಕ್ರಮವಾಗಿ ಪಾಂಚರಾತ್ರ ವೈಖಾನಸ ಆಗಮ ಗ್ರಂಥಗಳಲ್ಲಿ ವಿವರವಾಗಿ ಕಾಣಬಹುದು.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಸ್ಥಾನಾಚಾರ್ಯ ಲಕ್ಷಣಂ :

ಭಗವತ್ಪಾದ ತೀರ್ಥಾಂಬು ಸೇವನಾರ್ಥಂ ವರೇತ್ತತಃ । (೪೦)
ಸ್ಥಾನಾಚಾರ್ಯಂಚ ತತ್ಸ್ಥಾನೇ ಹಸ್ತಕಂ ಚ ನಿಯೋಜಯೇತ್ ।
ಸದ್ವಂಶಜೋ ಸತ್ಯವಾದೀ ಸಜ್ಜನೋ ಸದ್ಗುಣಾಕರಃ ।
ಸದಾಚಾರೀಚ ಸದ್ಭಕ್ತ ಸದಾ ಹರಿ ಪರಾಯಣಃ ।
ಕ್ರೋಧ ಲೋಭ ಮದಾದ್ಯೈಸ್ತು ವರ್ಜಿತೋ ವೈಷ್ಣವೋತ್ತಮಃ ।
ವೇದ ವೇದಾಂಗ ವೇದೀ ಚ ತಪಸ್ಸ್ವಾಧ್ಯಾಯ ತತ್ಪರಃ ।
ಪಾಂಚರಾತ್ರ ವಿಧಾನಜ್ಞಃ ಪಂಚ ಸಂಸ್ಕಾರ ದೀಕ್ಷಿತಃ ।
ಪಾಂಚಕಾಲಿಕ ಧರ್ಮಜ್ಞಃ ಪರಮೈಕಾಂತಿರುತ್ತಮಃ ।
ಸರ್ವಾವಯ ಸಂಪೂರ್ಣೋ ಸದಾರೋಗ್ಯ ಶರೀರಕಃ । (೪೪)
ವಯೋವೃದ್ಧಃ ಕೃಪಾಮೂರ್ತಿ ಸ್ಥಾನಾಚಾರ್ಯೋಭವೇಚ್ಛುಚಿಃ ॥

ಪ. ಪು. ಸಂ. 2

ಮಹಾ ಮಂಗಳಾರತಿ ಕಾಲದಲ್ಲಿ (ಶಾತ್ತುಮರೈ) ಅಗ್ರತೀರ್ಥ ಮರ್ಯಾದೆ ಸ್ವೀಕರಿಸಲು ಸ್ಥಾನಾಚಾರ್ಯರನ್ನು ಏರ್ಪಡಿಸಬೇಕು. ಈ ಸ್ಥಾನಾಚಾರ್ಯರು ದೇವ ಸ್ಥಾನದ ಆಡಳಿತವನ್ನು ನೋಡಬೇಕಾದ್ದರಿಂದ, ಅವರ ಸಹಾಯಾರ್ಥವಾಗಿ ಒಬ್ಬ ಹಸ್ತಕರನ್ನೂ ಸಹ ಏರ್ಪಡಿಸಬೇಕು. ಆ ಸ್ಥಾನಾಚಾರ್ಯರು ಹೇಗಿರಬೇಕೆಂಬುದನ್ನು ಸಂಹಿತೆಗಳು ಸ್ಪಷ್ಟವಾಗಿ ತಿಳಿಸುತ್ತವೆ. ಉತ್ತಮ ವಂಶದಲ್ಲಿ ಜನಿಸಿದವರೂ, ಸತ್ಯ ವನ್ನೇ ಹೇಳುವವರೂ, ಸತ್ಪುರುಷರೂ, ಸದ್ಗುಣಗಳಿಗೆ ಆಧಾರನೂ, ಒಳ್ಳೆಯ ಆಚಾರ ಶೀಲನೂ, ವೇದ ವೇದಾಂಗ ತಪಸ್ಸ್ವಾಧ್ಯಾಯಗಳಲ್ಲಿ ಯಾವಾಗಲೂ ನಿರತನಾದವನೂ, ಕ್ರೋಧ, ಲೋಭ, ಮೋಹಾದಿಗಳಿಲ್ಲದ ಶ್ರೀವೈಷ್ಣವೋತ್ತಮನೂ, ಶ್ರೀ ಪಾಂಚ ರಾತ್ರಾಗಮ ವಿದ್ವಾಂಸನೂ, ಪಂಚಸಂಸ್ಕಾರ ಹೊಂದಿದವನೂ, ಪಂಚಕಾಲ ಧರ್ಮಾನು ಷ್ಠಾನ ತತ್ಪರನೂ, ಪರಮ ಭಾಗವತೋತ್ತಮನೂ, ಯಾವ ಅಂಗವೂ ವಿಹೀನವಿಲ್ಲದ ಸರ್ವಾವಯುವ ಸಂಪೂರ್ಣನೂ, ದೃಢಕಾಯ ,ಆರೋಗ್ಯವಂತನೂ, ವೃದ್ಧನಾದವನೂ, ಕರುಣಾಮಯನೂ, ಸುಂದರ ಶರೀರವುಳ್ಳವನೂ ಸ್ಥಾನಾಚಾರ್ಯರಾಗಿರಲು ಅರ್ಹ ರಾಗಿರುವರು.

ವಂಶಕ್ರಮಾಗತೇ ನೈವ ವಿಧಿನಾ ಹರಿಸನ್ನಿಧೌ ।
ಪ್ರಸಾದಂ ಭಗವತ್ತೀರ್ಥಂ ಪ್ರಥಮಂ ಪರಿಗ್ರಹೇತ್

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಆಲಯೇ ಚೈವ ವಸ್ತವ್ಯಮಹೋರಾತ್ರಂ ಸ್ವಯಂ ಗುರುಃ ॥ ೪೭ ॥
ಸೂರ್ಯೋದಯಂ ಸಮಾರಭ್ಯ ಯಾವದರ್ಚಾವಸಾನಕಂ ।

• ಪ.ಪು.ಸಂ.2

ಈ ರೀತಿಯಲ್ಲಿ ಸ್ಥಾನಾಚಾರ್ಯರು ಆಳ್ವಾರಾಚಾರ್ಯರ ಪ್ರತಿನಿಧಿಯಾಗಿ ಮೊದಲು ಅಗ್ರ ತೀರ್ಥ ಮರ್ಯಾದೆ, ಭಗವತ್ತೀರ್ಥ ಪ್ರಸಾದ ಸ್ವೀಕರಣಾರ್ಥವಾಗಿ ಏರ್ಪಟ್ಟರುವರು ಈ ಅಗ್ರತೀರ್ಥ ಮರ್ಯಾದೆಯು ವಂಶಪಾರಂಪರ್ಯವಾಗಿ ನಡೆಯುವುದು. ಈ ಸ್ಥಾನಾಚಾರ್ಯರು ದೇವಸ್ಥಾನದ ವೈದಿಕ, ಲೌಕಿಕ ಕಾರ್ಯಗಳನ್ನೆಲ್ಲಾ ನೋಡಿ ಆಯಾ ಕಾಲಕ್ಕೆ ಸರಿಯಾಗಿ ನಡೆಸಬೇಕಾದ್ದರಿಂದ ಸೂರ್ಯೋದಯದಿಂದ ಆರಾಧನವೆಲ್ಲಾ ಪೂರ್ತಿಯಾಗುವವರೆಗೆ ಆಹೋರಾತ್ರಿ ದೇವಸ್ಥಾನದಲ್ಲೇ ಇರುವರು.

ಬ್ರಹ್ಮೋತ್ಸವಾದಿಕೇತ್ವಾದೌ ತಸ್ಯ ಸನ್ಮಾನಮುಚ್ಯತೇ ।
ಬ್ರಹ್ಮಚಾರೀ ಗೃಹಸ್ಥೋವಾ ಯತಿರ್ವಾ ಲಕ್ಷಣೈರ್ಯುತಃ ।
ಸ್ಥಾನಾಚಾರ್ಯೋಭವೇ ತ್ಸತ್ಯಮಿತಿ ಶಾಸ್ತ್ರೇಷುನಿಶ್ಚಯಃ (೪೮)
ಯತಿಶ್ಚೇದುತ್ತಮಃ ಪ್ರೋಕ್ತೋ ಗೃಹಸ್ಥನ್ಮಧ್ಯಮುಸ್ಮೃತಃ ।
ಅಥವೋ ಬ್ರಹ್ಮಚಾರೀ ಸ್ಯಾತ್ಥಾನಾಚಾರ್ಯ ವಿನಿಶ್ಚಯೇ ।
ಸ್ಥಾನಾಧಿಪೋಯತಿ ಯದಿ ಸ್ಯಾ ತನ್ನಿವೇಶಾರ್ಥ ಮಾದದಾತ್ ।
ದ್ವಿತೀಯಾವರಣೇವಾಪಿ ತೃತೀಯಾವರಣೇಽಪಿವಾ (೫೦)
ಮಠಮೇಕಂ ತು ನಿರ್ಮಾಯ ದಾತವ್ಯಂ ಕರ್ತುರಿಚ್ಛಯಾ ।
ಮಠಸ್ಯ ಸಾಂಪ್ರದಾಯೇನ ಮುಖ್ಯ ಶಿಷ್ಯೋ ಭವೇದ್ಗುರುಃ ।
ಯತಿಶ್ಚೇನ್ಮಠನಾಮ್ನಾ ಚ ಗೃಹಸ್ಥ ತಸ್ಯ ನಾಮನಿ ।
ಗ್ರಾಮಂ ವಾ ಭೂಮಿ ವಾತಸ್ಯ ಜೀವನಾರ್ಥಂ ಪ್ರಕಲ್ಪಯೇತ್ ॥ ೫೨ ॥

ಬ್ರಹ್ಮೋತ್ಸವಾದಿ ಉತ್ಸವಗಳಲ್ಲಿ ಇವರಿಗೆ ಸನ್ಮಾನವುಂಟು. ಬ್ರಹ್ಮಚಾರಿಯಾಗಲೀ, ಗೃಹಸ್ಥರಾಗಲೀ, ಸನ್ಯಾಸಿಯಾಗಲಿ ಸ್ಥಾನಾಚಾರ್ಯರಾಗಿರಲು ಅರ್ಹರೆಂದು ಶಾಸ್ತ್ರಗಳು ಘೋಷಿಸುತ್ತವೆ.

ಸ್ಥಾನಾಚಾರ್ಯರು ಯತಿಯೇ ಆಗಿದ್ದಲ್ಲಿ ಅವರ ವಾಸಕ್ಕಾಗಿ ದ್ವಿತೀಯವರಣವಾಗಲೀ, ತೃತೀಯಾವರಣವಾಗಲೀ, ಒಂದು ಮಠವನ್ನು ಯಜಮಾನನ ದ್ರವ್ಯಶಕ್ತಿಯನ್ನನುಸರಿಸಿ, ನಿರ್ಮಿಸಿಕೊಡಬೇಕು. ಮಠದ ಸಂಪ್ರದಾಯವನ್ನನುಸರಿಸಿ ಶಿಷ್ಯ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಪ್ರಶಿಷ್ಯ ಪರಂಪರೆಯಾಗಿ ಈ ಸ್ಥಾನಾಚಾರ್ಯತ್ವವು ಇರಬೇಕು. ಅದಕ್ಕಾಗಿ ಎಂದರೆ ಸ್ಥಾನಾಚಾರ್ಯರ ಜೀವನೋಪಾದಿ ನಿಮಿತ್ತ ಶಾಶ್ವತವಾಗಿರಲು ಒಂದು ಗ್ರಾಮ ವನ್ನಾಗಲೀ ಅಥವಾ ತಕ್ಕ ಭೂವಸತಿಯನ್ನಾಗಲೀ ಕಲ್ಪಿಸಬೇಕು.

ಕ್ಷೇತ್ರಾಧಿಕ್ಯ ತಯಾ ಸ್ಯೇಕ ದ್ವಿತ್ರಿಸಂಖ್ಯಾಕ ವೈಷ್ಣವಾನ್
ಸ್ಥಾನಾಚಾರ್ಯ ಪದೇಕರ್ತಾ ನಿಶ್ಚಿತ್ಯತದನಂತರಂ (೫೩)

ಪ. ಪು. ಸಂ. 2

ಕ್ಷೇತ್ರದ ಅಧಿಕ್ಯತೆಯನ್ನನುಸರಿಸಿ ದೇವಸ್ಥಾನದಲ್ಲಿ ಸ್ಥಾನಾಚಾರ್ಯರಾಗಿ ಒಬ್ಬರ ನ್ನಾಗಲೀ, ಇಬ್ಬರನ್ನಾಗಲೀ, ಮೂವರನ್ನಾಗಲೀ ಆಗಮಶಾಸ್ತ್ರದಲ್ಲಿ ತಿಳಿಸಿರುವ ಲಕ್ಷಣ ಗಳುಳ್ಳ ಶ್ರೀವೈಷ್ಣವರನ್ನು ಏರ್ಪಡಿಸಬಹುದು. ಅವರವರು ಬೇರೆ ಬೇರೆ ಮನೆತನದವ ರಾಗಿದ್ದಲ್ಲಿ, ಅವರವರ ಮಕ್ಕಳು ವಂಶಪಾರಂಪರ್ಯವಾಗಿ ಅಗ್ರತೀರ್ಥ ಮರ್ಯಾದೆ ಯನ್ನು ಸ್ವೀಕರಿಸಬಹುದು. ಇಬ್ಬರಾಗಲೀ ಮೂವರಾಗಲೀ ಅಗ್ರತೀರ್ಥ ಮರ್ಯಾದೆ ಯನ್ನು ಏಕಕಾಲದಲ್ಲಿ ಕೊಡುವುದು ಹೇಗೆ? ಅದು ಸಾಧ್ಯವಿಲ್ಲವಾದ್ದರಿಂದ ಆಯಾ ಸಂದರ್ಭವನ್ನನುಸರಿಸಿ ಸ್ಥಾನಾಚಾರ್ಯರಾಗಿ ಏರ್ಪಟ್ಟ ಕಾಲವನ್ನು ಗಣನೆಗೆ ತೆಗೆದು ಕೊಂಡು 1ನೇ ತೀರ್ಥ, 2ನೇ ತೀರ್ಥ, 3ನೇ ತೀರ್ಥ ಎಂಬುದಾಗಿ ಸಮನ್ವಯಿಸಬೇಕು.

ಸನ್ಯಾಸಿ ಮಠಾಧಿಪತ್ಯ ವಿಷಯ :—

ಸ್ಥಾನಾಚಾರ್ಯರು ಸನ್ಯಾಸಿಯಾಗಿ ಬಂದಲ್ಲಿ ಆಶ್ರಮ ಧರ್ಮವು ಹಿರಿದಾದ್ದ ರಿಂದ ಅವರಿಗೆ ಮೊದಲು ಪ್ರಥಮ ತೀರ್ಥವನ್ನು ಕೊಟ್ಟು, ಅನಂತರ ಅವರ ಪೂರ್ವಾ ಶ್ರಮದ ಮಕ್ಕಳು ತೀರ್ಥವನ್ನು ಸ್ವೀಕರಿಸಬಹುದು. ಆಗ ಅವರಿಗೆ 2ನೆಯ ತೀರ್ಥ ವೆಂದು ಕರೆಯಲಾಗುವುದು. ಒಂದು ವೇಳೆ ಇಬ್ಬರು ಮೂರು ಜನ ಸ್ಥಾನಾಚಾರ್ಯ ರಲ್ಲಿ ಸನ್ಯಾಸಿಯಾಗಿ ಬಂದರೆ, ಯಾರೇ ಆಗಲಿ ಸನ್ಯಾಸಿಗೆ ಮೊದಲು ಅಗ್ರಮರ್ಯಾದೆ ಮಾಡಿ, ಅನಂತರ ಅವರ ಪೂರ್ವಾಶ್ರಮದ ಮಕ್ಕಳಿಗೆ ಕ್ರಮವಾಗಿ ಮರ್ಯಾದೆ ನಡೆಯಬಹುದು.

ಅರ್ಚಕ ಲಕ್ಷಣಂ :—

ವೇದ ವೇದಾಂಗ ತತ್ವಜ್ಞಾನ್, ಸುಶೀಲಾನ್, ಭಕ್ತಿಪಾರಗಾನ್ ।
ಜಪಹೋಮಾದಿ ನಿರತಾನ್ ಯುವಕಾನ್ ಸತ್ಯವಾದಿನಃ ।
ಪಾಪಭೀತಿಯುತಾನ್ಶ್ಚೈವ ಪಂಚಸಂಸ್ಕಾರ ಸಂಯುತಾನ್ ।

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಶ್ರೀವೈಷ್ಣವಾನ್ ದೀಕ್ಷಿತಾಂಚ ಪಾಂಚರಾತ್ರ ವಿಶಾರದಾನ್ ।
ಅನ್ಯೈತಂತ್ರವಿದಶ್ಚೈವ ಸ್ವಾರ್ಥತ್ಯಾಗೇ ಸುಶಿಕ್ಷಿತಾನ್ ।
ಸರ್ವಾವಯವ ಸಂಪೂರ್ಣಾ ಸದಾರೋಗ್ಯ ಶರೀರಕಾನ್ ॥ ೮॥
ವಂಶಪಾರಂಪರೇ ಣ್ಯೈವ ವಿಷ್ಣ್ವರ್ಚನ ಪರಾಯಣಾನ್ ।
ಅಸಂಭವೇತು ಚ್ಯೈತೇಷಾಂ ಮಹಾ ಭಕ್ತಾನ್ ದ್ವಿಜಾತುವಾ ।
ಪಂಚಸಂಸ್ಕಾರ ಸಂಯುಕ್ತಾನ್ ಆಗಮಜ್ಞಾ ಚ ಕೋವಿದಾನ್
ಸದಾ ಹರಿಪದಧ್ಯಾನ ಪೂಜಾ ತತ್ಪರಮಾನಸಾನ್ ॥ ೧೦ ।
ಪರಮೈಕಾಂತಿ ನಶ್ಚೈವ ಪಂಚಕಾಲ ಪರಾಯಣಾನ್ ।
ಸದಾಚಾರ ಪರಾನ್ ಸರ್ವೈಃ ಪೂರ್ವೋಕ್ತೈರ್ಲಕ್ಷಣೈರ್ಯುತಾನ್ ।

ಪ. ಪು. ಸಂ. 2

ವೇದಶಾಸ್ತ್ರಗಳನ್ನೆಲ್ಲಾ ಚೆನ್ನಾಗಿ ತಿಳಿದು ಒಳ್ಳೆಯ ಶೀಲವಂತನಾಗಿ ಯಾವಾಗಲೂ ಜಪ ಹೋಮಾದಿಗಳನ್ನು ಮಾಡುತ್ತಾ ಇರುವವನು, ಯುವಕನಾಗಿದ್ದು, ಸತ್ಯವಂತನೂ, ಪಾಪಭೀರುವಾಗಿಯೂ, ಪಂಚಸಂಸ್ಕಾರವನ್ನು ಹೊಂದಿದವನಾಗಿಯೂ ಇರಬೇಕು. ಆಗಮದೀಕ್ಷೆಯನ್ನು ವಹಿಸಿರಬೇಕು. ಶ್ರೀವೈಷ್ಣವನಾಗಿದ್ದು, ಶ್ರೀ ಪಾಂಚರಾತ್ರಾಗಮ ರಹಸ್ಯವನ್ನರಿತವನಾಗಿರುವುದಲ್ಲದೆ, ಇತರ ಆಗಮಶಾಸ್ತ್ರಗಳನ್ನೂ ತಿಳಿದವನಾಗಿರಬೇಕು, ಸ್ವಾರ್ಥಪರನಾಗಿರಬಾರದು, ಅಂಗವಿಹೀನನಾಗಿರಬಾರದು, ಯಾವಾಗಲೂ ಧೃಡಕಾಯನಾಗಿ ಆರೋಗ್ಯವಂತನಾಗಿರಬೇಕು. ವಂಶಪರಂಪರೆಯಾಗಿ ಶ್ರೀಮಹಾವಿಷ್ಣುವನ್ನೇ ಆರಾಧಿಸುವ ಅರ್ಚಕ ಕುಟುಂಬಕ್ಕೆ ಸೇರಿದವನಾಗಿರಬೇಕು. ಆ ರೀತಿಯಲ್ಲಿ ಇಲ್ಲವಾದಲ್ಲಿ, ಲಭ್ಯವಾಗದೇ ಹೋದಲ್ಲಿ ಮಹಾವಿಷ್ಣು ಭಕ್ತನಾಗಿರುವವರನ್ನು ಕರೆದು ಪಂಚ ಸಂಸ್ಕಾರಯುಕ್ತರನ್ನಾಗಿ ಮಾಡಿ, ಆಗಮ ಸಂಪ್ರದಾಯಗಳನ್ನು ತಿಳಿದು ಯಾವಾಗಲೂ ಶ್ರೀಮನ್ನಾರಾಯಣ ಧ್ಯಾನ ಪೂಜಾ ತತ್ಪರನಾಗಿಯೂ, ಪರಮ ಭಾಗವತೋತ್ತಮನಾಗಿ ಪಂಚಕಾಲ ಧರ್ಮವನ್ನು ಅನುಷ್ಠಿಸುವವನಾಗಿ, ಆಚಾರವಂತನಾಗಿ ಮೇಲೆ ತಿಳಿಸಿದ ಆ ಎಲ್ಲಾ ಲಕ್ಷಣಗಳನ್ನೂ ಉಳ್ಳವನಾಗಿರುವವರನ್ನು ಮೊದಲು ಏರ್ಪಾಟು ಮಾಡಬೇಕು.

ಗೃಹಸ್ಥೋ ಬ್ರಹ್ಮಚಾರೀವಾ ಭಕ್ತ್ಯೈವಾಽರ್ಚಕಮಾದರಾತ್ ॥
ದ್ರವ್ಯೈರನೇಕ್ಯೈ ಸಂಪಾದ್ಯ ತಥಾನನ್ತೋಪಚಾರಕ್ಯೈಃ ॥ ೫ ॥
ಅಶಕ್ಯಂ ವಿಧಿವತ್ಕರ್ತುಂ ಬ್ರಹ್ಮಾದ್ಯೈರಪಿ ಪೂಜನಮ್ ।
ಮನುಷ್ಯೈಃ ಕಿಮುವಕ್ತವ್ಯಂ ದರಿದ್ರೈರ ದೃಢಾತ್ಮಭಿಃ ।

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಯಥಾಶಕ್ತಿ ತತಃ ಕುರ್ಯಾತ್ತಸ್ಮಾದ್ಬಹುಭಿರರ್ಚಕೈಃ ।
ಬಹ್ವುಭಿಃ ಪರಿವಾರ್ಯೈಶ್ಚ ತಥೈವಾನ್ಯಪದಾರ್ಥಿಭಿಃ ।
ನಿರ್ವೃತ್ಯಂ ಪೂಜನಂ ವಿಷ್ಣೋಃ ಶ್ರದ್ಧಾಭಕ್ತಿ ಸಮನ್ವಿತೈಃ ।
ತಸ್ಮಾನ್ನವವಿಧಾ ಗ್ರಾಹ್ಯಾ ಅರ್ಚಕಾಃ ಪರಿಚಾರಕಾಃ || ೮ ||
ಪೂಜಕೌ ದ್ವೌಪರಿಚಾರಾಚತ್ವಾರೋಽಧಮಮಧ್ಯಮೇ ।
ಏಕೋಽರ್ಚಕಃ ಪರಿಚಾರೌದ್ವೌ ಪ್ರೋಕ್ತಾವಧ ಮಾಧಮೇ || ೮ ||

ಪ್ರಕೀರ್ಣಾಧಿಕಾರಃ ೧೮

ಮೇಲೆ ತಿಳಿಸಿದ ಲಕ್ಷಣಗಳಿಂದ ಕೂಡಿದ ಗೃಹಸ್ಥನಾಗಿರಲಿ, ಬ್ರಹ್ಮಚಾರಿಯಾಗಿರಲಿ, ಅವನು ವಿಷ್ಣುಭಕ್ತನಾಗಿದ್ದಲ್ಲಿ ಅವನನ್ನು ಅರ್ಚಕತನಕ್ಕೆ ನೇಮಿಸಬಹುದು. ಶಾಸ್ತ್ರರೀತಿಯಾಗಿ ವಿಧಿನಿಷೇಧಗಳನ್ನನುಸರಿಸಿ ಭಗವಂತನ ಪೂಜಾದಿಗಳನ್ನು ನಡೆಸುವುದು ಸಾಧ್ಯವಿಲ್ಲವು. ಆದ್ದರಿಂದ ಯಥಾಶಕ್ತಿ ಭಗವಂತನ ಪೂಜೆಯನ್ನು ನಡೆಸಬಹುದು. ಆಗ ದೇವಾಲಯಗಳಲ್ಲಿನ ಭಾಗ ಮುಂತಾದವುಗಳನ್ನು ಅನುಸರಿಸಿ ಒಂಭತ್ತು (೯) ವಿಧ ಅರ್ಚಕರನ್ನು ನೇಮಿಸಬೇಕು. ಎರಡು ಅರ್ಚಕರು ಏರ್ಪಟ್ಟಲ್ಲಿ ನಾಲ್ಕು ಜನ ಪರಿಚಾರಕರಿರಬೇಕು. ಒಬ್ಬ ಅರ್ಚಕ ಇಬ್ಬರು ಪರಿಚಾರಕ ಲಕ್ಷಣಕ್ಕೆ ಅಧಮಾಧಮವೆಂದು ಹೆಸರು.

ತದನಂತರ ಅರ್ಚಕರ ಸಂಖ್ಯೆ—ಅರ್ಚಕರ ಆಶ್ರಮ ನಿರ್ಣಯ—ಅರ್ಚಕರ ಅನರ್ಹತ್ವಾದಿ ನಿರೂಪ—ಅದೀಕ್ಷಿತ, ಪಂಚಸಂಸ್ಕಾರ ಇಲ್ಲದಿರುವುದು ಎಂಬ ದೇವಲಕತ್ವ ವಿಚಾರ—ದೇವತಾಂತರಪೂಜೆ—ಅರ್ಚಕರಿಗೆ ಉಪಾದಿಕಲ್ಪನೆ—ಭೃತಕ (ಸಂಬಳ) ಸ್ವೀಕಾರದಿಂದ ದೋಷ-ದೇವಾದಾಯ ಸ್ವೀಕರಣೆ ಅರ್ಚಕರ ಅರ್ಹತೆ ಇತ್ಯಾದಿ ವಿಷಯಗಳು 12–40ರವರೆಗೆ 30 ಶ್ಲೋಕಗಳಲ್ಲಿ ಬರೆದಿರುವುದು.

ಅರ್ಚಕಸ್ಯ ಹಸ್ತಕಾಃ— (ಒಳ ಸನ್ನಿಧಿ ಪರಿಚಾರಕರು)

ಅರ್ಚಕಸ್ಯ ಸಹಾಯಾರ್ಥಂ ದೇವಕಾರ್ಯೇಷ್ವಹರ್ನಿಶಂ || ೭೭ ||
ಪಾತ್ರಾದಿ ಶೋಧನಾರ್ಥಂ ಚ ದೀಪ ಪ್ರಜ್ವಲನಾರ್ಥಕಂ ।
ಹಸ್ತಘಂಟಾ ಚಾಲನಾರ್ಥಂ ಪ್ರೋಕ್ಷಣಾಯ ಸ್ಥಲಾಧಿಕಂ ।
ತತ್ರ ಸಂಖ್ಯಾ ಉಪಾಧಿಃ—
ಏಕಸ್ಯಾರ್ಚಕ ವಿಪ್ರಸ್ಯ ದ್ವೌ ದ್ವೌ ಸಂಖ್ಯಾ ಕ ವೈಷ್ಣವೌ ।
ಅರ್ಚಕಾರ್ಹೈಶ್ಚ ಸರ್ವೈಶ್ಚ ಲಕ್ಷಣೈಸ್ಸಂಯುತೌ ಶುಚೌ ।

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಹಸ್ತಕೌ ವರಯೇತ್ತೇಷಾಂ ಭೂಮಿಂ ವಾ ಭೃತಕಂ ತು ವಾ ।
ನಿರ್ಣೀತವ್ಯಂ ಯಥಾ ಶಕ್ತಿ ಯಜಮಾನೇನ ಭಕ್ತಿತಃ ॥ ೭೯ ॥

ಪ. ಪು. ಸಂ. 2

ಭಗವತ್ ಕೈಂಕರ್ಯಗಳನ್ನಾಚರಿಸುವುದರಲ್ಲಿ ಅಹೋರಾತ್ರಿಯಾಗಿ ಅರ್ಚಕರಿಗೆ ಸಹಾಯಕನಾಗಿದ್ದು, ಆರಾಧನೆ ಪಾತ್ರಗಳೇ ಮೊದಲಾಗಿ ಪರಿಸರಗಳನ್ನು ಶುದ್ಧಿ ಮಾಡಲೂ, ದೀಪಾರೋಪಣ ಮಾಡುವುದಕ್ಕೂ, ಹಸ್ತ ಘಂಟೆಯನ್ನು ಬಾರಿಸಲೂ, ಪೂಜಾಸ್ಥಾನವನ್ನು ಸಂಪ್ರೋಕ್ಷಣೆ ಮಾಡುವುದಕ್ಕೂ, ಅರ್ಚಕರಿಗಾಗಿಯೇ ಏರ್ಪಡಿಸಿರುವ ಲಕ್ಷಣದಿಂದ ಕೂಡಿದ ಹಸ್ತಕರನ್ನು ಒಬ್ಬೊಬ್ಬ ಅರ್ಚಕರಿಗೆ ಇಬ್ಬಿಬ್ಬರಾಗಿ ಏರ್ಪಡಿಸಿ ಅವರಿಗೆ ಯಜಮಾನನು ತನ್ನ ಶಕ್ತಿಯನ್ನನುಸರಿಸಿ ಭೂವಸತಿಯನ್ನಾಗಲೀ, ಮಾಸಾಶನ (ಸಂಬಳ) ವನ್ನಾಗಲೀ, ಏರ್ಪಡಿಸಬೇಕು. ಭೂವಸತಿ ಮಾಡುವುದೇ ಉತ್ತಮವೆಂದು ತಿಳಿಯಬೇಕು.

ಆರಾಧಕಸ್ತು ಶ್ರೀಶೌರೇಃ ಪುತ್ರ ಏವ ನ ಸಂಶಯಃ ।
ತಸ್ಮಾದರ್ಚಕ ಏವ ಸ್ಯಾದಧಿಪೋ ಸರ್ವಕರ್ಮಸು ॥ ೬ ॥
ಅರ್ಚಕಾದಿಕಲಾಪಾಸು ಸತತಂ ಭಗವದ್ಗೃಹೇ ।
ಪರಿಚಾರಕವರ್ಗಶ್ಚ ತಥಾ ಚಾನ್ಯೇ ಪಿ ಸೇವಕಾಃ
ಅರ್ಚಕಾಜ್ಞಾನುಸಾರೇಣ ಸರ್ವದಾ ಚ ಪ್ರವರ್ತಯೇತ್ ।
ಯಜಮಾನ ಕುಲೋದ್ಭೂತೋ ಯದ್ವಾ ನಿರ್ಣೀತ ವಂಶಜಃ ॥ ೮ ॥
ಧರ್ಮಾಧಿಕಾರೀ ಚೈಕಸ್ತು ವರ್ತತೇಯದಿ ಸೋಪಿ ಚ ।
ಅರ್ಚಕಾಜ್ಞಾನುಸಾರೇಣ ಸೇವಕಾನ್ ಸರ್ವದಾಪಿಚ
ಸಮಾಹೂಯ ಚ ತೇಷಾಂ ತು ಯೋಗ್ಯಕಾರ್ಯಾಣಿ ನಿರ್ದಿಶೇತ್

ಪ. ಪು. 3

ಆರಾಧಕರು = ಅರ್ಚಕರು ಸಾಕ್ಷಾತ್ ಶ್ರೀಮನ್ನಾರಾಯಣನ ಪುತ್ರರು ಎಂದು ತಿಳಿಯಬೇಕು. ಆದ್ದರಿಂದಲೇ ಅರ್ಚಕರು ದೇವಸ್ಥಾನದಲ್ಲಿ ನಡೆಯುವ ಪೂಜಾ ವಿಧಾನಗಳೇ ಮೊದಲಾದ ಸರ್ವ ವಿಷಯಗಳಿಗೂ ಅಧಿಕಾರಿಯಾಗಿದ್ದು, ಯಾವ ಯಾವ ಕಾಲದಲ್ಲಿ ಯಾವ ಯಾವ ಧರ್ಮ ನಡೆಯಬೇಕೋ ಅವೆಲ್ಲವನ್ನೂ ಆ ರೀತಿಯಲ್ಲಿಯೇ ನಡೆಸುವರು ಪರಿಚಾರಕರೆಲ್ಲರೂ ಅರ್ಚಕರ ಆಜ್ಞೆಯನ್ನನುಸರಿಸಿ ನಡೆಯಬೇಕು. ಮೇಲೆ ತಿಳಿಸಿದ ಆರಾಧನ ಪ್ರಕ್ರಿಯೆಯೆಲ್ಲವೂ ಶಾಸ್ತ್ರೋಕ್ತವಾಗಿ ನಡೆಯಲು ಅರ್ಚಕರಿಗೆ ಸಹಾಯಕರಾಗಿರಬೇಕು.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಅರ್ಚಕರು ಭಗವದ್ವಂಶಜರೆಂದು ಹೇಳಿರುವರು. ಇದರಲ್ಲಿ ಔಪಗಾಯನ ಶಾಂಡಿಲ್ಯ, ಸುಮಂತು, ಜೈಮಿನಿ, ಭೃಗು, ಮೌಂಜ್ಯಾಯನ, ಈ ಐದು ಜನರು ಪಾಂಚರಾತ್ರ ಪ್ರವರ್ತಕರು. ಶುಕ್ಲ ಯಜುರ್ವೇದಿಗಳು, ಅವರ ವಂಶದಲ್ಲಿ ಹುಟ್ಟಿದವರು ಮುಖ್ಯ ಕಲ್ಪಾಧಿಕಾರಿಗಳು. ಹೀಗಿದ್ದರೂ ಅವರು ಪರಾರ್ಥ ಯಜನಕ್ಕೆ ದೀಕ್ಷೆಯನ್ನು ಹೊಂದಬೇಕು. ಪಾಂಚರಾತ್ರ ಪ್ರವರ್ತಕರ ವಂಶದಲ್ಲಿ ಜನಿಸದೆ ಇದ್ದರೂ ಶುಕ್ಲ ಯಜುರ್ವೇದಿಗಳಾಗಿದ್ದು, ಪರಾರ್ಥ ಯಜನಕ್ಕೆ ಪಂಚರಾತ್ರ ದೀಕ್ಷೆ ಹೊಂದಿ ಬರಬಹುದು. ಅವರು ಅನುಕಲ್ಪಾಧಿಕಾರಿಗಳು. ಅಲ್ಲದೆ ಯಾವ ಗೋತ್ರ ಸೂತ್ರದವರೇ ಆಗಲಿ ಅವರು ಪರಾರ್ಥ ಯಜನ ನಡೆಸಲು ಪಾಂಚರಾತ್ರ ದೀಕ್ಷೆಯನ್ನು ಪಡೆದು ಬರಬಹುದು. ಇವರು ಮಿಶ್ರಿತ ದೀಕ್ಷಿತರು ಎಂದು ಕರೆಯಲ್ಪಡುವರು

ಅರ್ಚಕ ಶ್ರೇಷ್ಠತ್ವ :—

ಕಿಂತು ದೇವೋಕಾಗ್ರಹಿತೋ ದೇವೋ ವಾಕ್ಸಹಿತೋರ್ಚಕಃ ।
ಪ್ರತ್ಯಕ್ಷ ದೇವತಾ ಲೋಕೇ ಸರ್ವಸೌಖ್ಯಪ್ರದಾಯಕ ।
ಅರ್ಚಕಸ್ಸಾತ್ಮಶಕ್ತಿರ್ವೈ ಭಗವನ್ಮಹಿಮಾಸ್ಮೃತ್ ।
ವಿನಾರ್ಚಕೇನ ದೇವೋಪಿ ನಾಸ್ತಿ ನಾಸ್ತಿ ಚ ಮಂದಿರಂ ॥ ೬೦ ॥
ಪೂಜನಾಸ್ತ್ಯುತ್ಸವಂ ನಾಸ್ತಿ ಮಹಿಮಾನಾಸ್ತಿ ಸಿಕ್ಷಯಂ
ತಸ್ಮಾದರ್ಚಕ ಏವ ಶ್ರೀ ಜನಾರ್ಧನ ಯಿತೀರ್ಯತೇ

ಭಗವಂತನು ತಾನು ಸ್ವತಃ ಮಾತನಾಡುವುದಿಲ್ಲ. ಆದ್ದರಿಂದ ಅರ್ಚಕರು ಭಗವಂತನ ಪ್ರತಿನಿಧಿಯಾಗಿ ಪ್ರತ್ಯಕ್ಷವಾಗಿ, ಲೋಕ ಕ್ಷೇಮಾರ್ಥವಾಗಿ ಆಶೀರ್ವಾದ ಮಾಡಲು ಏರ್ಪಟ್ಟಿರುವರು. ಅರ್ಚಕರನ್ನು ಪ್ರತ್ಯಕ್ಷ ದೈವವೆಂದು ತಿಳಿಯಬೇಕು ಎಂದು ಆಗಮಶಾಸ್ತ್ರವು ತಿಳಿಸುವುದು. ನಿಜವಾಗಿ ಈ ಅರ್ಚಕರ ತಪಶ್ಶಕ್ತಿಯಿಂದಲ್ಲವೇ, ಭಗವಂತನ ಮಹಿಮೆಯು—ಈ ಅರ್ಚಕರಿಲ್ಲವಾದಲ್ಲಿ ದೇವಾಲಯವಾಗಲೀ, ವಿಗ್ರಹಮೂರ್ತಿಯಾಗಲೀ, ಉತ್ಸವ, ಭೋಗಾದಿಗಳಾಗಲೀ ಇಲ್ಲದೆ ಇರುವಂತಾಗುವುದಿಲ್ಲವೇ ?

ಅರ್ಚಕಸ್ಯ ತಪೋಯೋಗಾತ್ ಪೂಜಾಯಾಶ್ಶಾಂತಿಶಯನಾತ್
ಅಭಿರೂಪ್ಯಾಚ್ಚ ಬಿಂಬಸ್ಯ ಸ್ಸದಾ ಸನ್ನಿಹಿತೋ ಹರಿಃ
ಅರ್ಚಕಃ ಪ್ರಸನ್ನಾತ್ಮಾ ಪಂಚಕಾಲ ಪರಾಯಣಃ
ಬ್ರಾಹ್ಮೇ ಮುಹೂರ್ತೇಜೋತ್ಥಾಯ ನಾರಾಯಣ ಮನುಸ್ಮರೇತ್

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ರೂಪದ್ವಯಂ ತು ಹರೇಃ ಪ್ರೋಕ್ತ ಬಿಂಬಮರ್ಚ್ಚಕ ಏವ ಚ
ಬಿಂಬೇ ತ್ವಾ ವಾಹನಾದೂರ್ಧ್ವಂ ಸದಾ ಸನ್ನಿಹಿತೋಽರ್ಚಕೇ ।

ಅರ್ಚಕಸ್ತು ಹರಿ ಸಾಕ್ಷಾತ್ ಚರರೂಪೀ ನ ಸಂಶಯಃ

ವಿಷ್ಣೋರ್ವಿಪ್ರ ಸುತತ್ವಾಚ್ಚ ವಿಷ್ಣೋರಂಶಸ್ಯಚಾತ್ಮನಃ
ಆರಾಧಕಸ್ತು ಶ್ರೀಶೌರೇಃ ಪುತ್ರ ಏವ ನ ಸಂಶಯಃ
ತಸ್ಮಾದರ್ಚಕ ಯೇವ ಸ್ಯಾ ದಧಿವೋ ಸರ್ವ ಕರ್ಮಸು
ಸ್ವಮಾತೃ ಪಿತೃ ಭಾವೇನ ದೇವೀ ದೇವಂಚ ಭಾವಯನ್

ಅರ್ಚಕಸ್ತು ಹರಿಸಾಕ್ಷಾತ್ ಚರರೂಪೀ ಸನಾತನಃ || ೩೬ ||
ತೇನಭುಕ್ತಂ ತು ಯದ್ರವ್ಯಂ ತನ್ಮಯಾ ಭುಂಕ್ತ ಏವ ಹಿ ।

ಕಪರ್ದಿ ಸಂ. 3

ಅರ್ಚಕಸ್ಯ ಯದ್ರೂಪಂ ತದ್ವಿಷ್ಣ್ವಂಶಂ ಚರಾತ್ಮಕಂ
ಅರ್ಚಕಸ್ಯ ತು ಯದ್ವಾಕ್ಯಂ ತದ್ವಿಷ್ಣೋರ್ವಾಕ್ಯಮುಚ್ಯತೇ ।

ಅರ್ಚನಾ ನವನೀತಂ (Page 38)

ಆರಾಧಕಸ್ತು ಶ್ರೀ ಶೌರೇಃ ಪುತ್ರ ಏವ ನ ಸಂಶಯಃ
ತಸ್ಮಾದರ್ಚಕ ಏವ ಸ್ಯಾದಧಿವೋ ಸರ್ವಕರ್ಮಸು || ೪ ||

ಪ.ಪು.ಸಂ. 3

ವೈಖಾನಸಾಶ್ಚ ಮತ್ಪುತ್ರಾದತ್ತ ಪುತ್ರಾಶ್ಚ ದೀಕ್ಷಿತಾಃ ।

ಪ್ರಕೀರ್ಣಾ ೩೬

ಪಿತಾಚ ಭಗವಾನ್ ಪ್ರೋಕ್ತಃ ಪುತ್ರಾಶ್ಚಾರ್ಚಕ ಈರಿತಃ । || ೯ ||

ಕಪರ್ದಿ ಸಂ. ೯

ಯಸ್ಮಾತ್ತು ಪೂಜಕ ಸಾಕ್ಷಾತ್ ಭಗವತ್ಪುತ್ರ ಉಚ್ಯತೇ || ೬೬ ||
ತಸ್ಮಾತ್ತಸ್ಯ ಕುಟುಂಬಂ ಚ ದಿವ್ಯ ಮಿತ್ಯೇವ ಭಾವಯೇತ್ ।

ಪ.ಪು ಸಂ. 3

ಉಮಾ ಮಾತಾ ಪಿತಾಹಂ ಅರ್ಚಕ ಪುತ್ರ ಏವಹಿ ।
ಪೂಜ್ಯ ಪೂಜಕಯೋ ರ್ಭೇದಂ ಯಾವದಾ ಭೂತ ಸಂಪ್ಲವಂ ।

ಕಪರ್ದಿ ಸಂ. 3

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಪಾಂಚರಾತ್ರ ದೀಕ್ಷಿತರು :—

. ಸ್ನುಥಾ ಮಂಗಳಾರತಿ (ಶಾತ್ತುಮಲ್ಲೈ) ಕಾಲದಲ್ಲಿ ಅರ್ಗತೀರ್ಥ ಮರ್ಯಾದೆ ಕಾರಣವಾಗಿ ಮೊದಲು ಸ್ಥಾನಾಚಾರ್ಯ ವಿಷಯವಾಗಿ 'ತಿಳಿಸಿದ್ದಾಯಿತು. ಪ್ರಕೃ ಅರ್ಚಕರ ವಿಷಯ ಅವರ ಮರ್ಯಾದೆ ವಿಚಾರವನ್ನು ತಿಳಿಸಲಾಗುವುದು.

ಅರ್ಚನಂ ಭಾಗವದ್ವಂಶ್ಯೈಃ ಕಾರ್ಯಂ ನಾನ್ಯೈಃ ನ ಸಂಶಯಃ ।
ಅನ್ಯಥಾಚೇನ್ಮಹಾದೋಷೋ ರೌರವಸ್ಯ ಕಾರಣಂ ।
ದೀಕ್ಷಿತ ಮಿಶ್ರಿತಾ ದೀಕ್ಷಿತಸ್ಯಾಪಿ ಅಧಿಕಾರಃ ।

—ವಾಮನ ಸ

ಮುಖ್ಯಾದಿ ಪ್ರವಿಭಾಗತ್ವ ಮೇವಮುಬ್ರೂಹ್ಯಕಲ್ಪಯೇತ್ ।
ಪುತ್ರ ದೀಕ್ಷಾಭಿಕೇಣ ಸಂಸ್ಕೃತಾಂ ತತ್ರಕಲ್ಪಯೇತ್ ॥ ೧೧೮ ॥
ಸಮಯಿಾ ದೀಕ್ಷಾಭಿಷೇಕೇ ಸಂಸ್ಕೃತಾನ್ ವಾ ನ ಚಾನ್ಯಥಾ ।

ಪಾರಮೇಶ್ವರ ಸಂ. (

ವಂಶಾನುಕ್ರಮು ಚೇನ್ನೈವ ಅರ್ಚಕಾನಾಂ ಹಿ ಸ್ಥಾಪನಂ ।
ತಥೈವ ತುಷ್ಯೇದ್ದೇವೋಪಿ ಅರ್ಚನಂ ತು ಸ್ಥಿರಂಭವೇತ್ ॥ ೨೭ ॥

ಕಪರ್ದಿ ಸಂ.

ಪಾರಂಪರ್ಯ ಕ್ರಮಾಚಾರ್ಯಂ ನ ತ್ಯಜೇದಚ್ಯುತಮುದರ್ಚನೇ
ತ್ಯಜೇದ್ಯದಿ ಚ ಮೋಹೇನ ರಾಜ್ಞೋರಾಷ್ಟ್ರಸ್ಯ ದುಃಸ್ಥಿತಿಃ ।
ತಸ್ಮಾತ್ಸರ್ವ ಪ್ರಯತ್ನೇನ ಪೂರ್ವಾಚಾರ್ಯೇಣ ಕಾರಯೇತ್ ।

ಕಪರ್ದಿ ಸಂ.

ಅದೇ ರೀತಿಯಲ್ಲಿ ವೈಖಾನಸ ಆಗಮ ಗ್ರಂಥಗಳಲ್ಲಿ,

ವೈಖಾನಸ ಸೂತ್ರೇಣ ನಿಷೇಕಾದಿ ಕ್ರಿಯಾನ್ವಿತಾನ್ ವಿಪ್ರಾನ್ ।
ವೇದವಿದಃ ಶ್ರೇಷ್ಠಾನ್ ಧಾರ್ಮಿಕಾನ್ ಜ್ಞಾನತತ್ಪರಾನ್ ।
ಸೌಮ್ಯಾನ್ ಜಿತೇಂದ್ರಿಯಾನ್ ಶುದ್ಧಾನ್ ವಿಷ್ಣೋರಾರಾದನೇ ತತ್ಪರಾನ್
ಊಹಾಪೋಹ ವಿಧಾನೇನ ಧ್ವಸ್ತ ಸಂಶಯಮಾನಸಾನ್ ।

ಪ್ರಕೀರ್ಣ ೧೧ (ಅ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ತದಭಾವೇತು ತತ್ಪುತ್ರ ಪೌತ್ರ ನಪ್ತಾರ ಮೇವವಾ ।
ತಸ್ಯೈವೆ ಭ್ರಾತರ ಶಿಷ್ಯಪ್ರಶಿಷ್ಯಗುರು ಮೇವವಾ ।
ಸಬ್ರಹ್ಮಚಾರಿಣ ನಾಪ್ಯಿ ಪೂರ್ವಾಭಾವೇ ತಥೋತರ ।
ತದುನು ಜ್ಞಾತಮಿತರ ಆಚಾರ್ಯತ್ಯೇ ನಿಯೋಜಯೇತ್ ।
ಅನ್ಯಥಾ ಚೇನ್ಮಹಾದೋಷೋ ರಾಜಾರಾಷ್ಟ್ರಚನಶ್ಯತಿ ।
ಮದ್ಭಕ್ತಿಯುಕ್ತಸ್ಯ ಮದೌರಸಸ್ಯ ನಿಷೇಕ ಕರ್ಮಾದಿ ವಿರಾಜಿತಸ್ಯ ।
ನ ತಪ್ತಮುದ್ರಾ ನ ಮಂತ್ರದೀಕ್ಷಾ ನ ಗುರು ರ್ವಯಾವಿನಾ ।

ಕ್ರಿಯಾಧಿಕಾರೇ

ಪಾಂಚರಾತ್ರ ದೀಕ್ಷೆ, ಅದೇ ರೀತಿಯಲ್ಲಿ ಗರ್ಭದಲ್ಲೇ ವೈಷ್ಣವ ದೀಕ್ಷೆಯನ್ನು ಶ್ರೀಮನ್ನಾರಾಯಣನಿಂದ ಹೊಂದುವುದಲ್ಲದೆ, ವೈಖಾನಸ ಸೂತ್ರಕ್ಕೆ ಮತ್ತು ವೈಖಾನಸ ಗೃಹಸೂತ್ರಕ್ಕೆ ಸೇರಿದವರಾಗಿರಬೇಕು. ವೇದ ವಿದ್ವಾಂಸರಾಗಿಯೂ, ಸೌಮ್ಯ ಜಿತೇಂದ್ರಿಯರಾಗಿ, ವಿಷ್ಣುವಾರಾಧನತತ್ಪರರಾಗಿರಬೇಕು, ಊಹಾಪೋಹ ಜ್ಞಾನ ವಿರಬೇಕು. ಆ ರೀತಿಯ ಲಕ್ಷಣಗಳುಳ್ಳವರು ದೊರಕದಿದ್ದಲ್ಲಿ ಅವರ ಮಕ್ಕಳು, ಮೊಮ್ಮಕ್ಕಳು, ಜ್ಞಾತಿಗಳು ಯಾರೇ ಆಗಲಿ ವೈಖಾನಸ ಸೂತ್ರಕ್ಕೆ ಸೇರಿದವರಾಗಿರಬೇಕು. ಇವರಿಗೆ ತಪ್ತ ಮುದ್ರಾಧಾರಣೆ ಬೇಕಾಗಿರುವುದಿಲ್ಲ. ಪಾಂಚರಾತ್ರ ಆಗಮೀಕರಂತೆ ಮಂತ್ರದೀಕ್ಷೆಯಾಗಲಿ ಬೇಕಾಗಿರುವುದಿಲ್ಲ. ಶ್ರೀಮನ್ನಾರಾಯಣನೇ ಗುರುವಾಗಿರುವುದರಿಂದ ಅವರು ಶ್ರೇಷ್ಠರಾಗಿರುತ್ತಾರೆ. ಈ ರೀತಿಯಲ್ಲಿ ವೈಖಾನಸ ಸೂತ್ರವನ್ನು ಬರೆದ ವಿಖನಸ ಮಹರ್ಷಿಗಳಿಗೆ ಪ್ರಮುಖ ಶಿಷ್ಯರಾದ ಭೃಗು, ಅತ್ರಿ, ಮರೀಚಿ, ಕಾಶ್ಯಪ ಈ ನಾಲ್ವರಿಂದ ಬರೆಯಲ್ಪಟ್ಟ ಗ್ರಂಥಗಳು ಪ್ರಧಾನವು.

ಇಲ್ಲಿ ಸಂದೇಹವೇನೆಂದರೆ, ಪ್ರಚಲಿತ ಶ್ರೀವೈಷ್ಣವ ಸಮುದಾಯದವರೆಲ್ಲರೂ ತಪ್ತಮುದ್ರೆಯನ್ನು ಒಪ್ಪಿರುವರು. ಆ ರೀತಿ ಇದ್ದರೂ ಊರ್ಧ್ವಪುಂಡ್ರದ ರಚನೆ, ವಿನ್ಯಾಸ, ವೇದಾಂತ ಭಾಗ, ಸ್ಮೃತಿ ಪುರಾಣ, ಧರ್ಮಶಾಸ್ತ್ರಗಳನ್ನನುಸರಿಸಿ ಎರಡು ಸಮುದಾಯಗಳಾಗಿವೆ. ತೆಂಕಲೆ–ವಡಕಲೆ ಎಂಬುದಾಗಿ.

ಪ್ರಕೃತ ತೆಂಕಲೆಯೆಂಬುವರು ಶ್ರೀ ಮಣವಾಳ ಮಾಮುನಿಗಳು ತಮ್ಮ ಮತ ಗುರುಗಳೆಂದೂ, ವಡಕಲೆಯವರು ವೇದಾಂತ ದೇಶಿಕರು ತಮ್ಮ ಮತಗುರುಗಳೆಂದೂ ನಿರ್ಣಯಿಸಿಕೊಂಡಿರುವರು.

ಪಾಂಚರಾತ್ರ ಆಗಮನಿಷ್ಠರಲ್ಲದ ಎಂದರೆ ವೈಖಾನಸ ಆಗಮನಿಷ್ಠರಲ್ಲಿ ತೆಂಕಲೆ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಯವರೂ, ವಡಕಲೆಯವರೂ ಇರುತ್ತಾರೆ. ಅವರಿಗೆ ಶ್ರೀಮನ್ನಾರಾಯಣನ ಮಂತ್ರೋಪದೇಶ ಮಾಡುವಾಗ ವಡಕಲೆ ಮತ್ತು ತೆಂಕಲೆ ಬ್ರಾಹ್ಮಣ ಸ್ತ್ರೀಯರು ಹೇಗೆ ಮಂತ್ರೋಪದೇಶವು ? ಆಗ ಅವರಿಗೆ ಗುರುಪರಂಪರೆ ಹೇಗೆ ? ಬ್ರಾಹ್ಮಣರಲ್ಲಿ ಸ್ತ್ರೀ ಶೂದ್ರಾದಿಗಳಿಗೆ ಹೇಗೆ ಉಪದೇಶ ? ಆಗ ತೆಂಕಲೆ, ವಡಕಲೆ ಎಂಬ ಭೇದ ವೈಖಾನಸದವರು ಯಾವ ಆಧಾರದ ಮೇಲೆ ಮಾತನಾಡುವರು ?–ಆಗ ವೈಖಾನಸದವರನ್ನು ಬಿಟ್ಟರೆ ಪ್ರಪಂಚದಲ್ಲಿನ ಸ್ತ್ರೀ ಶೂದ್ರಾದಿಗಳಿಗೆ ವೈಷ್ಣವತ್ವವೇ ಸಿದ್ಧಿಸು ದಿಲ್ಲ ಎಂದಾಗುವುದು.

ಅರ್ಚಕ ಶ್ರೇಷ್ಠತ್ವಂ :—

ಅರ್ಚಕೇಕ್ಲೇಶ ಯುಕ್ತೇತು ಕ್ಲಿಶ್ಯತೇ ಭಗವಾನ್ ಹರಿಃ ।
ಅರ್ಚಕೇತು ತು ಸಂತುಷ್ಟೇ ತದಾತುಷ್ಟೋ ಜನಾರ್ದನಃ

ಪ್ರಕೀರ್ಣ ೧೨ (117–119

ಸರ್ವಸ್ಯ ಭೂತಜಾತಸ್ಯ ಹರಿರಾತ್ಮಾಸ್ಥಿತೋಪಿಸರ್ನ ।
ಮಂತ್ರ ವೀರ್ಯಾಬ್ಜ ಮಹಾತ್ಮ್ಯಾತ್ ಸ್ಥಾಪಕಸ್ಯ ಗುರೋಸ್ತಥಾ ! ॥ ೨ ॥
ಪ್ರತಿಮಾಯಾಂ ಪ್ರಕರ್ಷೇಣ ಸನ್ನಿಧತ್ತೇ ಹರಿಸ್ವಯಂ ।

ಪದ್ಮಸಂಕ್ರಿಯಾ ೨

ಅರ್ಚಕಸ್ಯ ತು ಹಸ್ತೇನ ಗೃಹ್ಣೀಯಾದ್ಧರಿತೀರ್ಥಕಂ ।
ನೋಚೇತ್ಸುರಾ ಸಮಂಜ್ಞೇಯಂ ತತ್ತೀರ್ಥಂ ದ್ವಿಜಸತ್ತಮಾಃ । ॥ ೫೮ ॥

ಪ.ಪು.ಸಂ.

ಅರ್ಚಕಸ್ಯ ಪ್ರಭಾವೇನ ಶಿಲಾಭವತಿ ಶಂಕರಃ ।
ಪ್ರತ್ಯಕ್ಷ ದೇವತಾಲೋಕೇ ಸರ್ವಸೌಖ್ಯಪ್ರದಾಯಕಃ । ॥ ೭
ಅರ್ಚಕಸ್ಯಾತ್ಮಶಕ್ತಿರ್ವೈ ಭಗವನ್ಮಹಿಮಾಸ್ಮೃತಾ ।
ವಿನಾರ್ಚಕೇನದೇವೋಪಿ ನಾಸ್ತಿ ನಾಸ್ತಿ ಚ ಮಂದಿರಂ । ॥ ೮೦

ಪ.ಪು.ಸಂ.

ರೂಪದ್ವಯಂ ಹರೇಃ ಪ್ರೋಕ್ತಂ ಬಿಂಬಮಾರ್ಚಕಮೇವಚ !
ಬಿಂಬೇತ್ವಾವಾಹನಾದೂರ್ಧ್ವಂ ಸದಾ ಸನ್ನಿಹಿತೋಽರ್ಚಕೇ ।

ಅರ್ಚನಾ ನವನೀತಂ Page 3

ಕ್ರಿಯಾಧಿಕಾರಃ 36 (51–6

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಅರ್ಚಕಸ್ತುಹರಿ ಸಾಕ್ಷಾತ್ ಚರರೂಪೀ ನ ಸಂಶಯಃ ।

ಕ್ರಿಯಾಧಿಕಾರೇ 36 (59–60)
ಪುರುಷೋತ್ತಮ ಸಂ. ೧೨

ಅರ್ಚಕಸ್ಯಯದ್ರೂಪಂ ತದ್ವಿಷ್ಣ್ವಂಶಂ ಚರಾತ್ಮಕಂ ।
ಅರ್ಚಕಸ್ಯತು ಯದ್ವಾಕ್ಯಂ ತದ್ವಿಷ್ಣೋರ್ವಾಕ್ಯಮುಚ್ಯತೇ ।

ಅರ್ಚನಾನವನೀತಂ Page 38

ವೈಖಾನಸಾಶ್ಚಮತ್ಪುತ್ರಾ ದತ್ತ ಪುತ್ರಾಶ್ಚದೀಕ್ಷಿತಾಃ ।

ಪ್ರಕೀರ್ಣ ೩೬

ವಿಷ್ಣೋರ್ವಿಪ್ರ ಸುತತ್ವಾಚ್ಚ ವಿಷ್ಣೋರ್ವಂಶಸ್ಯಾಚಾತ್ಮನಃ ।
ಯಸ್ಮಾತ್ತು ಪೂಜಕಸ್ಸಾಕ್ಷಾತ್ ಭಗವತ್ಪುತ್ರಉಚ್ಯತೇ ।
ತಸ್ಮಾತ್ತಸ್ಯ ಕುಟುಂಬಂಚ ದಿವ್ಯಮಿತ್ಯೇವಭಾವಯೇತ್ ।

ಪ.ಪು.ಸಂ. 3

ಅರ್ಚಕಃ ಪ್ರಸನ್ನಾತ್ಮಾ ಪಂಚಕಾಲ ಪರಾಯಣಃ ।
ಬ್ರಾಹ್ಮೇಮುಹೂರ್ತೇ ಚೋತ್ಥಾಯ ನಾರಾಯಣ ಮನುಸ್ಮರೇತ್ ।
ಅರ್ಚಕಸ್ಯ ತಪೋಯೋಗಾತ್ ಪೂಜಾಯಾಶ್ಚಾತಿಶಯನಾತ್ ।
ಆಭಿರೂಪ್ಯಾ ಚ್ಚ ಬಿಂಬಸ್ಯ ಸದಾ ಸನ್ನಿಹಿತೋಹರಿಃ ।

ಅರ್ಚನಾನವನೀತಂ Page 24

ಅರ್ಚಕ ಶ್ರೇಷ್ಠತ್ವವನ್ನು ಹೇಳುವಾಗ ನಮ್ಮ ಪರವಾಗಿಯೂ, ಲೋಕಕ್ಷೇಮಕ್ಕಾಗಿಯೂ, ಅರ್ಚಕರು ಭಗವಂತನ ಪೂಜೆಮಾಡುವರು. ಭಗವಂತನ ಪ್ರತಿನಿಧಿಯಾಗಿ ನಮ್ಮನ್ನು ಆಶೀರ್ವದಿಸುವರು ಎಂದು ಹೇಳುವಾಗ ಅರ್ಚಕರು ಭಗವಂತನ ಪ್ರತಿನಿಧಿಗಳು ಹೇಗೆ ? ಎನ್ನುವುದನ್ನು ತಿಳಿಸುತ್ತಾರೆ.

ಭಗವಂತನಿಗೆ ಎರಡು ರೂಪಗಳಿವೆ, ಭಗವಂತನ ಪ್ರತಿನಿಧಿ ಅರ್ಚಕರೂಪವು. ಅರ್ಚಕರು ವೇದಮಂತ್ರ ಪ್ರಭಾವದಿಂದ ಭಗವಂತನ ಸ್ವರೂಪ ಶಕ್ತಿಯನ್ನು ಬಿಂಬದಲ್ಲಿ ಆಹ್ವಾನಿಸುವುದರಿಂದ ಭಗವಂತನು ಬಿಂಬದಲ್ಲಿ ಸನ್ನಿಹಿತನಾಗುವನು.

ಆದ್ದರಿಂದ ಅರ್ಚಕರು ಭಗವಂತನೇ ಎಂದು ತಿಳಿಯಬೇಕು. ಭಗವಂತನು ಮೂಲಮೂರ್ತಿಯಾಗಿದ್ದು ಮಾತನಾಡುವುದಿಲ್ಲವಾದ್ದರಿಂದ ಭಗವಂತನೇ ಅಥವಾ ಭಗವದಂಶ ಅಥವಾ ಭಗವಂತನ ಪುತ್ರ ಎಂದು ಸಂಹಿತಾವಾಕ್ಯಗಳು ತಿಳಿಸುತ್ತವೆ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಲೋಕದಂಪತಿಗಳಾದ ಶ್ರೀಮನ್ನಾರಾಯಣ, ಶ್ರೀ ಮಹಾಲಕ್ಷ್ಮಿ ಇವರು ನಮ್ಮ ಮಾತಾಪಿತೃಗಳು. ಅವರ ಪುತ್ರನು ನಮಗೆ ಪ್ರತಿನಿಧಿಗಳಾಗಿರುವರು.

ಅರ್ಚಕರು ಕ್ಲೇಶಯುಕ್ತರಾದಲ್ಲಿ ಭಗವಂತನೂ ಕಷ್ಟಪಡುವನೆಂದು ತಿಳಿಯ ಬೇಕು. ಆದ್ದರಿಂದ ಅರ್ಚಕರ ವಿಷಯದಲ್ಲಿ ನಾವು ಮರ್ಯಾದೆಯುಳ್ಳವರಾಗಿರಬೇಕು ಆದ್ದರಿಂದ ಅರ್ಚಕರ ಕುಟುಂಬ ಸೌಖ್ಯಕ್ಕೆ ಸೌಕರ್ಯ ಕಲ್ಪಿಸುವುದು ನಮ್ಮ ಕರ್ತವ್ಯವಾಗಿರುವುದು.

ಅರ್ಚಕರ ನಿತ್ಯಾನುಷ್ಠಾನಾದಿ ತಪೋಯೋಗಗಳಿಂದಲೂ, ಅವರು ಮಾಡು ಕಾರ್ಯಗಳಿಂದಲೂ ಭಗವಂತನು ಬಿಂಬದಲ್ಲಿ ಸಾನ್ನಿಧ್ಯ ಹೊಂದುವನು. ಆದ್ದರಿಂದ ಅರ್ಚಕರು ಗೌರವಾನ್ವಿತರು. ಆದ್ದರಿಂದಲೇ ಭಗವತ್ತೀರ್ಥವನ್ನು ಅವರ ಕೈಯಿಂ ಸ್ವೀಕರಿಸುತ್ತೇವೆ.

ಅರ್ಚಕಸ್ಯ ಯದ್ವಾಕ್ಯಂ ತದ್ವಿಷ್ಣೋರ್ವಾಕ್ಯಮುಚ್ಯತೇ
ಯದಾಕ್ಲೇಶ ಸಂಯುಕತ್ತಾ ಬಾಧ್ಯಂತೇ ಮಮ ಪುತ್ರಕಾಃ ॥ ೧೦೦ ॥
ತದಾಮಪಿ ಕ್ಲೇಶೈಃ ರ್ಯುಕ್ತ ಏವ ನ ಸಂಶಯಃ
ಯದಾಹಂ ಕ್ಲೇಶಯುಕ್ತಶ್ಚ ರಾಜ್ಞೋ ರಾಷ್ಟ್ರಸ್ಯ ದುಸ್ಥಿತಿಃ ।
ತಸ್ಮಾತ್ಸರ್ವ ಪ್ರಯತ್ನೇನ ಅರ್ಚಕಂ ಸಂಪ್ರಪೂಜಯೇತ್ ।
ಏವಂ ಯದಾವಾ ಕ್ರಿಯತೇ ತದಾಯಾಗಶ್ಚ............ ॥ ೧೦೨ ॥
ಅನ್ಯಥಾ ನ ಭವೇದೇವ ಇತಿ ಶಾಸ್ತ್ರಸ್ಯ ವಿಧೀರಿತಂ ।

ಕಪರ್ದಿ ಸಂ.

ಲೋಕಕಲ್ಯಾಣ ಹೇತ್ವರ್ಥಮೇವ ದೇವಾಲಯೇರ್ಚಕಃ ॥ ೫೬ ॥
ಪ್ರಸನ್ನಂ ಪರಿತೃಪ್ತಂಚ ಕೃತ್ವಾ ಲೋಕಃ ಪ್ರವರ್ಧತೇ ।
ಯಸ್ಮಾತ್ಸದಾರ್ಚಕೋ ಪೂಜ್ಯೋ ಹರಿಭಾವೇವ ಕೇವಲಂ ।
ತಸ್ಮಾತ್ಸಯೇವ ಚಾರ್ಹಸ್ಯಾತ್ಸದಸಿ ಪ್ರಥಮಾರ್ಚನೇ ।

ಅರ್ಚಕರ ವಿಷಯ :—

ವಿಷ್ಣೋಸ್ತೀರ್ಥಂ ಪ್ರಸಾದಂ ಚ ಪೂಜಾನ್ತೇ ದೇಶಿಕೋತ್ತಮಃ
ಅಪೀತ್ವಾ ಯದಿ ಅನ್ಯೇಭ್ಯೋದದ್ಯಾತ್ ಪೂಜಾ ಹಿ ನಿಷ್ಫಲಾ

ಶ್ರೀಪ್ರಶ್ನ ಸಂ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಪೂಜಾನ್ತೇ ದೇವ ದೇವಸ್ಯ ತೀರ್ಥಂದೇವಾಭಿಷೇಚನಂ ॥ ೯೯ ॥
ಪಾದಾಂಬುವಾ ಪಿಬೇತ್ ಪೂರ್ವಂ ಗಂಗಾತೀರ್ಥಂ ಸಮಂ ಶುಚಿ ।
ಅನ್ಯೇಷ್ವಪಿ ಚ ಕಾಲೇಷು ಕ್ಷುದ್ರಾರಾಧನ ಕರ್ಮಣಿ ।
ಪೀತ್ವಾಸ್ವಯಂ ಚೋದ್ಧರಣ್ಯಾ ಪಾತ್ರೇಣಾನ್ಯೇನವಾ ಗುರುಃ

ಶ್ರೀ ಪ್ರಶ್ನ ಸಂ. 29

ಪ್ರಸಾದಂ—ಪ್ರಸಾದ ವಿನಿಯೋಗಂ :—

ಇತ್ಥಂ ಭೋಜ್ಯಾಸನಾನ್ತೇ ತು ಪ್ರಸಾದ ವ್ಯಯಮಾಚರೇತ್ ।
ದತ್ವಾಸ್ತ್ರ್ವ ಗುರವೇ ಪೂರ್ವಮರ್ಚಕ ಸ್ವಯಂ ಹರೇತ್ ।
ಪರಿಚಾರಕ ಮುಖ್ಯಾಯಾ ಸರ್ವೇಷಾಂ ಕ್ರಮತೋಽದದೇತ್ ।

ಪದ್ಮೋದ್ಭವ ಸಂ.

ಸೇವಕಾನಾನ್ತತೋ ದದ್ಯಾತ್ ಸರ್ವೇಷಾಂ ಚ ಯಥಾ ಕ್ರಮಂ ।
ಯದಿಸ್ಯಾದವಿವೇಕೇನ ಪೂಜಕಃ ಕೃತವಾನ್ಸ್ವನಃ ।
ಸ್ನಾನಾಸನೇತು ತಂ ಕರ್ಮ ತತ್ತೀರ್ಥ ನಿಷ್ಫಲಂ ಭವೇತ್ ।

ವರಾಹ ಸಂ.

ವಿಷ್ಣೋರ್ವಿಪ್ರ ಸುತತ್ವಾಚ್ಚ—ವಿಷ್ಣೋರಂಶಸ್ಯಚಾತ್ಮನಃ ।
ವಿಷ್ಣುಪಾದಾಬ್ಜ ಸಲಿಲಂ ಪೂರ್ವಂ ವೈಖಾನಸಃ ಪಿಬೇತ್ ।
ಪೂಜಾಂತೇ ತುಳಸೀ ತೀರ್ಥಂ ಪೂಜಕಃ ಪ್ರಥಮಂ ಪಿಬೇತ್
ಯತೀನಾಂ ವಿಷ್ಣುಭಕ್ತಾನಾಂ ಚ ವಿಪ್ರಾಣಾಂಚವಿಶೇಷತಃ ।
ವೈಷ್ಣವಾನಾಂ ಚ ಸರ್ವೇಷಾಂ ಪೀತ್ವಾ ಅನ್ಯೇಷಾಂ ಪ್ರದಾಪಯೇತ್ ।

ಮಹಾಮಂಗಳಾರತಿ ಕಾಲದಲ್ಲಿ ಮಾತ್ರ ತೀರ್ಥಪ್ರಸಾದ ನಡೆಯುವುದು. ಇತರ ಕಾಲದಲ್ಲಿರುವುದಿಲ್ಲ—ಆದ್ದರಿಂದ ಅರ್ಚಕರು ತೀರ್ಥ ತೆಗೆದುಕೊಂಡ ಮೇಲೆ ಇತರ ಗೋಷ್ಠಿಯವರಿಗೆ ತೀರ್ಥವು. ಈ ರೀತಿ ವಾಕ್ಯಗಳು ಕಾಣಬರುವುದು. ಇದರಲ್ಲಿ ಪ್ರಧಾನವಾದ ಗ್ರಂಥವು ಶ್ರೀ ಪ್ರಶ್ನಸಂ. ಈ ಗ್ರಂಥದಲ್ಲಿ ಕೆಲವು ಅರ್ಚಕರ ವಿಷಯವಾದ ಶ್ಲೋಕಗಳು ವಿವಾದಾಸ್ಪದವೆಂದು ಹೇಳುವರು. ಈ ವಿಷಯವು ನ್ಯಾಯಾಸ್ಥಾನದಲ್ಲಿ ತೀರ್ಮಾನವಾಗಿರುವುದು. ಆದ್ದರಿಂದ ಆ ವಿಚಾರದಲ್ಲಿ ಅಧಿಕ ಜಿಜ್ಞಾಸೆ ಮಾಡುವುದಿಲ್ಲ. ವೈಖಾನಸ ಗ್ರಂಥಗಳಲ್ಲಿ ಅಲ್ಲಲ್ಲಿ ಕೆಲವು ಶ್ಲೋಕಗಳಿವೆ. ಇದನ್ನೆಲ್ಲಾ ಕ್ರೋಢೀಕರಿಸಿ ಸಮನ್ವಯ ಮಾಡಲಾಗಿದೆ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಪಾಂಚರಾತ್ರ ವಂಶಪರಂಪರೆಯಲ್ಲಿ ಜನಿಸಿ ಬಂದರೂ "ಬ್ರಹ್ಮಚಾರಿ, ಗೃಹಸ್ಥೋ ವಾ ಕಾನನಸ್ಥೋ ವಾ ಯತಿಃ, ಪರಾರ್ಥಯಜನೇ ವಿಷ್ಣೋರರ್ಹತ್ಯೇವ ನ ಸಂಶಯಃ" ಪರಾರ್ಥ ಯಜನ ಮಾಡಬೇಕೆಂದು ಇಷ್ಟಪಟ್ಟಲ್ಲಿ, ಬ್ರಹ್ಮಚಾರಿ, ಗೃಹಸ್ಥ, ಕಾನನಸ್ಥ (ವಾನಪ್ರಸ್ಥ), ಯತಿ, ಸನ್ಯಾಸಿ—ಇವರು ದೀಕ್ಷೆಯನ್ನು ತೆಗೆದುಕೊಂಡು ಪರಾರ್ಥ ಯಜನವನ್ನು ಮಾಡಬಹುದು. ಆದರೆ ಪರಾರ್ಥ ಯಜನ ದೀಕ್ಷಿತರಾದವರು (ಅರ್ಚಕರು) ಯಾರೇ ಆಗಲೀ ಆಳ್ವಾರಾಚಾರ್ಯರುಗಳಿಗೆ ಪ್ರತಿನಿಧಿಗಳಾಗುವುದಿಲ್ಲ. ಅಥವಾ ಪರಾರ್ಥ ಯಜನ ದೀಕ್ಷಿತರಲ್ಲದ ಶ್ರೀ ವೈಷ್ಣವರು ಆಳ್ವಾರಾಚಾರ್ಯರುಗಳಿಗೆ ಪ್ರತಿನಿಧಿಗಳಾಗಿದ್ದು ಶಾತ್ತುಮರೈ ಮಹಾ ಮಂಗಳಾರತಿ ಸಮಯದಲ್ಲಿ ಅಗ್ರತೀರ್ಥ ಮರ್ಯಾದೆ ಸ್ವೀಕರಿಸುತ್ತಿದ್ದು ಅನಂತರ ಪರಾರ್ಥ ಯಜನ ದೀಕ್ಷೆ ಅವಲಂಬಿಸಿದಲ್ಲಿ ಆಗ ಅವರಿಗೆ ಅಗ್ರತೀರ್ಥ ಮರ್ಯಾದೆ ಲೋಪವಾಗುವುದು. ಅವರಿಗೆ ಅಗ್ರತೀರ್ಥ ಮರ್ಯಾದೆ ಇರುವುದಿಲ್ಲ. ಆದ್ದರಿಂದ ಪರಾರ್ಥ ಯಜನ ದೀಕ್ಷೆ ಇಲ್ಲದ ಶ್ರೀವೈಷ್ಣವರೇ ಆಳ್ವಾರಾಚಾರ್ಯರ ಪ್ರತಿನಿಧಿಗಳಾಗಿ ಶಾತ್ತುಮರೈ ಮಹಾ ಮಂಗಳಾರತಿಯಲ್ಲಿ ಅಗ್ರ ತೀರ್ಥ ಮರ್ಯಾದೆಯನ್ನು ಹೊಂದಲು ಅಧಿಕಾರವುಳ್ಳವರಾಗಿರುವರು. ಇದೇ ನ್ಯಾಯವು ಗೋಷ್ಠಿ ಪ್ರಸಾದ ವಿನಿಯೋಗಕ್ಕೂ ಅನ್ವಯಿಸುವುದು.

ತೀರ್ಥವನ್ನು ಪಿಬೇತ್, ಪೀತ್ವಾಸ್ವಯಂ, ಸ್ವಯಂ ಹರೇತ್ ಎನ್ನುವುದ ರಿಂದ ಒಬ್ಬರು ಇನ್ನೊಬ್ಬರಿಗೆ ಕೊಡುವುದಲ್ಲ. ಅರ್ಚಕರು ತಾವೇ ತೆಗೆದುಕೊಳ್ಳ ಬೇಕೆಂದರ್ಥವಾಗುತ್ತದೆ. ಮರ್ಯಾದೆ ಎಂದರೆ ನಾಲ್ಕು ಜನರ ಎದುರಿಗೆ ನಾಲ್ಕು ಜನರ ಪರವಾಗಿ ಒಬ್ಬರು ಇನ್ನೊಬ್ಬರಿಗೆ ನಡೆಸುವುದಕ್ಕೆ ಮರ್ಯಾದೆ ಎನ್ನುವರು. ಅವರವರೇ ಮೂರಾವರ್ತಿ ತೀರ್ಥವನ್ನು ತೆಗೆದುಕೊಂಡರೆ ಅಥವಾ ಹೂವಿನ ಹಾರ ವನ್ನು ಅವರೇ ತಮ್ಮ ಕತ್ತಿಗೆ ಹಾಕಿಕೊಂಡರೆ, ಲೋಕದಲ್ಲಿ ಅದನ್ನು ಮರ್ಯಾದೆ ಎನ್ನುವುದಿಲ್ಲ. "ಪೂಜಾನ್ತೇ" ಎನ್ನುವುದು ಮಂತ್ರಾಸನ, ಸ್ನಾನಾಸನ, ಅಲಂಕಾ ರಾಸನ, ಭೋಜ್ಯಾಸನದವರೆಗೆ ಮಾತ್ರ. ಅನಂತರ ಪರ್ಯಂಕಾಸನ ಎನ್ನುವುದು ಪೂಜಾಕ್ರಮದಲ್ಲಿ ಸೇರಿದ್ದರೂ ಅಲ್ಲಿ ಆಗ ಯಾವ ಆಗಮಶಾಸ್ತ್ರ ಪ್ರಯೋಗ ಕಲಾಪ ಗಳೂ ಯಾವುದೂ ಇರುವುದಿಲ್ಲ. ಪರ್ಯಂಕಾಸನವು ಮಹಾ ಮಂಗಳಾರತಿ ಕಾಲವು, ಆಳ್ವಾರಾಚಾರ್ಯರು ಸೇರಿರುವುದರಿಂದ ಅವರ ಪ್ರತಿನಿಧಿಗಳು ಮಾತ್ರ ಅಗ್ರತೀರ್ಥ ಮರ್ಯಾದೆಯನ್ನು ಸ್ವೀಕರಿಸುವರು. ಇತರರು ಯಾರಿಗೂ ಅವಕಾಶವಿರುವುದಿಲ್ಲ.

ಸಮನ್ವಯ ನಿರ್ಣಯ :—

ಪರಾರ್ಥ ಯಜನಾಧಿಕಾರಿಗಳಾದ ಅರ್ಚಕರ ಶ್ರೇಷ್ಠತೆ ಇರುವಾಗ ಅವರಿಗೆ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಮರ್ಯಾದೆ ಮಾಡಬೇಕಾದ್ದು ನ್ಯಾಯವಾಗಿರುತ್ತೆ. ಆಗ ಶಾತ್ತುಮರ್ೖ = ಮಹಾ ಮಂಗಳಾರತಿ ಸಮಯದಲ್ಲಿ ಅವರಿಗೆ ಆಳ್ವಾರಾಚಾರ್ಯರಂತೆ ಮರ್ಯಾದೆ ಕಲ್ಪಿಸ ಬಹುದಾಗಿದ್ದಿತು. ಆದರೆ ಮಹಾ ಮಂಗಳಾರತಿ ಸಮಯದಲ್ಲಿ ಅರ್ಚಕರೇ ಇತರರಿಗೆ ಮರ್ಯಾದೆ ಮಾಡುವವರಾದ್ದರಿಂದ, ಅವರಿಗೆ ಮರ್ಯಾದೆ ನಡೆಸುವುದು ಹೇಗೆ? ಅರ್ಚಕರಿಗೆ ಮರ್ಯಾದೆ ಮಾಡಲಾಗುವುದಿಲ್ಲ. ಅಲ್ಲದೆ ಆಳ್ವಾರಾಚಾರ್ಯರೂ ಸಹ ಅರ್ಚಕರಿಗೆ ಉಪಾದೇಯವಾದ್ದರಿಂದ ಅರ್ಚಕರಿಗೆ ಹೇಗೆ ಮರ್ಯಾದೆ ಮಾಡಲಾಗುತ್ತೆ? ಆಗಮ ಸಂಹಿತೆಯಲ್ಲಿ ಸ್ಪಷ್ಟವಾಗಿ ತೀರ್ಥ ಕೊಡುವ ಪ್ರಕ್ರಿಯೆ ಹೇಳಿರುವುದು. ಆಳ್ವಾರಾಚಾರ್ಯರಿಗೆ ಅಗ್ರತೀರ್ಥವಾದ ನಂತರ ಒಡನೇ ಅರ್ಚಕರಿಗೂ ಸಹ ಮೊದಲು ಮರ್ಯಾದೆ ನಡೆಸಲಾಗುವುದು. ಆಗ ಗೋಷ್ಠಿಗೆ ಮೊದಲು ಅರ್ಚಕರಿಗೆ ಕೊಟ್ಟಂತೆ ಆಗುವುದು. ಇದೇ ಅರ್ಚಕರಿಗೆ ಮೊದಲ ಮರ್ಯಾದೆ ಎನ್ನುವುದು. ಅದಕ್ಕೆ ಸಂಹಿತಾ ವಾಕ್ಯಪ್ರಮಾಣ—

ಸ್ಥಾನಾಧಿಪಂ ಸಮಾರಭ್ಯ ಅರ್ಚಕಾದ್ಯಾಪಕಾನ್ ತಥಾ
ತದನು ವೈಷ್ಣವಾದೀನಾಂ ಚ ತಥಾನ್ಯಮತ ಬ್ರಾಹ್ಮಣಾನ್

ಪ.ಪು.ಸಂ.

ಯತಿಶ್ಶ್ರೇದುತ್ತಮಃ ಪ್ರೋಕ್ತೋ ಗೃಹಸ್ಥ ಮಧ್ಯಮಸ್ಮೃತಃ ।
ಅಥವಾ ಬ್ರಹ್ಮಚಾರೀ ಸ್ಯಾತ್ ಸ್ಥಾನಾಚಾರ್ಯ ವಿನಿಶ್ಚಯೇ । ॥ ೪೯ ॥

ಪ.ಪು.ಸಂ. ೨

ತೀರ್ಥಪ್ರಸಾದವನ್ನು ಶಾಸ್ತುಮರ್ೖ—ಮಹಾ ಮಂಗಳಾರತಿ ಕಾಲದಲ್ಲಿ ಕ್ರಮ ವಾಗಿ ವರ್ಣಾಶ್ರಮ ಪದ್ಧತಿಯನ್ನನುಸರಿಸಿ ಮೊದಲು ಆಳ್ವಾರಾಚಾರ್ಯರ ಪ್ರತಿನಿಧಿ ಗಳಾದ ಮಠಾಧಿಪತಿಗಳು, ಸ್ಥಾನಾಚಾರ್ಯರು (ಸ್ಥಳಾಚಾರ್ಯರು), ಅನಂತರ ಅರ್ಚಕರು, ಅಧ್ಯಾಪಕರು, ತದನಂತರ ಶ್ರೀವೈಷ್ಣವ ಬ್ರಾಹ್ಮಣರು. ಅನಂತರ ಅನ್ಯಮತದ ಬ್ರಾಹ್ಮಣರು. ಅನಂತರ ರಾಜರು, (ಕ್ಷತ್ರಿಯರು), ವೈಶ್ಯರು, ಶೂದ್ರರಿಗೂ ಕ್ರಮ ವಾಗಿ ನಡೆಯುತ್ತದೆ. ಇದರಲ್ಲಿ ಆಳ್ವಾರಾಚಾರ್ಯರ ಪ್ರತಿನಿಧಿಗಳಾಗಿ ಮಠಾಧಿಪತಿಗಳು, ಅಥವಾ ಸ್ಥಾನಾಧಿಪತಿಗಳು ಆದಮೇಲೆ ಇತರ ಶ್ರೀವೈಷ್ಣವ ಗೋಷ್ಠಿಗೆ ಮೊದಲು ಅರ್ಚಕರಿಗೆ ಎಂದು ಹೇಳಿರುವುದು. ಇಲ್ಲಿ ಅರ್ಚಕರಿಗೆ ಗೋಷ್ಠಿಯಲ್ಲಿ ಪ್ರಥಮ ಮರ್ಯಾದೆ ಸಿದ್ಧವಾಯಿತು. ಆಳ್ವಾರಾಚಾರ್ಯರಿಗೆ ಅಗ್ರತೀರ್ಥ ಮರ್ಯಾದೆ ಇಲ್ಲದೆ, ಇತರರಿಗೆ ಮರ್ಯಾದೆಯಾದಲ್ಲಿ (ಎಂದು ಹೇಳಿದಲ್ಲಿ) ಆಗ ಆಳ್ವಾರಾಚಾರ್ಯರ ಪ್ರತಿಷ್ಠೆಯೇ ಬೇಕಾಗಿರುವುದಿಲ್ಲ. ಪ್ರತಿಷ್ಠಿತರಾದ ಆಳ್ವಾರಾಚಾರ್ಯರುಗಳ ಪರವಾಗಿ ಅವರ ಪ್ರತಿನಿಧಿ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಗಳಾದ ಮಠಾಧಿಪತಿಗಳು ಅಥವಾ ಸ್ಥಾನಾಚಾರ್ಯರೆಂಬುವರು ಅಗ್ರತೀರ್ಥವನ್ನು ಪರಿಗ್ರಹಿಸುವವರು. ಅದು ಆಳ್ವಾರಾಚಾರ್ಯರುಗಳಿಗೆ ಅಗ್ರಮರ್ಯಾದೆ ಆದಂತಾಗುವುದು. ಅನಂತರ ಅರ್ಚಕರಿಗೆ ಅರ್ಥಾತ್ ಶ್ರೀವೈಷ್ಣವ ಗೋಷ್ಠಿಗೆ ಮೊದಲು ಅರ್ಚಕರಿಗೆ ತೀರ್ಥ ಮರ್ಯಾದೆಯು. ಗೋಷ್ಠಿಗೆ ಮೊದಲು ಎನ್ನುವುದೇ ಅರ್ಚಕರಿಗೆ ಮೊದಲು ಮರ್ಯಾದೆ ಎಂದು ಸಂಹಿತಾ ವಾಕ್ಯಗಳು ಹೇಳುತ್ತವೆ.

ಅದಕ್ಕಾಗಿಯೇ,

ಅರ್ಚಕಃ ಸನ್ನಿಧೌ ತಿಷ್ಠೇ ಪರಿಚಾರಕೋಽರ್ಥಮಂಡಪೇ ।
ಅನ್ಯೇಷಾಂ ಮಂಡಪೇಚೈವ ಅನುಲೋಮಸ್ತು ಪುರತಃ (ದೂರತಃ) ।
ಪರಿಚಾರಕ ಮುಖ್ಯಾಯಾ ಸರ್ವೇಷಾಂ ಕ್ರಮತೋ ದದೇತ್ ।
ಸೇವಕಾನಾಂ ಚ ತತೋ ದದ್ಯಾತ್ ಸರ್ವೇಷಾಂ ಚ ಯಥಾಕ್ರಮಂ ॥

ಪ್ರಧಾನ ಅರ್ಚಕರು ತೀರ್ಥವನ್ನು ಕೊಡುವ ಸಮಯದಲ್ಲಿ ಇತರ ಸನ್ನಿಧಿ ಅರ್ಚಕರು ಪ್ರಧಾನ ಸನ್ನಿಧಿಗೆ ಬಂದು ಅಲ್ಲಿ ನಿಲ್ಲಬೇಕು. ಅವರ ಪಕ್ಕದಲ್ಲಿ ಸನ್ನಿಧಿ ಪರಿಚಾರಕರು ನಿಲ್ಲಬೇಕು. ಆಗ ಪ್ರಧಾನ ಅರ್ಚಕರು ಯತಿಶ್ರೇಷ್ಠರು ಉತ್ತಮ ಪ್ರೋಕ್ತ ಮೇಲೆ ತಿಳಿಸಿದಂತೆ ಅಗ್ರತೀರ್ಥ ಮರ್ಯಾದೆಯನ್ನು ಮಾಡಿದಮೇಲೆ ಸನ್ನಿಧಿ ದ್ವಾರ ದಲ್ಲಿ ನಿಂತಿರುವ ಅರ್ಚಕ ಪರಿಚಾರಕರಿಗೆ ತೀರ್ಥ ಕೊಟ್ಟಮೇಲೆ ಗೋಷ್ಠಿಗೆ ಕೊಡಲಾಗು ವುದು. ಇದೇ ವಿಚಾರವನ್ನು ಅರ್ಚಕರಿಗೆ ಮರ್ಯಾದೆ ಎಂದು ಸಮನ್ವಯ ಮಾಡಿರುವ ಸ್ಥಳದಲ್ಲಿ ನೋಡಬಹುದು.

ಅರ್ಚಕರಿಗೆ ಪ್ರಥಮ ಮರ್ಯಾದೆ :—

ಅರ್ಚಕರು ಶ್ರೇಷ್ಠತೆ ವಿಚಾರವಾಗಿ ಮಾತನಾಡಿ ಅವರಿಗೆ ದೇವಸ್ಥಾನದ ಮರ್ಯಾದೆ ಆದನಂತರ ಹೊರಗೆ ಯಾವ ಸದಸ್ಸು–ವಿವಾಹ–ಇತ್ಯಾದಿಗಳ ಮರ್ಯಾದಾ ಸಂಭಾವನೆ ತೆಗೆದಾಗ ಭಗವಂತನಿಂದ ಆರಂಭಿಸಿ ನಮ್ಮ ಸ್ವಾಚಾರ್ಯ ವರೆಗೆ ಗುರುಗಳು–ಹಿರಿಯರನ್ನೆಲ್ಲಾ ಮರ್ಯಾದಿಸುವ ಪದ್ಧತಿ ಇರುತ್ತೆ ಈ ಮರ್ಯಾ ದೆಯು ಶಾಸ್ತ್ರ ಸಂಪ್ರದಾಯ ಪಂಕ್ತಿಯನ್ನನುಸರಿಸಿ ಬರುತ್ತಿರುವುದು.

ಲಕ್ಷ್ಮೀನಾಥ ಸಮಾರಂಭಾಂ ನಾಥಯಾಮುನಮಧ್ಯಮಾಂ ।
ಅಸ್ಮದಾಚಾರ್ಯಪರ್ಯಂತಾಂ ವನ್ದೇ ಗುರುಪರಂಪರಾಂ ।
ಯಸ್ಮಾತ್ ಸದಾರ್ಚಕೋ ಪೂಜ್ಯೋ ಹರಿಭಾವೇನ ಕೇವಲಂ ।
ತಸ್ಮಾತ್ಸಮೇ ನ ಚಾರ್ಹಸ್ಯಾತ್ಸದಸಿ ಪ್ರಥಮಾರ್ಚನೇ ॥ ೫ ॥

ಕು. ಪು. ಸ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಅಧ್ಯಾಪಕಾ :—ಶ್ರೇಷ್ಠತೆ–ಸನ್ಮಾನಾದಿ–

ವೇದ ಪಾರಾಯಣಾರ್ಥೇ ಚ ಶಾಸ್ತ್ರ ಸ್ತೋತ್ರ ಪ್ರಪಾಠನೇ ।
ದ್ರಾವಿಡಾಮ್ನಾಯ ಪಠನೇ ಪ್ರತ್ಯಹಂ ದೇವ ಸನ್ನಿಧೌ
ಅಧ್ಯಾಪಕಾನ್ನೀಚ ವರಯೇತ್ ಪೂರ್ವೋಕ್ತೇನೈವ ವರ್ತ್ಮನಾ ।
ಸಹಸ್ರಮಯುತಂ ವಾಪಿ ಶತಮಷ್ಟೋತ್ತರಂತುವಾ । ॥ ೫೫ ॥
ಚತುಸ್ಸಪ್ತತಿ ಸಂಖ್ಯಾವಾ ದ್ವಾತ್ರಿಂಶದ್ವಾ ಯಥಾವಿಧಿ ।
ದ್ವಾದಶಾಷ್ಟ್ವಾ ಚ ತದನು ಚತುರೋಽಸ್ಯಧಮಾಧಮಂ ।
ಅಧ್ಯಾಪಕಾನ್ ತು ವರಯೇತ್ ಸ್ಥಾನಾಧಿಪತಿನಾ ಸಹ ।

ಅಧ್ಯಯನ ಪ್ರಶಸ್ತಿ :—

ದೇವಾಲಯೇಷು ಸರ್ವತ್ರ ಮುಖ್ಯಮಧ್ಯಯನಂ ಸ್ಮೃತಂ ।
ಶರೀರೇ ಪೋಷಣಂ ಯದ್ವನ್ಮುಖ್ಯ ಮಿತ್ಯಭಿಧೀಯತೇ ।
ತಥೈವಾ ಧ್ಯಾಪಕೈರ್ನಿತ್ಯಮಾಲಯೇ ಸ್ತೋತ್ರ ಮುಚ್ಯತೇ । (೫೮)

ಅಧ್ಯಾಪಕಾ ಸಂಖ್ಯಾಯಾ ಉತ್ತಮಾಧಮ ನಿರೂಪಣಂ :—

ಅಧ್ಯಾಪಕಾನಾಂ ಸಂಖ್ಯಾಸ್ಯಾದಯುತಂ ದಿವ್ಯಮುತ್ತಮಂ ।
ಸಹಸ್ರನಾಮಗಣನಾ ತತ್ಸಂಖ್ಯಾ ಚೋತ್ತಮೋತ್ತಮಂ ।
ಅಷ್ಟೋತ್ತರ ಶತಂ ಯಸ್ತು ತತ್ಸ್ಯಾದುತ್ತಮ ಮಧ್ಯಮಂ ।
ಚತುಸ್ಸಪ್ತತಿ ಸಂಖ್ಯಾಕ ಮುತ್ತಮಾಧಮ ಮೀರಿತಂ । ॥ ೬೦ ॥
ದ್ವಾತ್ರಿಂಶದುಪಚಾರಾಣಾಂ ಸಂಖ್ಯಾಸ್ಯಾನ್ಮಧ್ಯಮೋತ್ತಮಾ
ಚತುರ್ವಿಂಶತಿ ನಾಮಾನಾಂ ಸಂಖ್ಯಾಮಧ್ಯಮಮಧ್ಯಮಾ ।
ಉಪಚಾರೈಷ್ಷೋಡಶಭಿಃ ಮಧ್ಯಮಾಧಮಮುಚ್ಯತೇ ।
ಭೂತಾದಿ ಮುನಿಸಂಖ್ಯಾಕಂ ಅಧಮೋತ್ತಮ ಮೀರಿತಂ । ॥ ೬೧ ॥
ಅಷ್ಟದಿಕ್ಸಂಖ್ಯಯಾ ಯತ್ತು ತತ್ಸ್ಯಾ ದಧಮಮಧ್ಯಮಂ
ವ್ಯೂಹಸಂಖ್ಯಾತು ಸಾಪ್ರೋಕ್ತಾ ಅಧಮಾಧಮ ನಾಮಕಂ ।
ಇತ್ಯೇತೇ ಧ್ಯಾಪಕಾಃ ಪ್ರೋಕ್ತಾ ವೈಷ್ಣವಾರ್ಚಾವಿಧಾನಕೇ ।
ಏತೈಸ್ತು ಸರ್ವದಾಗೇಹೇ ದೇವ ದೇವಸ್ಯ ಶಾರ್ಙ್ಗಿಣಃ ।
ಅಧ್ಯೇತವ್ಯಾಸ್ಸದಾವೇದ ಶಾಸ್ತ್ರ ಸ್ತೋತ್ರಾಧಿಕಾಶ್ಶುಭಾಃ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಕ್ಷೇತ್ರಾಧಿಕ್ಯತಯಾ ಅಧ್ಯಾಪಕ ಸಂಖ್ಯಾನಿರ್ಣಯಂ :—

ದಿವ್ಯ ಕ್ಷೇತ್ರೇಷು ಸರ್ವತ್ರ ಉತ್ತಮೋತ್ತಮ ಸಂಖ್ಯಯಾ । ॥ ೬೫ ॥
ಅಧ್ಯಾಪಕಗಣಂ ಸ್ಥಾಪ್ಯಂ ಸರ್ವಲೋಕ ಸುಖಾವಹಂ ।
ಅಶಕ್ತಶ್ಚೇದ್ಯದಾಕರ್ತಾ ಅಧಮೋತ್ತಮ ಸಂಖ್ಯಕಾನ್ ।
ಅಧ್ಯಾಪಕಾಂತು ವರಯೇತ್ತಸ್ಮಾದಲ್ಪಂ ನಕಾರಯೇತ್ ।

ಸ.ಪು.ಸಂ. 2

ಅಧ್ಯಾಪಕರು :—

ಈ ರೀತಿ ಸ್ಥಾನಾಚಾರ್ಯರು ಅವರ ಮರ್ಯಾದೆ ತಿಳಿಸಿದ ಮೇಲೆ ವೇದ ಪ್ರಬಂಧ (ದ್ರಾವಿಡವೇಧ) ಸ್ತೋತ್ರ ಮುಂತಾದವುಗಳನ್ನು ಭಗವತ್ಸನ್ನಿಧಿಯಲ್ಲಿ ಪಾರಾಯಣ ಮಾಡಲು ಯಥಾಶಕ್ತಿ ಅಧ್ಯಾಪಕರನ್ನು ನಿಯಮಿಸಬೇಕು. ಆ ಅಧ್ಯಾಪಕರ ಸಂಖ್ಯೆಯು ಸ್ಥಾನಾಚಾರ್ಯರಂತೆ ಈ ರೀತಿಯಲ್ಲಿರುವುದು—

ಅಧ್ಯಾಪಕರ ಸಂಖ್ಯೆ :	ನಾಮಸಂಜ್ಞಾ :
10,000 ಅಧ್ಯಾಪಕರು	ದಿವ್ಯ
1,000	ಉತ್ತಮೋತ್ತಮ
108	ಉತ್ತಮ ಮಧ್ಯಮ
74	ಉತ್ತಮ ಅಧಮ
32	ಮಧ್ಯಮೋತ್ತಮರು
24	ಮಧ್ಯಮಧ್ಯಮ
16	ಮಧ್ಯಮ ಅಧಮ
12	ಅಧಮ ಉತ್ತಮ
8	ಅಧಮ ಮಧ್ಯಮ
4	ಅಧಮ ಕನಿಷ್ಠ

ಈ ರೀತಿ ದಿವ್ಯದೇಶ ಮತ್ತು ವೈಷ್ಣವಾಲಯಗಳಲ್ಲಿ ಅಲ್ಲಿಯ ಸಂದರ್ಭಾನುಸಾರವಾಗಿ ಅಧ್ಯಾಪಕರನ್ನು ಏರ್ಪಡಿಸಬೇಕು.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಮಂತ್ರಪುಷ್ಪ ಕಾಲ :

ಋಗ್ವೇದಂ ಪೂರ್ವ ದಿಗ್ಭಾಗೇ ಯಜುರ್ವೇದಂ ಚ ದಕ್ಷಿಣೇ ॥ ೧೭ ॥
ಪಶ್ಚಿಮೇ ಸಾಮವೇದಿಂ ಚ ಅಥರ್ವಣಂ ಚೋತ್ತರ ತಥಾ ।
ಇತಿಹಾಸಂ ಚಾಗ್ನಿ ಕೋಣೇ ನೈಋತ್ಯಾಂಸ್ತೋತ್ರಮುಚ್ಯತೇ ।
ಧರ್ಮಶಾಸ್ತ್ರಂತು ವಾಯವ್ಯೇ ಈಶಾನ್ಯಾ ಮಾಗಮಂ ಸ್ಮೃತಂ ।
ದ್ರಾವಿಡಾಮ್ನಾಯ ಮೇಕೈಕಂ ಚ ತುರ್ದಿಷು ಚ ಪಾಠಯೇತ್ ।
ದ್ವಾದಶಾಕ್ಷರ ಸಂಖ್ಯಾಕಾಶ್ಚೈವ ಮಧ್ಯಾಪಕಾಸ್ಸದಾ ।
ದಿವಾರಾತ್ರಂ ಚ ದೇವೇಶಂ ಪ್ರಾರ್ಥಯೇಲ್ಲೋಕರಕ್ಷಣೇ । ॥ ೨೦ ॥
ರಾಜಾರಾಷ್ಟ್ರಾಭಿವೃದ್ಧ್ಯರ್ಥಂ ನಿರ್ಮಲೇನ್ಯೈವಚೇತ ಸಾ ।
ಯಾತ್ರಾಕಾಲೇಪಿಚೈತೇಷಾಂ ಸ್ತವಂ ಹರಿಸಮಿಪತಃ ।
ವಸ್ತವ್ಯಂ ನಾನ್ಯಥಾ ಯಾತ್ರಾ ಪುನಾತಿ ಗ್ರಾಮವಾಸಿನಃ ।
ತಸ್ಮಾತ್ತಾನ್ ಕೇವಲಂ ಭೂತ ಸರೋಯೋಗೀಶ್ವರಾಧಿಕಾನ್ ।
ಮರ್ತ್ಯಲೋಕಸ್ತು ಸಂಭಾವ್ಯ ತರಿಷ್ಯತಿ ವಿನಿಶ್ಚಯಂ ।
ದೇವಾಲಯೇಪಿ ಚೈತೇಷಾಂ ಸತ್ಕಾರಂ ಪ್ರಥಮಂಸ್ಮೃತಂ ॥ ೭೩ ॥
ಹರಿಪ್ರಸಾದ ತೀರ್ಥಾದ್ಯೈ ರಾದೌತಾನ್ ಪರಿತೃಪ್ತ್ಯಯೇತ್ ।

ಈ ರೀತಿಯಲ್ಲಿ 12 ಜನ ಅಧ್ಯಾಪಕರು. ಅವರಲ್ಲಿ ಪೂರ್ವ ಭಾಗದಲ್ಲಿ ಋಗ್ವೇದವನ್ನೂ, ದಕ್ಷಿಣದಲ್ಲಿ ಯಜುರ್ವೇದವನ್ನೂ, ಪಶ್ಚಿಮದಲ್ಲಿ ಸಾಮವೇದವನ್ನೂ, ಉತ್ತರ ಭಾಗದಲ್ಲಿ ಅಥರ್ವಣ ವೇದವನ್ನೂ, ಅದೇ ರೀತಿಯಲ್ಲಿ ಆಗ್ನೇಯ ಭಾಗದಲ್ಲಿ ಪುರಾಣ ಇತಿಹಾಸವನ್ನೂ, ನೈಋತ್ಯ ಮೂಲೆಯಲ್ಲಿ ಸ್ತೋತ್ರಪಾಠಗಳನ್ನೂ, ವಾಯುವ್ಯ ಭಾಗದಲ್ಲಿ ಧರ್ಮಶಾಸ್ತ್ರವನ್ನೂ, ಈಶಾನ್ಯ ದಿಕ್ಕಿನಲ್ಲಿ ಪಾಂಚರಾತ್ರಾದ್ಯಾಗವನ್ನೂ ಪಠಿಸಿ,ಅನಂತರ ಮಿಕ್ಕ ನಾಲ್ವರು ನಾಲ್ಕು ದಿಕ್ಕುಗಳಿಂದಲೂ ದ್ರಾವಿಡ ವೇದವನ್ನು ನಾಲ್ಕು ಸಹಸ್ರವನ್ನೂ ಪಠಿಸಬೇಕು. ಈ ರೀತಿಯಲ್ಲಿ ಶ್ರೀಮನ್ನಾರಾಯಣನ ದ್ವಾದಶಾಕ್ಷರಿ ಮಂತ್ರಸಂಖ್ಯೆಗೆ ಸರಿಯಾದ ಅಧ್ಯಾಪಕರು ಮಹಾಕ್ಷೇತ್ರಗಳಲ್ಲಿ ಲೋಕ ಕ್ಷೇಮಾರ್ಥವಾಗಿ ಹಗಲು ರಾತ್ರಿ ಶ್ರೀಹರಿಯನ್ನು ಪ್ರಾರ್ಥಿಸುತ್ತಿರಬೇಕು. ಗ್ರಾಮೋತ್ಸವಾದಿ ಸಮಯಗಳಲ್ಲಿ ಅರ್ಚಾಮೂರ್ತಿ ಭಗವಂತನಿಗೆ ಸಮೀಪದಲ್ಲಿ ಈ ಅಧ್ಯಾಪಕರು ಸ್ತೋತ್ರಪದ್ಯವನ್ನು ತಪ್ಪದೇ ಹೇಳಬೇಕು. ಇಲ್ಲವಾದಲ್ಲಿ ಆ ಉತ್ಸವವು ಗ್ರಾಮವಾಸಿಗಳನ್ನು ಪರಿಶುದ್ಧಿ ಮಾಡಲಾರದು. ಈ ರೀತಿ ಮಹೋಪಕಾರರಾದ್ದರಿಂದಲೇ ಆ ಅಧ್ಯಾಪಕರನ್ನು ಭೂತಾದಿ ಮುನಿಗಳಂತೆ (ಎಂದರೆ ಶ್ರೀವೈಷ್ಣವ ಮತೋದ್ಧಾರಕರಾದ ದ್ರವಿಡವೇದಗಳ ನಿರ್ಮಾತರಾದ ಆಳ್ವಾರರುಗಳಂತೆ) ಲೋಕದ ಜನರು ಭಾವಿಸಿ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಪ್ರಬಂಧಗಳ ಅಧ್ಯಾಪಕರನ್ನು ಸನ್ಮಾನಿಸಿ ಆದರಿಸಬೇಕು. ದೇವಾಲಯದಲ್ಲಿ ಇ
ಇವರಿಗೆ ಮೊದಲು ಮರ್ಯಾದೆ ಎಂದು ಏರ್ಪಟ್ಟಿರುವುದು. ಭಗವತ್ತೀರ್ಥಪ್ರಸಾ
ಗಳನ್ನು ಮುಂದಾಗಿ (ಇತರರಿಗಿಂತ ಮುಂಚಿತವಾಗಿಯೇ) ಕೊಟ್ಟು ಸಂತೃ
ಮಾಡಬೇಕು.

ಏತೇಷಾಂ ಜೀವನಾರ್ಥಾಯ ಯಜಮಾನೋಯಥಾವಸು ।
ಭೂಮಿಂ ವಾಭೃತಕಂ ವಾಪಿ ಶಾಶ್ವತಂ ಪರಿಕಲ್ಪಯೇತ್ ।
ಭೂವ ಸತ್ಯುತ್ತಮಂ ಪ್ರೋಕ್ತಂ ಭೃತಕಂ ತ್ವಧಮಂ ಭವೇತ್ ॥ ೭೫
ತಸ್ಮಾತ್ಸರ್ವ ಪ್ರಯತ್ನೇನ ಭೂಮಿಮೇವ ಪ್ರಥಾಪಯೇತ್ ಪ.ಪು.ಸಂ.

ಭಗವತ್ಕೈಂಕರ್ಯವನ್ನಾಚರಿಸಿ ಬರುವ ಇವರಿಗೆ ಜೀವಿತ ಕಾರ್ಯಕ್ಕೆ ಶಾಶ್ವ
ವಾದ ಭೂವಸತಿಯನ್ನಾಗಲೀ, ಭೃತಕ-ಮಾಸಾಶನ (ಸಂಬಳ) ವನ್ನಾಗಲೀ, ನಿ
ಯಿಸಬೇಕು. (ಏರ್ಪಡಿಸಬೇಕು.) ಭೂವಸತಿ ಉತ್ತಮವು. ವೇತನ (ಸಂಬ
ಮಧ್ಯಮವಾಗುವುದರಿಂದ ಭೂವಸತಿ ಕೊಡುವುದೇ ಉತ್ತಮವೆಂದು ತಿಳಿಯಬೇಕು

ಅಧ್ಯಾಪಕರ ಮರ್ಯಾದೆ :—

ಸ್ಥಾನಾದಿಪಂ ಸಮಾರಭ್ಯ ಅರ್ಚಕಾಧ್ಯಾಪಕಾನ್ ತಥಾ
ತದನು ವೈಷ್ಣವಾದೀನಾಂ ಚ ತಥಾನ್ಯಮತ ಬ್ರಾಹ್ಮಣಾನ್ ಪ.ಪು.ಸ

ಮೊದಲು ಸ್ಥಾನಾಧಿಪತಿಗಳು, ಅನಂತರ ಅರ್ಚಕರು, ಅನಂತರ ಅಧ್ಯಾಪಕ
ಅನಂತರ ಗೋಷ್ಠೀ ಶ್ರೀವೈಷ್ಣವರು ಇತ್ಯಾದಿ. ಇಲ್ಲಿ ಸ್ಥಾನಾಧಿಪತಿಗಳು, ಅನಂ
ಅರ್ಚಕರು ಆದಮೇಲೆ ಅಧ್ಯಾಪಕರಿಗೆ ತೀರ್ಥಪ್ರಸಾದ ಕೊಟ್ಟರೆ ಅದು ಹ
ಮೊದಲು ಮರ್ಯಾದೆಯಾಗುತ್ತದೆ ? ಮುಖ್ಯ ಗೋಷ್ಠೀ ಶ್ರೀವೈಷ್ಣವರನ್ನು ಇ
ಕೊಂಡು ಅವರಿಗೆ ಮುಂದಾಗಿ ಎಂದು ಅರ್ಥಮಾಡಿಕೊಳ್ಳಬೇಕು. ಆದ್ದರಿಂದ
ಗೋಷ್ಠೀ ಶ್ರೀವೈಷ್ಣವರಿಗೆ ಮುಂದಾಗಿ—ಮೊದಲು—ಅಧ್ಯಾಪಕರಿಗೆ ತೀರ್ಥಪ್ರಸ
ಕೊಡಲಾಗುವುದು. ಇದಕ್ಕೆ ಎಂದರೆ ಅಧ್ಯಾಪಕರಿಗೆ ಕೊಡುವುದಕ್ಕೆ ಇಯ
ಶ್ರೀವೈಷ್ಣವರೆಂದು ಇಯಲ್ ಗೋಷ್ಠೀ ಎಂದೂ ಕರೆಯುವರು.

ಈ ಪ್ರತ್ಯೇಕತೆಯನ್ನು ತೋರಿಸುವುದಕ್ಕಾಗಿಯೇ ಅವರಿಗೆ—

ಶ್ರೀ ವೈಷ್ಣವ ದ್ವಿಜಾನಾಂ ಚ ರಾಜ್ಞಾಂಚಾಪಿ ತಥೈವ ಚ ।
ಮಠಾಧ್ಯಕ್ಷಾಧಿಕಾನಾಂ ಚ ಯತೀನಾಂ ಚ ತಪಸ್ವಿನಾಂ ।
ತತ್ತದ್ಯೋಗ್ಯಾಧಿಕಂ ವೀಕ್ಷ್ಯ ತ್ರಿವಾರಂಹರಿತೀರ್ಥಕಂ ।
ದ್ವಿವಾರಂ ತು ಪ್ರಸಾದಂ ಚ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಆದ್ದರಿಂದಲೇ, ಅಧ್ಯಾಪಕರು, ರಾಜ, ಅಧಿಕಾರಿಗಳು, ಮಠಾಧ್ಯಕ್ಷರು, ಯತಿಗಳು, ತಪಸ್ವಿಗಳು, ಮುಂತಾಗಿ ಅವರವರ ಯೋಗ್ಯತೆಯನ್ನನುಸರಿಸಿ ಮೂರಾವರ್ತಿ ಭಗವತ್ತೀರ್ಥ ಎರಡಾವರ್ತಿ ಪ್ರಸಾದ ಮರ್ಯಾದೆ ಮಾಡಬೇಕು (ಮಾಡುವರು.)

ಅಧ್ಯಾಪಕರ ವಿಷಯವನ್ನು ತಿಳಿಸುತ್ತಾರೆ. ವೇದಗಳು, ಶಾಸ್ತ್ರಗಳು, ಸ್ತೋತ್ರಗಳು, ದ್ರಾವಿಡವೇದಪ್ರಬಂಧ, ಇವುಗಳನ್ನು ಪ್ರತಿನಿತ್ಯವೂ ಭಗವತ್ಸನ್ನಿಧಿಯಲ್ಲಿ ಪಾರಾಯಣ ಮಾಡಲು ಯಥಾಶಕ್ತಿ ಅಧ್ಯಾಪಕರನ್ನು ನಿರ್ಣಯಿಸಬೇಕು.

* * *

ದೇವಾಲಯಗಳೆಲ್ಲದರಲ್ಲೂ ಮೇಲೆ ತಿಳಿಸಿದ ವೇದಶಾಸ್ತ್ರಗಳ ಅಧ್ಯಯನ ಮಾಡುವುದು ಅತಿಮುಖ್ಯ ಎಂದು ತಿಳಿಯುವುದು ಹೇಗೆಂದರೆ, ಶರೀರವನ್ನು ಪೋಷಿಸುವುದು ಹೇಗೆ ಮುಖ್ಯವೋ ಹಾಗೆಯೇ ದೇವಾಲಯದಲ್ಲಿ ಅಧ್ಯಯನವೂ ಅಷ್ಟು ಮುಖ್ಯವೆಂದು ಶಾಸ್ತ್ರಗಳು ಘೋಷಿಸುತ್ತವೆ. ಆದುದರಿಂದ ಅಧ್ಯಯನ ಮಾಡಲು ತಕ್ಕಷ್ಟು ಮಂದಿ ಅಧ್ಯಾಪಕರನ್ನು ನಿರ್ಣಯಿಸಬೇಕು. ಈ ರೀತಿ ಅಧ್ಯಾಪಕರಿಂದ ಯಾವಾಗಲೂ ವೇದ ಶಾಸ್ತ್ರಾದಿಗಳ ಅಧ್ಯಯನ ಮಾಡಿಸಬೇಕು.

* * *

ಈ ರೀತಿಯಲ್ಲಿ ಶ್ರೀಮನ್ನಾರಾಯಣನ ಧ್ವಾದಶಾಕ್ಷರೀ ಮಂತ್ರಾರ್ಣವ ಸಂಖ್ಯೆಯನ್ನನುಸರಿಸಿ (12 ಜನ ಅಧ್ಯಾಪಕರು) ಅಧ್ಯಾಪಕರು ಮಹಾಕ್ಷೇತ್ರದಲ್ಲಿ ಲೋಕಕ್ಷೇಮಾರ್ಥವಾಗಿ ಹಗಲಿರುಳು ಶ್ರೀಹರಿಯನ್ನು ಪ್ರಾರ್ಥಿಸುತ್ತಿರಬೇಕು. ಅರ್ಥಾತ್ ಸ್ತೋತ್ರಮಾಡುತ್ತಿರಬೇಕು. ಗ್ರಾಮೋತ್ಸವದ ಸಮಯಗಳಲ್ಲಿ ಅರ್ಚಾಮೂರ್ತಿಗೆ ಸಮೀಪದಲ್ಲಿ ಮುಂದೆ (ಅರ್ಚಾಮೂರ್ತಿಗೆ ಹಿಂಭಾಗದಲ್ಲಿ ವೇದ) ಈ ಅಧ್ಯಾಪಕರ ಸೋತ್ರಪಠಣವು ತಪ್ಪದೆ ಇದ್ದೇ ತೀರಬೇಕು. ಹಾಗಿಲ್ಲವಾದಲ್ಲಿ ಗ್ರಾಮ ವಾಸಸ್ಥರು ಶುದ್ಧರಾಗುವುದಿಲ್ಲ, ಅರ್ಥಾತ್ ಪ್ರಜ್ಞಾವಂತರಾಗುವುದಿಲ್ಲ, ಒಳ್ಳೆಯ ಹೃದಯವಂತರಾಗುವುದಿಲ್ಲ.

ಈ ರೀತಿ ಮಹೋಪಕಾರಸ್ಥರಾದ್ದರಿಂದ ಈ ಅಧ್ಯಾಪಕರನ್ನು ಕೇವಲ ಭೂತಾದಿ ಮುನಿಗಳಂತೆ (ಎಂದರೆ ಶ್ರೀವೈಷ್ಣವ ಮತೋದ್ಧಾರಕರಾಗಿ ದ್ರವಿಡ ವೇದಗಳಲ್ಲಿ ನಿರ್ಮಿಸಿದ ಆಳ್ವಾರರುಗಳಂತೆ) ಲೋಕದವರು ಎಂದು ಭಾವಿಸಿ ಅವರನ್ನು ಸನ್ಮಾನಿಸಿ ನಿಜವಾಗಿ ಆದರಿಸುವರು. ದೇವಾಲಯದ ಕೈಂಕರ್ಯದಲ್ಲಿರುವ ಇವರಿಗೆ ಎಲ್ಲರಿಗಿಂತ ಮುಂದಾಗಿ ಸನ್ಮಾನಮಾಡುವುದು ಮೇಲಿನ ಕಾರಣಗಳಿಂದ ನ್ಯಾಯವಾಗಿರುತ್ತದೆ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಭಗವತ್ತೀರ್ಥಪ್ರಸಾದಗಳನ್ನು ಇತರರಿಗಿಂತ ಮೊದಲು ಇವರಿಗೆ (ಅಧ್ಯಾಪಕರಿಗೆ) ಕೊಟ್ಟು ಮರ್ಯಾದಿಸಬೇಕು.

ಲೋಕಕ್ಷೇಮಕ್ಕಾಗಿ ಹಗಲೂ ರಾತ್ರಿ ಭಗವಂತನ ಸ್ತೋತ್ರ, ವೇದ, ಇತಿಹಾಸ ಪುರಾಣ, ದ್ರಾವಿಡ ಪ್ರಬಂಧಗಳನ್ನು ಪಠನಮಾಡುವ ಇವರಿಗೆ ಸ್ಥಾನಾಚಾರ್ಯ ಮತ್ತು ಅರ್ಚಕರಿಗೆ ಮಾಡುವಂತೆ ಮರ್ಯಾದಿಸುವುದು ನ್ಯಾಯಸಮ್ಮತವಾಗಿರುತ್ತೆ.

ದೇವಾಲಯೇಪಿ ಚೈತೇ ಷಾಂ ಸತ್ಕಾರಂ ಪ್ರಥಮಂಸ್ಮೃತಂ । ॥ ೭೩ ॥
ಹರಿಪ್ರಸಾದ ತೀರ್ಥಾದ್ಯೈರಾದೌತಾನ್ ಪರಿತೃಪ್ತ್ಯೈಯೇತ್ ।

ಎಂದು ಮಹಾಮಂಗಳಾರತಿ ಕಾಲದಲ್ಲೂ ಮತ್ತು ಪ್ರಸಾದ ವಿನಿಯೋಗ ಕಾಲದಲ್ಲಿ ಮೊದಲು ತೀರ್ಥಮರ್ಯಾದೆ, ಮೊದಲು ಸತ್ಕಾರ ಎಂದು ಹೇಳುವರು. ಇದು ಹೇಗೆ! ಹಿಂದೆ ಸ್ಥಾನಾಚಾರ್ಯರು, ಅರ್ಚಕರು ಇವರಿರುವಾಗ ಇವರಿಗೆ ಹೇಗೆ ಮೊದಲ ಮರ್ಯಾದೆ ? ಎಂಬ ಪ್ರಶ್ನೆಯುಂಟಾಗುತ್ತದೆ. ಅದಕ್ಕೆ ಆಗಮಶಾಸ್ತ್ರದಲ್ಲಿ ತೀರ್ಥ ಮತ್ತು ಪ್ರಸಾದ ವಿನಿಯೋಗ ಕ್ರಮವನ್ನು ನಿರ್ಣಯಿಸಿರುತ್ತಾರೆ. ಅರ್ಚ ಸ್ಥಾನಾಚಾರ್ಯರ ಸಮನ್ವಯ ನಿರ್ಣಯದಲ್ಲಿ ಈ ವಿಚಾರವನ್ನು ಪ್ರಸ್ತಾಪಿಸಿರುತ್ತೆ.

ಶ್ರೀ ವೈಷ್ಣವಮತಸ್ಥರು, ಬ್ರಾಹ್ಮಣರಿಗೂ, ದೇಶಾಧೀಶ್ವರರಾದ ರಾಜ, ಮಹಾ ರಾಜ, ಮಹಾರಾಜರು, ಮಠಾಧ್ಯಕ್ಷರು, ಯತಿಗಳು, ತಪಸ್ವಿಗಳು, ಯೋಗಿಗಳಿಗೂ ಅವರವರ ಯೋಗ್ಯತಾನುಸಾರವಾಗಿ ಭಗವತ್ತೀರ್ಥವನ್ನು ಮೂರಾವರ್ತಿ, ಪ್ರಸಾದ ವನ್ನು ಎರಡಾವರ್ತಿ ಕೊಡಬೇಕು.

'ಗೋಷ್ಠೀ ಶ್ರೀವೈಷ್ಣವರಿಗೆ ಆಗುವುದಕ್ಕೆ ಮೊದಲು ಅಧ್ಯಾಪಕರು ಎಂದು ಮೇ ತಿಳಿಸಿರುವುದು. ಇನ್ನು ಪ್ರಸಾದದ ವಿಚಾರದಲ್ಲಿ ಅಧ್ಯಾಪಕರಿಗೆ ಮೇಲ್ಪಟ್ಟು ಎಲ್ಲರಿಗ ಎರಡಾವರ್ತಿ ಪ್ರಸಾದವೆಂದು ಹೇಳಿರುವ ಕಾರಣ ಎಲ್ಲರಿಗೂ ಕೊಡುವಂತೆ ಒಂದ ವಿನಿಯೋಗವು. ಅಧ್ಯಾಪಕರ ಕೈಂಕರ್ಯಕ್ಕಾಗಿ ಇನ್ನೊಂದು ವಿನಿಯೋಗವು. ಆದು ರಿಂದ ಅಧ್ಯಾಪಕರಿಗೆ ಎರಡು ವಿನಿಯೋಗವು. ಗೋಷ್ಠೀ ವೈಷ್ಣವರಿಗೆ ಮೊದ ಇದಾಗುವುದರಿಂದ ಅಧ್ಯಾಪಕರಿಗೆ ಮರ್ಯಾದೆ ನಡೆಸಲ್ಪಡುವುದು ಶಾಸ್ತ್ರ ಸಂಪ್ರ ದಾಯಸಿದ್ಧವಾಗಿರುತ್ತದೆ.

ಪಾಚಕಾ :—

ತ್ರಿಕಾಲಂ ದೇವದೇವಸ್ಯ ಹವಿಃ ಪಚನಕರ್ಮಣಿ ।
ದ್ವಾದಶಂ ನವಕಂ ವಾಪಿ ಷಟ್ತ್ರಿಸಂಖ್ಯಾಕ ವೈಷ್ಣವಾನ್ । ॥ ೮೦

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಪಾಚಕಾನ್ ಲಕ್ಷಣೈರ್ಯುಕ್ತಾನ್ ಪೂರ್ವೋಕ್ತ ವಿಧಿನಾತುವೈ ।
ಪಾಕಶಾಸ್ತ್ರೇಷು ನಿಪುಣಾನ್ ನಿರ್ಣೀತವ್ಯಂ ಯಥಾವಸು ।
ಹವಿಃ ಪಚನಕಾಲೇತು ತೇ ಬಧ್ವಾ ನಾಶಿಕಾಪುಟಂ ।
ನೈವೇದ್ಯಾಂತಂ ಪ್ರವರ್ತೇತ ಭಯ ಭಕ್ತಿಯುತಾಸ್ಸತಂ । ॥ ೮೨ ॥
ಸಂಭಾಷಣಂ ಪರಿತ್ಯಾಜ್ಯಂ ಪೂರ್ವೋಕ್ತಸಮಯೇದ್ವಿಜಾಃ ।
ಯೇತೇಷಾಂ ಜೀವನಾರ್ಥಾಯ ಭೂಮಿಂ ವಾ ಭೃತಕಂತು ವಾ ।
ಕರ್ತಾಸ್ವಶಕ್ತಿಮಾಲೋಕ್ಯ ನಿರ್ಣೀತವ್ಯಂ ದ್ವಿಜೋತ್ತಮಾಃ ।

ಪ.ಪು.ಸಂ. ೨

ಶ್ರೀ ಭಗವಂತನಿಗೆ ತ್ರಿಕಾಲದಲ್ಲಿಯೂ ನಿವೇದನ ಹವಿಸ್ಸನ್ನು ಸಿದ್ಧಪಡಿಸಲು 12–9–6–3 ಮಂದಿ ಸಂಖ್ಯೆಯಲ್ಲಿ ಯಜಮಾನನ ಶಕ್ತಿಯನ್ನನುಸರಿಸಿ ಪಾಚಕರನ್ನು ಏರ್ಪಡಿಸಬೇಕು. ಇವರೆಲ್ಲರೂ ಪಂಚಸಂಸ್ಕಾರಯುತರಾಗಿ ಪಾಕಶಾಸ್ತ್ರ ನಿಪುಣರಾಗಿ ಲಕ್ಷಣವಂತರಾಗಿರಬೇಕು. ಇವರು ಹವಿಸ್ಸನ್ನು ಮಾಡಲು ಆರಂಭಿಸಿದಾಗಿನಿಂದ ಭಗವಂತನ ನಿವೇದನವಾಗುವವರೆಗೂ ಹವಿಸ್ಸಿನ ಪರಿಮಳವನ್ನಾಘ್ರಾಣಿಸದಿರಬೇಕು. ಅದಕ್ಕಾಗಿ ವಸ್ತ್ರದಿಂದ ಮೂಗನ್ನು ಮುಚ್ಚಿಕೊಂಡಿರಬೇಕು. ಆ ಸಮಯದಲ್ಲಿ ಇತರರಾರೊಂದಿಗೂ ಮಾತನಾಡಬಾರದು. ಇವರ ಜೀವನೋಪಾದಿಗಾಗಿ ಯಜಮಾನನ ಶಕ್ತಿಗನುಸಾರವಾಗಿ ಭೂಮಿರೂಪದಲ್ಲಾಗಲಿ ವೇತನ ರೂಪವಾಗಿಯಾಗಲಿ ಏರ್ಪಡಿಸಬೇಕು.

ಇತರ ಪರಿಚಾರಕ ನಿರ್ಣಯ :—

ಭೇರೀ ಮೃದಂಗ ಪಟಹ ವೀಣಾವೇಣ್ವಾದಿ ವಾದ್ಯಕಾನ್ । ॥ ೮೮ ॥
ಘರಿಟಾ ತಾಹಳ ತೂರ್ಯಾದಿ ಮರ್ಧಳಧ್ವನಿಕಾರಕಾನ್ ।
ನೃತ್ಯಗೀತಾದಿ ನಿಪುಣಾನ್ ವಂದಿಮಾಗಧ ಲೇಖಕಾನ್ ।
ವೇತ್ರಹಸ್ತಾನ್ ಭಟಾನ್ಶ್ಚೈವ ಗಜಾಶ್ವೋಷ್ಟ್ರಾದಿಪಾಲಕಾನ್ ।
ಗೋಪಲಕಾನ್ ದೇವದಾಸೀಃ ರಥ ಸಾರಥಿಕಾನ್ ತಥಾ । ೮೬ ॥
ಸ್ಥಾನಶುದ್ಧಿಕರಾನ್ ಚೈವ ಪಾತ್ರ ಶುದ್ಧಿಕರಾನ್ ತಥಾ ।
ಛತ್ರ ಚಾಮರ ವೇತ್ರಾದಿ ಧಾರಕಾನ್ ವಾಹಕಾನ್ ತತಃ ।
ದೇವಪೂಜಾಭಿವೃದ್ಧ್ಯರ್ಥಂ ಯಥಾಶಕ್ತಿ ನಿಯೋಜಯೇತ್ ।

ಪ.ಪು.ಸಂ. 2

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಈ ರೀತಿ ಅರ್ಚಕ, ಅಧ್ಯಾಪಕ ಪಾಚಕಾದಿಗಳನ್ನು ನಿರ್ಣಯಿಸಿದ ಮೇಲೆ, ಭೇರಿ, 'ಮೃದಂಗ, ಪಟಹ ಮುಂತಾದ ವಾದ್ಯಗಳು ವೀಣಾ, ವೇಣು ಮುಂತಾಗಿ ನುಡಿಸುವವರನ್ನೂ, ಶಂಖಕಾಹಳಾದಿ ಊದುವವರನ್ನೂ, ಘಂಟಾನಾದ ನೃತ್ಯ ಕಾರರು, ಗಾಯಕರು, ವಂದಿಮಾಗಧರು, ಲೇಖಕರು, ವೇತ್ರಹಸ್ತರು (ಬೆಳ್ಳಿ ದೊಣ್ಣೆ ಹಿಡಿಯುವವರು), ಭಟರು, ಆನೆ, ಕುದುರೆ, ಒಂಟೆ ಮುಂತಾದವುಗಳ ಪಾಲಕರು, ಗೋಪಾಲಕರು, ದೇವದಾಸೀ ಜನರು, ರಥಸಾರಥಿಗಳು, ದೇವಾಲಯ ಶುಭ್ರಪಡಿಸುವವರು, ರಂಗೋಲಿ ಇಡುವವರು, ಪಾತ್ರಶುದ್ಧಿ ಮಾಡುವವರು, ಛತ್ರ ಚಾಮರಾದಿ ಕೈಂಕರ್ಯಪರರು, ವಾಹಕರು—ಈ ಎಲ್ಲಾ ಕೈಂಕರ್ಯಪರರನ್ನೂ ಭಗವಂತನ ಕೈಂಕರ್ಯಕ್ಕಾಗಿ ಯಜಮಾನನ ಶಕ್ತಿಯನ್ನನುಸರಿಸಿ ಏರ್ಪಡಿಸಬೇಕು.

ಸೇವಕಾಸ್ಸರ್ವ ಯೇ ವೈತೇ ಪಂಚ ಸಂಸ್ಕಾರಸಂಯುಕ್ತಾಃ । ॥ ೮೮ ॥
ಅನ್ಯಾಸ್ತ್ವನರ್ಹಾ ಇತ್ಯುಕ್ತಾ ಹರೇರ್ಗೇಹೇಬುಧೋತ್ತಮಾಃ ।
ಏತೇಷಾಂ ಜೀವನಾರ್ಥಾಯ ಭೂಮಿಂವಾ ಭೃತಕಂ ತುವಾ ।
ಯಥಾಯೋಗ್ಯ ವಿನಿಶ್ಚಿತ್ಯ ಯಜಮಾನಃ ಪ್ರಸನ್ನಧೀಃ ।
ತಾನ್‌ತಾನ್ ನಿಶ್ಚಿತ ಕಾರ್ಯೇಷು ತದಾ ಕರ್ತಾ ನಿಯೋಜಯೇತ್ । ॥ ೯೦ ॥
ಏವಮುಕ್ತಾವಿಧಾನೇನ ಪಾಂಚರಾತ್ರೋಕ್ತವರ್ತ್ಮನಾ ।
ಪರಿಚಾರಕ ವರ್ಗೈಶ್ಚ ಯಃ ಪ್ರತಿಷ್ಠಾಪ್ಯತೇ ಹರಿಂ ।
ಸಯಾತಿ ಪರಮಂ ಸ್ಥಾನಂ ಯೋಗಿನಾಮಪಿದುರ್ಲಭಂ ।
ಸಾಕ್ಷಾದ್ವೈಕುಂಠನಗರಂ ತತ್ರಾಸ್ತೇ ಭಗವಾನಿವ । ॥ ೯೨ ॥

ಈ ರೀತಿ ದೇವಾಲಯಕ್ಕೆ ಸೇರಿದ ಕೈಂಕರ್ಯಪರರೆಲ್ಲರೂ ಯಥಾವಿಧಿಯಾ ಪಂಚಸಂಸ್ಕಾರವನ್ನು ಹೊಂದಿರಬೇಕು. ಒಂದು ವೇಳೆ ಪಂಚಸಂಸ್ಕಾರವಾಗದಿದ್ದರೆ ಕೈಂಕರ್ಯ ಸೇವೆಯನ್ನು ಮಾಡಬಹುದು. ಇವರ ಜೀವನೋಪಾಧಿಗಾಗಿ ಯಜ ಮಾನನು ತನ್ನ ಶಕ್ತಿಯನ್ನನುಸರಿಸಿ ಭೂಮಿರೂಪವಾಗಿಯಾಗಲೀ, ವೇತನ ರೂಪವಾ ಯಾಗಲೀ ತಕ್ಕ ಏರ್ಪಾಟುಮಾಡಿ ಆ ದಿನದಿಂದಲೇ ಅವರವರ ಕೈಂಕರ್ಯ ಸೇವೆಯ ನಿಯಮಿಸಬೇಕು.

ಯಾರು ಯಾರಿಗೆ ಶಾಸ್ತ್ರೋಕ್ತ ವಿಧವಾಗಿ ಅರ್ಚಕ, ಪರಿಚಾರಕಾದಿಗಳಿ ಕೂಡಿದ ದೇವಸ್ಥಾನವನ್ನು ಕಟ್ಟಿಸಿ ಶ್ರೀಮನ್ನಾರಾಯಣನನ್ನು ಪ್ರತಿಷ್ಠಿಸಿ ಪೂಜಿ ವರೋ, ಅವರು ಮಹಾ ಯೋಗಿಗಳಿಗೂ ದುರ್ಲಭವಾದ ವೈಕುಂಠಲೋಕವ ಸೇರಿ, ಭಗವಂತನ ಅನುಗ್ರಹಕ್ಕೆ ಪಾತ್ರರಾಗಿ ಸಾಯುಜ್ಯವನ್ನು ಹೊಂದುವರು.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಸರ್ವ ಪರಿವಾರ ಶಕ್ತ್ಯಾಭಾವೇ :—

ಯಜಮಾನಸ್ಯವಿಭವೇ ಸರ್ವಾನೇತಾನ್ ಪ್ರಕಲ್ಪಯೇತ್ ।
ನೋಚೇದರ್ಚಕ ಮೇಕಂ ವಾ ವರಯೇದ್ಭಕ್ತಿಭಾವತಃ ।
ಅರ್ಚಕ ದ್ವಿತಯಂ ಶೌರಿಂ ಸಂಸ್ಥಾಪ್ಯ ಚ ಯಥಾವಿಧಿ ।
ಯಜಮಾನೋ ಪ್ಯಶಕ್ತಶ್ಚೇತ್ಸಂಪೂರ್ಣಂ ಫಲಮಾಪ್ನುಯಾತ್ ।
ಜೀರ್ಣೋದ್ಧಾರಾದಿ ಸಮಯೇ ಪ್ಯಾಲಯಸ್ಯಮಧುದ್ವಿಷಃ ।
ಋಷ್ಯಾದಿ ಪೂಜಿತೇ ಸ್ಥಾನೇ ಪಾರಂಪರ್ಯಾಕ್ರಮಂವಿನಾ । ॥ ೯೩ ॥

ವಿಶೇಷಂ ನಾಚರೇತ್ಕಿಂಚಿದ್ರಾಜಾರಾಷ್ಟ್ರಾಭಿವೃದ್ಧಯೇ ।
ಕ್ರೋಧಾದ್ವಾಲೋಭತೋ ವಾಪಿ ಮೋಹಾದ್ವಾಮತ್ಸರೇಣವಾ ।
ಯಃಕರೋತಿ ವಿಭೇದೋಸ್ಮಿನ್ ತಸ್ಯ ವಂಶಕ್ಷಯಂ ಸ್ಮೃತಂ ।
ದಿವ್ಯ ಕ್ಷೇತ್ರೇಷು ಸರ್ವತ್ರ ಪಾರಂಪರ್ಯಾಕ್ರಮಾಗತೇ ।
ಪರಿಚಾರಕ ಸ್ಯಂಖ್ಯಾಯಾ ಮಲ್ಪಾಧಿಕ್ಯಂ ನ ಕಾರಯೇತ್ ।
ಅಧಿಕ್ಯಂ ನಿಷ್ಫಲಂ ಪ್ರೋಕ್ತಂ ಅಲ್ಪತ್ವಂ ಲೋಕನಾಶಕಂ ।
ತಸ್ಮಾತ್ಸರ್ವ ಪ್ರಯತ್ನೇನ ನ್ಯೂನಾಧಿಕ್ಯಂ ನಕಾರಯೇತ್ ।
ಇತ್ಯೇವಮರ್ಚಕಾದೀನಾಂ ಸಂಖ್ಯಾನಿರ್ಣಯಮುತ್ತಮಂ ।
ಹರಿಣಾಸ್ವಯಮೇವೋಕ್ತಂ ಪುರಾ ಕಮಲ ಜನ್ಮನೇ ।
ಸಂಗ್ರಹೇಣ ಮಯಾ ತ್ವದ್ಯಭೋಧಿತಂ ಗೋಪ್ಯಮುತ್ತಮಂ ॥ ೧೦೦ ॥

ಪ.ಪು.ಸಂ. 2

ಯಜಮಾನನಾದವನು ಮೇಲೆ ತಿಳಿಸಿದ ಪರಿವಾರದವರನ್ನು ಏರ್ಪಡಿಸಲು ಅಶಕ್ತನಾಗಿದ್ದಲ್ಲಿ ಕೊನೆಯ ಪಕ್ಷ ಒಬ್ಬ ಅರ್ಚಕರನ್ನಾದರೂ ಏರ್ಪಡಿಸಬೇಕು. ಈ ರೀತಿಯಲ್ಲಿ ಅರ್ಚಕರು—

ದೇವಾಲಯಸ್ಯ ಸರ್ವೇಪಿ ಸೇವಕಾಸ್ತು ಧರಾತಲೇ ॥ ೧೮೭ ॥
ಪಂಚಸಂಸ್ಕಾರ ಸಂಯುಕ್ತಾ ನಿರ್ಣೀತವ್ಯಾದ್ವಿಜೋತ್ತಮಾಃ ।

ಪ.ಪು.ಸಂ. 4

ಹೀಗೆ ಭಗವಂತನಾದ ಶ್ರೀಮನ್ನಾರಾಯಣ ಮೂರ್ತಿಯನ್ನು ಪ್ರತಿಷ್ಠಾಪಿಸುವನೋ ಆ ರೀತಿಯಲ್ಲಿ ಯಜಮಾನನು ಅಶಕ್ತನಾದರೂ ಕೈಂಕರ್ಯಪರರೆಲ್ಲರನ್ನೂ ಏರ್ಪಡಿಸಿದ ಸಂಪೂರ್ಣ ಫಲವನ್ನು ಹೊಂದುವನು.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಜೀರ್ಣಾಲಯವನ್ನು ಪುನಃ ನಿರ್ಮಾಣ ಮಾಡಿದಾಗ ಪರಿವಾರಾದಿಗಳ ಏರ್ಪಡಿಸುವಾಗ ಮಹಾ ಕ್ಷೇತ್ರಗಳಲ್ಲಿ ಪೂರ್ವದಲ್ಲಿದ್ದಂತೆಯೇ ಕೈಂಕರ್ಯಪರರ ಏರ್ಪಡಿಸಬೇಕು. ಹೆಚ್ಚು ಕಡಿಮೆ ಮಾಡಬಾರದು ತಪ್ಪು ಮಾಡಿದಲ್ಲಿ ಯಜಮಾನಿಗೆ ಕೆಡುಕುಂಟಾಗುವುದು. ದಿವ್ಯ ಕ್ಷೇತ್ರಗಳಲ್ಲಿನ ಪರಿವಾರ ವರ್ಗವನ್ನು ಅ ಮಾಡಿದ್ದಾದರೆ ನಿಷ್ಫಲವು. ಫಲವೇನೂ ಇರುವುದಿಲ್ಲ. ಕಡಿಮೆ ಮಾಡಿದಲ್ಲಿ ಅ ಲೋಕನಾಶವಾಗುವುದು. ಅರ್ಥಾತ್ ಗ್ರಾಮಕ್ಕೆ ಕೆಡುಕುಂಟಾಗುವುದು. ಆದ್ದ ಅಧಿಕ ಕಡಿಮೆ ಮಾಡಬಾರದು.

ಶ್ರೀ ನಾರದ :—

ಶ್ರುಣುದ್ವಂ ಮುನಯಸ್ಸರ್ವೇ ಹರಿಧ್ಯಾನಾಪರಾಯಣಾಃ ।
ವಕ್ಷ್ಯಾಮಿ ಭಗವದ್ಗೇಹೇ ಅಧಿಕಾರಿ ವಿನಿಶ್ಚಯಂ ।
ಕಲ್ಪಿತೇತು ಹರೇರ್ಧಾಮ ಸರ್ವೈಶ್ಚ ಪರಿಚಾರಕೈಃ ।
ಭೋಗರಾಗೈಶ್ಚ ವಿಭವೈ ಶಾಶ್ವತೈರ್ಯಧಿಭೂತಲೇ ॥ ೫ ॥
ಏತೇಷಾಂ ಪಾಲನಾರ್ಥಂ ಸ್ಯಾದಧಿಕಾರೀ ವಿನಿಶ್ಚಯಂ ।
ಪ್ರತಿಷ್ಠಾಂ ತೇತು ದೇವಸ್ಯ ಯಜಮಾನಃ ಪ್ರಸನ್ನ ಧೀಃ ।
ಅರ್ಚಕಾದೀನ್ ವಿನಿಶ್ಚಿತ್ಯ ಯಥಾ ಶಾಸ್ತ್ರ ವಿಧಾನತಃ ।
ತೇಭ್ಯಸ್ತು ಭಗವದ್ಗೇಹಂ ದತ್ವಾ ತತ್ಫಲ ಸಿದ್ಧಯೇ ।
ತತ್ಸಹಾಯಾರ್ಥಮೇಕೈಕಮಧಿಕಾರಿಂ ವಿನಿಶ್ಚಯೇತ್ ।

ಧರ್ಮಕರ್ತೃ ಲಕ್ಷಣಂ :—

ಸದ್ಬ್ರಾಹ್ಮಣಸ್ಸದಾಚಾರೀ ಸತ್ಯವಾದೀ ಬಹುಶ್ರುತಃ ॥ ೮ ॥
ಪಾಪಭೀತಿಯುತಶ್ಚೈವ ಬಹುಶಾಸ್ತ್ರ ವಿಶಾರದಃ ।
ಪಂಚರಾತ್ರ ವಿಧಾನಜ್ಞೋ ಬ್ರಹ್ಮವಾದೀ ಚ ಧರ್ಮವಿತ್ ।
ಪರದಾರಧನಾ ಕಾಂಕ್ಷಾ ವರ್ಜಿತೋ ವೃದ್ಧ ಏವಚ ।
ಪಂಚ ಸಂಸ್ಕಾರ ಸಂಯುಕ್ತಃ ಪ್ರಿಯಭಾಷೀ ಕೃಪಾನಿಧಿಃ ॥ ೧೦ ॥
ಮಠಾಭಿವೃದ್ಧಿ ಕಾಮಶ್ಚ ಮಹಾಭಕ್ತ ಶಿಖಾಮಣಿಃ ।
ಉತ್ತಮಾನ್ವಯ ಸಂಜಾತೋ ಯೋಗವಿದ್ಯಾ ವಿಶಾರದಃ ।
ಧೀರಶ್ಚ ಧೀಯುತಶ್ಶಾಂತಃ ಕ್ಷಮಾಶಾಲೀ ಚ ಧೈರ್ಯವಾನ್ ।
ಸದ ಸದ್ವಿವೇಚನಾ ದಕ್ಷೋ ಸದಾನಮ್ರಶ್ಚ ಸಜ್ಜನಃ ।
ಬ್ರಹ್ಮಾಚಾರೀ ಗೃಹಸ್ಥೋವಾ ಕಾನನಸ್ಥೋಥವಾಯತಿಃ ।

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಏತೈಶ್ಚ ಲಕ್ಷಣೈರ್ಯುಕ್ತೋ ದುಷ್ಟರೋಗ ವಿವರ್ಜಿತಃ ।
ದೇವಾಲಯೇ ಸದಾ ಭೂಯಾ ದಧೀಕಾರಿ ದ್ವಿಜೋತ್ತಮಃ ।
ತಸ್ಯ ಕರ್ತವ್ಯಮದ್ಯಾಹಂ ವಕ್ಷ್ಯಾಮಿ ಮುನಿ ಪುಂಗವಾಃ ।
ಬ್ರಾಹ್ಮೀ ಮುಹೂರ್ತಮಾರಭ್ಯ ಯಾವತ್ಪೂಜಾವಸಾನಕಂ ।
ಭಗವತ್ಸನ್ನಿಧಾದೇವ ಸವಸೇತ್ಸರ್ವದಾ ಶುಚಿಃ ॥ ೧೫ ॥
ಸಕಾಲಾರಾಧನಾರ್ಥಂ ತು ಸರ್ವವಸ್ತು ಚ ಸೇವಕಾನ್ ।
ಸಂಪಾದ್ಯ ಪೂಜಕೇಭ್ಯಸ್ತು ದದ್ಯಾ ದ್ವೈಧರ್ಮಪಾಲಕಃ ।
ದೇವಾದಾಯಂ ವ್ಯಯಂ ಸರ್ವಂ ಸಯೇವ ಪರಿಶೀಲಯೇತ್ ।
ಲೇಖಕೈಸ್ಸರ್ವಯೇ ವೈತೇ ಪ್ರತ್ಯಹಂ ಚ ವಿಲೇಖಯೇತ್ ।
ಯತಿಶ್ಚೇದುತ್ತಮಃ ಪ್ರೋಕ್ತಃ ಗೃಹಸ್ಥೋ ಮಧ್ಯಮಸ್ಮೃತಃ ।
ಅಧಮೋ ಬ್ರಹ್ಮಚಾರೀಚ ಅಧಿಕಾರಿ ವಿನಿಶ್ಚಯೇ ।
ಯಸ್ಮಾದ್ದರೇರ್ಧರ್ಶನಾರ್ಥ ಮಾಗಚ್ಛಂತೇ ಪ್ರಭುಸ್ತ್ರಿಯಃ ।
ಅಸೂರ್ಯಂ ಪಶ್ಯತಾಶ್ಚೈವ ಭಕ್ತ್ಯಾತು ಸತತಂ ಭುವಿ ।
ತಸ್ಮಾದ್ದೇವ ಸಮೀಪೇತು ವಾಸಯೋಗ್ಯಸ್ತುಯೋ ಭವೇತ್ ।
ಸರ್ವಸಂಗ ಪರಿತ್ಯಾಗೀ ಸ ಯತಿ ಸ್ತೂತ್ತಮ ಸ್ಮೃತಃ ॥ ೨೦ ॥

ಧರ್ಮಕರ್ತೃ ಲಕ್ಷಣ, ಅವರ ಅಧಿಕಾರ ಅರ್ಹತೆ, ಅವರ ಕಾರ್ಯಗಳು, ಅವರ ಮರ್ಯಾದೆ ವಿಷಯದಲ್ಲಿ ಸಂಹಿತಾ ಪ್ರಮಾಣ ವಾಕ್ಯಗಳನ್ನು ಬರೆದು ಬರುವುದರಲ್ಲಿ ಮೊತ್ತ ೭೦ (ಎಪ್ಪತ್ತು) ಶ್ಲೋಕಗಳಿವೆ. ಗ್ರಂಥ ವಿಸ್ತರ ಭಯದಿಂದ ಪ್ರಕೃತ ೨೦ ಶ್ಲೋಕದವರೆಗೆ ಬರೆದು ಶ್ಲೋಕಗಳ ಭಾವಾರ್ಥವನ್ನು ಕನ್ನಡದಲ್ಲಿ ಬರೆದಿರುವುದು.

ಶ್ರೀಮನ್ನಾರಾಯಣಮೂರ್ತಿ (ಶ್ರೀ ಮಹಾವಿಷ್ಣು) ನಿರ್ಮಿಸುವುದಕ್ಕೆ ಯಜಮಾನನು ಶಕ್ತಿವಂತನಾಗಿ ಎಲ್ಲಾ ವಿಧದಲ್ಲೂ ಪರಿಚಾರಕರಾದಿಯಾಗಿ ಸಕಲವಿಧ ಭೋಗರಾಗಾದಿಗಳಿಂದಲೂ ಸೇರಿಸಿ ನಿರ್ಮಿಸಬೇಕು. ಆ ರೀತಿ ಏರ್ಪಡಿಸುವಾಗ ದೇವಸ್ಥಾನದ ಆಡಳಿತವನ್ನು ಸಹ ನೋಡಿಕೊಳ್ಳಲು ಒಬ್ಬ ಸರ್ವಾಧಿಕಾರಿಯನ್ನು ಸಹ ಪ್ರತಿಷ್ಠಾ ದಿವಸದಿಂದಲೇ ಏರ್ಪಡಿಸಬೇಕು. ಅರ್ಚಕಾದಿಗಳು ಏರ್ಪಟ್ಟ ನಂತರ ಅರ್ಚಕರು ಮುಂತಾದವರಿಗೆಲ್ಲಾ ವಿಧಿಪೂರ್ವಕ ಆಹಾರಾದಿ ಸೌಕರ್ಯಗಳಿಂದಲೂ ನಂತರ ಅವರ ಸಹಾಯಾರ್ಥವಾಗಿ ಧರ್ಮಕರ್ತರನ್ನು ಏರ್ಪಡಿಸಬೇಕು. ಆ ಧರ್ಮಕರ್ತರು ಹೇಗಿರಬೇಕೆಂದರೆ—

ಸದ್ಬ್ರಾಹ್ಮಣನಾಗಿಯೂ, ಸದಾಚಾರಸಂಪನ್ನನಾಗಿಯೂ, ಪಾಪಭೀತಿಯುಳ್ಳವ

SRI JAGADGURU VISHWARADHYA
JNANA SIMHASAN JNANAMANDAL
LIBRARY
Jangamwadi Math, Varanasi
ACC No. 8788

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ನಾಗಿಯೂ, ಶಾಸ್ತ್ರಪರಿಚಯವುಳ್ಳವನಾಗಿಯೂ ಇರಬೇಕು. ವೇದಾಂತ, ಧರ್ಮ ಶಾಸ್ತ್ರಗಳನ್ನು ತಿಳಿದವನಾಗಿರಬೇಕು. ಪರಸ್ತ್ರೀ ಮತ್ತು ಧನಕಾಂಕ್ಷಿತನಾಗಿರಬಾರದು. ವಯೋವೃದ್ಧನಾಗಿ ಪಂಚಸಂಸ್ಕಾರಯುತನಾಗಿರಬೇಕು. ಯಾವಾಗಲೂ ಒಳ್ಳೆಯ ಮಾತನಾಡುವವನಾಗಿ ಮೃದುಸ್ವಭಾವದವನಾಗಿರಬೇಕು. ದಯಾಳುಶಾಲಿಯಾಗಿ ತನ್ನ ಮತದಲ್ಲಿ ಅಭಿಮಾನವಿರತಕ್ಕವನೂ, ಮಹಾ ಭಕ್ತಶಿಖಾಮಣಿಯಾಗಿಯೂ, ಸದ್ವಂಶಸ್ಥನಾಗಿಯೂ, ಶಾಂತಮೂರ್ತಿಯಾಗಿಯೂ ಇರಬೇಕು. ಧೈರ್ಯವಂತನಾಗಿ ತಪ್ಪುನೆಪ್ಪುಗಳನ್ನು ವಿಚಾರಿಸುವವನಾಗಿ ದಕ್ಷನಾಗಿರಬೇಕು. ಅಹಂಕಾರವಿಲ್ಲದೆ ಸತ್ಪುರುಷನಾಗಿ ಆರೋಗ್ಯವಂತನಾಗಿಯೂ ಇರುವ ಬ್ರಹ್ಮಚಾರಿಯಾಗಲಿ, ಗೃಹಸ್ಥನಾಗಲಿ, ವಾನಪ್ರಸ್ಥಾಶ್ರಮದವನಾಗಿಯಾಗಲಿ, ಸನ್ಯಾಸಿಯಾಗಲಿ ಅಂಥವರನ್ನು ಧರ್ಮಕರ್ತೃರಾಗಿ ನಿಯಮಿಸಬೇಕು.

ದೇವಸ್ಥಾನದಲ್ಲಿ ಬೆಳಗಿನಿಂದಾರಂಭಿಸಿ ಯಾವಯಾವ ಕಾಲದಲ್ಲಿ ಯಾವಯಾವ ಕಾರ್ಯಗಳನ್ನು ಮಾಡಬೇಕು. ಆರಾಧನ, ಉತ್ಸವಾದಿಗಳು ಆಯಾಕಾಲದಲ್ಲಿ ನಡೆಸಬೇಕು. ಆಯಾ ಕಾರ್ಯಗಳಿಗೆ ಆವಶ್ಯಕವಾದ ವಸ್ತುಗಳನ್ನು ಸೇವಕರಿಂದ ತರಿಸಿ ಅರ್ಚಕರಿಗೆ ಒಪ್ಪಿಸಬೇಕು. ಅಲ್ಲದೆ ದೇವಸ್ಥಾನದ ಆಯವ್ಯಯಗಳನ್ನು ತಾವೇ ನಿಂತು ಸಕ್ರಮವಾಗಿ ಲಿಖಿತವಾಗಿ ಬರೆಯಬೇಕು.

ಧರ್ಮಕರ್ತೃ ಸಂನ್ಯಾಸಿಯಾದರೆ ಉತ್ತಮವು. ಗೃಹಸ್ಥನಾದರೆ ಮಧ್ಯತರವು, ಬ್ರಹ್ಮಚಾರಿಯಾದರೆ ಕನಿಷ್ಠವೆಂದೂ ಸಂಜ್ಞೆಯು. ಭಗವಂತನಲ್ಲಿ ಭಕ್ತಿಯಿಂದ ಇದ್ದು ಸೂರ್ಯ ನೋಡದೆ ಇರುವ ಅಂತಃಪುರ ಸ್ತ್ರೀಯರು ಭಗವದ್ದರ್ಶನಾರ್ಥವಾಗಿ ಬರುವರು, ಅವರು ಬರುವ ಕಾಲವನ್ನು ತಿಳಿದು ದೇವಸ್ಥಾನದಲ್ಲೇ ಇರಬೇಕಾದ್ದರಿಂದ ಸನ್ಯಾಸಿಯಾಗಿಯೇ ಇರುವುದು ಒಳ್ಳೆಯದು. ಆರೀತಿ ಇಲ್ಲವಾದಲ್ಲಿ ಪರಸ್ತ್ರೀ ಧನಾದಿಗಳಲ್ಲಿ ಹೇಯವಾಗಿ ಕಾಣುವ ಮತ್ತು ಜನಗಳಿಂದ ಮರ್ಯಾದಿಸಲ್ಪಡುವ ಬ್ರಹ್ಮಚಾರಿ ಅಥವಾ ಗೃಹಸ್ಥನಾದ ಬ್ರಾಹ್ಮಣೋತ್ತಮರನ್ನು ಪರಿಶೀಲಿಸಿ ಧರ್ಮಕರ್ತರನ್ನಾಗಿ ಏರ್ಪಡಿಸಬೇಕು.

ಆದರೆ ಪತ್ನೀ ಇಲ್ಲದ ವಿದುರನನ್ನು ಯಾವ ಕಾಲದಲ್ಲೂ ಯಾವ ಕಾರಣದಿಂದಲೂ ಧರ್ಮಕರ್ತರನ್ನಾಗಿ ಏರ್ಪಡಿಸಬಾರದು.

ವಿವರಗಳು ಬೇಕಾದಲ್ಲಿ ಸಂಹಿತಾಗ್ರಂಥವನ್ನೇ ನೋಡಬೇಕು.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ೀ ಶಠಕೋಪ ವಿಚಾರ :—

ಅಥಾತಃ ಸಂಪ್ರವಕ್ಷ್ಯಾಮಿ ಶಠಕೋಪಸ್ಯ ವೈಭವಂ ।
ತದಾಮಹಾಸುರಃ ಕಶ್ಚಿತ್ತ್ರೈಠೋನಾಮ ದುರಾಸದಃ ।
ಅವಧ್ಯತಾಮನುಪ್ರಾಪ್ತಃ ಸೇಂದ್ರೈರಪಿ ಸುರಾಸುರೈಃ ।
ಸರಯೂ ತೀರಮಾಸಾಧ್ಯ ಪೀಡಯಿರ್ಷ್ಯ ದ್ವಿಜೋತ್ತಮಾನ್ ॥ ೨ ॥
ಮುನಿವೇಷಧ ರೋ ದೇವಂ ಶಕ್ತೈಃ ಪರಿಚಾರಹ ।
ಕದಾಚಿದಂತರಂ ವೀಕ್ಷ್ಯತತ್ರತ್ಯಾತ್ಪರಿಚಾರಕಾನ್ ।
ರಾತ್ರೌಹತ್ವಾಜಹಾರಾಸೌ ಹಾರಂ ಭಗವತಾಧೃತಂ ।
ಯಸ್ಮಿಂಧೃತೇ ಧೃತಿಃ ಕಾಂತಿಃ ವಿಕ್ರಮಶ್ಚವಿವರ್ಧತೇ ।
ತಂ ಧೃತ್ವಾ ವಿಶ್ವಪಾತಾಳಂ ದಾನವೈರಭಿಪೂಜಿತಃ ।
ಮುದಾಪರಮಯಾಯುಕ್ತಃ ತಸ್ಥೌ ತತ್ರ ಮಹಾಸುರಃ ॥ ೫ ॥
ತತಃ ಪ್ರಭಾತ ಸಮಯೇ ಅಯೋಧ್ಯಾಧಿಪತೀನ್ನೃಪಃ ।
ಸ್ನಾತ್ವಾಭಿಗಮ್ಯದೇವೇಶಂ ನಾಪಶ್ಯತ್ಪರಿಚಾರಕಾನ್ ।
ಹಾರಂ ಚ ಪರಮಂ ದಿವ್ಯಂ ವಿಷ್ಣುವಕ್ಷಸ್ಥಲೇ ಸ್ಥಿತಂ ।
ಕಿಮೇತದಿತಿ ಸಂಭ್ರಾಂತೋ ವಿಷಣ್ಣೋಭೂನ್ನರೇಶ್ವರಃ ।
ತತಃ ಪ್ರಣಮ್ಯ ದೇವೇಶಂ ಸ್ತುತ್ವಾ ಸ್ತೋತ್ರೈರ್ಮನೋಹರೈಃ ।
ಕಿಮೇತದಿತಿ ಪಪ್ರಚ್ಛಮನು ಪುತ್ರಸ್ತಮೀಶ್ವರಂ ।
ಭಗವನ್ ದೇವದೇವೇಶ ಕೇನವಾ ಕಿಂಕರಾಹೃತಃ ।
ಕೇನವಾಪಹೃತೋ ಹಾರಃ ಶಂಸಂತೇ ಸರ್ವಮಚ್ಯುತ ।
ಏವಮಿಕ್ಷ್ವಾಕುಣಾ ಪೃಷ್ಟೋ ದೇವೇಶೋಭಕ್ತವತ್ಸಲಃ ।
ಪ್ರತ್ಯುವಾಚ ಜಗನ್ನಾಥಃ ಪ್ರಾಂಜಲಿಂ ದೀನಮಾನಸಂ ॥ ೧೦ ॥
ಶಠೋನಾಮಾಸುರಃ ಕಶ್ಚಿತ್ ಮುನಿವೇಷಂ ಸಮಾಸ್ಥಿತಃ ।
ಭಕ್ತೈರ್ಮದೀರ್ಯೈಂ ಸಹಿತೋ ಮಿಥ್ಯಾ ಪರಿಚಚಾರಮಾಂ ।
ತೇನೇನಾಪ ಹೃತೋಹಾರಃ ಹತಾಶ್ಚ ಪರಿಚಾರಕಾಃ ।
ಸತು ಪಾತಾಳಮಾದಿಶ್ಯಮೋದತೇದ್ಯ ಸ್ವಕೈರ್ಜನೈಃ ॥ ೧೨ ॥
ಏವಮುಕ್ತೋನರಪತಿಃ ಕುಪಿತೋ ದನುಜಂಪ್ರತಿ ।
ದೇವಂ ವಿಜ್ಞಾಪಯಾಮಾಸ ಮಾಮನುಜ್ಞಾತುಮರ್ಹಸಿ ।
ತಂ ವಧಿಷ್ಯಾಮ್ಯಹಂ ಕ್ರೂರಂ ತ್ವದ್ಭಕ್ತಜನ ಹಿಂ ಸಕಂ ।
ಇತ್ಥಮಿಕ್ಷ್ವಾಕುಣಾಚೋಕ್ತಂ ವಾಕ್ಯಂ ಶ್ರುತ್ವಾಜಗತ್ಪತಿಃ ।

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ನಿವಾರಯಾಮಾಸ ಶವಾರಾಗಶರವಧ್ಯೋದ್ಯಮಂ ।
ಸ್ವತ್ಸ್ವರ್ವೈರವಧ್ಯತ್ವಂ ಪ್ರಾಪ್ತವಾನ್ತಪಸಾಪುರಾ ॥ ೧೫ ॥
ಪಿತಾಮಹಾತ್ಪರಂ ಪ್ರೀತಾ ನಿವರ್ತಸ್ವತದುದ್ಯಮಾತ್ ।
ಏವಮುಕ್ತೋಮನೋಃ ಪುತ್ರೋ ದೇವ ದೇವೇನಶಾಣಾ ।
ಉವಾಚ ದೀನಯಾ ವಾಚಾದುಃಖಿತೇನಾಂತರಾತ್ಮನಾ ।
ದೇವ ದೇವ ದಯಾಸಿಂಧೋ ಭಗವಾನ್ ಭಕ್ತವತ್ಸಲ ।
ತ್ವತ್ಪ್ರಕಾಶೇ ಕಥಂ ದೈತ್ಯಾಃ ತದಾರಾಧನ ನಿಷ್ಠಿತಾನ್ ।
ಜಘಾನ ಪಂಚರಾತ್ರಜ್ಞಾನ್ ಹಾರಂ ಚ ಹೃತವಾನ್ ।
ಕೇನೋಪಾಯೇನ ಹಂತವ್ಯ ಸದುರಾತ್ಮಾ ಶಠಾಸುರಃ ।
ಇತಿ ಪೃಷ್ಟೋಜಗನ್ನಾಥಃ ಸಾಕೇತಾಧಿಪತಿಂ ನೃಪಂ ।
ಸಾಂತ್ವಯನ್ಮಧುರೈವಾಕ್ಯೈಃ ಪ್ರತ್ಯುವಾಚಕೃಪಾಂಬುಧಿಃ ।
ವಿಷಾದೋ ನಾತ್ರಕರ್ತವ್ಯೋ ಹತಾಯತ್ ಪರಿಚಾರಕಾಃ ॥ ೨೦ ॥
.... ಯಿತ್ವಾಕಾರಣಂ ವಕ್ಷ್ಯೇಪರಿಚರ್ಯಾವಿಧಾಮಿನಾಮ್ ।
ಶಠೇನ ಯದ್ಯುಕ್ತಮಿತಿ .... ।
ಪ್ರೀತಿ ಭೀತಿ ವಿಯುಕ್ತೈಶ್ಚ ಕ್ರಿಯ ಮಾಣಂ ಮದರ್ಚನಂ ।
ಸಮುತ್ಪ್ರಿಯಂ ಭವೇತ್ತಸ್ಮಾತ್ ಭಕ್ತಿಹೀನಾ ಹತಾಯಿಮೇ ।
ಹಾರಂ ಚ ದ್ರಕ್ಷ್ಯಸೇ ತಾತಮಧುರಸ್ಥಲ ಶೋಭಿತಂ ।
ಅಚಿರಾದ್ಧಾನವಂ ಕ್ರೂರಂ ನೇಷ್ಯೇಯಾಮ್ಯಂ ತಮಾಲಯಂ ।
ಇತ್ಯುಕ್ತ್ವಾ ಸ ಮಹೀಪಾಲಂ ದೇವಃ ಶ್ರೀರಂಗನಾಯಕಃ ।
ಮುಹೂರ್ತಂ ಚಿಂತಯಾಮಾಸ ತತಃ ಸ್ವೀಯಾಂಚ ಪಾದುಕಾಂ
ಕ್ಷಿಪ್ರಮಾಜ್ಞಾಪಯಾಮಾಸ ಶಠಸ್ಯ ನಿಧನಂ ಪ್ರತಿ ।
ತತೋಭಗವದಾಜ್ಞಾಂ ವೈಪ್ರತಿಗೃಹ್ಯ ಚ ಪಾದುಕಾ । ॥ ೨೫ ॥
ವಾಯುವೇಗ ಸಮಾವಿಷ್ಟಪ್ರವಿಶೇಷರಸಾತಲಂ ।
ಶಠಭೃತ್ಯಾಸ್ತತೋದೃಷ್ಟ್ವಾ ಪಾದುಕಾಗಮಮದ್ಭುತಂ ।
ನ್ಯವೇದಯಞ್ಶ್ಯಠಾಯಾಶು ಸೋಪಿ ಸಂಭ್ರಾಂತ ಮಾನಸಂ ।
ನಿಕ್ಷಿಪ್ಯ ಸಂವೃತೇ ದೇಶೇಹಾರಂ ಮಧುರಿಪುಃಪ್ರಿಯಂ ।
ತೀಕ್ಷ್ಣ ಕಂಟಕ ಸಂಪೂರ್ಣ ವೃಕ್ಷರೂಪಂ ಸಮಾಸ್ಥಿತಃ ।
ತಾದೃಗ್ರೂಪೈಸ್ತೈಭೃತ್ಯೈ ಸಂವೃತ ಸಮದೃಶ್ಯತಾ ।
ಪಾದುಕಾ ಮಾರ್ಗ ಮಾಣೋವೈಹಾರಂ ತಂ ಚರಿಂಪುಂ ಶಠಂ ॥ ೨೮ ॥
ಅವಶ್ಯಂ ಸುದುಃಖಾರ್ಥ ದದೌಹರಿಪದಾಂಬುಜಮ್ ।

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಧ್ಯಾನೇನ ತೇನ ಜಾನಂತಿ ಮಾಯಾರೂಪಂ ದುರಾತ್ಮನಃ ।
ಕೋಪ ಮಾಹಾರಯಾಮಾಸ ಭೃಶಂತಂ ಪ್ರತಿಪಾದುಕಾ ।
ಸಾ ಚ ದಾವಾನಲೋಭೂತ್ವಾ ವೃಕ್ಷಷಣ್ಡಂ ದದಾಹವೈ ॥ ೩೦ ॥
ತಸ್ಮಿನ್ ಕೋಪಾಗ್ನಿನಾದಗ್ಧಾ ಶಠ ಸಹಪರಿಚ್ಛದೇ ।
ತತ್ರತ್ಯಾಭೋಗಿನಾ ಸರ್ವೇ ತುಷ್ಟುವುಃ ಪಾದುಕಾಂಮುದಾ ।
ತತಃ ಸ್ತ್ರೈಃ ಪೂಜ್ಯಮಾನಾಸಾಹಾರಂ ಚಾದಾಯ ಪಾದುಕಾಃ ।
ಅಯೋಧ್ಯಾ ಮಾದತಾಹಷ್ಯಾರ್ತ್ ಭಕ್ತೈಃ ಪ್ರತ್ಯುದ್ಗತಾಭವತ್ ।
ಇಕ್ಷ್ವಾಕು ಪ್ರಮುಖಾ ಸ್ಸರ್ವೇ ಭಕ್ತಾರಾಜರ್ಷಯಸ್ತದಾ ।
ವಶಿಷ್ಠಾದ್ಯಾಶ್ಚ ಮುನಯಃ ಪ್ರಣೇಮುಃ ಪಾದುಕಾಂಶುಭಾಂ ।
ತುಷ್ಟುವುಶ್ಚ ಸುಸಂಹೃಷ್ಟಾಃ ಸ್ತುತಿಭಿಃಸ್ತೋತ್ರಕೋವಿದಾಃ ।
ಶಠಕೋಪ ಇತಿ ಪ್ರೀತ್ಯಶ ಶಂಸುಃ ಪಾದುಕಾಮುದಾ ॥ ೩೪ ॥
ಹಾರಂ ಚ ಧಾರಯಾಮಾಸು ದ್ದೇವೇಶಂ ಗರುಡಧ್ವಜಂ ।

ಇತಿ ಪಾಂಚರಾತ್ರೇ ಪೌಷ್ಕರ ಸಂಹಿತಾಯಾಂ
ಏಕೋನ ವಿಂಶೋಧ್ಯಾಯಃ

ಓಂ ವಕುಳಾಲಂಕೃತಂ ಶ್ರೀಮತ್ ಶಠಕೋಪ ಪದದ್ವಯಂ
ಅಸ್ಮತ್ಕುಲಧನಂ ಭೋಗ್ಯಮಸ್ತು ಮೇ ಮೂರ್ಧ್ನಿಭೂಷಣಂ
ವಿಜ್ಞಾನ ಘನಪೂರ್ಣತ್ವಂ ತಿಂತ್ರಿಣೀಮೂಲಸಂಶ್ರಯೇ
ಆಬಾಲ ಷೋಡಶಾಬ್ಧಸ್ತು ಮೂಕಭಾವಂ ಗಮಿಷ್ಯತಿ
ವಕುಳಾಭಾರಣಂ ವನ್ದೇ ಜಗದಾಭರಣಂ ಮುನಿಂ
ಯಶ್ಶೃತೇ ರುತ್ತರಂ ಭಾಗಂ ಚಕ್ರೇದ್ರಾವಿಡಭಾಷಯಾ

ಭೃಗು :—

ಮಮ ನಾರದ ಸರ್ವಜ್ಞ ದೇವ ದೇವಸ್ಯ ಶಾರ್ಙ್ಗಣಃ
ಕಥಾಮೃತರಸೇನ್ಸೈವ ಪಾಯಯಸ್ತುಮಹಾಮತೇ
ಜಾತಕೋಹಂ ಭವಾನ್ಮೇ ಭೂ ಜೀವನಂ ಹರಿಕೀರ್ತನಂ
ಪ್ರವರ್ತಯ ಮಹಾಭಾಗ ಕಲಿಕಲ್ಮಷನಾಶನಮ್
ಉಕ್ತಸ್ತ್ವಯಾಕೃತೇಧರ್ಮ ತ್ರೇತಾಯಾಂ ದ್ವಾಪರೇ ತಥಾ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ತಥಾಯುಗೇ ತಥಂ ಧರ್ಮೋ ವರ್ತತೇ ಕಥ್ಯತಾಂ ಮುನೇ
ವೇದ ವಾದೇಷು ಪಾಷಂಡೈ ನಾಸ್ತಿಕೈರ್ವಾ ಕುಪೀಕೃತಂ
ಇತ್ಯುಕ್ತಂ ಭವತಾ ಪೂರ್ವಮಿಹ ತದ್ವಕ್ತುಮರ್ಹಸಿ

ನಾರದ :—

ಶೃಣುಷ್ವ ಪರಮಂ ಗುಹ್ಯಂ ಮುನಿಸತ್ತಮ ಯದ್ಭವೇತ್
ಸೃಷ್ಟವಾಸ್ಯಂ ಕಲೌಧರ್ಮಂ ವಕ್ಷ್ಯಾಮಿ ಚ ಮಹಾಮತೇ

ಶ್ರೀನಾರದ :—

ಪಾಷಂಡಬೋಧಕಾ ವಿಪ್ರಾ ಕ್ಷತ್ರಿಯೋ ನಿಷು ಸರ್ವದಾ
ಶೂದ್ರಾದೀನ್ ಮೋಹಯಂ ತ್ಯೇ ತೇ ಸ್ವಕಂ ಪೇಃ ಪೂರಣಾಯಚ
ಕ್ಷೇತ್ರೇವಾಂ ಚ ಕರಿಶ್ಯಂತಿ ತದ್ರವ್ಯಂ ಭಕ್ಷಯಂತಿ ಚ
ವಯಂ ಸ್ವದೀಯಾ ತ್ಯತೇ ಭೃತ್ಯಾಶ್ಚತುಸ್ತ್ರೇ ಶಿವದಂತ್ಯುತಾ
ವಿಮತಾಸ್ತಭವಿಷ್ಯಂತಿ ದೂಷಯನ್ತಿ ಮಹಾಮತೀನ್
ವಿಷ್ಣುಂನ್ನಾರಾಧಯಂ ತ್ಯೇತೇ ವಿಷ್ಣುಪಕ್ಷಶ್ಚದೂಷತಾಃ
ಭವಿಷ್ಯನ್ತಿ ಕಲೌಪ್ರಾಪ್ತೇ ಸರ್ವೇ ಪಾಷಂಡ ಸಂಕರಾಃ
ಇತಿಮತ್ವಾ ಹೃಷೀಕೇಶಃ ಕೃಪಾವಾಂ ತೇಷು ಜಂ ತುಷು
ಮಲ್ಲೋಕಪ್ರಾಪ್ತಿ ಹೇತುತ್ವಂ ಕಥಂ ಭವತಿ ಜಂತುಷು
ಆಚಾರ್ಯಮಿದಮಾಚಾರ್ಯ ಅರ್ಚಾರೂಪಂ ಮಯಾಶ್ರಿತಂ
ತತೌಪೂಜಾಂನ್ನ ಕುರ್ವನ್ತಿ ಮದೀಯ್ಯಾಂ ಚ ಶಠಾಧಮಾಃ
ಪೂಜನಂ ವಾಮದೀಯಂ ಚ ಪ್ರತಿಬಿಂಬಂತು ಯಾ ಚತು
ಪುತ್ರಮಿತ್ರ ಕಳತ್ರಾದಿ ಧನಪ್ರಾಪ್ತ್ಯೈ ಕಲೌಯುಗೇ
ನ ಲಬ್ಧಂ ಯದಿತಂ ಚಿಂತ್ಯಂ ತದಾಮಾಂ ದೂಷಯಂತಿ ಚ
ಜೇತುಂತ್ವಂ ಕೀಧೃಶಂ ರೂಪಂ ಧಾರಯಾಮಿತಿ ಚಿಂತಯನ್
ರಾಮತ್ವಂ ರಾಕ್ಷಸಾಂ ಹಂತುಂ ತ್ರೇತಾಯಾಂ ದ್ವಾಪರೇ ತಥಾ
ಕಲ್ಪಾಂತೇ ಕಲಿರೂಪೇಣ ಸಂಹರಿಷ್ಯಾಮಿ ತಾಂ ಶಠಾನ್
ತದಾಡೌ ಶಠಕೋಪಾಖ್ಯೋ ಭವಿಷ್ಯಾಮಿಕಲೇರಹಂ
ವೇದೇಷುಜೋತ್ತರಂ ಭಾಗಂ ಸಮುದ್ಧೃತ್ಯ
ಸರ್ವಭಾಷಾಧಿಕೇನ್ಯೈವ ದ್ರಾವಿಡೇ ನ ಚ ಗೂಡತಾಂ
ದ್ರಾವಿಡಂ ವೇದಮಿತ್ಯೇವಕರಿಷ್ಯೇ ಮಾನುಷಾನ್ ಪ್ರತಿ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಕರ್ಮಭಾಗೇ ದ್ವಿಜಾನಾಂ ಚ ಸ್ತ್ರೀಶೂದ್ರಾಣಾಂ ಚ ಯೋಗ್ಯತಾಂ।
ಅಧಿಕಾರಿ ವಿಶೇಷೋಸ್ತಿ ಮದ್ಭಕ್ತಾಯೇ ಚ ಮಾನವಾಃ।
ತೇಷಾಮೇವ ಪ್ರಜ್ಞಾಸ್ಯಾಮಿ ಅನ್ಯದೈವತಯಾಚಕಾನ್।
ಸಂಸಾರೇ ಪಾತಯಿಷ್ಯಾಮಿ ಶಠಾನ್ ಶಠರಿಪುಸ್ಯಹಂ।
ಕಾರೀತಿ ನಾಮ್ನಾ ಕಥಿತೋ ಮದ್ಭಕ್ತೋಸ್ತಿ ಮಹೀತಲೇ।
ತತ್ಸ್ವಾಮವತಾರಾಂ ಚ ಕರಿಷ್ಯೇ ಮುನಿರೂಪಧೃಕ್ ।
ವಸುದೇವೇ ಚಾಹಂ ಕಾಶ್ಯಪೇಚಾಪಿ ವಾಮನಃ ।
ಭೃಗುವಂಶೇಯಥಾರಾಮ ಸಂಭವಾಮಿ ತಥಾಕಲೌ।
ಅನಂತ ವಿ ಹಿಸಾಹಾಯ್ಯಂ ಕುರುಷ್ವಮಮ ಗಚ್ಚತಃ।
ರಾಮಸ್ಯ ಲಕ್ಷಣೋ ಭೂಸ್ತ್ವಂ ಕೃಷ್ಣಾಖ್ಯೇ ರಾಮನಾಮವಾನ್।
ಇದಾನೀಂ ತಿಂತ್ರಿಣೀ ಭೂತ್ವಾ ತಾಂಬ್ರಪರ್ಣೀನದೀತಟೇ ।
ನಿವಾಸಂ ಕುರುತನ್ಮೂಲೇ ನಿವತ್ಸ್ಯಾಮಿ ಸಮಾಧಿಮಾನ್ ।
ಅದೃಶ್ಯೋಹಂ ತದಾ ತತ್ರ ನಿವತ್ಸ್ಯಾಮ್ಯಹ ಮಾದಿತಃ ।
ಕುರುಕಾಖ್ಯಾ ಮಮಪುರಿ ವರ್ತತೇ ಚಾಪಿ ದೂರತಃ ।
ದ್ರಾಮಿಡಂ ವೇದಮಿತ್ಯೇವ ತತ್ಪೂರ್ವಂತು ವದಾಮ್ಯಹಂ।
ಮಲ್ಲೋಕಮಯಿ ಸಂಪ್ರಾಪ್ತಿ ಮತ್ಕೃತೋವಕರಿಷ್ಯತಿ ।
ತ್ರಿದಂಡಿತ್ವ ಮುಪಾಗಮ್ಯ ರಾಮಾನುಜ ಇತಿಸ್ಮೃತಃ ।
ದತ್ತಾತ್ರೇಯಃ ಪುರಾಭೂತ್ವಾ ವೇದಮಾರ್ಗಾ ನಹಂ ಯಥಾ।
ತಥಾಸ್ಥಾಪಯ ಸ್ವರ್ವೇಷಾಂ ವೇದಾನಾಂ ಮಾರ್ಗಮುತ್ತಮಮ್
ದ್ರಾವಿಡೇಷು ಚ ವೇದೇಷು ಮತಿನಿಶ್ಚಲತಾಸ್ತುತೇ।

ಶ್ರೀ ನಾರದ :-

ಇತಿ ಕೃತ್ವಾ ಜಗನ್ನಾಥಸ್ತಾಂಬ್ರಪರ್ಣ್ಣನದೀತಟೇ ।
ಕುರುಕಾಯಾಂ ಮಹಾಪುರ್ಯಾಂ ಕಾರಿನಾಮ್ನೋರ್ಮಹಾಮತೇ।
ಗೇಹೇ ಸುಮಂಗಳೋಪೇತೇ ಶುಭ ಲಗ್ನೇ ಶುಭಾನ್ವಿತೇ।
ವೈಶಾಖ ಮಾಸೇ ಸಂಪ್ರಾಪ್ತೇ ವಿಶಾಖಾಯಾಂ ದ್ವಿಜೋತ್ತಮ।
ಅವತೀರ್ಯ ಮಹಾಭಾಗ ಸ್ವ್ಯದ್ಧಾಮ ಪರಮಂಯಯೌ।
ಕೃತ್ವಾವತಾರಂ ಮುನಿಃ ಶಠಕೋಪ ಇತಿ ಶೃತಃ।
ಅಥ ರಾಮಾನುಜೋಭೂತ್ವಾ ಶೇಷಃ ಫಣಭೃತಾಂ ವರಃ।
ತುರ್ಯಾಶ್ರಮ ತ್ರಿದಂಡೀಚ ಭಾಷ್ಯಂ ಚಾಪಿಕರಿಷ್ಯತಿ।

ಭೃಗು :-

ರಾಮಾನುಜೇತಿ ತನ್ನಾಮ ಕಥಂ ವಾತಸ್ಯ ಕೀರ್ತಿತಂ।
ತದ್ಬ್ರೂ ಹಿ ಮಮ ಸರ್ವಜ್ಞ ಶ್ರೋತುಮಿಚ್ಛಾಮಿ ತತ್ವತಃ ।

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ನಾರದ :-

ರಾಮೋಭೂದ್ಬಲಭದ್ರಶ್ಚ ಶೇಷಃ ಸರ್ವೇಶ್ವರಾಸನಃ ।
ತದಂತೇ ಚ ಕಲೌ ಪ್ರಾಪ್ತೇ ಅನುಜನ್ಮಾ ಬಭೂವ ಚ ।
ತಸ್ಮಾದ್ರಾಮಾನುಜ ಪ್ರೋಕ್ತೋ ಶೇಷಃ ಸರ್ವೇಶ್ವರಾಸನಃ।
ವೇದಾಂತಯುಗ್ಮವ್ಯಾಖ್ಯಾನಂಕೃತ್ವಾ ಸಮ್ಮತ ಮುತ್ತಮಂ।
ವೇದಾಂತ ದ್ವಯಮಿತ್ಯುಕ್ತಂ ವೈಷ್ಣವಾನಾಂ ಮಹಾತ್ಮನಾಂ।
ನಾಮಗಂಧೈರ್ನಾನುಲೇಪೈಶ್ಚ ರ್ನಚಪುಷ್ಪೈರ್ಮನೋರಮ್ಯೈಃ ।
ಸಾನ್ನಿಧ್ಯಂ ಕುರುತೇ ವಿಷ್ಣು ಯತ್ರ ಸನ್ತಿ ಸವೈಷ್ಣವಾಃ ।
ನಾತತ್ಪರತರಂ ತೀರ್ಥಂ ವೈಷ್ಣವಾಂಘ್ರಿ ಜಲಾಚ್ಚುಭಾತ್ ।
ತೇಷಾಂ ಪದೋದಕಂ ಪುಣ್ಯಂ ಗಂಗಾಮಪಿ ಪುನಾತಿ ಚ ।
ತಸ್ಮಾತ್ತು ವೈಷ್ಣವಾಃ ಪೂಜ್ಯಾಃ ಪಾವಯಂತಿ ಜಗತ್ರಯಂ ।
ತಚ್ಚಾಸ್ತ್ರವೇದ ಸಚ್ಚಾಸ್ತ್ರಂ ತದೀಯ್ಯಾಯೇವ ಪಂಡಿತಾಃ।
ಕಾಲಕೂಟಂ ವಿಷಂ ಭುಕ್ತಂ ಯಥಾದೇಹಸ್ಯನಾಶನಂ ।
ವಿಷ್ಣುಭಕ್ತಿ ವಿಹೀನಾನಂ ದೇಹಿನಾಂ ಚ ವಿನಾಶಯೇತ್ ।
ವರಂದೇಹ ಪರಿತ್ಯಾಗೋ ವಿಷಭಕ್ಷಣ ಮುತ್ತಮಂ।
ವಿಷ್ಣುಭಕ್ತಿ ವಿಹೀನಸ್ಯ ನಪರಂ ಭೋಜನಂ ಗೃಹೇ ।
ಇದಂ ರಹಸ್ಯಂ ಕಥಿತಂ ಬ್ರಹ್ಮಣಾಪರಮೇಷ್ಠಿನಾ ।
ತದುಕ್ತಂ ತವಸರ್ವಜ್ಞ ನವಕ್ತವ್ಯಂ ದುರಾತ್ಮನಾಂ ।
ಯತೊ ಪ್ರೋಕ್ತಂ ಬ್ರಹ್ಮಣಾ ತತ್ರ ಪುರಾದಾಂತ ಪ್ರದರ್ಶನಂ।
ಸಂತೋಷ್ಯದಾಂತೇ ಬ್ರಹ್ಮಾವೈ ಮಮ ಚೈವಾದಿಶಂ ತಥಾ।
ಇದಂ ರಹಸ್ಯಂ ಪರಮಂ ವಿಷ್ಣು ಭಕ್ತಿಪ್ರದಂ ನೃ ಣಾಂ ।
ವಿಷ್ಣೋರನಂತ ವೀರ್ಯಸ್ಯ ಚರಿತ್ರಂ ಹಿ ಮಹಾಕೃತಂ ।
ಇತ್ಯುಕ್ತ್ವಾನಾರದಸ್ತತ್ರ ವೈಷ್ಣವಾಗ್ರೇಸರಂ ವಿಭುಂ ।
ಸಂತೋಷ್ಯದಾಂತಂ ಬ್ರಹ್ಮಾವೈ ಆಗಗಾಮಮಹತ್ತರಂ.।

ಇತಿ ಬ್ರಹ್ಮಾಂಡಪುರಾಣೇ ಭೃಗುನಾರದ ಸಂವಾದೇ ಕ್ಷೇತ್ರಖಂಡೇ ತಾಮ್ರ ಪರ್ಣೇ
ಮಹಾತ್ಮ್ಯೇ ಶಠಕೋಪಾವತಾರೋ ನಾಮ ಏಕಸಪ್ತತಿಶತತಮೋಧ್ಯಾಯಃ।

ಶಠಾಸುರಸ್ಯ ಹನನಾತ್ ಪಾದುಕಾ ಮಧುವಿದ್ವಿಷಃ।

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಶಠಕೋಪಾಭಿದಾನೇನ ಪ್ರಥಿತಾ ಭೂತಲೇತರಾಂ।

ಪಾಂಚರಾತ್ರ ಸಂಗ್ರಹಕಾರ

ಕೋಪಾಗ್ನಿನಾ ಶಠಂ ದಗ್ಧಾ ವೈಷ್ಣವೀ ಪಾದುಕಾಸುರಃ।
ಶಠಕೋಪ ಇತಿಖ್ಯಾತಂ ಪ್ರಾಪ್ತಂ ಮುನಿಗಣೈರ್ಭುವಿ ।
ಕತೌ ಖಲುಕೃತ ಶ್ಯೌಚಂ ವರ್ಣಧರ್ಮಾದ್ವಿಜೋತ್ತಮಃ ।
ಬ್ರಾಹ್ಮಣಾನಾಂಶ್ಚ ವೇದೇಷು ಶ್ರದ್ಧಾನಾಸ್ತಿ ಪರಂತಪ ।
ವಿಕಲ್ಪಂತೇ ದುರಾಚಾರಂ ಋಷಿಸಂಮತಂ । ?
ಶೌಚಾಧಿಕಾರತಾನ್ನಾಸ್ತಿ ಕಲೌ ದ್ವಿಜವರೇಷು ಚ।
ಕ್ರಿಯಾಯಾ ಮಗ್ನತಾಂ ಚೈವ ಡಂಭತಾ ಸರ್ವಕರ್ಮಸು।
ಕಾವ್ಯೇನ ಜನಿತಜ್ಞಾನಾದರ್ಥಂ ಕುರ್ವಂತಿ ಪಂಡಿತಾಃ ।
ಶ್ರದ್ಧಾ ವೇದೇಷುನಾಸ್ತ್ಯೈವ ತತ್ಕಮಣಿಚ ಸುವ್ರತಾ ।
ಯಜ್ಞಾದಿ ದೈವತಂ ವಿಷ್ಣುಂ ನ ಜಾನಂತಿ ದ್ವಿಚಾಧಮಾಃ
ಸ್ವಮತಂ ನೈವ ಜಾನತಿ ಪ್ರವಿಷ್ಟಾಸ್ತೇಚ ಸಂಕರಾಃ।
ತತ್ವವಾದೇಷು ಕಾವ್ಯೇಷು ವಿದ್ವತ್ವಮುಪಕಲ್ಪತೇ ।
ವೇದಾಂತವಾಕ್ಯ ಪಾಠೇನ ಬ್ರಹ್ಮಾವಾದಿ ಭವಿಷ್ಯತಿ ।
ನ ಹಿ ಬ್ರಹ್ಮಸ್ವರೂಪಂ ಚ ವ್ಯಾಕುರ್ವೀಕೃತವೇದಿಕಾ।
ದ್ರವ್ಯಾರ್ಥಂ ವೇದ ಪಠನಂ ವೇದ ವಿಕ್ರಯಮೇವ ಚ ।
ಶೂದ್ರಸ್ಸಾಧುರಿತಿಪ್ರಾಹ ವ್ಯಾಸಃ ಕಲಿಯುಗೇ ಕಥಾ ।

<u>ಭೃಗು:-</u>

ಯೋಷಿಸ್ಸಾಧುರಿತಿ ಪ್ರಾಹ ಯದುಕ್ತಂ ಭವತಾವಿಭೋ ।
ಕ್ಷತ್ರಿಯೋ ವೈಶ್ಯ ಶೂದ್ರಶ್ಚ ಸ್ವಧರ್ಮೇ ಜಾತಿವರ್ತತೇ ।
ಶೂದ್ರಸ್ಸಾಧುರಿತಿ ಪ್ರಾಹ ಯದುಕ್ತಂ ಭವತಾಪ್ರಭೋ ।
ತತ್ಕಥಂ ಶೂದ್ರಜಶ್ಚೈವ ಸ್ವಧರ್ಮೇಜಾತಿವರ್ತತೇ ।

ವೈಖಾನಸ ಸಂಗ್ರಹಕಾರ.

ಒಂದು ಕಾಲದಲ್ಲಿ ಶಠಾಸುರನೆಂಬ ಮಹಾರಾಕ್ಷಸನು, ರಾಕ್ಷಸರಿಂದಾಗಲಿ, ಇಂದ್ರಾದಿ ದೇವತೆಗಳಿಂದಾಗಲಿ ಮರಣ ಭಯವಿಲ್ಲದಿರುವಂತೆ ವ ಆದರ ಬಲದ ಅಹಂಕಾರದಿಂದ ಸರಯೂನದೀ ತೀರಕ್ಕೆ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಬಂದು ಅಲ್ಲಿದ್ದ ಬ್ರಾಹ್ಮಣಮುನಿಗಳನ್ನು ಪೀಡಿಸುತ್ತಿದ್ದನು. ಅಲ್ಲದೆ ಮುನಿವೇಷವನ್ನು ಧರಿಸಿ ಅವರನ್ನು ಹಿಂಸಿಸುತ್ತಿದ್ದನು.

ಒಂದು ಕಾಲದಲ್ಲಿ ಸಮಯವನ್ನು ಕಾದು ಸಂದರ್ಭವನ್ನನುಸರಿಸಿ ಮುನಿ ವೇಷವನ್ನು ಧರಿಸಿ ಅಲ್ಲಿದ್ದ ವಿಷ್ಣು ದೇವಾಲಯಕ್ಕೆ ಹೋಗಿ ಅಲ್ಲಿಯ ಪರಿಚಾರಕಾದಿ ಸೇವಕರನ್ನು ಕೊಂದು ದೇವಸ್ಥಾನದಲ್ಲಿ ಮಹಾವಿಷ್ಣುವು ಧರಿಸಿದ್ದ ಅಪೂರ್ವಕಾಂತಿ ಯುಕ್ತ ನವರತ್ನ ಹಾರವನ್ನು ಹರಣ ಮಾಡಿ ತಾನೇ ಧರಿಸಿಕೊಂಡು ಏಶ್ವ ಪಾತಾಳಕ್ಕೆ ಹೋಗಿ ಅಲ್ಲಿನ ದಾನವರಿಂದ ಹೊಗಳಿಸಿಕೊಂಡು ಪೂಜಿಸಲ್ಪಡುತ್ತಿದ್ದನು.

ಇತಃಪ್ರಾತಃ = ಬೆಳಗಾದ ಮೇಲೆ ಅಯೋಧ್ಯಾಧಿಪತಿಯು ಎಂದಿನಂತೆ ಬಂದು ಸರಯ್ಯೂನದಿಯಲ್ಲಿ ಸ್ನಾನಮಾಡಿ ದೇವರ ದರ್ಶನಾರ್ಥವಾಗಿ ಬರಲು ಅಲ್ಲಿ ಯಾವ ಪರಿಚಾರಕರೂ, ಸೇವಕರೂ, ಇಲ್ಲದಿರುವುದನ್ನು ಕಂಡು ಆಶ್ಚರ್ಯ ಹೊಂದಿದನು. ಅನಂತರ ದೇವರ ದರ್ಶನ ಮಾಡುವಾಗ ದೇವರು ಧರಿಸಿದ್ದ ಪರಮದಿವ್ಯ ರತ್ನಹಾರ ಪದಕವು ಕಾಣಬರಲಿಲ್ಲ. ಇದೇನು ಆಶ್ಚರ್ಯ? ಎಂಬುದಾಗಿ ಮನುಪುತ್ರ ಇಕ್ಷ್ವಾಕು ಮಹಾರಾಜನು ಸಂಭ್ರಾಂತನಾಗಿ ಬಹುಖಿನ್ನನಾದನು. ಅನಂತ ರದಲ್ಲಿ ರಾಜನು ದೇವರಿಗೆ ಭಕ್ತಿಯಿಂದ ನಮಸ್ಕರಿಸಿ ದೇವರನ್ನು ವಿವಿಧ ಸ್ತೋತ್ರಗ ಳಿಂದ ಸ್ತುತಿಸಿ ಇದೇನಿದು ? ರತ್ನಹಾರವನ್ನು ಯಾರು ಕಳವು ಮಾಡಿದರು ? ಹೇ ಭಗವಂತನೇ ನಾರಾಯಣನೇ ರತ್ನಹಾರವೇನಾಯಿತು ? ಯಾರು ಅಪಹರಿಸಿದರು ? ಸರ್ವವನ್ನೂ ತಿಳಿಸು ಎಂದು ಕೇಳಿದನು. ಈ ಮಾತನ್ನು ಕೇಳಿದ ಭಕ್ತವತ್ಸಲನಾದ ಭಗವಂತನು ಕೈಮುಗಿದು ದೀನ ಮನಸ್ಸಿನಿಂದಕೂಡಿ ನಿಂತಿರುವ ರಾಜನನ್ನು ನೋಡಿ,

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಎಲೈ ರಾಜನೇ - " ಶತಾಸುರನೆಂಬ ರಾಕ್ಷಸನು ಮುನಿವೇಷ ಧರನಾಗಿ ಮಂದಿರಕ್ಕೆಂ ಬಂದು ಪರಿಚಾರಕ ಸೇವಕರನ್ನು ಕೊಂದು ರತ್ನೆಹಾರವನ್ನು ಹರಣ ಮಾಡಿ ಪಾತಾಳಕ್ಕೆ ಹೋಗಿ ಅಲ್ಲಿ ತನ್ನ ಜನರಿಂದ ಹೊಗಳಿಸಿಕೊಂಡು ಸಂತೋಷದಲ್ಲಿ ಮೆರೆಯುತ್ತಿರುವನು" ಎಂದು ತಿಳಿಸಲು -ರಾಜನು ಅಪರಿಮಿತ ಕೋಪಾಕ್ರಾಂತನಾಗಿ"ಹೇ ದೇವದೇವನೆ ನನಗೆ ಆಜ್ಞೆಯನ್ನು ಕೊಡು ಆ ರಾಕ್ಷಸ ನನ್ನು ವಧೆ ಮಾಡಿ ಬರುವೆನು" ಎನಲು ಭಗವಂತನು ಆ ಮಾತನ್ನು ಕೇಳಿ ಆ ರಾಕ್ಷಸನು ಬ್ರಹ್ಮನ ವರಬಲದಿಂದ ಅವಧ್ಯನಾಗಿರುವುದನ್ನು ತಿಳಿಸಿ ಸಮಾಧಾನ ಪಡಿಸಿದನು. ಮನುಪುತ್ರ ಇಕ್ಷ್ವಾಕು ಮಹಾರ್ರಾಜನು ಭಗವಂತನ ಸಮಾಧಾನ ವಾಕ್ಯವನ್ನು ಕೇಳಿ ದುಃಖದಿಂದ-

ಹೇ ದೇವದೇವನೇ- ದಯಾಸಿಂಧೋ ಭಗವಾನ್ ಭಕ್ತವತ್ಸಲನೇ-ಅವನು ಹೇಗೆ ನಿನ್ನನ್ನು ಧ್ಯಾನ ಮಾಡಿದನು ? ಹೇಗೆ ಮಂದಿರವನ್ನು ಪ್ರವೇಶಿಸಿ ರತ್ನಹಾ ರವನ್ನು ಅಪಹರಿಸಿದನು ? ಆ ದುರಾತ್ಮನಾದ ರಾಕ್ಷಸ ಶತಾಸುರನನ್ನು ಹೇಗೆ ಸಂಹಾರ ಮಾಡುವುದು? ಎಂದು ರಾಜನು ಕೇಳಲು ಭಗವಂತನು ಶಾಂತತೆಯಿಂ ದಲೂ, ಮಧುರ ವಾಕ್ಯದಿಂದಲೂ ರಾಜನನ್ನು ಕುರಿತು ಎಲೈ ರಾಜನೇ ನಿನ್ನ ಪರಿಚಾರಕರು ಮತ್ತು ರತ್ನಹಾರದ ವಿಷಯವಾಗಿ ಚಿಂತಿಸಬೇಡ. ನನ್ನಲ್ಲಿ ಭಕ್ತಿ ಪ್ರೀತಿಯಿಂದ ಯಾರು ಪೂಜಿಸುವರೋ ಅವರು ಸುಖಪಡುವರು. ನನ್ನಲ್ಲೂ ನನ್ನ ಭಕ್ತರ ವಿಷಯದಲ್ಲೂ ವ್ಯತ್ಯಾಸವಾಗಿ ನಡೆದರೆ ಅದಕ್ಕೆ ಅವರು ತಕ್ಕ ಫಲವನ್ನು ಅನುಭವಿಸುವರು. ನೀನು ಚಿಂತಿಸಬೇಡ. ರತ್ನಹಾರವನ್ನು ನಾನು ಧರಿಸಿಕೊಂಡಿರು ವುದನ್ನು ನೀನು ಪುನಃ ನೋಡುವುದಲ್ಲದೇ ಕ್ರೂರನಾದ ಶತಾಸುರ ದಾನವನು ಶೀಘ್ರದಲ್ಲಿ ಯಮಾಲಯ ಸೇರುವುದನ್ನು ನೋಡುವೆ ಎಂದನು-

ಆನಂತರ ಭಗವಾನ್ ಶ್ರೀಮನ್ನಾರಾಯಣನು (ಶ್ರೀರಂಗ ನಾಯಕ) ಒಂದು ಮುಹೂರ್ತಕಾಲ ಯೋಚಿಸಿ ಅನಂತರ ನಿತ್ಯಸೂರಿಗಳಲ್ಲಿ ಒಬ್ಬನಾದ ತಮ್ಮ ಕಿಂಕರ ಪಾದುಕೆಯನ್ನು ಕರೆದು ಶತಾಸುರನನ್ನು ವಧಿಸಿ ಬರುವಂತೆ ಆಜ್ಞಾಪಿಸಿದನು.

ನಿತ್ಯಸೂರಿ ಪಾದುಕೆಯು, ಭಗವದಾಜ್ಞೆಯನ್ನು ಶಿರಸಾವಹಿಸಿ

ವಾಯುವೇಗದಿಂದ ರಸಾತಲವನ್ನು ಸೇರಿದನು-ಯಾವಾಗ ಮಹಾಮಹಿಮೆಯುಳ್ಳ ಪಾದುಕೆಯು ರಸಾತಲವನ್ನು ಸೇರಿದನೆಂದು ತಿಳಿಯಬಂದಿತೋ ಆಗ ಒಡನೆ ಶತಾಸುರನ ಅನುಚರರು ತಮ್ಮ ಒಡೆಯನಾದ ಶತಾಸುರನಿಗೆ ತಿಳಿಸಲು, ಒಡನೆ ಶತಾಸುರನು ಭಯಭ್ರಾಂತನಾಗಿ ಭಗವಂತನಿಗೆ ಪ್ರೀತಿಕರವಾದ ಶ್ರೇಷ್ಠ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ರತ್ನಹಾರವನ್ನು ಯಾರಿಗೂ ತಿಳಿಯದಂತೆ ಒಂದೆಡೆ ಭದ್ರವಾಗಿರುವ ಸ್ಥಳದಲ್ಲಿ ಬಚ್ಚಿಟ್ಟು ಒಬ್ಬರಿಗೂ ತಿಳಿಯದಂತಿರಲು ತೀಕ್ಷ್ಣವಾದ ಮುಳ್ಳಿನ ಪೊದೆಗಳಿಂದಲೂ, ಬಹುವೃಕ್ಷಗಳಿಂದಲೂ ಕೂಡಿದ ಅರಣ್ಯ ಮಧ್ಯದಲ್ಲಿ ತಾನೂ ಒಂದು ವೃಕ್ಷವಾಗಿ ನಿಂತನು-

ಇತ್ತ ಶ್ರೇಷ್ಠ ಮಹಾಮಹಿಮೆಯುಳ್ಳ ಪಾದುಕೆಯು ಶಠಾಸುರನು ಅಪಹರಿಸಿ ತಂದ ಭಗವಂತನ ರತ್ನಹಾರವೂ ಮತ್ತೂ ಶಠಾಸುರನೂ, ಎಲ್ಲೂ ಕಾಣದಿರಲು ಪಾದುಕೆಯು ಮುಹೂರ್ತಕಾಲ ಧ್ಯಾನ ಮಗ್ನನಾದನು.

ಪಾದುಕೆಗೆ ಶಠಾಸುರನ ಮಾಯಾಜಾಲವೆಲ್ಲಾ ಗೋಚರವಾಯಿತು.- ಒಡನೆ ಪಾದುಕೆಯು ಮಹಾ ಕೋಪಯುಕ್ತನಾಗಿ ಉಪಾಯವೇನೆಂದಾಲೋಚಿಸಿ ದಾವಾನಲ-ಅಗ್ನಿರೂಪವನ್ನು ಹೊಂದಿ ಅಲ್ಲಿದ್ದ ವೃಕ್ಷ ಸಮೂಹವನ್ನೆಲ್ಲಾ ದಗ್ಧ ಮಾಡಿದನು. ಇದರಿಂದ ನಿತ್ಯಸೂರಿ ಪಾದುಕೆಯ ಕೋಪಾಗ್ನಿಯಿಂದ ಶಠಾಸುರನು ತನ್ನ ಪರಿವಾರದೊಂದಿಗೆ ದಗ್ಧನಾದನು-ಇದರಿಂದ ರಸಾತಲದವರೆಲ್ಲರೂ ತೃಪ್ತಿ ಸಂತೋಷಚಿತ್ತರಾದರು. ಮಹಾಮಹಿಮೆಯುಳ್ಳ ಪಾದುಕೆಯು ವಿಷ್ಣು ಪ್ರೀತಿಕರವಾದ ಆ ರತ್ನಹಾರವನ್ನು ಅಯೋಧ್ಯೆಗೆ ತರಲು ಆ ನಗರದ ಅಯೋಧ್ಯಾಧಿಪತಿಯು ರಾಜಮಹಿಷಿ ತನ್ನ ಪತ್ನಿಯೊಂದಿಗೂ, ರಾಜಪ್ರಮುಖರು ಪ್ರಜೆಗಳು, ವಸಿಷ್ಠರು ಮುಂತಾಗಿ ಪುರಜನರೂ, ರಾಜಪರಿವಾರವೂ ಎಲ್ಲರೂ ಪಾದುಕೆಗೆ ನಮಸ್ಕರಿಸಿ ಮರ್ಯಾದೆಯಿಂದ ಬರಮಾಡಿಕೊಂಡು ಸಂತೋಷಚಿತ್ತದಿಂದ ಅನೇಕವಾಗಿ ಪಾದುಕೆಯನ್ನು ಸ್ತೋತ್ರ ಮಾಡಿದರು.

ಪಾದುಕೆಯು ತನ್ನ ಕೋಪಾಗ್ನಿಯಿಂದ ಶಠಾಸುರನನ್ನು ದಹಿಸಿದ್ದರಿಂದ ಪಾದುಕೆಯನ್ನು ಶಠಕೋಪ ಎಂಬುದಾಗಿ ಕರೆದು ಗೌರವಿಸಿದರು-

ಗರುಡಧ್ವಜ ಮಹಾವಿಷ್ಣುವು ದಿವ್ಯತೇಜೋಮಯವಾದ ಆ ರತ್ನಹಾರವನ್ನು ಪುನಃ ತನ್ನ ವಕ್ಷಸ್ಥಳದಲ್ಲಿ ಅಲಂಕಾರವಾಗಿ ಧರಿಸಿದನು.

ಇತರ ಸಂಹಿತೆಗಳಲ್ಲಿ ಪಾದುಕಾ ಎಂದೇ ವ್ಯವಹರಿಸಲ್ಪಟ್ಟಿರುವುದು-ಶಠಕೋಪವೆಂಬ ಶಬ್ದ ನಿರೂಪಿಸಿರುವುದು ಕಡಿಮೆ-ಮುಂದೆ ಶ್ರೀ ವೈಷ್ಣವರಲ್ಲಿ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಪ್ರಚಲಿತವಾಗಿರುವ ಶಠಕೋಪ ಎಂಬ ಶಬ್ದಕ್ಕೆ ಬೇರೆ ಅರ್ಥವುಂಟು-ಶಠರಿಪು-ಶಠ ಎಂಬುದು ಲೋಕದಲ್ಲಿ ಎಲ್ಲೆಲ್ಲೂ ವ್ಯಾಪಿಸಿರುವ ವಾಯುವಿನಲ್ಲಿ ಅನೇಕ ಶಕ್ತಿಗಳಿರುವಂತೆ ಶಠವೆಂಬ ಅಜ್ಞಾನ ಶಕ್ತಿಯು ಇರುವುದು. ಶಿಶು ಜನನವಾದ ಒಡನೆ ಈ ಶಠವೆಂಬ ವಾಯುವು ಶಿಶುವನ್ನಾವರಿಸುವುದರಿಂದ ಆಗ ಶಿಶುವು ಅಳುವುದಕ್ಕಾರಂಭವಾಗುವುದು. ಇದು ಪ್ರಕೃತಿತತ್ತ್ವವು.

ಆದರೆ ಪರಾಂಕುಶ-ಕಾರಿ-ಎಂಬುವವರು ಶಿಶುವಾಗಿ ಹುಟ್ಟಿದ ತಕ್ಷಣ ಲೋಕದ ಶಿಶುವಿನಂತೆ ರೋದನ ಮಾಡಲಿಲ್ಲವು. ಕಾರಣ ಆ ಅಜ್ಞಾನವೆಂಬ ಈ ಶಠವಾಯುವು ಇವರನ್ನು ಆವರಿಸಲು ಸಾಧ್ಯವಾಗಲಿಲ್ಲವು. ಆದ್ದರಿಂದ ನಮ್ಮಾಳ್ವಾರಿಗೆ ಶಠ-ಶಠವೆಂಬ ವಾಯುವಿಗೆ ಅರಿ=ಶತ್ರುವಾಗಿದ್ದರು. ಆದ್ದರಿಂದ ಅವರಿಗೆ ಶಠಾರಿ ಎಂದು ಹೆಸರು. ಆದ್ದರಿಂದ ಭಗವತ್ಪಾದುಕೆಗೆ ಸರಿಸಮಾನವಾದ ನಮ್ಮಾಳ್ವಾರನ್ನು ಶಠಕೋಪ ಅರ್ಥಾತ್ ಶಠ ಎಂಬ ಅಜ್ಞಾನ ವಾಯುವಿನ ಮೇಲೆ ಕೋಪ ಮಾಡಿದವರು =ಜಯಿಸಿದವರು ಎಂಬ ಅನ್ವರ್ಥನಾಮದಿಂದ ಕರೆದವರಾದರು.

ಆಗಮಶಾಸ್ತ್ರದಲ್ಲಿ ಶಠ-ಶಠಾಸುರನನ್ನು (ದುಷ್ಟಶಕ್ತಿ) ಅರಿ=ಶತ್ರು-ಕೋಪ= ಜಯಿಸಿದವನು ಎಂದು ಹೇಳಿರುವುದು ಎರಡೂ ಒಂದೇ ಅರ್ಥವು.

ರತ್ನಜೇ ಲೋಹಜೇವಾಪಿ ದಾರುಜೇಸುವಿಚಿತ್ರಿತೇ ।
ಅರ್ಚನಾ ದಾನರೂಪೇಣ ಪಾದುಕೇ ಸಮುದೀರಿತೇ ।

ನಾರದೀಯ ಸಂ. ೨೭
ವಿ.ಕಲ್ಪ ಪುಟ. ೧೮೫

ಭಗವಂತನು ತನ್ನ ಪಾದುಕೆಯನ್ನು ಲೋಕಕ್ಷೇಮವಾಗಿ ಕಳುಹಿಸಿ ದುಷ್ಟನಾದ ಶಠಾಸುರನನ್ನು ನಿಗ್ರಹಿಸಿ ಲೋಕದ ಜನರನ್ನು ಅನುಗ್ರಹಿಸಿದುದರಿಂದ ನಾವು ಅದೇ ಕಾರಣವಾಗಿ ಭಗವಂತನ ಪಾದುಕೆಯನ್ನು ಸುವರ್ಣ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ರತ್ನಾದಿ• ವಿವಿಧ ದ್ರವ್ಯಗಳಿಂದ ನಿರ್ಮಿಸಿ ನಮ್ಮ ಶಿರಸ್ಸಿನ ಮೇಲೆ ಭಗವಂತನ ಅನುಗ್ರಹವಾಗಿ ಧರಿಸುವೆವು.

ಆ ಪಾದುಕೆಯು ಅರ್ಚಾರೂಪದಲ್ಲಿ ನಿರ್ಮಿಸುವಾಗ ಕಿರೀಟ ರೂಪದಲ್ಲಾಗಲೀ ಪಾದುಕಾರೂಪದಲ್ಲಾಗಲೀ ಇರಬಹುದು. ಆಗಮ ಶಾಸ್ತ್ರದಲ್ಲಿ ವಿವರವಾಗಿ ಕಿರೀಟಾಕಾರವನ್ನು ಮಾನ ಲಕ್ಷಣಗಳಿಂದ ವಿವರಿಸಿರುವುದು.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ದೇವಸ್ಥಾನದಲ್ಲಿ ಮಹಾ ಮಹಾಮಂಗಳಾರತಿ ಶಾತ್ತುಮರೈ ಹೇಗೆ ನಡೆಯುತ್ತದೆ.

ಶ್ರೀರಂಗ ಮಂಗಳಮಣಿಂ ಕರುಣಾನಿವಾಸಂ
ಶ್ರೀ ವೆಂಕಟಾದ್ರಿ ಶಿಖರಾಲಯ ಕಾಲಮೇಘಂ
ಶ್ರೀ ಹಸ್ತಿಶೈಲ ಶಿಖರೋಜ್ವಲ ಪಾರಿಜಾತಂ
ಶ್ರೀಶಂ ನಮಾಮಿ ಶಿರಸಾ ಯದುಶೈಲದೀಪಮ್

ದೇವಸ್ಥಾನದಲ್ಲಿ ಪ್ರತಿಯೊಂದು ಕಾರ್ಯವೂ ಎಂದರೆ ಪ್ರತಿಷ್ಠೆ-ಪೂಜಾ, ಉತ್ಸವ ಪ್ರಾಯಶ್ಚಿತ್ತ ಮುಂತಾಗಿ ಸಕಲವೂ ಆಗಮಶಾಸ್ತ್ರವನ್ನನುಸರಿಸಿ ನಡೆಯುತ್ತದೆ. ಈ ಆಗಮಶಾಸ್ತ್ರವು ವೇದಶಾಸ್ತ್ರದ ಉಪಬ್ರಹ್ಮಣವೇ ಹೊರತು ಬೇರೆಯಲ್ಲ. ಮೇಲೆ ತಿಳಿಸಿದ ಪೂಜಾ ವಿಧಾನವು ಆರು ವಿಧಾನಗಳಲ್ಲಿ ನಡೆಯುತ್ತವೆ.1.ಮಂತ್ರಾಸನ 2.ಸ್ನಾನಾಸನ 3.ಅಲಂಕಾರಾಸನ 4.ಭೋಜ್ಯಾಸನ 5.ಪರ್ಯಂಕಾಸನ (ಯಾತ್ರಾಸನ) 6.ಶಯನಾಸನ ಎಂಬುದಾಗಿ.

ಇವುಗಳಲ್ಲಿ 1, 2, 3, 4, 6 ಭಾಗಗಳೆಲ್ಲವೂ ವೇದಶಾಸ್ತ್ರ ಕರ್ಮಕಾಂಡ ಪ್ರತಿನಿಧಿಯಾಗಿ ನಡೆಯುತ್ತವೆ. 5ನೇ ಭಾಗವು ವೇದಶಾಸ್ತ್ರದ ಜ್ಞಾನಕಾಂಡದ ರೀತ್ಯಾ ಉಪನಿಷತ್ ರೀತ್ಯಾ ನಡೆಯುವುದು:
ಯಾತ್ರಾಸನ (ಪರ್ಯಂಕಾಸನ)ದಲ್ಲಿ ನಡೆಯುವ ಕೆಲವು ಕಾರ್ಯಗಳು ಎಂದರೆ ತೀರ್ಥ ಪ್ರಸಾದ -ಶ್ರೀಶಠಗೋಪಮರ್ಯಾದೆ, ಪರಿವಟ್ಟ, (ಶೇಷವಸ್ತ್ರ)ಮಾಲೆ ಮರ್ಯಾದೆಗಳು, ಆಗಮಶಾಸ್ತ್ರದಲ್ಲಿ ಸಂದರ್ಭಾನುಸಾರ ಅಲ್ಲಲ್ಲಿ ಹೇಳಿರುವುದು. (ಪ್ರಸಂಗಾತ್ ಕೆಲವು ಸ್ಥಳಗಳಲ್ಲಿ ಹೇಳಿರುವುದು)ಭಗವಂತನ ಮುಂದೆ (ತಂದೆ ತಾಯಿಗಳ ಮುಂದೆ) ಈ ಚೇತನರ ಪ್ರಾರ್ಥನೆಯೇನು? (ಅರ್ಥಪಂಚಕ) ಈ ವಿಷಯಗಳನ್ನೆಲ್ಲಾ ಒಂದು ಸ್ಥಳದಲ್ಲಿ ಬರೆದಿರುವುದಿಲ್ಲ. ಅವುಗಳನ್ನೆಲ್ಲಾ ಕ್ರೋಢೀಕರಿ-. ಇಲ್ಲಿ ಬರೆಯಲಾಗಿದೆ.

ಆಗಮಶಾಸ್ತ್ರದಲ್ಲಿ ಉಪಾಸನೆ, ಧ್ಯಾನ ಪ್ರಕ್ರಿಯೆಗಳು, ಪ್ರತ್ಯೇಕವಾಗಿ ಹೇಳಿರುವುದು-ಆದರೆ ಭಗವಂತನಿಗೆ ನಿವೇದನಾದಿಗಳಾದ ಮೇಲೆ ಈಗ ಪ್ರತಿದಿನವೂ ನಡೆಸಿ ಬರುತ್ತಿರುವ ಶಾತ್ತುಮರೈ ಮಹಾಮಂಗಳಾರತಿ ಕ್ರಮವು ಹೇಳಿರುವುದಿಲ್ಲ. ಕೇವಲ "ಆಗಮಾಧ್ಯಯನಂಕುರ್ಯಾತ್" ಎಂಬುದಾಗಿ ಒಂದು ವಾಕ್ಯ ಕಂಡು ಬರುವುದು. ಹಾಗೆಂದರೇನು? ಅದಕ್ಕೇನು ಅರ್ಥ? ಆಗಮ ಸಂಹಿತೆಗಳನ್ನು ವೇದ ರಾಮಾಯಣ ಮತ್ತು ಪ್ರಬಂಧಗಳಂತೆ ಪಾರಾಯಣ ಮಾಡುವುದೆ ? ಅಥವಾ ಪೂಜಾ ಪ್ರಾಯಶ್ಚಿತ್ತ, ಉತ್ಸವ ಇತಾದಿಗಳ ವಿಚಾರವಾಗಿ ಬಂದ ಶಾಸ್ತ್ರಸಂದೇಹ ವಾದವಿವಾದ ಮುಂತಾದವುಗಳನ್ನು ದೇವರ ಮುಂದೆ ಕುಳಿತು ಚರ್ಚೆ ಮಾಡಿ ನಿರ್ಣಯಿಸುವುದೆ ? ಇದು ಯಾವುದೂ ಅಲ್ಲ. ಹಾಗಾದರೆ ಆಗಮಾಧ್ಯಯನವೆಂದರೇನು ? ಆಗಮಾಧ್ಯಯನವೆಂದರೂ ವೇದಾಂತವೆಂದರೂ ಎರಡೂ ಒಂದೇ ಅರ್ಥವು. ಆಗಮಶಾಸ್ತ್ರವು ವೇದದ ಉಪಬ್ರಂಹಣವಾದುದರಿಂದ ಭಗವಂತನಿಗೂ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಜೀವಾತ್ಮನಿಗೂ ಇರುವ ಸಂಬಂಧವನ್ನು ತಿಳಿಸುವುದು. ಶೇಷ-ಶೇಷೀಭಾವವು ಆಗಮಾಧ್ಯಯನ ಅಥವಾ ವೇದಾಂತಾರ್ಥವೆಂಬ ಶೇಷ ಶೇಷೀಭಾವ ಸಂಬಂಧವನ್ನು ತಿಳಿಸುವ ಮೂಲ ಸಂಸ್ಕೃತ ಶ್ಲೋಕವೂ ಸರಿಯಾಗಿ ದೊರಕಿರುವುದಿಲ್ಲ. ಇಲ್ಲಿ ಆಗಮತ್ರಯವನ್ನೂ ಸೇರಿಸಿ (ಪಂಚರಾತ್ರ-ವೈಖಾಸನ-ಶೈವ) ಒಂದೇ ಅರ್ಥ ಬರುವಂತೆ ಬರೆಯಬೇಕು. ಭಗವಂತನ ಪೂಜೆ ಮಾಡಿದನಂತರ ಅವನ ಅನುಗ್ರಹಕ್ಕೆ ಕಾದಿರುತ್ತೇವೆ. ಅರ್ಥಾತ್ ಪೂಜಾ ವಿಧಾನಗಳೆಲ್ಲವೂ ಕರ್ಮಕಾಂಡಕ್ಕೆ ಸೇರಿರುವುದು. ಇದಾದನಂತರ ಜ್ಞಾನಕಾಂಡ ಪ್ರಕ್ರಿಯೆ. ಅದೇಆಗಮಾಧ್ಯಯನವು ಅದನ್ನೇ ಮಹಾ ಮಂಗಳಾರತಿ ಎಂದೂ ಹೇಳಬೇಕಾಗುವುದು. ಮೊದಲೇ ತಿಳಿಸಿದ ಪ್ರಕಾರ ಶೇಷ - ಶೇಷೀ ಭಾವದ ಯಾವ ಶ್ಲೋಕವೂ ಸರಿಯಾಗಿ ದೊರಕದ್ದರಿಂದ ಈ ವಿಚಾರವನ್ನೆಲ್ಲಾ ಚರ್ಚೆಮಾಡಿ ಶ್ರೀರಾಮಾನುಜರೂ; ಮಹಾವಿದ್ವಾನ್ ಕೂರತ್ತಾಳ್ವಾರ್ ಶ್ರೀವತ್ಸಾಂಕಮಿಶ್ರರೂ ಸೇರಿ ಈ ಮಹಾಮಂಗಳಾರತಿಯ ಕ್ರಮವನ್ನು ಸ್ಥಿರಪಡಿಸಿದಂತೆ ಅದ್ಯಾವಧಿ ನಡೆದು ಬರುತ್ತಿದೆ. ಮಹಾಮಂಗಳಾರತಿ-ಯಲ್ಲಿ ವೇದ ಉಪನಿಷತ್ ಭಾಗ "ಸಮುದ್ರಮುದರಮಂತರಿಕ್ಷಂ "ತಸ್ಯೈವಂ ವಿದುಷೋ " ಇದು ಹೇಳಿದ ಮೇಲೆ ಮತ ಗ್ರಂಥವಾದ ದ್ರಾವಿಡ ಪ್ರಬಂಧ ನಾಲ್ಕು ಸಹಸ್ರ ಪದ್ಯಗಳಲ್ಲಿ ಬಹು ಮುಖ್ಯವಾದ ಶೇಷ ಶೇಷೀ ಭಾವವನ್ನು ತೋರಿಸುವ ಶಿತ್ತಂಶಿರು-ಕಾಲೇ " ಎಂಬ ಪಾಶುರ (ಪದ್ಯ)ವನ್ನು ಹೇಳಿದನಂತರ ತೀರ್ಥ ಶಠಗೋಪ , ಮಾಲೆ ಮರ್ಯಾದೆಗಳು ಅದ್ಯಾವಧಿ ನಡೆದು ಬರುತ್ತಿದೆ. ಇದಕ್ಕೆ ಶಾತ್ತುಮರ್ರೈ ಅಥವಾಮಹಾಮಂಗಳಾರತಿ ಎಂದು ಹೆಸರು. ವೇದ-ಈ ಉಪನಿಷತ್ತಿನ ಅರ್ಥ -ದ್ರಾವಿಡ ಶಾತ್ತುಮರ್ರೈ ಶಬ್ದಾರ್ಥ

ಸಂಸ್ಕೃತ ವೇದ-ಉಪನಿಷತ್ ಭಾಗ

ವೇದ : ಸಂಸ್ಕೃತ ವೇದ-ಉಪನಿಷತ್ ಭಾಗ ಆಗಮಾಧ್ಯಯನ

ಶಾತ್ತು :ಹೇಳುವುದು

ಮರ್ರೈ:ದ್ರಾವಿಡವೇದ

ಅರ್ಥಾತ್ ದೇವರ ಮುಂದೆ ಸಂಸ್ಕೃತ ವೇ ದ ಮತ್ತು ದ್ರಾವಿಡವೇದ ಎರಡನ್ನೂ ಹೇಳಬೇಕು

ಶಾತ್ತುಮರ್ರೈ: ಕರ್ನಾಟಕ ಭಾಷೆಯಲ್ಲಿ ಒಂಗೇ ಪದ : ಮರೆಹೋಗುವುದು, ನನ್ನನ್ನು ಕಾಪಾಡು ಎಂದು ಕೇಳಿಕೊಳ್ಳುವುದು, ಶರಣಾಗತನಾಗಿ ಕೇಳಿಕೊಳ್ಳುವುದು. ಎರಡು ಪದವಾಗಿ ಹೇಳಿದರೆ ಮೊದಲನೆಯದು ಶಾತ್ತು ಕ್ರಿಯಾಪದವಾಗುವುದು. ಎರಡನೆಯದು ಮರೆ ಹೋಗುವುದು, ಶರಣು ಎಂದರ್ಥವು.

ಇಲ್ಲಿ ಮರ್ರೈ ಎಂದರೆ ವೇದ : ಶ್ರೀವೈಷ್ಣವರಲ್ಲಿ ಉಭಯವೇದ, ಉಭಯವೇದಾನ್ತ ಎಂಬ ಶಬ್ದ ಪ್ರಯೋಗವಿದೆ. ಕ್ರಿಯೆ ಆಚರಣೆ ಎಲ್ಲಾ ಇರುವುದರಿಂದ ಶಾತ್ತುಮರ್ರೈ ಎನ್ನುವಾಗ ವೇದವನ್ನು ಹೇಳುವುದು ಎಂದಾಗ ಯಾವ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ವೇದವ್ವೆಂದು ಪ್ರಶ್ನೆ ಬರುತ್ತದೆ. " ತಮಿಳ್ ಮರೈಕಳೇತಿ" ದ್ರಾವಿಡವೇದ ವೆಂದು ಹಿರಿಯರು ನಿರ್ಣಯ ಮಾಡಿರುತ್ತಾರೆ. ಆದ್ದರಿಂದ ದ್ರಾವಿಡ ದೇಶಸ್ಥ ಆಳ್ವಾರಾಚಾರ್ಯರುಗಳಿಂದ ಪ್ರಣೀತವಾದ ದ್ರಾವಿಡ ಪ್ರಬಂಧಗಳನ್ನು ಹೇಳುವುದು, ಹೇಳಬೇಕು ಎಂದು ಸ್ವತಃ ಸಿದ್ಧವಾಗುತ್ತದೆ.

ದ್ರಾ ವಿ ಡ ವೇ ದ

ವೇದವೆಂದರೇನು? ವೇದವೆಂದರೆ ಜ್ಞಾನ . ಆ ಜ್ಞಾನವನ್ನು ಅಂದರೆ ಆ ವೇದವನ್ನು ಎಲ್ಲರೂ ಒಪ್ಪಿದರೆ ಆಗ ಅದು ವೇದವೆಂದು ಕರೆಯಲ್ಪಡುತ್ತದೆ. ಆ ರೀತಿಯಲ್ಲಿ ಆ ಸಂಸ್ಕೃತ ವೇದಗಳನ್ನು ಎಲ್ಲರೂ ಒಪ್ಪಿರುತ್ತಾರೆ ಅಂದರೆ ತ್ರಿಮತಸ್ಥರೆಲ್ಲರೂ ಒಪ್ಪಿರುತ್ತಾರೆ. ಈದ್ರಾವಿಡ ವೇದವನ್ನು ತ್ರಿಮತಸ್ಥರೂ ಒಪ್ಪಿರುತ್ತಾರೆಯೇ ? ಒಪ್ಪದಿದ್ದಲ್ಲಿ ಅದು ಸಾರ್ವಜನಿಕವಾಗಿ ಹೇಗೆ ವೇದವೆಂದು ಕರೆಯಲ್ಪಡುತ್ತದೆ ? ಇದು ಪ್ರತ್ಯೇಕವಾದ ವಿಷಯವಾದ್ದರಿಂದ ಲಂಬಿಸಿ ಬರೆದಿರುವುದಿಲ್ಲ. ಮುಂದಿನ ಅಧ್ಯಾಯದಲ್ಲಿ ತಿಳಿಸಲಾಗುವುದು.

ಪ್ರಕೃತ ಶ್ರೀವೈಷ್ಣವರು ಹೇಳುವ ದ್ರಾವಿಡ ವೇದದ ವಿಷಯವಾಗಿ ಮಾತನಾಡೋಣ :

ಶಾತ್ತುಮರೈ: ಆಸೇತು ಹಿಮಾಚಲಪರ್ಯಂತ ಸಂಸ್ಕೃತ ವೇದವು ನಾಡಿನ ಎಲ್ಲಾ ಸ್ಥಳಗಳಲ್ಲಿಯೂ ಪ್ರಸರಿಸಿ ಪ್ರಸಿದ್ಧವಾಗಿರುವುದು. ಇನ್ನು ದ್ರಾವಿಡ ವೇದ ಇದು ಹೇಗೆ ಪ್ರಸಿದ್ಧವು?. ನಮ್ಮ ಭರತಖಂಡದಲ್ಲಿ, ಎರಡು ಭಾಷೆಗಳಿವೆ. ಒಂದು ಸಂಸ್ಕೃತ ಎರಡನೆಯದು ದ್ರಾವಿಡಭಾಷೆ. ಭರತ ಖಂಡದಲ್ಲಿ ದ್ರಾವಿಡ ಭಾಷೆಯನ್ನು ಬಿಟ್ಟು ಯಾವ ಭಾಷೆ ತೆಗೆದುಕೊಂಡರೂ ಅದರಲ್ಲಿ 100ಕ್ಕೆ 50-60-70 ಭಾಗ ಸಂಸ್ಕೃತ ಶಬ್ದಗಳು ಸೇರಿಕೊಂಡಿವೆ. ಈ ದ್ರಾವಿಡ ಭಾಷೆಯಲ್ಲಿ ಸಂಸ್ಕೃತ ಪದಗಳು ಸೇರಿರುವುದಿಲ್ಲ. ಬಹಳ ಅಲ್ಪ. ಆದ್ದರಿಂದ ಇವೆರಡೂ ಮೂಲ ಅನಾದಿ ಭಾಷೆಗಳು. ಈ ದ್ರಾವಿಡ ಭಾಷೆಯು ಋಷಿ ಪ್ರಣೀತವಾದುದೆಂದು ನಮ್ಮ ಹಿರಿಯರು ಒಪ್ಪಿರುವುದರಿಂದ ಆ ಭಾಷೆಯು ನಮಗೆ ಉಪಾದೇಯವು. ಕೊನೆಯಲ್ಲಿ ಉಪಯುಕ್ತಾಂಶಗಳು ಎಂಬ ವಿಚಾರ ಬರೆದಿರುವುದು ಅದರಲ್ಲಿ ಸಂಸ್ಕೃತ ವೇದ -ದ್ರಾವಿಡ ವೇದ ಅದರ ಪೂರ್ಣ ವಿವರ ಬರೆದಿರುವುದನ್ನು ನೋಡಬಹುದು.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಶಾತ್ತುಮರ್ೈ-ದ್ರಾವಿಡವೇದ

ಶಾತ್ತುಮರ್ೈ: ಈ ಶಬ್ದವು ಅರವ ಭಾಷೆ. ಇದರಲ್ಲಿ ಎರಡು ಶಬ್ಧಗಳಿವೆ. ಶಾತ್ತು+ಮರ್ೈ, ಮರ್ೈ = ವೇದ ಶಾತ್ತು: ಹೇಳುವುದು. ವೇದವನ್ನು ಹೇಳುವುದು ಹೇಳಬೇಕು. ಅರ್ಥಾತ್ ಮಹಾಮಂಗಳಾರತಿ ಕಾಲದಲ್ಲಿ ದ್ರಾವಿಡ ವೇದವನ್ನು ಹೇಳುವುದು-ಹೇಳಬೇಕು ಎಂದರ್ಥ. ದ್ರಾವಿಡವೇದವೆಂದರೆ: ಭಕ್ತಿಪರರಾದ ಆಳ್ವಾರುಗಳು ನಾಲ್ಕು ಸಹಸ್ರ ಪಾಶುರಗಳನ್ನು (ಪದ್ಯಗಳನ್ನು) ಭಗವಂತನ ನಿರ್ಹೇತುಕ ಕಟಾಕ್ಷದಿಂದ ಹೃದಯದಲ್ಲಿ ಉತ್ಪನ್ನವಾಗಿ ಹೊರಗೆ ಬಂದುದನ್ನು ಬರೆದಿರುವದು: ಅದರಲ್ಲಿ ಸಾರ್ಥತಮವಾಗಿರುವ ಭಾಗವನ್ನು ಮಹಾಮಂಗಳಾರತಿ ಸಮಯದಲ್ಲಿ ಹೇಳಬೇಕು.

ನಮ್ಮಾಳ್ವಾರರು ರಚಿಸಿರುವ ತಿರುವಾಯ್ಮೊಳಿಯಲ್ಲಿ 10ನೇ ಶತಕದ 9ನೇ ತಿರುವಾಯ್ಮೊಳಿ ಶೂಳವಿಶುಂಬು 10 ಪಾಶುರಗಳು 10ನೇ ಶತಕದ 10ನೇ ತಿರುವಾಯ್ಮೊಳಿ-ಮುನಿಯೇ ನಾನ್ಮುಗನೇ ಎಂಬ 10 ಪಾಶರುಗಳು, ಈ ಇಪ್ಪತ್ತು ಪಾಶುರಗಳಲ್ಲಿ ಅರ್ಚಿರಾದಿ ಮಾರ್ಗವು ಹೇಳಲ್ಪಡುತ್ತದೆ. ಅರ್ಥಾತ್ ಚೇತನರು ಈ ಪಂಚೀಕರಣ (ಪಾಂಚಭೌತಿಕ) ಶರೀರವನ್ನು ಬಿಟ್ಟು ಬ್ರಹ್ಮಾಂಡವೆಂಬ ಈ ಪ್ರಕೃತಿ ಮಂಡಲವನ್ನು (ಬಿಟ್ಟು) ದಾಟಿ ವಿರಜಾನದಿಯಲ್ಲಿ ಸ್ನಾನಮಾಡಿ ಅಲ್ಲಿ ಸೂಕ್ಷ್ಮ ಶರೀರವನ್ನು ಬಿಟ್ಟು ಸಾಲೋಕ್ಯವೆಂಬ ಪರಮಪದವನ್ನು ಸೇರುವನು. ಅಲ್ಲಿ ಸಾರೂಪ್ಯ ಎಂಬುವುದಾಗಿ ಭಗವಂತನ ಸದೃಶ ರೂಪದಿಂದ ದಿವ್ಯಶರೀರವನ್ನು ಹೊಂದಿ ನಿತ್ಯಸೂರಿಗಳೊಂದಿಗೂ, ಮುಕ್ತಾತ್ಮರೊಂದಿಗೂ ಸೇರಿ ಸಾಮೀಪ್ಯ-ಶ್ರೀಯಪತಿ ಶ್ರೀಮನ್ನಾರಾಯಣನ ಸನ್ನಿಧಿಗೆ ಸೇರುವನು. ಅಲ್ಲಿ ಭಗವಂತನ ಗುಣಗಾನವೆಂಬ ಸಾಯುಜ್ಯ ಸ್ತೋತ್ರಗಳನ್ನು ಹೇಳುತ್ತಾ ನಚ ಪುನರಾವರ್ತತೇ-ನ ಚಪುನರಾವರ್ತತೇ ಎಂಬಂತೆ ಇನ್ನು ಮೇಲೆ ಜನನಮರಣಗಳಿಲ್ಲದೆ ಬ್ರಹ್ಮಾನಂದವನ್ನು ಹೊಂದುವನು, ಎಂಬ ವಿಷಯವನ್ನು ತಿಳಿಸುತ್ತದೆ.

ಈ ತಿರುವಾಯ್ಮೊಳಿಯ 20 ಪಾಶುರಗಳನ್ನು ಹೇಳಲು ಸಮಯವಿಲ್ಲವಾದಲ್ಲಿ 10ನೇ ಶತಕದ 10ನೇ ದಶಕದ ಹತ್ತು ಪಾಶುರಗಳಿಂದ ಮುನಿಯೇ ನಾನ್ಮೊಗನೇ ಎಂಬ ಹತ್ತು ಪಾಶುರಗಳನ್ನು ಹೇಳಬಹುದು. ಅದಕ್ಕೂ ಸಮಯವಿಲ್ಲವೆಂದು ಕಂಡುಬಂದರೆ , ಆಗ 10ನೇ ದಶಕದ ಕೊನೆಯ ಎರಡು ಪಾಶುರಗಳಾದ ಶೂಳದಕನ್ರು. ಮತ್ತು ಅವಾವರ ಚೂಳರಿಯ್ಯ ಎಂಬ ಎರಡು ಪಾಶುರಗಳನ್ನು

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಹೇಳಬಹುದು. ಪ್ರಕೃತ ಆ ಎರಡು ಪಾಶುರಗಳನ್ನೂ ಹೇಳುವುದಿಲ್ಲ. ಆದರೆ ಮಹಾಮಂಗಳಾರತಿ ಕಾಲದಲ್ಲಿ ಆಂಡಾಳ್ ಗೋದಾದೇವಿ ರಚಿಸಿದ ತಿರುಪ್ಪಾವೈ ಎಂಬ 30 ಪಾಶುರಗಳಲ್ಲಿ ಕೊನೆಯ ಎರಡು ಪಾಶುರಗಳಾದ ಶಿತ್ತಂಶಿರುಕಾಲೇ 2ವಂಗಕ್ಕಡಲಕಡೈನ್ದ" ಎಂಬ ಎರಡು ಪಾಶುರಗಳನ್ನು ಮಾತ್ರ ಅನುಸಂಧಿಸಿ ಬರುವರು. ಇದಕ್ಕೆ ಕಾರಣವೇನು ?

ಎಲ್ಲಾ ಆಳ್ವಾರುಗಳೂ ಆ ಆಳ್ವಾರುಗಳಲ್ಲಿ ಪ್ರಸಿದ್ಧರಾದ ತಿರುಮಂಗೈಯಾಳ್ವಾರು ಅದರಲ್ಲಿ ಪ್ರಧಾನರಾದ ನಮ್ಮಾಳ್ವಾರರೂ ಸಹ ಇವರೆಲ್ಲರೂ ಸೇರಿ ಭಗವಂತನ ನಿರ್ಹೇತುಕ ಕಟಾಕ್ಷದಿಂದ ಉಂಟಾದ ಅಲೌಕಿಕ ವಿದ್ವತ್ ಶಕ್ತಿಯಿಂದ ರಚಿತವಾದ ಆ ನಾಲ್ಕು ಸಹಸ್ರ ದಿವ್ಯಪ್ರಬಂಧ ಪಾಶುರಗಳಿಗಿಂತ ಈ ಗೋದಾದೇವಿಯು ರಚಿಸಿದ ತಿರುಪ್ಪಾವೈ 30 ಪಾಶುರಗಳಲ್ಲಿ ಕೊನೆಯ ಎರಡು ಪಾಶುರಗಳು ಶ್ರೇಷ್ಠವೆಂದು ಹೇಳಿ ಅದನ್ನು ಮಹಾ ಮಂಗಳಾರತಿ ಸಮಯದಲ್ಲಿ ಪ್ರತಿದಿನ ಹೇಳಬೇಕಾದರೆ ಅದಕ್ಕೆ ಪ್ರಬಲ ಕಾರಣವಿರಬೇಕು. ಅಥವಾ ಅದರಲ್ಲಿ ವಿಶೇಷಾರ್ಥಗಳು ಇರಬೇಕೆಂದು ಅರ್ಥವಾಗುತ್ತದೆ.**ಶೇಷ ಶೇಷೀ ಭಾವ:** ಆ ಎರಡು ಪಾಶುರಗಳಲ್ಲಿ ವಿಶೇಷವೇನಿದೆ ? ತಿರುವಾಯ್ಮೊಳಿಯಲ್ಲಿ ತಿಳಿಸಿದ 'ವಿಷಯ ಮುಕ್ತಾತ್ಮರ ವಿಷಯ. ನಾವು ಮುಮುಕ್ಷುಗಳು ಈ ಪ್ರಕೃತಿ ಲೋಕದಲ್ಲಿರುವವರು. ಭಗವಂತನ ವಿಷಯದಲ್ಲಿ ಹೇಗೆ ನಡೆದುಕೊಳ್ಳಬೇಕೆಂಬ. ವಿಷಯವೇ ಪ್ರಧಾನವು. ಅರ್ಥಾತ್ ಆ ಎರಡು ಪಾಶುರಗಳಲ್ಲಿ ನಾವು ಚೇತನರು -ಶ್ರೀಯ:ಪತಿ ಶ್ರೀಮನ್ನಾರಾಯಣನು ನಮ್ಮನ್ನು ಕಾಪಾಡುವನು. ನಾವು ಶ್ರೀಮನ್ನಾರಾಯಣನಿಂದ ಕಾಪಾಡಲ್ಪಡತಕ್ಕವರು. ಅವನು ಶೇಷಿ -ನಾವು ಶೇಷ ಈ ಸಂಬಂಧವನ್ನು ತಪ್ಪಿಸಲು ಯಾರಿಂದಲೂ ಸಾಧ್ಯವಿಲ್ಲ. ನಾವು ಚೇತನರು ಜನ್ಮ ಜನ್ಮಾಂತರಗಳನ್ನೆತ್ತಿದರೂ ಭಗವಂತನಿಗೇ ಸೇರಿದವರು ಎಂದು ಪ್ರಾರ್ಥಿಸುವುದು.

ಈ ಅರ್ಥವು ವೇದಾಂತ ಸಾರವು. ಆದ್ದರಿಂದಲೇ ಆಂಡಾಳ್ ಅನುಗ್ರಹಿಸಿದ ಆ ಎರಡು ಪಾಶುರಗಳನ್ನು ಅನುಸಂಧಿಸಿ ಬರುತ್ತೇವೆ.

ದಿವ್ಯ ಪ್ರಬಂಧಗಳನ್ನು ಬರೆದ ಆಳ್ವಾರುಗಳೆಲ್ಲರೂ ಪುನರ್ಜನ್ಮ ಬೇಡವೆಂದು ಹೇಳುವರು. ಆಂಡಾಳ್-ಗೋದಾದೇವಿ ಇಹಲೋಕದಲ್ಲೂ ಪರಲೋಕದಲ್ಲೂ ಪರಮಾತ್ಮನ ಸಂಬಂಧವಿರಬೇಕು. ಜನ್ಮ ಜನ್ಮಾಂತರಗಳನ್ನೆತ್ತಿದರೂ ಭಗವಂತನ ಸಂಬಂಧವಿರಬೇಕು ಎಂದು ಹೇಳುವರು.

ದೇವತ್ವೇ ದೇವ ದೇಹೇಯಂ ಮಾನುಷ್ಯತ್ವೇ೯ಚ ಮಾನುಷೀ ।
ವಿಷ್ಣೋರ್ದೇಹಾನು ರೂಪಾಂ ವೈ ಕರೋತ್ಯೇಷೋ ಆತ್ಮಸ್ತನೂಂ ।
ರಾಘವತ್ವೇ ಭವೇತ್ ಸೀತಾ ರುಕ್ಮಿಣೀ ಕೃಷ್ಣಜನ್ಮನೀ ।

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಅನ್ಯೇಷುಚಾವತಾರೇಷು ವಿಷ್ಣೋ ರೇಷಾನಪಾಯಿನೀ
ಶ್ರೀಸ್ತುತಿ ಪ್ರಾಕೀರ್ಣಾಧಿಕಾರ ೧೮(೨೮-೩೦)
ವಿ.ಪು.೧ ಅಂ.೯ಅ.

ಈ ರೀತಿಯಲ್ಲಿ ಭಗವಂತನೂ ಮಹಾಲಕ್ಷ್ಮಿಯೂ ಸಹ ಇಹಲೋಕದಲ್ಲಿ ಆಗಿಂದಾಗ್ಗ ಅವತರಿಸುತ್ತ ಒಬ್ಬರನ್ನೊಬ್ಬರು ಬಿಡದೆ ಇರುವಂತೆ ನಾವೂ ಸಹ ಜನ್ಮ ಜನ್ಮಾಂತರಗಳನ್ನೆ ತ್ತಿದರೂ ಭಗವಂತನನ್ನು ಬಿಡದೆ ನಾವು ಭಗವಂತನಿಗೇ ಸೇರಿದವರು ಅವನ ಸಂಬಂಧ ಬಿಡಬಾರದ್ದು -ಬಿಡುವುದಿಲ್ಲ. ಅವನುಶೇಷಿ -ನಾವು ಶೇಷ ಎಂದು ಹೇಳುವುದು.

ಈ ವೇದಾಂತಾರ್ಥವನ್ನು ನಾಲ್ಕು ಸಹಸ್ರ ದ್ರಾವಿಡ ಪದ್ಯಗಳಲ್ಲಿ ಈ ಗೋದಾದೇವಿಯ ಶಿತ್ತುಂಶಿರುಕಾಲೆ ಪಾಶುರದಲ್ಲಿ ಹೇಳುವುದರಿಂದ ಮಹಾವಿದ್ವಾನ್ ಕೂರತ್ತಾಳ್ವಾರ್ ರವರ ಈ ಮಹಾ ಮಂಗಳಾರತಿ ಕ್ರಮವನ್ನು ಏರ್ಪಡಿಸಿ ಆ ಸಮಯದಲ್ಲಿ ಉಪನಿಷತ್ತಿನೊಂದಿಗೆ ಅದೇ ಅರ್ಥವನ್ನು ಕೊಡುವ ಗೋದಾದೇವಿಯ ಪಾಶುರವನ್ನು ಹೇಳಬೇಕೆಂದು ಶ್ರೀರಾಮಾನುಜರಿಗೆ ತಿಳಿಸಲು ಶ್ರೀರಾಮಾನುಜರ ಆಜ್ಞೆಯಂತೆ ಶ್ರೀವೈಷ್ಣವರೆಲ್ಲರೂ ಅವರವರ ದೇವಸ್ಥಾನಗಳಲ್ಲೂ ಮನೆಗಳಲ್ಲೂ ಪ್ರತಿದಿನವೂ ಅನುಸಂಧಿಸಿ ಬರುವರು : ಅನುಸಂಧಿಸಿ ಬರುತ್ತೇವೆ.

ಇಲ್ಲಿ ಒಂದು ಶಂಕಾ ಪರಿಹಾರ - (ದ್ರಾವಿಡ ಪ್ರಬಂಧ ವಿಷಯವಾಗಿ)

ಬ್ರಾಹ್ಮಣರಿಗೆ ಭಾಷಾಗಾನ ನಿಷಿದ್ಧವೆಂದು ಹೇಳಿರುವಾಗ ದ್ರಾವಿಡ ಪಾಶುರ ಪದ್ಯಗಳು ಸರ್ವರಿಗೂ ಉಪಾದೇಯವೆಂದು ಹೇಳುವುದು ಸರಿಯಲ್ಲ. ಎಂದು ಹೇಳಿರುವುದು. ಅಲ್ಲದೆ ಸ್ಮೃತಿ, ಇತಿಹಾಸ ಪುರಾಣಾದಿಗಳಿರುವಾಗ ಇದಕ್ಕೆ ಎಂದರೆ ಭಾಷಾಗಾನಕ್ಕೆ ಹೇಗೆ ಮರ್ಯಾದೆ? ಎಂದು ಕೇಳಬಹುದು. ಆದರೆ ಭಗವಂತನ ಸಮೀಪದಲ್ಲಿ ಭಾಷಾಗಾನವು ಪ್ರಶಸ್ತವೆಂದು ಹೇಳಿರುವುದು. ಬೇರೆ ಸ್ಥಳದಲ್ಲಿ ಹೇಳಬಾರದು ಎಂದು ಮತ್ಸ್ಯಪುರಾಣದಲ್ಲಿ ತಿಳಿಸಿರುವುದು.

ಹರಿಕೀರ್ತಿಂ ವಿನೈವಾನ್ಯೈದಾ ಬ್ರಹ್ಮಣೇನ ನರೋತ್ತಮ ।
ಭಾಷಾಗಾನಂ ನ್ನಗಾತವ್ಯಂ ತಸ್ಮಾತ್ಪಾಪಂ ತ್ವಯಾಕೃತಂ ।
ಭಗವತ್‌ವಿಷಯ (ತರುವಾಯ್ಮೊಳಿ)ಪುಟ೧೧೭. ಮತ್ಸ್ಯಪುರಾಣಂ ।

ರಾಜನಂತೆ ಭಗವಂತನನ್ನು (ಭಗವಂತನಿಗೆ) ಹೊಗಳಬಹುದು-ಉಪಚಾರ ಹೇಳಬಹುದು. ಏಕೆಂದರೆ ರಾಜನ ಸಂತೋಷಕ್ಕಾಗಿ ಅವನ ಸೇವಕರು ಎಲ್ಲಾ ಭಾಷೆಗಳಲ್ಲೂ ಸ್ತೋತ್ರ ಮಾಡುವರು. ಆ ಭಾಷೆಗಳಲ್ಲಿ ಒಂದಾದ ದ್ರಾವಿಡ ಭಾಷೆಯು ಅಗಸ್ತ್ಯರಿಂದ ನಿರ್ಮಿತವಾದುದು. ಆದ್ದರಿಂದ ಚಾತುರ್ವರ್ಣಕ್ಕೂ ಈ ದ್ರಾವಿಡ ಭಾಷೆಯು ಉಪಾದೇಯವೆಂಬುವಾಗಿ ಪೂರ್ವಾಚಾರ್ಯರುಗಳು ಅನುಮೋದಿಸಿರುವರು.ಯದ್ಯದಾಚರತಿ ಶ್ರೇಷ್ಠಃ ಎಂಬಂತೆ ನಮಗೂ ಉಪಾದೇಯವು. ವೇದಕ್ಕೆ ಪುರಾಣ ಇತಿಹಾಸಗಳು ಉಪಬೃಂಹಣವಾದಂತೆ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ವೇದ ಇತಿಹಾಸ ಪುರಾಣ ಆಗಮಗಳಿಗೆ ದ್ರಾವಿಡಭಾಷಾ ಪ್ರಬಂಧವು ಉಪಬ್ರುಂಹಣವಾಗಿರುವುದು. (ಉಪ ಬ್ರಹ್ಮಣ:ಸಂಸ್ಕೃತದಲ್ಲಿ ಹೇಳಿರುವ ಅರ್ಥವನ್ನೇ ಈ ಭಾಷೆಯಲ್ಲೂ ವಿಶದೀಕರಿಸಿರು-ವುದು)

ಬ ಲಿ ಪೀ ಠ

ದೇವಾಲಯದಲ್ಲಿ ಬಲಿಪೀಠವೆಂಬುದು ಅತಿ ಮುಖ್ಯವು. ದೇವರ ಶರೀರವೆಂಬುವುದಾಗಿ ವಿವರಿಸಿರುವುದು. ಎರಡನೆಯದು ಧ್ವಜಸ್ತಂಭವು. ಬಲಿಪೀಠವನ್ನನುಸರಿಸಿ ಧ್ವಜಸ್ತಂಭವೇ ಹೊರತು ಧ್ವಜಸ್ತಂಭವನ್ನನುಸರಿಸಿ ಬಲಿ ಪೀಠವಿರುವುದಿಲ್ಲ. ಬಲಿಪೀಠಾನ್ತಂ ದೇವಾಲಯ ಎಂದು ಹೇಳಿರುವುದು. ಬಲಿಪೀಠ ಸ್ಥಾನ ನಿರ್ಣಯವಾದ ಮೇಲೆ ಧ್ವಜಸ್ತಂಭದ ಸ್ಥಾನವು. ಬಲಿಪೀಠದ ಹಿಂದೆ ಅಥವಾ ಮುಂದೆ ಎಂದು ನಿರ್ಣಯವಾಗುವುದು. ಪ್ರತಿದಿನದ ಪೂಜಾಕರ್ಮದಲ್ಲಿ ಸೇರಿರುವುದಿಲ್ಲ. ಆಲಯದಲ್ಲಿ ಉತ್ಸವಾದಿಗಳಿದ್ದರೆ ಆಗಮಕಾರ್ಯಕ್ಕೆ ಧ್ವಜಸ್ತಂಭವು ಬೇಕಾಗಿರುವುದು. ಉತ್ಸವಮೂರ್ತಿ-ಉತ್ಸವವಿಲ್ಲದಿದ್ದರೆ ಧ್ವಜಸ್ತಂಭಕ್ಕೆ ಕಾರಣ ವಿರುವುದಿಲ್ಲ. ಒಂದು ವೇಳೆ ಉತ್ಸವ ಮಾಡಬೇಕಾದರೆ ಆಗ ತಾತ್ಕಾಲಿಕವಾಗಿ ಧ್ವಜಸ್ತಂಭವನ್ನು ಪ್ರತಿಷ್ಠಾಪಿಸಿಕೊಳ್ಳಬಹುದು. ಉತ್ಸವವಾದ ಮೇಲೆ ಧ್ವಜಸ್ತಂಭವನ್ನೂ ಅದಕ್ಕೆ ಸೇರಿದ ವಸ್ತುಗಳನ್ನೂ ಆಚಾರ್ಯನಿಗೆ (ಪ್ರಧಾನಾಚಾರ್ಯರು) ಸಮರ್ಪಿಸಿ ಬಿಡುವರು.

ದೇವಸ್ಥಾನದಲ್ಲಿ ದೇವರಿಗೆ ನಿವೇದನವಾದ ಮೇಲೆ ಮಹಾಮಂಗಳಾರತಿಗೆ ಮೊದಲು ಬಲಿ ಕರ್ಮವೆಂಬುದು ನಡೆಯುವುದು. ಬಲಿಕರ್ಮವೆಂದರೆ ಪರಿವಾರ ದೇವತೆಗಳಿಗೆ ಪೂಜೆ, ನಿವೇದನೆ (ಅಷ್ಟ ದಿಕ್ಪಾಲಕರಿಗೆ ನಿವೇದನೆ) ಈ ಬಲಿಕರ್ಮ ಆಗುವವರೆಗೂ ತೀರ್ಥಪ್ರಸಾದ ಯಾರಿಗೂ ಕೊಡುವುದಿಲ್ಲ. ಬಲಿಕರ್ಮವಾದ ನಂತರ ಮಹಾಮಂಗಳಾರತಿ ನಡೆಯುವುದು. ಮಹಾಮಂಗಳಾರತಿ ಸಮಯದಲ್ಲಿ ದೇವದಾಸಿಗಳ ಕಾರ್ಯವಿರುವುದರಿಂದ ಅವರ ವಿಷಯವನ್ನು ಕಿಂಚಿತ್ ತಿಳಿಸಲಾಗಿದೆ.

ದೇ ವ ದಾ ಸಿ:

ದೇವರಿಗೆ ಅಂಕಿತವಾಗಿ ಬಿಟ್ಟವರು ದೇವದಾಸಿಗಳು. ಭಗವಂತನು ಶೇಷಿ ಇವಳು ಶೇಷ. ಅರ್ಥಾತ್ ಇಬ್ಬರೂ ಶೇಷ ಶೇಷಿಭಾವ. ಶೇಷಿ ಭಗವಂತನು ಕಾಪಾಡತಕ್ಕವನು. ಶೇಷ ಈ ಚೇತನನು ಭಗವಂತನಿಂದ ಕಾಪಾಡಲ್ಪಡತಕ್ಕವನು. ಅರ್ಥಾತ್ ದೇವರ ದಂಪತಿ ಪತ್ನಿ ಇವಳು ದೀಕ್ಷೆಯನ್ನು ವಹಿಸಿದಂದ ಮೇಲೆ ಇವಳನ್ನು ಯಾರೂ ಮುಟ್ಟಬಾರದು. ಇವಳನ್ನು

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಸ್ಪರ್ಶಿಸಲು ಯಾರಿಗೂ ಯಾವ ಅಧಿಕಾರವೂ ಇರುವುದಿಲ್ಲ. ಅವಳು ಗೌರವಾನ್ವಿತಳು.

ದೇವದಾಸಿ ಚರಿತ್ರೆ:

ಮನುಷ್ಯನ ಜೀವನದಲ್ಲಿ ಮನೋರಂಜನೆಯೂ ಒಂದು. ಮುಖ್ಯವಾದ ಅಂಶವು ಅದರಲ್ಲಿ ನೃತ್ಯ ಸಂಗೀತ ವಾದ್ಯಗಳು ಅತಿ ಮುಖ್ಯವೆಂದು ತಿಳಿದು ಅವುಗಳನ್ನು ಕಲಿತು ಜನರ ಮನಸ್ಸನ್ನು ಸಂತೋಷಪಡಿಸುವ ಒಂದು ವೃತ್ತಿಯನ್ನು ಕೈಗೊಂಡವರಿಗೆ ಗಣಿಕೆ ಯರೆಂದು ಹೆಸರು. ಇವರು ತಮ್ಮ ವೃತ್ತಿಯೊಂದಿಗೆ ರಸಿಕರಂಜನ ವೃಂದದ ದೇಹತೃಷೆಯನ್ನೂ ತಣಿಸುತ್ತಿದ್ದರು. ಆಗ ಅವರಿಗೆ ವೇಶ್ಯೆಯರೆಂದು ಕರೆಯಲಾಯಿತು. ಈ ವೇಶ್ಯಾವೃತ್ತಿಯು ಬಹು ಗಂಭೀರವಾಗಿದ್ದಿತು. ಅವರನ್ನು ಜನರು ಗೌರವಿಸುತ್ತಿದ್ದರು. ಪುರಾಣಗಳಲ್ಲೂ ಇತಿಹಾಸಗಳಲ್ಲೂ ಅನೇಕ ಚರಿತ್ರೆ ಕಾವ್ಯಗಳಲ್ಲೂ ಆ ವೇಶ್ಯೆಯರ ಮನೆಗಳಲ್ಲಿ ಶಾಸ್ತ್ರ ಚರ್ಚೆ, ವಿಚಾರಗೋಷ್ಠಿ ಮೊದಲಾದ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯುತ್ತಿದ್ದವು. ಈ ವೇಶ್ಯಾವೃತ್ತಿಯಲ್ಲಿಯೂ ಧರ್ಮ ಸಮ್ಮತವಾದ ಕ್ರಮವಿರುವುದು. ಕಾಲಾಂತರದಲ್ಲಿ ಅನೇಕ ಕಾರಣಗಳನ್ನನುಸರಿಸಿ ದೇಹವಿಕ್ರಯವೇ ಪ್ರಧಾನವಾಗಿ ಕಲಾವಿದೆಯರೆಲ್ಲರೂ ಈ ವೃತ್ತಿಯನ್ನು ಆರಂಭಿಸಿದರು. ಇಂತಹವರ ಶ್ರೇಯಃಸಾಧನೆಗೆ ನಮ್ಮ ಪೂರ್ವಿಕರು ಒಂದು ದಾರಿ ತೋರಿಸಿದರು. ಅದೇ ದೇವದಾಸಿ ಎಂಬ ವೃತ್ತಿ. ಆಲಯಗಳಲ್ಲಿ ಭಗವಂತನ ನಿತ್ಯ ಪೂಜೋತ್ಸವ ಮೊದಲಾದ ಕಾಲಗಳಲ್ಲಿ ಕೆಲಸ ಮಾಡಲು ಇವರಿಗೆ ಅವಕಾಶ ಕಲ್ಪಿಸಿದರು. ಈ ವಿಚಾರವನ್ನು ಆಗಮಶಾಸ್ತ್ರಗಳಲ್ಲಿ ವಿವರವಾಗಿ ತಿಳಿಸಿರುವುದು.

ಗಣಿಕಾವಂಶ (ವೇಶ್ಯಾಸ್ತ್ರೀ) ಸ್ಥರಾದ ಈ ದೇವದಾಸಿಯರಿಗೆ ಶಾಸ್ತ್ರೋಕ್ತವಾದ ದೀಕ್ಷಾ ಸಂಸ್ಕಾರವನ್ನು ನಡೆಸಿ ದೇವಸ್ಥಾನದಲ್ಲಿ ಕೆಲಸ ಮಾಡಲು ನೇಮಿಸುವಾಗ ಅವರ ಕಾರ್ಯಕ್ರಮಗಳನ್ನು ಅನುಸರಿಸಿ ಏಳು ವಿಧಗಳನ್ನಾಗಿ ವಿಭಾಗಿಸಲಾಗಿದೆ.

1.ದತ್ತ 2.ಕ್ರೀತ 3.ಭೃತಾ 4.ಭಕ್ತ 5.ವೃತಾ 6.ಅಲಂಕಾರದಾಸಿಕಾ 7.ರುದ್ರಗಣಿಕಾ

1.ದತ್ತಾ: ಸ್ವಯಂ ಪ್ರೇರಿತಳಾಗಿ ಭಕ್ತಿಯಿಂದ ದೇವಸ್ಥಾನಕ್ಕೆ ಒಂದು ಗುಡಿಸಿ, ಸಾರಿಸಿ ರಂಗೋಲಿಯನ್ನಿಡತಕ್ಕವಳು.

2ಕ್ರೀತಾ : ಕೈಂಕರ್ಯ ಮಾಡಬೇಕೆಂಬ ಉದ್ದೇಶದಿಂದ ಅಥವಾ ದ್ರವ್ಯ ಲೋಭದಿಂದಲೋ ಮನೆಯವರಿಂದ ಕಳುಹಿಸಲ್ಪಟ್ಟು ದೇವಸ್ಥಾನಕ್ಕೆ ಬರತಕ್ಕವಳು.

3ಭೃತಾ:- ಕುಟುಂಬದ ರಕ್ಷಣಾ ಉದ್ದೇಶದಿಂದ ದೇವಸ್ಥಾನಕ್ಕೆ ಬರತಕ್ಕವಳು ಭೃತಕಾ ಎಂದು ಕರೆಯಲ್ಪಡುವಳು.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

4.ಭಕ್ತಾ:- ಭಕ್ತಿಯಿಂದ ಬಂದು ಆಲಯದಲ್ಲಿ ಸಂಸ್ಕಾರ ಕರ್ಮವನ್ನು ಹೊಂದಿ ದೇವಸ್ಥಾನದಿಂದ ನೇಮಿಸಲ್ಪಡತಕ್ಕವಳು.
5ವೃತಾ:- ಆಲಯದಲ್ಲಿ ವಾಸಿಯಾಗಿದ್ದು ಕಾರಣಾಂತರ ದಿಂದ ಬಿಟ್ಟು ಹೋಗಿ ಪುನಃ ಆಹ್ವಾನಿಸಲ್ಪಡತಕ್ಕವಳು.
6ಅಲಂಕಾರದಾಸಿಕಾ :- ಅಲಂಕಾರ ದಾಸಿಯು ಕಲಾ ನಿಪುಣೆಯಾಗಿಯೂ, ಸುಂದರಿಯಾಗಿಯೂ, ದೈವಭಕ್ತಿಯುಳ್ಳವಳಾಗಿಯೂ ಇರುವುದರೊಂದಿಗೆ, ಶಾಸ್ತ್ರರೀತಿ ಸಂಗೀತ ನಾಟ್ಯ ಕಲೆಗಳನ್ನು ಗುರುಗಳ ಹತ್ತಿರ ಕಲಿತು ಅಲಂಕಾರಯುಕ್ತಳಾಗಿ ದೇವಸ್ಥಾನದಿಂದ ಅಥವಾ ರಾಜನಿಂದ ನಿಯಮಿಸಲ್ಪಡತಕ್ಕವಳು.
7.ರುದ್ರಗಣಿಕಾ :- ರುದ್ರಗಣಿಕೆಯರು ಕುಂಭಾರತಿ ಮತ್ತು ಗೀತ ನೃತ್ಯಗಳನ್ನು ನಡೆಸತಕ್ಕವರು. ಇವರು ಈಗ ಇರುವುದಿಲ್ಲ.

ಮೇಲೆ ತಿಳಿಸಿದವರೆಲ್ಲರೂ ದೇವಸ್ಥಾನದಿಂದ ಪಾಂಚರಾತ್ರ ಶೈವಾಗಮಗಳ ರೀತಿಯಾಗಿ ದೇವದಾಸಿ ಎಂಬ ಸಂಸ್ಕಾರದಿಂದ ಅಧಿಕಾರ ಹೊಂದಿರತಕ್ಕವರು. ಈ ದೇವದಾಸಿಯರ ಮಕ್ಕಳು, ಮೊಮ್ಮಕ್ಕಳು ಎಲ್ಲರಿಗೂ ಆಲಯದಲ್ಲೇ ಮಾಂಗಲ್ಯ ಧಾರಣೆ ವಿವಾಹವನ್ನು ನಡೆಸಬೇಕೆಂಬ ನಿಯಮವುಂಟು. ಇವರ ವೇಷವು ದ್ರಾವಿಡ ಸ್ತ್ರೀಯರ ವೇಷ (ಒಳಕಚ್ಚೆ) ಅಥವಾ ಮಹಾರಾಷ್ಟ್ರಸ್ಥರಂತೆ (ಹೊರಕಚ್ಚೆ) ಕಟ್ಟಿರಬೇಕು. ಈ ಒಳಕಚ್ಚೆ ಹೊರಕಚ್ಚೆ ಅಲಂಕಾರ ವೇಷವು (ಗೀತನಾಟ್ಯ) ಸಂದರ್ಭಾನುಸಾರವನ್ನನುಸರಿಸುವುದು.

- ಶೈವಾಗಮಸಾರ.

ಒಲಿಪ್ರಧಾನ ಕ್ರಮ:

ನಿತ್ಯೋತ್ಸವಂತು ತ್ರಿವಿಧಮುತ್ತ ಮಾದಿ ವಿಭೇಧತಃ । ೪
ತ್ರಿಸಂಧ್ಯಾಸುಂಕೃತ ಯುತ್ತ ದುತ್ತಮಂ ಸಮುದಾಹೃತಂ :
ದ್ವಿಕಾಲಾನುಷ್ಠಿತಂ ಯತ್ತನ್ಮಧ್ಯಮಂ ಪರಿಕೀರ್ತಿತಂ : ೫
ಏಕಕಾಲೇಶು ಮಧ್ಯಾಹ್ನೇಕೃತಂ ತದಧಮಂಭವೇತ್ ।

ಪುರು-ಸಂ.೨.೨

ಬಲಿಪಾತ್ರಂ :-

ತದರ್ಥಂ ಬಲಿಪಾತ್ರಂತು ಸ್ವರ್ಣಾಧಿದ್ರವ್ಯ ನಿರ್ಮಿತಂ ।
ಸಮಾದಾಯ ಬಲಿದ್ರವ್ಯೈ: ಪೂರಯೇದ್ದೇಶಿಕೋತ್ತಮ : ।
ದೇವಸ್ಯಾಗ್ರೇತು ತತ್ಪಾತ್ರಂ ವಿನ್ಯಸ್ಯಾವಾಹಯೇಚ್ಛುಚಿ: ।
ಪಾತ್ರಸ್ಥಂ ದೇವಮರ್ಘ್ಯಾದ್ಯೈ: ಪೂಜಯಿತ್ವಾ ಯಥೋದಿತೈ:।
ಪಾತ್ರಸ್ಥಲಮಧ್ಯೇತು ವಿಷ್ಣ್ವಾದ್ಯೀನರ್ಚಯೇತ ಕ್ರಮಾತ್ ! ೧೦
ಪರಿಚಾರಕಸ್ಯ ಶಿರಸಿ ತತ್ಪಾತ್ರಂ ನ್ಯಸ್ಯ ಮಂಗಳೈ:।
ಭದ್ರಂ ಕರ್ಣೇತಿ ಮಂತ್ರೇಣ ಬಲಿಬೇರಂ ಗುರುಸ್ಸ್ವಯಮ್।

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಶಿಬಿಕಾಯಾಂ ಸಮಾರೋಪ್ಯ ವೇದಘೋಷ ಪುರಸ್ಸರಮ್॥

ನಿತ್ಯ ಉತ್ಸವ ಕಾಲದಲ್ಲಿ ಬಲಿ ಮೂರ್ತಿ

ತತಃ ಪ್ರಭೃತಿ ವಿಷ್ಣೋರುತ್ಸವಕಾಲೇ ಶಿರಸಾಧಾರಯ ಅಗ್ರತೋ
ಗಚ್ಛೇತ್ ಶಿಬಿಕಾಯಾಂ ಹಸ್ತೇವಾ ಸಮಾರೋಪ್ಯ ನಯೇದಿತಿ ಕೇಚಿತ್
ನಿತ್ಯಂ ಬಲ್ಯಂತೇ ಬಲಿಬೇರ ಪೀಠೇ ಸನ್ಯಸ್ಯ ಪಾದ್ಯಾದ್ಯರ್ಘ್ಯಾನ್ತಂ
ಪೂಜಯಿತ್ವಾ ಅಭಿಮುಖೇ ಪಾದುಕೇ ಸನ್ಯಸ್ಯ ಪೂರ್ವವ
ಚ್ಛೇಷ ಮಭ್ಯರ್ಚ್ಯ ಪಾದುಕ ಸಂಯೋಜ್ಯ ದೇವೇನ ಸಹಾಭ್ಯಂತರಂ
ಪ್ರದಿಶ್ಯ ಗರ್ಭಾಗಾರಂ ಸನ್ಯಸೇತ್ (ವಿ.ಕ.ಪುಟ 197)

ದೇವರ ನಿತ್ಯ ಉತ್ಸವ ಕಾಲದಲ್ಲಿ ಅರ್ಚಕರು ಬಲಿಬೇರವನ್ನು ಶಿರಸ್ಸಿನ ಮೇಲಿಟ್ಟುಕೊಂಡು ಬರಬೇಕು. ಅಥವಾ ಶಿಬಿಕೆ (ಪಲ್ಲಕ್ಕಿ)ಯಲ್ಲಿಟ್ಟು ಬಿಜಯ ಮಾಡಿಸಬೇಕು. ದೇವಸ್ಥಾನ ಪ್ರದಕ್ಷಿಣವಾಗಿ ಬಂದು ಬಲಿಕರ್ಮವನ್ನು ನಡೆಸಬೇಕು.

ವೇದಘೋಷದಿಂದಲೂ, ಛತ್ರ ಚಾಮರ ಭೇರ್ಯಾದಿಗಳಿಂದಲೂ ನೃತ್ಯ-ವಾದ್ಯ, ಕೈದೀವಿಟಿಗೆ , ಅಷ್ಟಮಂಗಳ, ಗೀತ ವಾದ್ಯಗಳಿಂದಲೂ ಮರ್ಯಾದಾ ವಸ್ತುಗಳೊಂದಿಗೂ ಅನೇಕ ಪರಿವಾರಗಳೊಂದಿಗೂ, ಕೂಡಿ ದೇವಸ್ಥಾನದ ಒಳಪ್ರದಕ್ಷಿಣವಾಗಿ ಬರಬೇಕು.

ಪೂರ್ವಂ ತೋಯಂ ತತಶ್ಚಾನ್ನಂ ಪಶ್ಚಾತ್ತೋಯಂ ದದೇದ್ಬುಧಃ
ಪ್ರಥಮಂ ದ್ವಾರಪಾಲೇಭ್ಯೋ ಮೂರ್ತಿಮನ್ತ್ರೈರುಪಕ್ರಮೇತ್ । ೧೭೦
ಪಶ್ಚಾತ್ಯವಿಮಾನಪಾಲೇಭ್ಯಃ ತತ್ತದ್ದಿಶಿಬಲಿಂದದೇತ್ ।
ಇಂದ್ರಾದಿಲೋಕಪಾಲಾನಾಂ ತತಃಪಶ್ಚಾತ್ ಬಲಿಂಕ್ಷಿಪೇತ್ ।
ತೋಯಂದತ್ವಾ ತು ಪ್ರಥಮಂ ದದ್ಯಾತು ಪುಷ್ಪಂ ತತಃ ಪರಂ ।
ಗಂಧಂಪಶ್ಚಾತ್ ತತೋಧೂಪಂ ದದ್ಯಾದ್ದೀಪಂ ತತಃಪರಂ । ೧೭೨
ಬಲಿಂದದ್ಯಾತ್ ಕ್ಷಿಪೇತ್ತತ್ರ ದದ್ಯಾತ್ ತೋಯಂ ತತಃಪರಂ ।
ಬಲಿಶೇಷಂ ಸಮಾದಾಯ ಭೂತಪೀಠೇ ವಿನಿಕ್ಷಿಪೇತ್।

ಬಲ್ಯಾಧಿಕಾರಃ

ಬಲಿಪೀಠದ ಮೇಲೆ ಬಂದು ಉದ್ಧರಣೆ ತೀರ್ಥ ಅನಂತರ ಪ್ರಸಾದ ಅನಂತರ ಪುನಃ ತೀರ್ಥ ಈ ರೀತಿಯಿಂದ ಬಲಿ ಕರ್ಮವನ್ನು ನಡೆಸಬೇಕು.

ದ್ವಾರಾದಿ ಬಲಿಪೀಠಾಂತಂ ತದನ್ತೆದಾಪಯೇದ್ಬಲಿಂ । ೯೯೧
ರೌರವಾಗಮ ೫೯
ಬಲಿಬಿಂಬಂ ಸಮಾದಾಯ ಯಾನಮಾರೋಪ್ಯದೇಶಿಕಃ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಸ್ವರ್ಣಾದಿ ಪಾತ್ರೆಯಲ್ಲಿ ಬಲಿದ್ರವ್ಯವನ್ನಿಟ್ಟು ವಿಷ್ಣುಮಂತ್ರದಿಂದ ಆಹ್ವಾನಿಸಿ ಪೂಜೆಯನ್ನು ಮಾಡಿ ಪರಿಚಾರಕರ ಕೈಯಲ್ಲಿ ಕೊಟ್ಟು ಭದ್ರಂಕರ್ಣೇಭಿ ಮಂತ್ರವನ್ನುಚ್ಚರಿಸಿ ಬಲಿಬೇರವನ್ನು ಪಲ್ಲಕ್ಕಿಯಲ್ಲಿ ಬಿಜಯಮಾಡಿಸುವುದು.

ಏವಂ ಬಲಿಪ್ರದಾನಂತು ಕಾರಯೇದ್ದೇಶಿಕೋತ್ತಮಃ ।
ರಕ್ಷಣಾರ್ಥಾಯ ಗ್ರಾಮಸ್ಯ ಮಧ್ಯೇ ಮಧ್ಯೇ ದೇವಾನಾಂತೋಷಣಾಯಚ।
ರಾಕ್ಷಸಾನಾಂ ವಿನಾಶಾಯ ಶತ್ರೂಣಾಂ ಹನನಾಯಚ ।
ಸರ್ವಸಂಪತ್ಸಮೃದ್ಧ್ಯರ್ಥಂ ಬಲಿದಾನಂ ಸಮಾಚರೇತ್ ।

ಪು.ಸಂ.೩೨

ಸರ್ವದುಃಖಹರಂ ಪುಂಸಾಂ ಸರ್ವಭೂತಪ್ರಹರ್ಷಣಂ ।
ರಾಷ್ಟ್ರಸ್ಯರಾಜ್ಞೋಗ್ರಾಮಸ್ಯ ಯಜಮಾನಸ್ಯ ಪದ್ಮಜ ।
ಸುಖಾವಹಂ ಶಾನ್ತಿಕರಂ ಪುಣ್ಯಮಾಯುರ್ವಿವರ್ಧನಂ ।೨

ಖಿಲಾಧಿಕಾರ ೧೮ (೨೦೪-೨೦೮)ಪುಟ ೨೯೦

ಪಾದ್ಮಸಂ.ಚರ್ಯಾ ೯೫ ಮಾರ್ಕಾಂಡೇಯ ಸಂ. ೭(೨೫)

ಸುರಕ್ಷಿ ಮನುಷ್ಯಾಣಾಂ ಬಲಮಸ್ಮಾತ ವರ್ಧತೇ
ತಸ್ಮಾದ್ಬಲಿರಿತಿ ವ್ಯಾಖ್ಯಾತ ವಿ.ಕಲ್ಪ ೪೧೩

ಇಲ್ಲಿ ಒಂದು ವಿಚಾರ. ವೈಖಾನ ಆಗಮಕ್ಕೂ ಪಾಂಚರಾತ್ರ ಆಗಮಕ್ಕೂ ಸ್ವಲ್ಪ ಭೇದವು ಕಾಣಬರುತ್ತದೆ. ಪಾಂಚರಾತ್ರದಲ್ಲಿ ಅಷ್ಟ -ದಿಕ್ಪಾಲಕರು ಹೇಳಿರುವುದು ವೈಖಾನಾಗಮದಲ್ಲಿ ಅಷ್ಟದಿಕ್ಪಾಲಕರಲ್ಲದೆ ಆಯಾ ದಿಕ್ಕಿನ ವಿಮಾನ ದೇವತೆಗಳಿಗೂ ಬಲಿ ಹೇಳಲ್ಪಟ್ಟಿರುವುದು. ಅಲ್ಲದೇ ಪ್ರದಕ್ಷಿಣ ಮಾರ್ಗದಲ್ಲಿ ಎರಡೆರಡು ಬಲಿಪೀಠಗಳನ್ನು ಕಾಣಬಹುದು. ಇನ್ನೂ ಕೆಲವು ಭೇದಗಳಿವೆ ಅದನ್ನು ಇಲ್ಲಿ ಬರೆದಿರುವುದಿಲ್ಲ.

ಇತರ ವಿಷಯಗಳೆಲ್ಲಾ ಬಹುಭಾಗ ಒಂದೇ ಆಗಿರುವುದು.

ಛತ್ರ ಚಾಮರ ಸಂಯುಕ್ತಂ ಬಹುದೀಪ ಸಮನ್ವಿತಂ।
ಅನೇಕೈಃಪರಿಕರೈರ್ಯುಕ್ತಂ ಗೀತವಾದ್ಯ ಸಮನ್ವಿತಂ ।
ಆನಯೇದ್ದೇವದೇವೇಶಂ ಪ್ರದಕ್ಷಿಣ್ಯೇನ ಮಂದಿರಂ।

ಖಿಲಾಧಿಕಾರ ೨೪(1-31) ಅನಿರುದ್ಧ ೧೮

ಛತ್ರ ಚಾಮರಭೇರ್ಯಾದಿ ನೃತ್ತವಾದಿತ್ರನಿಸ್ವನೈಃ ।
ಪ್ರದಕ್ಷಿಣ ಕ್ರಮೇಣೈವ ಆಲಯಂತು ಪರಿಭ್ರಮೇತ್ । ೧೩
ಬಲಿಂದತ್ವಾತೋಯ ಪೂರ್ವಂ ತೋಯೋರಮಪಿಕ್ರಮಾತ್ ।
ತತ್ಪೀಠಂತು ಪರಿಕ್ರಮ್ಯ ದರ್ಶಯೇದಷ್ಟಮಂಗಳಾ ।

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಏವಮುಕ್ತಪ್ರಕಾರೇಣ ಸರ್ವೇಷ್ವಾವರಣೇಷದೌಪಿ।
ಯಥಾಕ್ರಮಂ ಬಲಿಂದತ್ವಾ ಪ್ರವಿಶೇದ್ಗರ್ಭ ಮಂದಿರಂ ।೧೫
ಅನಿರುದ್ಧ ಸಂ.೧೮ ಪುರುಷೋತ್ತಮ

ಸಂ.೩೨

ಬಲಿಭ್ರಮಣಕಾಲೇ ಯೇ ಸೇವನ್ತ ತೇ ಸರ್ವೇ
ಪದೇ ಪದೇ ಯಜ್ಞಫಲಂ ಲಭೇರ ।
ಮರೀಚಿ ಸಂ.ಪುಟ ೩೯೦

ಬಲಿಭ್ರಮಣ ಕಾಲದಲ್ಲಿ ನಾವ್ಹಾ ಪ್ರದಕ್ಷಿಣವಾಗಿ ಬರಬಹುದು. ಆ ಬಲಿ ಕರ್ಮವನ್ನು ನೋಡುವುದರಿಂದ ಯಜ್ಞ ಮಾಡಿದ, ಯಜ್ಞದಲ್ಲಿ ಪಾಲುಗೊಂಡ ಫಲವು ಲಭಿಸುತ್ತದೆ.

ಆತೋದ್ಯ ನೃತ್ತೋರ್ಬಹುಧಾಭಿದ್ಯಮಾನೈಸ್ಸಮೇಧಿತಂ
ತತ್ರ ನೃತ್ತಂ ಬಹುವಿಧಂ ತಾನಿವಕ್ಷ್ಯೇ ಸಮಾಸತಃ ೨೨ನ.
ಪಾದ್ಮಸಂ ಚರ್ಯಾ ೫

ಪ್ರದಕ್ಷಿಣಾ ಕ್ರಮವಾಗಿ ಬರುವಾಗ ಆಯಾ ದೇವತೆಗಳಿಗೆ ಸಂಬಂಧಪಟ್ಟಂತೆ ದಿಕ್ಕುಗಳನ್ನನುಸರಿಸಿಯೂ ನೃತ್ತ್ಯ ತಾಳ, ರಾಗ, ಸ್ವರ ಇವುಗಳೊಂದಿಗೆ ಪ್ರದಕ್ಷಿಣವಾಗಿ ಬರಬೇಕು. (ನೃತ್ಯ ವಿವರಗಳು ಪಟ್ಟಿಯಲ್ಲಿ ಕೊಟ್ಟಿರುತ್ತೆ)

<u>ವಿವಿಧ ನೃತ್ತಗಳ ಹೆಸರನ್ನು ತಿಳಿಸಿರುವುದು :-</u> (ಶ್ಲೋಕವನ್ನು ಬರೆದಿರುವುದಿಲ್ಲ)

1.ವಿಲಾಸಂ	11.ಪ್ರಚಾರೀ	21.ವೃಷಕುಟ್ಟಮಂ
2.ಕರ್ಕರೀ	12.ಸಾವರ್ತಂ	22.ಉಲ್ಲಂಘಿವಾಮಜಾನ್ವಾಖ್ಯಂ
3.ವಿಷ್ಣುಕ್ರಾನ್ತಂ	13.ಪಾರಭದ್ರಕಂ	23.ಮಾಸೂರಿ(ಮಾಧುರಿ)
4.ಮಾಲಾಥಂ	14.ಸೌಮ್ಯಂ	24.ಜಾವವಿಷ್ಟತಂ
5.ಮಂಗಲಂ	15.ವಿಷಮಸೂಚೀ	25.ವಾನರೇಶ್ವರ
6.ಛತ್ರಮಾಲೀ	16.ಘಟಕಂ	26.ಸಂಚಾರೀಭಾವಂ
7.ತಾರ್ಕ್ಷ್ಯಪಕ್ಷಾ	17.ಜಾಪಕುಂಚಿತಂ	27.ನಿಕುಟ್ಟಿಪಂ
8.ಕರಣಂ	18.ಕಟಿಬಂಧಂ	28.ಕುಟ್ಟಮಂ
9.ಸ್ವಸ್ತಿಕಂ	19.ಅಲಂಕಾರಂ	29.ಘಟಿತಂ
10.ಚಾರೀ	20.ಮಕ್ಕರೀ	30.ನ್ಯಾಯಾ ಭಾವಂ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

31 ವಿಜೃಂಭಿತಂ
32 ಮಂಡಲಂ
33 ಕುಂಚಿತಾರ್ಥಂ
34 ಪತಾಕಂ
35 ಸರ್ವಮಂಗಳಂ
36 ಕಾಂತಾರಕುಟ್ಟಿಮಂ
37 ಪೂರ್ವಘಟಿತಂ
38 ಸರ್ವತೋಭದ್ರಂ
39 ಶುದ್ಧಂ
40 ಕರ್ಕರೀ
41 ಕುಂಚಿತಂ
42 ಮಾರ್ಗಚಾರೀ
43 ಕರಾಧೀನಂ
44 ಮಾನಭಾಸಂ
45 ದೇಶೀಮಂಡಲಂ
46 ಸಮಪೂರ್ವಂ
47 ಘಟಿತಂ
48 ಪಥಂ
49 ವಿಷಮಪೂರ್ವಂ
50 ಕವಿಲಾಸಂ
51 ವರ್ಗಲತಂ

ಪದ್ಮಸಂ ೫(೨೨ – ೩೦)

ಸಮತಾಳಂ ಸಮಂವಾದ್ಯ ವೈಂದ್ರ್ಯಾಂದಿ ಶಿಹವಿರ್ಭುಜ:
ಬದ್ವಾತಾಳ ವಿಧಾನಂತು ಯಮಸ್ಯ ದಿಶಿ ಭೃಂಗಿಣಿ:
ನೈಋತ್ಯಾಂಮಲ್ಲ ತಾಳಂ ಸಾದ್ವರುಣ್ಯಾಂ ಮಂಗಳ್ಯಾಹಮಂ:
ವಾಯವ್ಯಾಂಜಂಘೆ ತಾಳಾಖ್ಯಂ ಕಾಖೇರ್ಯಾಂ ಭದ್ರ ಶಬ್ದಿತಂ:
ಐಶಾನ್ಯಾಲಕರ್ಕರೀತಾಳಂ ತಾಪ್ಯಸ್ಯಾಗರುಡಾಪ್ಯಯಂ:

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS





CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಹೆಸರು	ರಾಗ	ಸ್ವರ	ತಾಳ	ನೃತ್ಯ
ಗರುಡ	ಗೌಡ			
ಅಬ್ಜಭವ				ವಿಷ್ಣುಕ್ರಾಂತ
ಇಂದ್ರ	ನಾದ	ಷಡ್ಜ	ಸಮ	ಸ್ವಸ್ತಿಕ
ಅಗ್ನಿ	ಲಲಿತ	ಋಷಭ	ಬಂಧ	ಸರ್ವತೋಭದ್ರ
ವರುಣ	ಮೇಘಹಜೇ	ಪಂಚಮ	ಮಂಗಳ	ಖೇಟಕ
ವಾಯು	ವಸಂತಿಕ	ದೈವತ	ಜಯ	ಕುಟ್ಟಿಮ
ಯಮ	ಮಲಯ	ಗಾಂಧಾರ	ಭೃಂಗಿಣೀ	ಪೃಷ್ಠಕುಟ್ಟಿಮ
ನಿರರುತಿ	ಭೈರವಿ	ಮಧ್ಯಮ	ಮಲ್ಲ	ಚಕ್ರ[illegible]
ಕುಬೇರ	ಶ್ರೀರಾಗ	ನಿಷಾದ	ಭದ್ರತಾಳ	ಕಾಂತಾರ
ಈಶಾನ	ಶಂಕರೀ	ದೈವತ	ಢಕ್ಕರೀ	ವಾಮ[illegible]ನು
ಇತರ ದೇವತೆಗಳು			ಜಪ	ಊರ್ಧ್ವ[illegible] ಸ್ವಸ್ತಿಕಂ

ಭೂತಾನಾಂ ಭಲಿತಾಳಾಖ್ಯಂ ಸೀನೇ ಶಾಸ್ಯಪಿತಾದೃಶಂ ::
ಅನ್ಯೇಷಾಮಪಿದೇವಾನಾಂ ತಾಳ ಭದ್ರಪ್ರಶಸ್ಯತೇ : ।

ಷಡ್ಜರ್ಷಭಾಚ ಗಾಂಧಾರಂ ಮಧ್ಯಮಂ ಪಂಚಮಂ ತಥಾ :।
ದೈವತಂ ಚೈನ ನಿಷಧಂ ಪುರುಹೂತಾದಿಷು ಸ್ವರಾ :।
ಸಪ್ತಜ್ಞೇಯಾ ಧೃವತಸ್ತು ಭವಸ್ಯ ಸ್ವರ ಇಷ್ಯತೇ : ।
ವಿಲಾಸಂ ಸರ್ವತೋ ಭದ್ರಂ ಖೇಟರಂ ಚಕ್ರ ಮಂಡಲಂ: ।
ಕಾಂತಾರಕುಟ್ಟಮಂ ಪೃಷ್ಠಕುಟ್ಟಮಂ ಕಟಿಬಂಧನಂ: ।
ವಾಮಜಾನುರ್ಧ್ವ ನೃತ್ತಂತು ಪುರುಹೂತಾಧಿಕಂ ಸ್ಮೃತಂ: ।
ವಿಷ್ಣುಕ್ರಾಂತಂ ಖಗೇಶಸ್ಯ ನೃತ್ತಂ ಗೇಯಂಚ ಮಧ್ಯಮಂ :।
ನೃತ್ತಂತು ವಿಷ್ವಕ್ಸೇನಸ್ಯ ಸ್ವಸ್ತಿಕಂ [illegible]ನಸ್ವರ:।
ಹಸ್ತಿನೃತ್ತಂ ಗಣೇಶಸ್ಯ ಸ್ವರಃ ಪಂ[illegible]ನು ಇಷ್ಯತೇ।
ದೈವತಂಸ್ಯಾ ಸ್ವರೋನೃತ್ತಂ ದುರ್ಗಾ[illegible]ಯಾ ಸರ್ವಮಂಗಳಂ।
ಅನ್ಯೇಷಾಮಪಿದೇವಾನಾಂ ನೃತ್ತಂಸ್ಯಾತ್ಸರ್ವಮಂಗಳಂ ।
ಗಾನಂಚ ದೈವತಂ ಪ್ರೋಕ್ತಂ ಗುಂಧಾರಂ ಪಂಚಮಂ ತಥಾ।
ದಿಕ್ಷು ಸರ್ವಾಸು ಸರ್ವೇಷು ಮಂ[illegible]ವರಣೇಷು ಚ।
ನೃತ್ತಂಗೇಯಂಚ ವಾದ್ಯಂಚ ಸಾಕಲ[illegible] ಸಮಿರಿತಂ
ಖಗಧ್ವಜಂ ದರ್ಶಯಿತ್ವಾ ಮಂಗಳಾ[illegible]ಕ ಮೇವಚ :
ಸನ್ನಿಧಾನೇಚ ದೇವಸ್ಯ ಸರ್ವತ್ರ ಬ[illegible]ಷ್ಯತೇ ।

ಏವಂ ಬಲಿಪ್ರದಾನಂತು ಕಾರಯೇದ್ದೆ[illegible]ೋತ್ತಮ :।
ರಕ್ಷಣಾರ್ಥಾಯ ಗ್ರಾಮಸ್ಯ ಮಧ್ಯ ದೇ[illegible]ನಾಂತೋಷಣಾಯಚ ।
ರಾಕ್ಷಸಾನಾಂ ವಿನಾಶಾಯ ಶತ್ರುಣಾಂ [illegible]ನನಾಯಚ :
ಸರ್ವ ಸಂಪತ್ಸಮೃದ್ಯರ್ಥಂ ಬಲಿದಾನ[illegible] ಮಾಚರೇತ್।

ಪು.ಸಂ.೩೨

ಸರ್ವದುಃಖಹರಂಪುಂಸಾಂ ಸರ್ವಭೂ[illegible]ಪ್ರಹರ್ಷಣಮ್ ।

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ರಾಷ್ಟ್ರಸ್ಯ ರಾಜ್ಞೋ ಗ್ರಾಮಸ್ಯ ಯಜಮಾನಸ್ಯ ಪದ್ಮನ: ।
ಸ್ಸುಖಾವಹಂ ಶಾನ್ತಿಕರಂ ಪುಣ್ಯಮಾಯುವಿವರ್ಧನಮ್।
ಖಿಲಾಧಿಕಾರ (೨೦೪-೨೦೮)ಪಾದ್ಮ ಸಂ.ಚರ್ಯಾ ೫
ಮಾರ್ಕಾಂಡೇಯ ಸಂಹಿತೆ ೧೭(24-25)

ಗ್ರಾಮ ರಕ್ಷಣೆಗಾಗಿಯೂ ದೇವತೆಗಳ ಸಂತೋಷಕ್ಕಾಗಿಯೂ ರಾಕ್ಷಸ, ದುಷ್ಟ ಶಕ್ತಿಗಳ ವಿನಾಶಕ್ಕೂ ಶತ್ರುಗಳ ಮರ್ಧನಕ್ಕೂ ಆಯುರಾರೋಗ್ಯ ಹೊಂದಲೂ ಅಗತ್ಯ ಬಲಿಕರ್ಮ ಪೂಜೆಯನ್ನು ನಡೆಸಬೇಕು.

ಬಲಿಕರ್ಮದಿಂದ ಜನರ ಸರ್ವದುಃಖಗಳೂ ನಾಶವಾಗಿ ಸರ್ವಭೂತ ಗಣಗಳೂ ಪ್ರಜೆಗಳೂ ಸಂತೋಷವಾಗಿರಲು ಕಾರಣವಾಗುವುದು. ರಾಜರಾಜ್ಯ ರಾಷ್ಟ್ರ ಗ್ರಾಮ ಯಜಮಾನ ಮುಂತಾಗಿ ಇವರ ಶಾಂತಿಗಾಗಿಯೂ, ಆಯುರಾರೋಗ್ಯ ಐಶ್ವರ್ಯಾದಿಗಳ ವೃದ್ಧಿಗಾಗಿಯೂ ಬಲಿಕರ್ಮವನ್ನು ನಡೆಸಬೇಕು. ಸರ್ವಪ್ರಜೆಗಳಿಗೂ ಸುಖವುಂಟಾಗುತ್ತದೆ ಪುಣ್ಯಕರವು.

ನಮಸ್ಕಾರ ಪ್ರಕರಣವು
ಬಲಿಪೀಠ ಸಮೀಪೇ ನಮಸ್ಕಾರ

ಧಾಮ ಪ್ರದಕ್ಷಿಣೇ ಪೂರ್ವಂ ಕಾರ್ಯಾತತ್ರ ನಮಸ್ಕ್ರಿಯಾ
ಬಲಿಪೀಠಿಸ್ಯ ಪುರತೋ ನಮಸ್ಕಾರೋವಿಧೀಯತೇ ।
ಸಾಷ್ಟಾಂಗ ದಂಡವತ ಪ್ರಣಾಮೋ ನಮಸ್ಕಾರಂ ಸಮಾಚರೇತ್:
ಯ್ಸ್ಸ್ಕರೋತಿ ತಥಾಲೋಕೇ ತಸ್ಯ ಭೂಯಾ ನ್ಮಹಾಫಲಮ್। ೧೧೭
ಬಲಿಪೀಠೇ ದ್ವಾರದೇಶೇ ಮಹಾ ಮಂಡಪಮಧ್ಯತಃ
ಪೂರ್ವೋಕ್ತೇನೈವವಿಧಿನಾ ಸಾಷ್ಟಾಂಗ ಪ್ರಣಮೇ ದ್ಬುಧಾಃ
ಪ.ಪು.ಸಂ.೪

..ನಮಸ್ಕಾರ ಮಥೋಚ್ಯತೇ ।
ಅಷ್ಟಾಂಗ ಮಥಪಂಚಾಂಗ ಮೇಕಾಂಗಂತ್ರಿವಿಧಂ ಭವೇತ್।೧೮
(ಅಜಿತಾಗಮ ಕ್ರಿಯಾಪಾದ)

ನಮಸ್ಕಾರವೆಂಬುದು ಮೂರು ವಿಧವಾಗಿರುವುದು ೧ ಅಷ್ಟಾಂಗ ೨.ಪಂಚಾಂಗ, ೩ ಏಕಾಂಗ ಎಂಬುದಾಗಿ

ಉರಸಾಮನಸಾ ದೃಷ್ಟ್ವಾ ।
ಶಿರಸಾಪಿ ಧಿಯಾಪಿಚ ।
ಪದ್ಭ್ಯಾಂ ಕರಾಭ್ಯಾಂ ವಾಚಾ ಚ ।
ಪ್ರಣಾಮೋಷ್ಟಾಂಗ ಉಚ್ಯತೇ । ಸ್ಮೃತಿರತ್ನಾಕರೆ ೨೮

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಕೈ, ಕಾಲು, ತಲೆ, ಬುದ್ಧಿ, ಮನಸ್ಸು, ಎದೆ, ಕಣ್ಣು, ವಾಚ, ಇವುಗಳೊಂದಿಗೆ ಏಕ ಕಾಲದಲ್ಲಿ ಸೇರಿಸಿ ಮಾಡುವ ನಮಸ್ಕಾರವು ಸಾಷ್ಟಾಂಗವು.

ಹಸ್ತಾಭ್ಯಾಂ ಶಿರಸಾ ಪದ್ಭ್ಯಾಂ ಮನಸಾಚ ಧಿಯಾತಥಾ। ಅಹಂಕಾರೇಣ
ಚಾನ್ಮಾನಂ ನಿಪಾತ್ಯ ಧರಣೀತಲೇ ।
ಅನೇನ ಪ್ರಣಪಾತೇನ ಪ್ರಣಪತ್ಯ ಜನಾರ್ಧನಂ।

ಭಕ್ತರಾದ ನಾವು ದೇವರ ದರ್ಶನಕ್ಕಾಗಿ ದೇವಾಲಯಕ್ಕೆ ಹೋದಾಗ ಪ್ರದಕ್ಷಿಣೆ ನಮಸ್ಕಾರ ಮಾಡುವುದು ಸರಿಯಷ್ಟೆ, ಅದರಲ್ಲಿ ನಾವು ಯಾವುದನ್ನು ಮೊದಲು ಮಾಡಬೇಕು ಯಾವುದು ಅನಂತರ ಮಾಡಬೇಕು? ಎಲ್ಲ ಹೇಗೆ? ಮಾಡಬೇಕು ಇತ್ಯಾದಿಗಳನ್ನು ತಿಳಿಸಲ್ಪಡುತ್ತದೆ. ಯಾವುದೇ ಕೆಲಸವನ್ನು ಮಾಡಿ ದರೂ ಮೊದಲು ನಮಸ್ಕಾರ ಮಾಡಿ ಅನಂತರ ಇತರ ಕೆಲಸಗಳನ್ನು ಮಾಡಬೇಕು. ಬಲಿಪೀಠದ ಬಳಿ ಸಾಷ್ಟಾಂಗ ನಮಸ್ಕಾರ ಮಾಡಬೇಕು. ಅಹಂಕಾರವನ್ನು ಬಿಟ್ಟು ಏರಡು ಕೈಗಳು, ಶಿರಸ್ಸು, ಎರಡು ಪಾದಗಳು, ಮನಸ್ಸು, ಬುದ್ಧಿ ಇವುಗಳಿಂದ ಭಗವಂತನಿಗೆ ದಾಸನು ಎಂದು ಹೇಳಬೇಕು. ಇದರಿಂದ ಈ ಚೇತನನು ಭಗವಂ ತನಿಗೆ ಶೇಷಭೂತನೆಂದು ತಿಳಿಯಬೇಕು (ಸಂಪೂರ್ಣ ಶರಣಾಗತಿ)ಪ್ರದಕ್ಷಿಣಕ್ಕೆ ಮುಂಚೆ ಬಲಿಪೀಠದ ಬಳಿ ನಮಸ್ಕಾರ ಮಾಡಬೇಕು.
ಸ್ತ್ರೀಯರ ಶರೀರ ರಚನೆಯು ಬೇರೆಯಾದ್ದರಿಂದ ಅವರು ಪಂಚಾಂಗ ನಮಸ್ಕಾರವನ್ನು ಮಾಡಬೇಕು.

ಪದ್ಭ್ಯಾಂ ಕರಾಭ್ಯಾಂ ಶಿರಸಾ ಪಂಚಾಂಗಾ
ಪ್ರಣತಿ ಸ್ಮೃತಾ-------------------------------

ಎರಡು ಕಾಲುಗಳು, ಎರಡು ಕೈಗಳು ಮತ್ತು ಶಿರಸ್ಸು ಇವುಗಳಿಂದ ಕೂಡಿದ ನಮಸ್ಕಾರವು ಪಂಚಾಂಗವು.

ಸ್ತ್ರೀಯರ ಶರೀರ ರಚನೆಯು ಬೇರೆಯಾದ್ದರಿಂದ ಅವರು ಎರಡು ಮೊಣಕಾಲ ನ್ನೂರಿ ನಮಸ್ಕಾರ ಮಾಡಬೇಕು.

ಏಕಾಂಗಂ- ಏಕಾಂಗಂತು ನಮಸ್ಕಾರಂ ಶಿರಸ್ಯೈವ ಕೃತಂಭವೇತ್ ೨೨
ಅಜಿತಾಗಮ ಕ್ರಿಯಾ ೬೭

ಬಲಿಪೀಠದ ಬಳಿ ತಲೆಬಗ್ಗಿಸಿ ಹೃದಯ ಮಧ್ಯೆ ಅಥವಾ ತಲೆಯ ಮೇಲೆ ಕೈಯೆತ್ತಿ ಅಂಜಲಿ ಬದ್ಧವಾಗಿರುವುದು. ಇದಕ್ಕೆ ಏಕಾಂಗವೆಂದು ಹೆಸರು.

ಉತ್ತರೀಯೇಣ ಸಂಬದ್ಧ್ಯ ಕಟಿಂಚ ವರಯಾ ಮುದಾ ।
ಪ್ರದಕ್ಷಿಣಾ ನಮಸ್ಕಾರೌ ಯಃ ಕುರ್ಯಾದ್ಭಕ್ತಿ ಮಾಶ್ರಿತಃ ॥
ಸರ್ವಪಾಪವಿನಿರ್ಮುಕ್ತಃ ಸೋಂತೇ ಶಿವಪುರಂವ್ರಜೇತ್ ।

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ವಸ್ತ್ರೈಣ ವೇಷ್ಟಸುಕೃತ್ವಾ ತ್ರಿಧಾಕಟ್ಯಾಂ ಪ್ರದಕ್ಷಿಣಂ ।
ಭಕ್ತ್ಯಾಸ್ಸರ್ವೈಃ ಪ್ರಕರ್ತವ್ಯಂ ಮುದಾ , ಭೂಸುರಪುಂಗವಾಃ॥
ಶೈವಾಗಮಸಾರೇ ಪುಟ೧೨೧

ಉತ್ತರೀಯವನ್ನು ಸೊಂಟಕ್ಕೆ ಮೂರು ಸುತ್ತು ಪ್ರದಕ್ಷಿಣವಾಗಿ ಅಲಂಕಾರಯುತವಾಗಿ ಕಟ್ಟಿ ಕೈಮುಗಿದುಕೊಂಡು ಭಕ್ತಿಯಿಂದ ಯಾರು ದೇವರಿಗೆ ಪ್ರದಕ್ಷಿಣೆ ನಮಸ್ಕಾರ ಮಾಡುವರೋ ಅವರು ಸರ್ವ ಪಾಪಗಳಿಂದ ವಿಮುಕ್ತರಾಗಿ ಅಂತ್ಯಕಾಲದಲ್ಲಿ ಭಗವಂತನ ಸನ್ನಿಧಿಗೆ ಸೇರುವರು.

ಯುಜ್ಞಸೂತ್ರ ಮಧಃ ಕೃತ್ವಾ ಕರ್ಣೇಕೃತ್ವಾ ವಿಶೇಷತಃ।
ಅಪಸವ್ಯಂಚ ಧೃತ್ವಾಚೈವ ವಿನೀತವತ್ ।
ನಗಚ್ಚೇದೇವತ್ರಾ ಗಾರಂ ನವಾ ಮುಕ್ತ ಶಿಖೋನರೇ ।
ಅಕಚ್ಚಃ ಪುಚ್ಚರಚ್ಚಶ್ಚ ನಗ್ನಃ ಕಾಕೀನಪಿ ಮಾತ್ರಧೃಕಃ।

ಸ್ಥಲಸಂಕೋಚೇ ಸಂಪುಟ ಪ್ರಣಾಮಃ

ಸಂಕಟೇಸತಿ ಭೂಭಾಗೇ ಭಾಗವತಗ್ರತಃ ಸ್ಥಿತಃ ।
ಧೀಯಾತು ಭಕ್ತಿತಃ ಕುರ್ಯಾದ್ದಿದ್ವಾತು ಕರಸಂಪುಟಂ।
ಹೃದ್ದೇಶೇಮಾಧ್ನಿರ್ಕಂ ವ್ಯಸ್ತು ಸ್ಮರಣ ಸರ್ವೇಶ್ವರಂ ಹರಿಮ್।
(ಪಾರಮೇಶ್ವರ ಸಂ)೬

ಪಂಚವಿಧ ಪ್ರಣಾಮಃ ಪ್ರಕಾರವು

ಮಸ್ತಿಷ್ಕಂ ಸಂಪುಟಂ ಚೈವ ಪ್ರಹ್ವಾಂಗಂ ಸ್ವಸ್ತಿತಂ ತಥಾ।
ದಣ್ಡಾಗಂ ಚ ನಮಸ್ಕಾರಾಃ ಪಂಚಧಾ ಪರಿಕೀರ್ತಿತಾಃ ।

ದೇವಂ ಧ್ಯಾಯ ಮಸ್ತಕೇಂಜಲೌ ನ್ಯಸ್ತೇ ಸ ಮಸ್ತಿಕಪ್ರಣಾಮಃ ।
ಹೃದಯೇಽಂಜಲಿ ಪುಟೇ ನ್ಯಸ್ತೇಸ ಸಂಪುಟಃ ಹೃದಯೇಂಜಲಿಂ ।
ವಿನ್ಯಸ್ಯಾನತ ಶರೀರೇಪ್ರಹ್ವಾಂಗಃ ಪಾಣೀ ವ್ಯತ್ಯಸ್ತೈವಂ ।
ಸ್ವಸ್ತಿಕ ಬಂಧನಂ ಕೃತ್ವಾ ಪಾದಾಂಗುಲಿಭ್ಯಾಂ ಜಾನುಭ್ಯಾಂ ಲಲಾಟೇನ
ಚ ಪಂಚಾಂಗ್ಯೈಃ ಭೂಮಿಸ್ಪರ್ಶನೇ ಕೃತೇ ಸ ಪಂಚಾಂಗಃ ।
ಪಾದೌ ಹಸ್ತೌ ಪ್ರಸಾರ್ಯಾಧೋಮುಖಂ ಭೂಮಾಂದಂಡ ।
ವಚ್ಚಯಿತೇ ಸ ದಂಡಾಂಗ ಇತಿ ಪ್ರಣಾಮಾಃ ।
ಕಾಶ್ಯಪಜ್ಞಾನಕಾಂಡೇ ಫು ೭೩ಪುಟ ೧೩೪

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

1.ಶಿರಸ್ಸಿನ ಮೇಲೆ ಕೈಯೆತ್ತಿ ಜೋಡಿಸುವುದು ಮಸ್ತಿಷ್ಕ ಪ್ರಣಾಮವು
2.ಹೃದಯ ಮಧ್ಯದಲ್ಲಿ ಕೈಜೋಡಿಸುವುದು ಸಂಪುಟ ಪ್ರಣಾಮವು.
3.ಹೃದಯ ಮಧ್ಯದಲ್ಲಿ ಕೈಜೋಡಿಸಿ ತಲೆಯನ್ನು ತಗ್ಗಿಸಿ ನಮಸ್ಕಾರ ಎನ್ನುವುದು. ಪ್ರಹ್ವಾಂಗ ಪ್ರಣಾಮವು.
4. ಮೊಣಕಾಲನ್ನು ಊರಿ ತಲೆ ಲಲಾಟಗಳನ್ನು ಭೂಮಿಯಲ್ಲಿಟ್ಟು ನಮಸ್ಕರಿಸುವುದು. -ಪಂಚಾಂಗ ಪ್ರಣಾಮವು.
5. ಪಾದ ಮತ್ತು ಕೈಗಳನ್ನು ನೀಡಿ ಶರೀರವನ್ನು ಅಧೋಮುಖವಾಗಿ ,ದೀರ್ಘ ನಮಸ್ಕಾರ ಮಾಡುವುದು-ದಂಡಾಂಗ ನಮಸ್ಕಾರ.
ಈ ರೀತಿ ಐದು ವಿಧ ಪ್ರಣಾಮ ಭೇದಗಳಿವೆ -

ನಮಸ್ಕಾರ ಸ್ಮೃತೋಯಜ್ಞಃ ಸರ್ವಯಜ್ಞೋತ್ತಮ ಶುಭಃ।
ನಮಸ್ಕೃತ್ಯ ಮಹಾವಿಷ್ಣು ಮಶ್ವಮೇಧ ಫಲಂಭವೇತ್ ।

ಮಹಾಭಾರತೇ

ಭಗವಂತನಿಗೆ ನಮಸ್ಕಾರ ಮಾಡುವುದು ಒಂದು ಯಜ್ಞವನ್ನು ನಡೆಸಿದಂತೆ ತಿಳಿಯಬೇಕು. ದೇವಸ್ಥಾನದಲ್ಲಿ ಮಹಾವಿಷ್ಣುವಿಗೆ ನಮಸ್ಕಾರ ಮಾಡುವುದರಿಂದ ಅಶ್ವಮೇಧ ಯಜ್ಞ ಮಾಡಿದ ಫಲ ಬರುವುದು. ಆದ್ದರಿಂದ ದೇವಸ್ಥಾನಕ್ಕೆ ಹೋದಾಗ ಬಲಿಪೀಠದಬಳಿಯಲ್ಲಿ ನಮಸ್ಕಾರ ಮಾಡಬೇಕು.

ಏಕಹಸ್ತ ನಮಸ್ಕಾರ

ಏಕಹಸ್ತ ಪ್ರಣಾಮಂಚ ಏಕಂ ಚೈವ ಪ್ರದಕ್ಷಿಣಮ್।
ಹರಿಗೇಹೇ ವಿಸರ್ಜಂ ಸ್ನಾತ ಶ್ರೇಯಸ್ಕಾಮಿ ಸ್ಸದಾಭುವಿ।

ಏಕಹಸ್ತದಿಂದ ನಮಸ್ಕಾರ ಮಾಡಬಾರದು. ಅರ್ಥಾತ್ ದೇವಸ್ಥಾನಕ್ಕೆ ಹೋಗುವಾಗ ದೇವರಿಗಾಗಿ ಹಣ್ಣು ಹಂಪಲುಗಳನ್ನು ತಟ್ಟೆಯಲ್ಲಿಟ್ಟುಕೊಂಡು ಹೋಗುತ್ತೇವೆ. ಒಂದು ಕೈಯಲ್ಲಿ ತಟ್ಟೆಯನ್ನಿಟ್ಟುಕೊಂಡು ಬಗ್ಗಿ ಒಂದು ಕೈಯಿಂದ ಭೂಮಿಯನ್ನು ಮುಟ್ಟಿ ನಮಸ್ಕಾರ ಎಂದು ಹೇಳುವುದು ತಪ್ಪು. ಅಂತೆಯೇ ಅಶ್ರದ್ಧೆಯಿಂದ ಒಂದೇ ಪ್ರದಕ್ಷಿಣೆ ಮಾಡಬಾರದು. ಅಲ್ಲದೇ ಆ ತಟ್ಟೆಯಲ್ಲಿಟ್ಟಿರುವ ಫಲಪುಷ್ಪಗಳು ದೇವರಿಗೆ ಪ್ರೀತಿಯಾಗುವುದಿಲ್ಲ. ಈ ರೀತಿ ಮಾಡುವುದಕ್ಕೆ ಏಕಹಸ್ತ ಪ್ರಣಾಮವೆಂದು ಹೆಸರು.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ವಾಸುದೇವ ಪ್ರಣಮತಃ ಪೂಜಾವಸ್ತೂನಿಹಸ್ತಯೋಃ।
ಸ್ಥಿತಾನಿ ಸಾರ್ಪಣಾರ್ಹಾಣಿ ಸೇವಾ ನ್ಯೇತಾನಿ ನಿಕ್ಷಿಪೇತ್ । ೩೩
ಪಾದ್ಮಸಂ ಚರ್ಯಾ ೧೮

ಏಕಹಸ್ತ ಪ್ರಣಾಮಂಚ ಏಕಂಚಾಪಿ ಪ್ರದಕ್ಷಿಣಂ ।
ಅಕಾಲೇ ದರ್ಶನಂ ಚೈವ ಅಬ್ದಪುಣ್ಯಂ ವಿನಾಶಯೇತ್।
ಅರ್ಚನಾನವನೀತಂ ಪುಟ ೪೧

ಏಕೇನಪಾಣಿನಾ ಯೋ ವೈ ಪ್ರಣಮೇದ್ದೇವ ಮಚ್ಯುತಮ್ ।
ತಸ್ಯದಣ್ಡ ಕರಚ್ಛೇದ ಇತಿ ವೇದವಿದೋವಿದುಃ।
ತಸ್ಮಾದುಬಾಭ್ಯಾಂ ಪಾಣಿಭ್ಯಾಂ ಪ್ರಣಮೇತ್ ಸ್ವಾರ್ಥಮಿಪ್ಸಿತಮ್।
ತಥಾ ಚ ಯೂಯಂಚ ನಮತ ತನ್ಮೇಪ್ರಿಯಕರಂ ಭವೇತ್ ।
ಪಾದ್ಮಪುರಾಣ ಶ್ರೀ ಭಾಗವತೇ

ಏಕಹಸ್ತಪ್ರಣಾಮೇನ ಯತ್ಪಾಪಂ ನತದನ್ಯತ ।
ಹಸ್ತೌದ್ವೌನಿರ್ಮಿತೌ ನಾತ್ರ ಕಿಂತೇನ ಸುಕೃತಂ ಭವೇತ್।
ಸಾಂಜಲೀ ಕೃತ್ಯ ಹಸ್ತೌತು ಯಜೇತ ಮಧುಸೂಧನಮ್ ।
ಯ ಏಕೇನೈವ ಹಸ್ತೇನ ಪ್ರಣಮೇ ನ್ಮಂಧಧೀ ರ್ಹರಿಮ್।
ತಸ್ಯಹಸ್ತೋ ಭವೇದೇಕಃ ಪಶ್ಚಾಜ್ಜನ್ಮಶತೈರಪಿ ।
ಇಹವೈಜಾಯತೇ ಪಂಗೂ ರೋಗೀಚೈವ ನಸಂಶಯಃ।
ಕಿಮಿದಂ ಬಹುಲೇಶ್ಚಿತ್ರೈಃ ಕರಣೈರ್ದೇಹಕಲ್ಪನಮ್।೨೮೦
ಯದ್ಯೇಕೈಕಂ ನಚೇ ತಸ್ಯ ಕೈಂಕರ್ಯಾಯೋಪ ಯುಜ್ಯತೇ।
ಕಿಂ ಸ್ವಾಧೀನೇನ ಹಸ್ತೇನ ಸ್ವಾಧೀನಂ ಕರ್ಮಸೇವಿತಂ।
ಅಶಕ್ನುವಾನಾ ಸ್ವಾತಂತ್ರ್ಯಹತಾಃ ಪಾಪ ಹತಾಹತಾಃ ।
ಏಕಹಸ್ತ ಪ್ರಣಾಮಸ್ತು ಪರಿಹಾರ್ಯೋ ವಿಶೇಷತಃ ।
ಪ್ರಣತಂ ನರಕಂಯಾತಸ್ತಯೋರ್ಯಸ್ಮಾತ್ಸಮಾಗಮಃ। ೨೮೩
ದೇವತಾತಸ್ದೃಶಂ ಮೂಢಂ ಶಪನ್ತಿಚ ವಿಶಂಕಿತಾಃ।
ಪ್ರಕೀರ್ಣಾಧಿಕಾರಃ ೩೬ಪುಟ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಏಕದಂಡ ನಮಸ್ಕಾರೋ ಹ್ಯೇಕಂಚಾಪಿ ಪ್ರದಕ್ಷಿಣಂ ।
ಏಕಹಸ್ತ ನಮಸ್ಕಾರೋ ಹನ್ತಿಪುಣ್ಯಂ ಪುರಾತನಂ । ೫೬
ರೌರವಾಗಮಕ್ರಿಯಾ(ಅನುಬಂಧ)೬೫ ಪುಟ

ನಕುರ್ಯಾದೇಕ ಹಸ್ತೇನ ನಮಸ್ಕಾರಂ ಕದಾಚನಃ ।
ಶೈವಾಗಮಸಾರೇ ೧೨೧ ಪುಟ

ದೇವಸ್ಥಾನಕ್ಕೆ ಹೋದಾಗ ಸಕೃತ ಪ್ರಣಾಮದ ಪ್ರಕಾರ ಒಂದೇ ಪ್ರದಕ್ಷಿಣೆ ಮಾಡಬಾರದು ಅಲ್ಲದೆ ಹಿಂದೆ ತಿಳಿಸಿದಂತೆ ಒಂದೇ ಕೈಯಿಂದ ಭೂಮಿಯನ್ನು ಮುಟ್ಟಿ ನಮಸ್ಕಾರ ಮಾಡಬಾರದು.ಆ ರೀತಿ ಮಾಡಿದಲ್ಲಿ ನಾವು ಹಿಂದೆ ಸಂಪಾದಿಸಿದ ಪುಣ್ಯವೆಲ್ಲಾ ಕಳೆದು ಹೋಗುವುದು. ಅಹಂಕಾರ ಅಥವಾ ಅಶ್ರದ್ಧೆಯಿಂದ ಏಕಹಸ್ತ ಪ್ರಣಾಮ ಮಾಡಿದವರ ಕೈಯ್ಯನ್ನು ಕತ್ತರಿಸುವಷ್ಟು ಶಿಕ್ಷೆಗೆ ಒಳಪಡುತ್ತಾರೆ. ಆದ್ದರಿಂದ ಎರಡು ಕೈಯನ್ನು ಜೋಡಿಸಿ ನಮಸ್ಕಾರ ಮಾಡಬೇಕು. ಆ ರೀತಿ ಮಾಡಿದಲ್ಲಿ ಭಗವಂತನು ಪ್ರೀತನಾಗುವನು.

ಭಗವಂತನು ಎರಡು ಕೈಗಳನ್ನು ಕೊಟ್ಟಿರುವುದೇತಕ್ಕೆ? ಆ ಎರಡು ಕೈಗಳಿಂದಲೂ ಭಗವಂತನಿಗೆ ನಮಸ್ಕರಿಸಬೇಕು. ಏಕಹಸ್ತ ಪ್ರಣಾಮ ಮಾಡಿದ್ದೇ ಆದರೆ ಮುಂದಿನ ಜನ್ಮದಲ್ಲಿ ಒಂದು ಹಸ್ತ ಪ್ರಯೋಜನವಿಲ್ಲದಂತಾಗಿ ಲೋಪವಾಗುತ್ತದೆ. ಇಹಲೋಕದಲ್ಲಿ ಕಾಲಾಂತರದಲ್ಲಿ ಕಾರಣಾಂತರದಿಂದ ಕುಂಟನಾಗಬಹುದು. ರೋಗಗ್ರಸ್ತರಾಗಬಹುದು. ಆದ್ದರಿಂದ ಏಕಹಸ್ತ ಪ್ರಣಾಮ ಮಾಡಬಾರದು. ಎರಡೂ ಕೈಗಳನ್ನೆತ್ತಿ ಜೋಡಿಸಿ ಭಗವಂತನಿಗೆ ನಮಸ್ಕಾರ ಮಾಡಬೇಕು.

ಒಂದು ಕೈಯಿಂದ ದೇವರಿಗೆ ನಮಸ್ಕಾರ ಮಾಡಬಾರದು ಅದೇ ರೀತಿಯಲ್ಲಿ ಒಂದಾವೃತ್ತಿ ಪ್ರದಕ್ಷಿಣೆ ಮಾಡಬಾರದು. ಆ ರೀತಿ ಮಾಡಿದಲ್ಲಿ ನಾವು ಹಿಂದೆ ಸಂಪಾದಿಸಿದ ಪುಣ್ಯವೆಲ್ಲಾ ಕಳೆದುಹೋಗುವುದು.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ರಿಕ್ತ ಹಸ್ತ ಶೂನ್ಯ ಫಲಸ್ತ್ಯಕ್ತ ಸವ್ಯಾನ ಏವಚ:।
ಖಾದನ್ನಪಿಜ ತಾಂಬೂಲ ಮುಪಹಾರಾದಿ ಭಕ್ಷಯ ।
ದೇವಾಲಯು ವಿಶನ್ನೇವ ತಸ್ಯಪಾಪಂ ಸಮುದ್ಭವೇತ್:।
ಪ್ರಕೀರ್ಣ ೩೬(314)

ದೇವಸ್ಥಾನಕ್ಕೆ ದೇವರ ಸೇವೆಗಾಗಿ ಹೋಗಬೇಕಾದ್ದರಿಂದ ಬರೀ ಕೈಯಲ್ಲಿ (ರಿಕ್ತಹಸ್ತ) ಹೋಗಬಾರದು. ಅರ್ಥಾತ್ ರಾಜ ಗುರುಗಳು, ಮಕ್ಕಳು, ದೇವರು ಇವರನ್ನು ನೋಡುವುದಕ್ಕೆ ಹೋಗುವಾಗ ಬರಿಕೈಯಲ್ಲಿ ಹೋಗಬಾರದು. ಆದ್ದರಿಂದ ಹಣ್ಣು ಹಂಪಲು-ಕೊಂಡೊಯ್ಯುತ್ತೇವೆ. ಒಂದು ಕೈಯ್ಯಲ್ಲಿ ತಟ್ಟೆ ಇದೆ ನಮಸ್ಕಾರ ಮಾಡುವುದು ಹೇಗೆ? ತಟ್ಟೆಯನ್ನು ಕೆಳಗಿಟ್ಟು ನಮಸ್ಕಾರ ಮಾಡಬೇಕು. ಆಗ ಅಶ್ರದ್ಧೆ ಹುಟ್ಟಿ ಒಂದು ಕೈಯಲ್ಲಿ ತಟ್ಟೆ ಇನ್ನೊಂದು ಕೈಯ್ಯಲ್ಲಿ ನಮಸ್ಕಾರ ಇದೇ ಏಕಹಸ್ತ ನಮಸ್ಕಾರವೆನ್ನುವುದು. ಮಾಡಬಾರದು. ಆ ತಟ್ಟೆಯಲ್ಲಿರುವ ಫಲಪುಷ್ಪಗಳು ದೇವರಿಗೆ ಪ್ರೀತಿಯಾಗುವುದಿಲ್ಲ.

ಪರಿಶಿಷ್ಟ ಉಪಯುಕ್ತಾಂಶದಲ್ಲಿ ಯಾರು ಯಾರು ಹೇಗೆ ಯಾವ ಕಾರಣ ದಿಂದ ದೇವಸ್ಥಾನಕ್ಕೆ ಹೋಗಬಾರದು ಎನ್ನುವುದರಲ್ಲಿ ತಿಳಿಸಿರುವುದನ್ನು ಕಾಣಬ ಹುದು.

ಗರ್ಭಗೇಹ ಸಮೀಪೇ ಪ್ರದಕ್ಷಿಣಾ ನಿಷೇಧ:।
ಅನ್ತ ಗರ್ಭಗೃಹೇ ದ್ವಿಷ್ಪೋ ಗರ್ಭದ್ವಾರಾರ್ಧಮಂಟಪೇ। 367
ಪ್ರಣಪಾತಗಣಂ ಕುರ್ಯಾತ್ ಪ್ರದಕ್ಷಿಣಗಣಂವಿನಾ ।
ಚಕ್ರವದಾ ಭ್ರಮಯೇನ್ನಾಂಗಂ ಪೃಷ್ಠಭಾಗಂ ನ ದರ್ಶಯೇತ್ ।368
ಪಶ್ಚಾದ್ಭಾಗೇನ ನಿರ್ಗಚ್ಛೇದ್ದೇವಾಗ್ನಿಗುರುಸನ್ನಿಧೌ ।
ವಹ್ನಿಸ್ತಸ್ಯ ವಿಭೋರ್ಯಸ್ಮಾತ್ ಪಾಣಿಪೃಷ್ಠಸ್ಯ ದರ್ಶನಂ। 369

ಪಾರಮೇಶ್ವರ ಸಂ 6

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ನಮಗೆ ಅಧಿಕವಾದ ಭಕ್ತಿ ಇದೆ, ಪ್ರೀತಿ ಇದೆ, ಅಧಿಕಾರವಿದೆ ಎಂದು ಹೇಳಿ ಗರ್ಭಗೃಹದ ಒಳಗೆ ಹೋಗಿ ವಿಗ್ರಹ=ಭಗವಂತನನ್ನು ಪ್ರದಕ್ಷಿಣೆ ಮಾಡಬಾರದು. ನಮಗೆ ಗರ್ಭಗೃಹದ ಒಳಗೆ ಪ್ರವೇಶಾಧಿಕಾರವಿಲ್ಲವು. ಅಲ್ಲದೆ ಅರ್ಧಮಂಟಪದಲ್ಲಾಗಲೀ ಸಹ (ಶುಕನಾಸಿ) ನಮಸ್ಕಾರ ಮಾಡಬಾರದು. ಇಲ್ಲಿ ನಮಸ್ಕಾರ ಮಾಡಬಹುದೆಂದು ಹೇಳಿರುವುದು ಗೌಣಪಾರ್ಥವು. ಅಲ್ಲಿ ಕೇವಲ ಚಕ್ರದಂತೆ ತಮಗೆ ತಾವು ಎಂದರೆ ಮನಸ್ಸಿನಲ್ಲಿ ಭಗವಂತನನ್ನು ಧ್ಯಾನಿಸಿಕೊಂಡು ಅವನನ್ನು ಪ್ರದಕ್ಷಿಣೆ ಮಾಡುವಂತೆ ಭಾವಿಸಿ ತನಗೆ ತಾನು ಚಕ್ರದಂತೆ ಶರೀರವನ್ನು ತಿರುಗಿಸಬಾರದು. ಅಲ್ಲಿ ನಿಂತು ಭಗವಂತನಿಗೆ ನಮ್ಮ ಪೃಷ್ಠ ಭಾಗವನ್ನು ತೋರಿಸಬಾರದು. ಅಲ್ಲಿಂದ ಹೊರಕ್ಕೆ ಬರುವಾಗ ಹಿಂದುಮುಖವಾಗಿ ಬರಬೇಕು. ಅರ್ಧಮಂಡಪದಲ್ಲಿ ನಮಸ್ಕಾರ ಮಾಡಬಹುದೆಂದು ಹೇಳಿರುವುದು ಗೌಣವಾರ್ಥವು. ನಮಸ್ಕಾರ ಮಾಡಬಾರದು. ಕೆಲವರು ಮನಸ್ಸಿನಲ್ಲಿ ಭಗವಂತನನ್ನು ಧ್ಯಾನ ಮಾಡಿ ಚಕ್ರದಂತೆ (ಆತ್ಮಪ್ರದಕ್ಷಿಣೆ) ತಿರುಗುವುದು ಪ್ರದಕ್ಷಿಣೆ ಮಾಡುವುದು . ಅದು ತಪ್ಪು ಆ ರೀತಿ ಚಕ್ರದಂತೆ ಶರೀರವನ್ನು ತಿರುಗಿ ಪ್ರದಕ್ಷಿಣೆ ಮಾಡಬಾರದು. ಏಕೆಂದರೆ ನಮ್ಮ ಪೃಷ್ಠಭಾಗವನ್ನು ದೇವರ ಎದುರಿಗೆ ತೋರಿಸಿದಂತೆ ಆಗುವುದು. ಅಲ್ಲದೆ ದೇವರು, ಗುರುಗಳು ಅಗ್ನಿಕುಂಡ ದರ್ಶನ ಮಾಡುವಾಗ ಇವರಿಗೆ ನಮ್ಮ ಪೃಷ್ಠ ಭಾಗವನ್ನು ತೋರಿಸಿ ನಡೆಯಬಾರದು. ಹಿಂದುಮುಖವಾಗಿ ಬರಬೇಕು.

ರೋಗಾನ್ವಿತಾ ಸರೋಭಕ್ತಾ ಪ್ರಣಾಮಂ ಸಕೃದಾಚರೇತ್:।
ರೋಗೈರ್ವಾ ಮುಚ್ಯತೇ ನತ್ಯಂಶಂ ಶಂಭೋರನುಗ್ರಹಾತ್:।
ಶೈವಾಗಮಸಾರ ಪುಟ ೧೨

ಆರೋಗ್ಯವಿಲ್ಲದಿರುವವರು ಸಕೃತ್ ಒಂದಾವೃತ್ತಿ ನಮಸ್ಕರಿಸಿದರೆ ಸಾಕು. ಆ ರೀತಿ ಸಕೃತಿ ಪ್ರಣಾಮ ಮಾಡಿದರೂ ಭಗವಂತನು ಅನುಗ್ರಹಿಸುವನು.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಸಂಪ್ರದಾಯ ಭೇದ ನಮಸ್ಕಾರ ವಿಧಿ :

ದ್ವಿಧಾಪ್ರದಕ್ಷಿಣಾಂ ಕುರ್ಯಾತ್ ಪ್ರಣಾಮಂಚ ತಥಾವಿಧುः।
ನೈಕತ್ರಿಪಂಚ ಸಪ್ತಾಷ್ಟ ಗಣನಾ ವಿಷಮಂಚಯತ್ः ।
ಯತः ಸಮೋಹಿ ಭಗವಾನ್ ದೇವ: ಸರ್ವಸ್ಯವೈಹರಿः।
ಸಂಪೂಜ್ಯ ಗಂಧ ಪುಷ್ಪೈಶ್ಚ ತತಸ್ತು ಭಗವನ್ಮಯಾತ್ः ।417
ಪಾರಮೇಶ್ವರ ಸಂ ೭ ರೌರವಾಗಮ ಕ್ರಿಯಾ ಅನುಬಂಧ ೭೫(೫೬)

ಹಸ್ತಾಭ್ಯಾಂ ಪದ್ಭ್ಯಾಂ ಮೂರ್ಧ್ನಾ ಧಿಯಾ ಹೃದಾ।
ಅಹಂಕಾರೇಣ ಚಾತ್ಮಾನಂ ಚತುರ್ವಾರಂ ಮಹೀತಲೇ । ೯೮
ಶ್ರೀಪ್ರಶ್ನ ಸಂ. ೨೯

ಸಕೃತ ಪ್ರಣಾಮ ಮಾಡುವವರಲ್ಲದ ಇತರರು ಅವರವರ ಸಂಪ್ರದಾಯ ದಂತೆ ನಮಸ್ಕಾರ ಮಾಡಬಹುದು (ಮಾಡಬೇಕು) ಅನೇಕಾವೃತ್ತಿ ನಮಸ್ಕಾರ ಮಾಡುತ್ತೇನೆಂದು 1-3-5-7 ಈ ರೀತಿ ವಿಷಮ ಸಂಖ್ಯೆ ರೀತಿಯಲ್ಲಿ ನಮಸ್ಕಾರ ಮಾಡಬಾರದು. ಎಷ್ಟಾವೃತ್ತಿ ಮಾಡಿದರೂ ಸಮ ಸಂಖ್ಯೆಯಲ್ಲಿ ನಮಸ್ಕಾರ ಮಾಡ ಬೇಕು. ನಮಸ್ಕಾರ ಮಾಡುವುದರಿಂದ ನಾವು ಭಗವಂತನಿಗೆ ಗಂಧಪುಷ್ಪಗಳಿಂದ ಪೂಜೆ ಮಾಡಿದ ಫಲವು ಬರುವುದು. ಆದ್ದರಿಂದ ಎರಡಾವೃತ್ತಿ ನಾಲ್ಕಾವೃತ್ತಿ ಸಮ ಸಂಖ್ಯೆಯಲ್ಲಿ ಪ್ರಣಾಮ ಮಾಡಬೇಕು.

ಪ್ರದಕ್ಷಿಣಾನಮಸ್ಕಾರಾನ್ ಯುಗ್ಮಾನೇವ ಸಮಾಚರೇತ್ ।
ದಣ್ಡವತ್ಕೂರ್ಮವಚ್ಚೈವ ಪ್ರಣಾಮೋ ದ್ವಿವಿಧೋಚ್ಚ್ಯೆ ಭವೇತ್ !

ದೇವರಿಗೆ ದಣ್ಡವತ್ ಪ್ರಣಾಮ ಎರಡಾವೃತ್ತಿ ಮತ್ತು ಪ್ರದಕ್ಷಿಣಾ ಎರಡಾ ವೃತ್ತಿ ಮಾಡಬೇಕು .ಎರಡನೆ ವಿಧವು ಕೂರ್ಮದಂತೆ ಚಿಕ್ಕದಾಗಿ ಮೊಣಕಾಲಿನ ಮೇಲೆ ಬಗ್ಗಿ ನಮಸ್ಕಾರ ಮಾಡುವುದು. ಪಂಚಾಂಗವು(ಹೆಂಗಸರು ಮಾಡುವ ವಿಧ)

ದೇವಾಲಯೇಷು ಸತತಂ ಭಕ್ತಿ ಶ್ರದ್ಧಾಸ್ವಿತೋಘರः। 118
ವಿಷ್ಣೋರಭಿಮುಖಂ ತಿಷ್ಠೆ ಪೃಷ್ಠಭಾಗಂ ನ ದರ್ಶಯೇತ್।
ಪೀಠಾಸನಾಧ್ಯಾಸನೇಷು ನರದಾಪಿ ಹರೇರ್ಗೃಹೇ ।
ನಂ ವಿಸೇ ದ್ವಿಬುಧ ಶ್ರೇಷ್ಠಾತ್ತೇನ ಪಾಪೋಮಹಾನ್ಭವೇತ್ ।119

ಸ.ಪು.ಸಂ. 4

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ದೇವಾಲಯದಲ್ಲಿ ಯಾವಾಗಲೂ ದೇವರಿಗೆ ಅಭಿಮುಖವಾಗಿರಬೇಕು. ಪೃಷ್ಠಭಾಗ ತೋರಿಸಬಾರದು. ಅಲ್ಲದೇ ವೀರಾಸನದಿಂದ (ಕಾಲಿನ್ನ ಮೇಲೆ ಕಾಲು ಹಾಕಿಕೊಂಡು) ಅಥವಾ ತೊಡೆಯ ಮೇಲೆ ಇನ್ನೊಂದು ಕಾಲನ್ನಿಟ್ಟು) ಕುಳಿತಿರಬಾರದು -ಆ ರೀತಿ ನಡೆದಲ್ಲಿ ಅದು ಮಹಾ ಪಾಪಕ್ಕೆ ಕಾರಣವಾಗುವುದು.

ಸ್ಥಲ ಸಂಕೋಚೇ ಸಂಪುಟ ಪ್ರಣಾಮಃ।
ಸಂಕಟೇ ಸತಿ ಭೂಭಾಗೇ ಭಗವತ್ಯಗ್ರತಃ ಸ್ಥಿತಃ।
ಧೀಯಾತು ಭಕ್ತಿತಃ ಕುರ್ಯಾಟ್ಟಿದ್ದಾತು ಕರ ಸಂಪುಟಂ । 366
ಹೃದ್ದೇಶೇ ಮೂರ್ಧ್ನಿಕಂಪ್ಯೈಸ್ತು ಸ್ಮರನ್ ಸರ್ವೇಶ್ವರಂ ಹರಿಮ್।
ಪಾರಮೇಶ್ವರ ಸಂ.೬

ದಣ್ಡವತ್ ಧೀರ್ಘ ನಮಸ್ಕಾರ ಮಾಡಲು ಸ್ಥಲ ಸಂಕೋಚವಾದಲ್ಲಿ ಭಕ್ತಿಯುತವಾಗಿ ಸಂಪುಟ ಪ್ರಣಾಮ ಎಂದರೆ ತಲೆಬಾಗಿ ಹೃದಯ ಮಧ್ಯದಲ್ಲಿ ಕೈಗಳನ್ನು ಜೋಡಿಸಿ ಅಥವಾ ತಲೆಯ ಮೇಲೆ ಕೈಜೋಡಿಸಿ ನಮಸ್ಕಾರ ಎಂದು ಹೇಳಿಬಹುದು. ಇದಕ್ಕೆ ಸಂಪುಟ ಪ್ರಣಾಮ ಎಂದು ಹೆಸರು.

ಆಗ್ನೇ ನೈಋತ ವಾಯುವ್ಯೇ ನ ಕುರ್ಯಾದ್ದೇವ ವಂದನಂ।
ಅತ್ರೈವ ವಂದನಂ ಕೃತ್ವಾ ಮಹಾ ದೋಷೋ ಭವೇತ್ತತಃ ।
ಅಗ್ರೇ ಪೃಷ್ಠೇ ವಾಮಭಾಗೇ ಸಮೀಪೇ ಗರ್ಭಮಂದಿರೇ।
ಜಪಹೋಮ ನಮಸ್ಕಾರಾನ್ನಕುರ್ಯಾದ್ದೇವತಾಗೃಹೇ ।
(ಅಸಂಖ್ಯಾಕ ನಮಸ್ಕಾರಾನ್ನಕುರ್ಯಾತ್ ಫಲಕಾಂಕ್ಷಿಣಃ)
ಶೈವಾಗಮಸಾರೇ ಪುಟ ೩೧೯

B14› ಅಗ್ನಿದಿಕ್ಕು ನೈಋತ, ವಾಯುವ್ಯ ಈ ದಿಕ್ಕುಗಳಿಗೆ ಕಾಣಿಸೀಡಿ ನಮಸ್ಕಾರ ಮಾಡಬಾರದು. ಆ ರೀತಿ ಮಾಡಿದಲ್ಲಿ ದೋಷವುಂಟಾಗುವುದು. ದೇವರ ಎದುರಿಗೆ, ಹಿಂಭಾಗದಲ್ಲಿ (ಗರ್ಭಗೃಹದ ಹಿಂದೆ) ದೇವರ ಎಡಭಾಗದಲ್ಲಿ ದೇವರ ಸಮೀಪದಲ್ಲಿ ಎಂದರೆ ಗರ್ಭಗೃಹದಲ್ಲಿ (ಸಮೀಪದಲ್ಲಿ) ನಮಸ್ಕಾರ ಮಾಡಬಾರದು. ಅಲ್ಲದೆ ಫಲಾಕಾಂಕ್ಷಿಯಾಗಿ ಮಾಡುವ ಜಪ, ಹೋಮ (ದೇವಸ್ಥಾನಕ್ಕೆ ಸಂಬಂಧಪಡದ) ಇತ್ಯಾದಿ ಗಳನ್ನು ದೇವಸ್ಥಾನದಲ್ಲಿ ಮಾಡಬಾರದು. ಆದ್ದರಿಂದ ದೇವಸ್ಥಾನಕ್ಕೆ ಬಂದಾಗ ಬಲಿಪೀಠ ಸಮೀಪದಲ್ಲಿ ನಮಸ್ಕಾರ ಮಾಡಬೇಕು. ಅಲ್ಲದೆ ಅನೇಕಾವೃತ್ತಿ ನಮಸ್ಕಾರ ಮಾಡಿದೆನೆಂದು ಲೆಕ್ಕವಿಲ್ಲದೆ ಮಾಡಬಾರದು. ಅರ್ಥಾತ್ ಸಮ ಸಂಖ್ಯೆಯಲ್ಲಿ ನಮಸ್ಕಾರ ಮಾಡ...ಕು ಏಕೆಂದರೆ ಕೆಲವು ಕಾರ್ಯ ವಿಶೇಷಗಳಲ್ಲಿ ನಿಯಮಿತ ಸಂಖ್ಯಾ ನಮಸ್ಕಾರಗಳನ್ನು ಮಾಡಬೇಕಾಗಿರುವುದು. ಅಂಥ ಕಾಲಗಳಲ್ಲಿ ಮಾಡುವ ಕಾರ್ಯಗಳಿಗೆ ಸಂಬಂಧಿಸಿದ ಜಪ, ಹೋಮಗಳನ್ನು (ದೇವಸ್ಥಾನಕ್ಕೆ ಸಂಬಂಧಪಡದ) ಮಾಡಬಾರದು.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಅಗ್ರೇ ಮೃತ್ಯುಮವಾಪ್ನೋತಿ ಪೃಷ್ಠೇ ತ್ವವಿಜಯಸ್ಮೃತಃ।
ವಾಮಭಾಗೇ ಭವೇನ್ನಾಶೋ --------------------------।

ದೇವರ ಮುಂಭಾಗದಲ್ಲಿ (ಗರ್ಭಗೃಹ ಸಮೀಪದಲ್ಲಿ) ನಮಸ್ಕಾರ ಮಾಡಬಾರದು. ಪ್ರಾಣಭಯವು. ಹಿಂಭಾಗದಲ್ಲಿ ಮಾಡಿದರೆ ವಿಜಯಾಕಾಂಕ್ಷಿಯಾ ಗುವು-ದಿಲ್ಲ. (ನೆನೆದ ಕಾರ್ಯ ನಡೆಯುವುದಿಲ್ಲ) ವಾಮಭಾಗದಲ್ಲಿ ಅನಿಷ್ಟ ಫಲವು.

ಪ್ರಾರ್ಥನಾ

ದಾಸೋಹಂ ತೇ ಜಗನ್ನಾಥ ಸಪುತ್ರಾದಿ ಪರಿಗ್ರಹಃ।
ಪ್ರೇಷ್ಯಂ ಪ್ರಶಾಧಿಕರ್ತವ್ಯೇ ಮಾಂ ನಿಯುಙ್ಕ್ಷ್ವ ಹಿ ತೇ।
ಇತಿ ವಿಜ್ಞಾಪ್ಯದೇವೇಶಂ .... ಸದಾ । 139

ಪಾಪ್ಮಸಂ ಚರ್ಯ ॥

ಪಾಪೋಹಂ ಪಾಪಕರ್ಮಾಹಂ ಪಾಪಾತ್ಮಾ ಪಾಪಸಂಭವಾಃ ।
ತ್ರಾಹಿಮಾಂ ಕೃಪಯಾದೇವ ಶರಣಾಗತ ವತ್ಸಲಂ ।
ಅನ್ಯಥಾ ಶರಣಂನಾಸ್ತಿ ತ್ವಮೇವ ಶರಣಂ ಮಮ ।
ತಸ್ಮಾತ್ ಕಾರುಣ್ಯಭಾವೇನ ರಕ್ಷ ರಕ್ಷ ಮಹೇಶ್ವರ ।

ಬಲಿಪೀಠದ ಬಳಿ ನಮಸ್ಕಾರ ಮಾಡಿದನಂತರ ಭಗವಂತನಿಗೆ ಅಭಿಮು ಖವಾಗಿ ನಿಂತು

ಹೇ ಜಗನ್ನಾಥ ಪತ್ನೀಪುತ್ರಾದಿಗಳೊಂದಿಗೆ ಬಂದು ನಿನ್ನಲ್ಲಿ ಶರಣು ಹೊಂದಿರುವೆನು. ನನ್ನನ್ನು ಜಗವದ್ಭಕ್ತಿಯುತನಾಗಿ ಮಾಡಿ ವೇದಾಂತ ಮಾರ್ಗದಲ್ಲಿ ಕರ್ಮನಿರತನಾಗಿ ಮಾಡುವುದಲ್ಲದೆ ನಿನ್ನ ಕೈಂಕರ್ಯದಲ್ಲಿ ನಿಯಮಿಸು ಎಂದು ಪ್ರಾರ್ಥಿಸಬೇಕು.

ಪ್ರದಕ್ಷಿಣಾವಿಧಿ

ಪ್ರದಕ್ಷಿಣಸಮೋನಾಸ್ತಿ ಪ್ರತ್ಯಕ್ಷ ಫಲದೋವಿಧಿಃ
ಯಾನಿಕಾನಿಚ ಪಾಪಾನಿ ಜನ್ಮಾಂತರ ಕೃತಾನಿಚ ।
ತಾನಿತಾನಿ ಪ್ರಣಶ್ಯಂತಿ ಪ್ರದಕ್ಷಿಣ ಪದೇ ಪದೇ ।

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಸರ್ವಪಾಪಹರಂ ಚೈವ ಸರ್ವದಾನ ಫಲಪ್ರದಂ ।
ಸರ್ವರೋಗ ವಿನಾಶಾರ್ಥಂ ಪ್ರದಕ್ಷಿಣಾಮಥಾಚರೇತ್,
ಶೈವಾಗಮಸಾರೇ ಪು.೧೨೧

ಭಗವಂತನ ದೇವಾಲಯದಲ್ಲಿ ಪ್ರದಕ್ಷಿಣೆ ಮಾಡುವುದರ ಸಮವಾದ ಪುಣ್ಯಕಾರ್ಯವು ಮತ್ತೊಂದು ಇರುವುದಿಲ್ಲ. ನಾವು ಆಲಯದಲ್ಲಿ ಮಾಡುವ ಪ್ರದಕ್ಷಿಣೆಯಿಂದ ನಮ್ಮ ಪಾಪಗಳು ನಶಿಸುತ್ತವೆ. ಸರ್ವ ಪಾಪಗಳೂ ನಾಶವಾಗುವುದು. ಪ್ರತ್ಯಕ್ಷ ಫಲವನ್ನು ಕೊಡತಕ್ಕದ್ದು ಸರ್ವವಿಧವಾದ ದಾನ ಧರ್ಮಗಳ ಫಲವೂ ಲಭಿಸುತ್ತದೆ. ಸರ್ವರೋಗಗಳೂ ನಾಶವಾಗಿ ಆರೋಗ್ಯವಾಗಿರಲು ಆಲಯದಲ್ಲಿ ಭಗವಂತನಿಗೆ ನಮಸ್ಕರಿಸಿ ಪ್ರದಕ್ಷಿಣೆ ಮಾಡಬೇಕು.

ಪ್ರದಕ್ಷಿಣ ಶಬ್ದಾರ್ಥವು :

ಪ್ರಶ್ಚಿನ್ನತ್ತಿ ಭಯಂ ಸರ್ವಂ ದಕಾರೋ ಮೋಕ್ಷಸಿದ್ಧದಃ ।
ಕ್ಷಿಕಾರಾತ್ ಕ್ಷೀಯತೇ ರೋಗೋ ನಕಾರಃ ಶ್ರೀ ಪ್ರದಾಯಕಃ।
ಪ್ರದಕ್ಷಿಣಾರ್ಣಸಂ ಯೋಗಾತ ಪ್ರದಕ್ಷಿಣಮಿತಿ ಸ್ಮೃತಂ ।
ಶೈವಾಗಮಸಾರೇ 121 ಪುಟ

ಪ್ರ ಎಂದರೆ ಸಾಂಸಾರಿಕ ಪುನರ್ಜನ್ಮವೆಂಬ ಭಯವು ನಾಶವಾಗುತ್ತದೆ
ದ -ಎಂದರೆ ಮೋಕ್ಷವು ಲಭಿಸುತ್ತದೆ.
ಕ್ಷಿ -ಎಂದರೆ ಸಕಲ ರೋಗಗಳೂ ಪರಿಹಾರವಾಗುವುದು.
ಣ -ಎಂದರೆ ಅಕ್ಷರಗಳ ಸಂಯೋಗದಿಂದ ಉಂಟಾಗುವ ಪ್ರದಕ್ಷಿಣ ಶಬ್ದವನ್ನನುಸರಿಸಿ ಭಗವಂತನ ಆಲಯದಲ್ಲಿ ಪ್ರದಕ್ಷಿಣವಾಗಿ ಬರಬೇಕು. ಇದರಿಂದ ಭಗವಂತನು ಸುಪ್ರೀತನಾಗಿ ಮೇಲೆ ತಿಳಿಸಿದ ಫಲವನ್ನು ಅನುಗ್ರಹಿಸುವನು.

ಉತ್ತರೀಯೇಣ ಸಂಬಧ್ಯ ಕಟಿಂಚ ವರಯಾ ಮುದಾ ।
ಪ್ರದಕ್ಷಿಣ ನಮಸ್ಕಾರೌಯಃ ಕುರ್ಯಾದ್ಭಕ್ತಿಮಾಶ್ರಿತಃ ।
ಸರ್ವಪಾಪ ವಿನಿರ್ಯುಕ್ತಃ ಸೋಂತೇ ಶಿವಪುರಂ ವ್ರಜೇತ್ ।
ವಸ್ತ್ರೇಣ ವೇಷ್ಟನಂ ಕೃತ್ವಾ ತ್ರಿಧಾಕಟ್ಯಾಂ ಪ್ರದಕ್ಷಿಣಂ ।
ಭಕ್ತ್ಯಾನರ್ರೈಃ ಪ್ರಕರ್ತವ್ಯಂ ಮುದಾಭೂಸುರ ಪುಂಗವಾಃ।
ಶೈವಾಗಮಸಾರೇ ಪುಟ 121

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಉತ್ತರೀಯುವನ್ನು ಸೊಂಟಕ್ಕೆ ಮೂರು ಸುತ್ತು ಪ್ರದಕ್ಷಿಣೆಯಾಗಿ ಅಲಂಕಾರಯುತವಾಗಿ ಕಟ್ಟಿ ಕೈಮುಗಿದುಕೊಂಡು ಭಕ್ತಿಯಿಂದ ಯಾರು ದೇವರಿಗೆ ಪ್ರದಕ್ಷಿಣ ನಮಸ್ಕಾರ ಮಾಡುವರೋ ಅವರು ಸರ್ವ ಪಾಪಗಳಿಂದ ವಿನಿರ್ಮುಕ್ತರಾಗಿ ಅಂತ್ಯಕಾಲದಲ್ಲಿ ಭಗವಂತನ ಸನ್ನಿಧಿಗೆ ಸೇರುವರು.

ಭಕ್ತ್ಯಾ ಪ್ರದಕ್ಷಿಣಾಂ ಕುರ್ಯಾನ್ನಿತ್ಯಂ ವಿಷ್ಣ್ವಾಲಯೇ ನರಃ ।
ಸ್ಥಾಯಂ ಪ್ರಾತಶ್ಚ ದೇವೇಷಂ ನಮಸ್ಯ ನ್ನಥ ಚಿಂತಯೇತ್ ।
ಯಃ ಪ್ರಣಾಮಂ ಮುಹುಃ ಕುರ್ಯಾತ್ಸತು ಯಜ್ಞಫಲಂ ಭವೇತ್ ।

ಪ್ರದಕ್ಷಿಣಾ ಸಂಖ್ಯೆ :

ವಿಷ್ಣೋ ರಾಯತನಂ ನಿತ್ಯಂ ಸಾಯಂಪ್ರಾತ ರ್ದಿನೇ ದಿನೇ ।
ಪ್ರದಕ್ಷಿಣದ್ವಯಂ ಕುರ್ಯಾತ್ ಅಶ್ವಮೇಧ ಫಲಂ ಭವೇತ್ ।
ಪ್ರದಕ್ಷಿಣ ಹರೇಧಾಮ್ನಿ ಭೂಪ್ರದಕ್ಷಿಣ ಮೀರಿತಂ ।
ದ್ವಿತ್ರಿವಾರಂ ಯಥಾ ಶಕ್ತಿ ಪ್ರತ್ಯಹಂ ವಿಭುಧೋತ್ತಮಾ ಃ
ಪ.ಪು.ಸಂ.4

ಸೂರ್ಯೋದಯ ಸಮಾರಭ್ಯ ಯಾವದಸ್ತರವೇ ರ್ಭವೇತ್ ।

ಸಂ।

ತಾವತ ್ರದಕ್ಷಿಣಂ ಕೃತ್ವಾ ಸರ್ವಕಾಮಾನವಾಪ್ನುಯಾತ್ ।
ಅಥಾಹೋರಾತ್ರಕಂ ವಾಪಿ ಕಾಲೇಷ್ವೇತೇಷು ಯೋ ನರಃ ।೩೮
ಪ್ರದಕ್ಷಿಣಂ ಕುರ್ವೀತ ಸೋಽನಂತ ಫಲಮಶ್ನುತೇ ।
ಅಜಿತಾಗಮಕ್ರಿಯಾ ೭೭ ಸ್ವಾಯಂಭುವ ಪು.೩೨೮

ಯುಗ್ಮ ಪ್ರದಕ್ಷಿಣಂ ಕುರ್ಯಾತ್ ಆಯುಗ್ಮಂ ಚಾಭಿಚಾರಿಕಂ । 39
ಪ್ರಕೀರ್ಣಾಧಿಕಾರ 18

ದ್ವಿಧಾ ಪ್ರದಕ್ಷಿಣಾಂ ಕುರ್ಯಾತ್ ಪ್ರಣಾಮಂಚ ತಥಾವಿಧಂ ।
ನೈಕ ತ್ರಿಪಂಚ ಸಪ್ತಾಖ್ಯ ಗಣನಾ ವಿಷಮಂ ಚ ಯತ । 416
ಸಂಪೂಜ್ಯ ಗಂಧ ಧೂಪೈಶ್ಚ ತತಸ್ತು ಭಗವನ್ಮಯಾ ।
ಪಾರಮೇಶ್ವರ ಸಂ 6

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ವಿಷ್ಣು ದೇವಸ್ಥಾನದಲ್ಲಿ ಪ್ರತಿದಿನ ಬೆಳಿಗ್ಗೆ ಸಾಯಂಕಾಲ ಎರಡು ವೇಳೆಯೂ ಭಕ್ತಿಯಿಂದ ಎರಡೆರಡು ಪ್ರದಕ್ಷಿಣೆ ಮಾಡಿಬರುವುದರಿಂದ ಅಶ್ವಮೇಧ್ಯ ಯುಜ್ಞವನ್ನು ಮಾಡಿದ ಫಲವುಂಟಾಗುವುದು.

ದೇವಸ್ಥಾನದಲ್ಲಿ ಪ್ರದಕ್ಷಿಣೆಯಾಗಿ ಬರುವುದರಿಂದ ಭೂ ಪ್ರದಕ್ಷಿಣೆ ಮಾಡಿದಂತಾಗುವುದು. ಪ್ರತಿದಿನವೂ ಎರಡಾವೃತ್ತಿ ಮೂರಾವೃತ್ತಿ ಅಧಿಕವಾಗಿ ಯುಥಾ ಶಕ್ತಿ ಪ್ರದಕ್ಷಿಣೆ ಮಾಡಬಹುದು.

ಪ್ರದಕ್ಷಿಣೆಯನ್ನು ಸಮಸಂಖ್ಯೆಯಲ್ಲಿ ಮಾಡಬೇಕು. ಆದ್ದರಿಂದ ಎರಡಾವೃತ್ತಿ ಮಾಡಬೇಕು. ವಿಷಮ ಸಂಖ್ಯೆಯಲ್ಲಿ ಪ್ರದಕ್ಷಿಣೆ ಮಾಡಿದರೆ ಅಭಿಚಾರಕವೆಂದಾಗುತ್ತದೆ. ಅಭಿಚಾರಕವೆಂದರೆ ಆರೋಗ್ಯವಾಗಿರುವುದಲ್ಲವೆಂದು ಅರ್ಥವು.

ಅನೇಕಾವೃತ್ತಿ ಪ್ರದ.ಕ್ಷಿಣೆ ಮಾಡುತ್ತೇವೆಂದು 1, 3, 5, 7, ಈ ರೀತಿ ವಿಷಮ ಸಂಖ್ಯೆಯಲ್ಲಿ ಪ್ರದಕ್ಷಿಣೆ ಮಾಡಬಾರದು. ಪ್ರದಕ್ಷಿಣೆ ಮಾಡುವುದರಿಂದ ದೇವರಿಗೆ ಗಂಧ ಪುಷ್ಪಗಳಿಂದ ಪೂಜೆ ಮಾಡಿದ ಫಲವು ಬರುವುದು. ಉಪಯುಕ್ತಾಂಶವೆಂಬಲ್ಲಿ ತಿಳಿಸಿದಂತೆ 1, 2, 3, 4, 5, 6, 7-21 ಆವೃತ್ತಿ ಪ್ರದಕ್ಷಿಣೆ ವಿಚಾರವೂ ತಿಳಿಸಿರುತ್ತೆ. ಆದರೆ ಆ ಪ್ರದಕ್ಷಿಣೆಗಳು ನಿರ್ಧಿಷ್ಟ ಕಾರ್ಯಗಳು ನಿರ್ಧಿಷ್ಟ ದೇವತೆಗಳ ವಿಷಯವೆಂದು ತಿಳಿಯಬೇಕು.

ದ್ವಿ ಚತುಶತತ್ವಾ ದ್ದಶಾಷ್ಟಾದ್ವೈರ್ದೇವಂ ಕುರ್ಯ್ಯಾತ ಪ್ರದಕ್ಷಿಣಂ :।

ದೇವಾಲಯದಲ್ಲಿ ಪ್ರದಕ್ಷಿಣ ಬರುವಾಗ 2, 4, 6, 8, 10 ಈ ರೀತಿ ಪ್ರದಕ್ಷಿಣೆ ಮಾಡಬೇಕು. ಅರ್ಥಾತ್ ಸಮ ಸಂಖ್ಯೆಯಲ್ಲಿ ಪ್ರದಕ್ಷಿಣೆ ಮಾಡಬೇಕು.

ಯುಜ್ಞಸೂತ್ರ ಮಧಃ ಕೃತ್ವಾ ಕರ್ಣೇಕೃತ್ವಾ ವಿಶೇಷತಃ ।
ಅಪಸವ್ಯ ಚ ಧೃತ್ವೈವ ಧೃತ್ವೈವ ವಿನೀತವತ್ ।
ನಗಚ್ಛೇ ದೇವತಾಗಾರ ನಾಮುಕ್ತ ಶಿಖೋನರಃ ।
ಅಕಚ್ಛಪುಚ್ಛಕಶ್ಚ ನಗ್ನಃ ಕೌಪೀನಮಾತ್ರ ಧೃಕ್ ।

ಪ್ರಕೀರ್ಣ 36 (312-313)

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಯದಾ॰ ವಿಶೇದ್ ಗೃಹಂ ವಿಷ್ಣೋಃ ಸೇವಾರ್ಥ ಮಧುವಿದ್ವಿಷಃ ।
ಕೃತ್ವೋಪವೀತಃ ಸಮ್ಯಗುತ್ತರೀಯಂ ಮನೋಹರಮ್ ।
ಕಂಚುಕೇನಾವೃತಾಂ ಗಂತು ನಗಚ್ಛೇದ್ದರಿಮನ್ದಿರಮ್।
ಉಷ್ಣೀಷೀ ನ ಚ ಸೇವೇತ ನೈ ವ ಪಾಣೌಧೃತಾಯುಧಃ ।
ವಸ್ತ್ರೇಣಾಚ್ಛಾದ್ಯ ದೇಹಂತು ಕಂಬಲೇನೇ ತರೇಣವಾ ।
ಪ್ರಕೀರ್ಣ 6

ದೇವಸ್ಥಾನಕ್ಕೆ ಹೋಗುವಾಗ ಯಜ್ಞೋಪವೀತವನ್ನು ಸರಿಯಾಗಿ ಹಾಕಿಕೊಂಡಿರಬೇಕು. ಅರ್ಥಾತ್ ಯಜ್ಞೋಪವೀತವನ್ನು ಆಯಾ ಕಾರ್ಯಗಳಿಗನುಸಾರವಾಗಿ ಧರಿಸಿರಬೇಕು. ನಿವೀತಿ, ಉಪವೀತಿ, ಪ್ರಾಚೀನಾವೀತಿ ಎಂಬುದಾಗಿ ಮೂರು ವಿಧಗಳಿವೆ. ಅವುಗಳಲ್ಲಿ ನಿವೀತಿಯಾಗಿಯೂ, ಪ್ರಾಚೀನಾವೀತಿಯಾಗಿಯೂ ಇರಬಾರದು. ಉಪವೀತಿಯಾಗಿರಬೇಕು. ಅಲ್ಲದೆ ಯಜ್ಞೋಪವೀತವನ್ನು ಕಿವಿಗೆ ಸುತ್ತಿರಬಾರದು. ಅದೇ ರೀತಿಯಲ್ಲಿ ಮೇಲಿನ ಉತ್ತರೀಯವನ್ನು ಧರಿಸಿ ಬರಬೇಕು. ಕಚ್ಚೆಯನ್ನು ಹಿಂದೆ ಸ್ವಲ್ಪ ಬಿಟ್ಟು ಮೂಲಗಚ್ಚೆಯಾಗಿ ಉಟ್ಟಿರಬಾರದು. ಕೌಪೀನಧಾರಿಯಾಗಿಯೂ ಬಟ್ಟೆಯಿಲ್ಲದೆ ನಗ್ನ ರೂಪದಲ್ಲೂ ಹೋಗಬಾರದು. ಮೇಲಿನ ಉತ್ತರೀಯವನ್ನು ಸೊಂಟಕ್ಕೆ ಕಟ್ಟಿರಬೇಕು. ಅಲ್ಲದೆ ಹೊಲಿದ ಯಾವ ವಸ್ತ್ರವನ್ನೇ ಆಗಲಿ ಯಾವ ರೂಪದಲ್ಲೇ ಆಗಲಿ ಉಪಯೋ-ಗಿಸಬಾರದು. ಅಲ್ಲದೆ ನಿಲುವಂಗಿ, ತಲೆಪಾಗು(ಪೇಟ) ಟೋಪಿ ಮುಂತಾದವು-ಗಳಿಂದ ಅಲಂಕೃತರಾಗಿ ಹೋಗಬಾರದು. ಕೈಯಲ್ಲಿ ಯಾವ ಆಯುಧವನ್ನೂ ಹಿಡಿದು ಹೋಗಬಾರದು.

ಏಕಹಸ್ತ ಪ್ರಣಾಮಂಚ ಏಕಂ ಚೈವ ಪ್ರದಕ್ಷಿಣಾಂ ।
ಲಂಘನಂ ಚ್ಛಾಲಯಾ ಧ್ವಜದಣ್ಡ ಶಸ್ಯ ಶೌರಿಣಃ ।
ಧ್ವಜಸ್ಥಾನಂತು ತ್ಯಕ್ತ್ವಾ ವೈಹರೇ ಧಾಮ ಪ್ರದಕ್ಷಿಣಮ್ ।೧೭೮
ನತ್ಕೈ ತೇ ಶುಭಾದಾಪ್ನೋ ಕ್ತಾ ಸರ್ವ ಶಾಸ್ತ್ರೇಷು ನಿಶ್ಚಯಃ ।
ಪ.ಪು.ಸಂ.೪

ಏಕ ಹಸ್ತದಿಂದ (ಒಂದೇ ಕೈಯಿಂದ) ನಮಸ್ಕರಿಸುವುದು (ಈ ವಿಷಯ ನಮಸ್ಕಾರ ವಿಷಯದಲ್ಲಿ ವಿವರಿಸಿದೆ) ಒಂದಾವೃತ್ತಿ ಮಾತ್ರ ಪ್ರದಕ್ಷಿಣೆ ಮಾಡುವುದು. ವಿಮಾನದ ನೆರಳನ್ನು ದಾಟುವುದು, ಧ್ವಜದಣ್ಡ ನೆರಳನ್ನು ದಾಟುವುದು, ಅಲ್ಲದೆ ಪ್ರದಕ್ಷಿಣವಾಗಿ ಬರುವಾಗ ಪುನಃ ಅಲ್ಲಿಯವರೆಗೆ (ಹೊರಟ ಸ್ಥಳಕ್ಕೆ) ಬಾರದ ಮಧ್ಯದಲ್ಲೇ ದೇವರ ಸನ್ನಿಧಿಗೆ ಬರುವುದು ಈ ರೀತಿ ಮಾಡುವುದು ಶ್ರೇಯಸ್ಕರ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ವಲ್ಲವು. ಅರ್ಥಾತ್ ಬಲಿ ಪೀಠದಿಂದ ಪ್ರದಕ್ಷಿಣೆಯಾಗಿ ಹೊರಟು ಪುನಃ ಬಲಿಪೀಠದ ಧ್ವಜಸ್ತಂಭದ ವರೆಗೆ ಬಾರದೆ ಮಧ್ಯದಲ್ಲೇ ದೇವರ ಸನ್ನಿಧಿಗೆ ಬರುವುದು ಇತ್ಯಾದಿಗಳೆಲ್ಲವೂ ಅಶ್ರೇಯಸ್ಸಿಗೆ ಕಾರಣವಾಗುವುದು.

ಛಾಯಾಲಂಗನ ವಿಷಯ :

ಪ್ರಾಸಾದೇ ಗರ್ಭಗೇಹಂಚ ಪ್ರತಿಮಾ ಪೀಠ ಮೇವಚ ॥
ಶರೀರಂ ದೇವದೇವಸ್ಯಾ ಸ್ಮೃತಮೇತಂ ಚತುಷ್ಟಯಂ ।
ದೇವದ್ವಿಜ ಗುರುಚ್ಛಾಯಾಂ ನಾತಿಕ್ರಮೇನ್ನಲಂಘಯೇತ್।
ಪ್ರದಕ್ಷಿಣಾರ್ಥಂತು ಯದಾಲ್ಲಂಘನಂ ನತು ದೋಷಕೃತ್ ।

ಶ್ರೀವಿಷ್ಣು ಧರ್ಮೋತ್ತರೇ

ಸದಾ ಸನ್ನಿಹಿತೋ ವಿಷ್ಣು ಶ್ಚಾಯಯೋರ್ಧಾಮ ಬೇರಯೋಃ।
ಛಾಯಾತಿಲಂಘನಂ ನೈವ ಕುರ್ಯಾದಾಲಯಬೇರಯೋಃ ।
ಪ್ರದಕ್ಷಿಣ ವಿಧಾನೇತಲ್ಲಂಘನಂತು ನ ದೋಷಕೃತ್।

ಅರ್ಚನಾನವನೀತಂ ಪುಟ ೨೮-೨೯

ಪ್ರೇಕ್ಷತೋದ್ಯನ್ತ ಮಾದಿತ್ಯಂ ಜಪೇದ್ವಾದಶ ಸೂಕ್ತಕಮ್।
ಛಾಯಾಲಂಘನ ದೋಷಸ್ತ ನತತ್ರಸಾತ ಪ್ರದಕ್ಷಿಣಮ್।೪೦

(ಪ್ರಕೀರ್ಣಾಧಿಕಾರ)

ವಿಮಾನಂ ವಿಷ್ಣುರೂಪಂ ಚ ದೇವಾವಾಸಂ ತಥೈವಚ ।
ವೈಕುಂಠೋದ್ಭವ ಮಿತ್ಯೇತೈಶ್ಚತುರ್ಭಿರ್ಧಾಮ ವಂದನಂ :
ವಿಮಾನಂ ವಿಷ್ಣುರೂಪಂ ಸ್ಯಾನ್ನ ತತ್ಪದಾದಿನಾಕ್ರಮೇತ್

ಪ್ರಕೀರ್ಣಾಧಿಕಾರ 27-28

ನಲಂಘಯೇದ ಧ್ವಜ ಛ್ಚಾಯಾ ಪ್ರದಕ್ಷಿಣಂ ವಿಧಿಂ ವಿನಾ॥
ಗೋಪುರಸ್ಯ ವಿಮಾನಸ್ಯ ಪ್ರಾಕಾರಾಸ್ಯಾಲಯಸ್ಯ ಚಃ ।

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಪ್ರಸ್ಸಾದ್ಯ (ದೇವಸ್ಥಾನ) 2 ಗರ್ಭಗೃಹ 3 ಗರ್ಭಗೃಹದಲ್ಲಿ ಪ್ರತಿಷ್ಠಿತವಾಗಿ ಸಾನ್ನಿಧ್ಯ ಹೊಂದಿರುವ ವಿಗ್ರಹ ಮೂರ್ತಿ = ಪ್ರತಿಮೆ 4 ಪೀಠ (ಬಲಿಪೀಠ) ಇವು ನಾಲ್ಕೂ ಭಗವಂತನ ಶರೀರವೆಂದು ಕರೆಯಲ್ಪಡುತ್ತದೆ. ಗರ್ಭಗೃಹದ ಮೇಲಿನ ವಿಮಾನದ ನೆರಳನ್ನೂ ಬ್ರಾಹ್ಮಣರು ಗುರುಗಳ ನೆರಳನ್ನು ದಾಟಬಾರದು. ತಿಳಿದೋ ತಿಳಿಯದೆಯೋ ತಪ್ಪು ಮಾಡಿದರೆ ಅದರ ಪರಿಹಾರವಾಗಿ ಭಗವಂತನ ಸ್ತೋತ್ರವನ್ನು ಹೇಳುವುದು ಕೇಳುವುದರಿಂದ ದೋಷವು ಪರಿಹಾರವಾಗುವುದು.

ತತಃ ಪ್ರದಕ್ಷಿಣಂ ಕುರ್ಯಾತ್ ಚತ್ವಾರಿ ದ್ವಿಜಸತ್ತ ಮ ।
ಕುಸುಮ ಕ್ಷೇಪ ಸಂಯುಕ್ತಂ ಚತುರ್ದಿಕ್ಷು ಸಮಂತುವೈ ।
ಸಹಾನ್ತಃ ಕರಣೇನ್ನೈವ ಭಕ್ತಿಯುಕ್ತೇನ ಚೇತಸಾ।
ನತ ಪೃಷ್ಠ ಶಿರೋಜಾನು ಲಲಾಟ ತಟ ಮೃತ್ಸರಃ। 365
ಗೃಹಸ್ಥ ಆಚರೇನ್ನಿತ್ಯಂ ಪ್ರಣಾಮಂ ಸಪ್ರದಕ್ಷಿಣಮ್ ।

ಇಲ್ಲಿ ಶ್ಲೋಕದ ಅರ್ಥ ಬಹು ಸ್ವಾರಸ್ಯವಾಗಿದೆ.

ಮೇಲೆ ತಿಳಿಸಿದ ನಾಲ್ಕು ವಿಧಗಳಿಗೂ ಅಂತಃಕರಣ ಶುದ್ಧಿಯಿಂದ ಭಕ್ತಿಯಿಂದ ಗೂನು ಬೆನ್ನಿನಂತೆ ಬಗ್ಗಿ ಭೂಮಿಯನ್ನು ಮುಟ್ಟಿ ನಮಸ್ಕಾರ ಮತ್ತು ಪ್ರದಕ್ಷಿಣೆಯನ್ನು ಮಾಡಬೇಕು. (ನೈಚ್ಯಭಾವ) ಅರ್ಥಾತ್ ಪಂಚಾಂಗ ನಮಸ್ಕಾರವು. ಅಥವಾ ಸಾಷ್ಟಾಂಗ ನಮಸ್ಕಾರವು.

ಈ ಶ್ಲೋಕದ ಅರ್ಥವು ಬಹು ಸ್ವಾರಸ್ಯವಾಗಿದೆ.

ದೇವಸ್ಥಾನದಲ್ಲಿ ಭಕ್ತನು ಪ್ರದಕ್ಷಿಣವಾಗಿ ಬರುವಾಗ ಬೊಗಸೇ ಕೈಯಲ್ಲಿ ಪುಷ್ಪ ತುಳಸಿಗಳನ್ನಿಟ್ಟುಕೊಂಡು ಚತುರ್ದಿಕ್ಕುಗಳಿಗೂ ನಾಲ್ಕು ದಿಕ್ಕುಗಳಲ್ಲಿಯೂ ಪುಷ್ಪದಿಂದರ್ಚಿಸಬೇಕು. ಪ್ರದಕ್ಷಿಣ ಮಾರ್ಗದಲ್ಲಿ ನಾಲ್ಕಾವೃತ್ತಿ ಪ್ರದಕ್ಷಿಣ ಮಾಡಬೇಕೆಂದು ಹೇಳಿರುವುದು ಇದರ ತಾತ್ಪರ್ಯವೇನು? ಯಾವ ಪ್ರದಕ್ಷಿಣ ಮಾರ್ಗದಲ್ಲಿ ಎಂಬ ಪ್ರಶ್ನೆ ಃ

ಏಕಂಗಳಣಾಧಿಪೇಕುರ್ಯಾತ್ ದ್ವೇಸೂರ್ಯೇ ತ್ರೀಣೇ ಶಂಕರೇ ಃ
ಚತ್ವಾರಿ ಕೇಶವೇ ದೇವೆ ಸಪ್ತಾಶ್ವತ್ಥೆ ಪ್ರದಕ್ಷಿಣಮ್

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ವಿಷ್ಣು ದೇವರಿಗೆ ನಾಲ್ಕಾವೃತ್ತಿ ಪ್ರದಕ್ಷಿಣ ಮಾಡಬೇಕು. ನಾವು ಗರ್ಭ ಗೃಹದಲ್ಲಿ ಸಾನ್ನಿಧ್ಯ ಹೊಂದಿರುವ ದೇವತಾ ವಿಗ್ರಹ : ಮೂರ್ತಿಯನ್ನು 'ಸಾಕ್ಷಾತ್ತಾಗಿ ಅರ್ಚಿಸಲು ನಮಗೆ ಅಧಿಕಾರ ಇಲ್ಲವು. ಗರ್ಭಗೃಹಕ್ಕೆ ಪ್ರವೇಶಾಧಿಕಾರವಿಲ್ಲದಿರುವಾಗ ಇನ್ನು ವಿಗ್ರಹವನ್ನು ಹೇಗೆ ಪೂಜಿಸುವುದು. ಆದರೆ ಇಲ್ಲಿಯ ವಿಷಯಕ್ಕೆ ತಾತ್ಪರ್ಯ ವೇನು? ಇತ್ಯಾದಿ ಬಹು ಸ್ವಾರಸ್ಯವಾದ ವಿಷಯಗಳಿವೆ. ಗರ್ಭಗೃಹದ ಸುತ್ತಲೂ ಇರುವ ಪ್ರದಕ್ಷಿಣ ಮಾರ್ಗಕ್ಕೆ ಪ್ರಥಮಾವರಣವೆಂದು ಹೆಸರು. ಅಲ್ಲಿ ಪ್ರದಕ್ಷಿಣ ಬರುವಾಗ ನಮ್ಮ ಬಲಗಡೆ ಸುತ್ತಲೂ ಭಗವಂತನು ಸಾನ್ನಿಧ್ಯ ಹೊಂದಿರುವ ಗರ್ಭಗೃಹ ಶುಕನಾಸಿ ಅಂಕಣಗಳಿವೆ. ಇದಕ್ಕೆ ಪ್ರಾಸಾದ ಗರ್ಭಗೃಹವೆಂದು ಹೆಸರು.

ಪ್ರಾಸಾದಂ ಪುರುಷಂಮತ್ವಾ।
ವಿಮಾನಂ ಗರ್ಭಗೇಹಂ ಚ ಪ್ರತಿಮಾ ಪೀಠಮೇವಚ:।
ಶರೀರ ಮೇವಂ ದೇವಸ್ಯ ।

ಇತ್ಯಾದಿ ಪ್ರಮಾಣ ವಾಕ್ಯಗಳಿಂದ ಆ ಭಾಗಗಳು ಎಂದರೆ ವಿಮಾನ, ಗರ್ಭಗೃಹ, ಅದರಲ್ಲಿ ಸಾನ್ನಿಧ್ಯ ಹೊಂದಿರುವ ಪ್ರತಿಮಾ =ಪ್ರತಿಷ್ಠಿತ ಮೂರ್ತಿ, ಪೀಠ=ಬಲಿಪೀಠ ಇವು ನಾಲ್ಕೂ ಭಗವಂತನ ಶರೀರಕ್ಕೆ ಸಮಾನವೆಂದೂ ಒಳಗಿರುವ ಪ್ರತಿಮಾ ವಿಗ್ರಹವು ಆತ್ಮನೋಪಾದಿಯಲ್ಲಿ ಭಗವಂತನೆಂದೂ ಹೇಳಿರುವುದು. ಪ್ರದಕ್ಷಿಣ ಮಾರ್ಗದಲ್ಲಿ ನಮ್ಮ ಬಲಗಡೆ ಇರುವ ದೇವಸ್ಥಾನದ ಭಾಗಗಳು ದೇವರ ಶರೀರವೇ: ಆದ್ದರಿಂದ ನಾಲ್ಕು ದಿಕ್ಕಿನ ಭಾಗಗಳ ಮೇಲೆ ನಮ್ಮ ಕೈಯ್ಯಲ್ಲಿರುವ ಪುಷ್ಪದಿಂದ ಆ ಕಟ್ಟಡದ ಮೇಲೆ ಅರ್ಚಿಸಬಹುದು. ಆಗ ಭಗವಂತನಿಗೆ ಭಕ್ತರೇ ನೇರವಾಗಿ ಪುಷ್ಪವನ್ನು ಸಮರ್ಪಿಸಿದ್ದಾಗಿ ಆಗುವುದು.

ದ್ವಿತೀಯಾವರಣ ತೃತೀಯಾವರಣ ಯಾವ ಪ್ರದಕ್ಷಿಣ ಮಾರ್ಗದಲ್ಲಿ ಸಮರ್ಪಿಸಿದರೂ ಭಗವಂತನನ್ನು ಅರ್ಚಿಸಿದ ಫಲವು ಬಂದೇ ಬರುವುದು. ಇದು ಮಂತ್ರ ಸಿದ್ಧಾಂತ ಅಭಿಪ್ರಾಯವು. ಒಂದೇ ಮೂರ್ತಿ ಪೂಜಾ ವಿಧಾನವು.
"ಏಕ ಮೂರ್ತಿ ಪ್ರಧಾನಂತು ಮಂತ್ರ ಸಿದ್ಧಾಂತ ಮುಚ್ಯತೇ"

2 ಆಗಮ ಸಿದ್ಧಾಂತದ ಅರ್ಥ :

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

1. ಚತುರ್ಮೂರ್ತಿ ಪ್ರಧಾನಂತು ಆಗಮ ಸಿದ್ಧಾಂತವು ಆಗಮ ಸಿದ್ಧಾಂತದಲ್ಲಿ 1ವಾಸುದೇವ 2ಸಂಕರ್ಷಣ , ಪ್ರದ್ಯುಮ್ನ ಅನಿರುದ್ಧ ಇವರಿನ್ನು ಪೂಜಿಸುವುದಕ್ಕೆ ಆಗಮ ಸಿದ್ಧಾಂತವೆಂದು ಹೆಸರು. ಈ ನಾಲ್ವರನ್ನು ಪೂಜಿಸಿದರೂ ಒಬ್ಬರನ್ನೇ ಪೂಜಿಸಿದುದಾಗಿ ಅರ್ಥವು. ಇವರು ಪ್ರತಿಷ್ಠಿತವಾಗಿರುವ ಕ್ರಮವು.

ಗರ್ಭಗೃಹದ ಒಳಗೆ ಮಧ್ಯದಲ್ಲಿ ಪರವಾಸುದೇವರು. ವಾಸುದೇವ, ಸಂಕರ್ಷಣ, ಪ್ರದ್ಯುಮ್ನ, ಅನಿರುದ್ಧ ಇವರು ಮಧ್ಯೆಇರುವ ವಾಸುದೇವ ಮೂರ್ತಿಗೆ ಅಭಿಮುಖವಾಗಿರುವರು. ಆಗ ಗರ್ಭಗೃಹದ ಹೊರಗೆ ನಾವು ಪ್ರದಕ್ಷಿಣವಾಗಿ ಬರುವಾಗ ಅದೇ ದಿಕ್ಕಿನಲ್ಲಿ (ಚತುರ್ದಿಕ್ಕುಗ್ಗಳು) ಅಲ್ಲಿಯೂ ಕೈಯ್ಯ ಲ್ಲಿರುವ ಪುಷ್ಪದಿಂದ ಅರ್ಚಿಸಬೇಕು. ಪುಷ್ಪವನ್ನು ಸಮರ್ಪಿಸಿದ್ದೇ ಆದರೆ ಆ ನಾಲ್ವರಿಗೂ ಅರ್ಚನೆ ಮಾಡಿದ ಫಲ ಬರುವುದು.

ಗರ್ಭಗೃಹ ಅದರ ಸುತ್ತಲೂ ಪ್ರಥಮಾವರಣವು. ಮಧ್ಯದಲ್ಲಿ ಏನೂ ಇರುವುದಿಲ್ಲ. ಗರ್ಭಗೃಹದ ನಾಲ್ಕು ದಿಕ್ಕಿನ ಗೋಡೆಗಳಲ್ಲಿ ಆಯಾ ದಿಕ್ಕುಗಳಿಗೂ ಅಭಿಮುಖವಾಗಿ ನಾಲ್ಕು ಮೂರ್ತಿಗಳನ್ನು ಪ್ರತಿಷ್ಠಿಸಿರುವರು. ಅರ್ಥಾತ್ ನಾವು ದರ್ಶಿಸುವುದು. ಪ್ರಥಮಾವರಣದಲ್ಲಿ ಎಂದರೆ ಪ್ರಥಮಾವರಣದಲ್ಲಿ ಪ್ರದಕ್ಷಿಣವಾಗಿ ಬಂದರೆ ಆಯಾ ಮೂರ್ತಿಗೆ ಕಾಣುವಂತೆ ಬಾಗಿಲನ್ನಿಟ್ಟಿರುವರು. ಆಗ ನಾವು ನಮ್ಮ ಕೈಯಲ್ಲಿರುವ ಪುಷ್ಪದಿಂದರ್ಚಿಸಬಹುದು. ಆಗ ಆಯಾ ದೇವರನ್ನು ಪೂಜಿಸಿದಂತಾ ಗುವುದಲ್ಲದೆ ನಾಲ್ಕು ದಿಕ್ಕುಗಳಲ್ಲೂ ಪುಷ್ಪ ಸಮರ್ಪಿಸುವುದರಿಂದ ಆಯಾ ಚತು ಮೂರ್ತಿಗಳನ್ನೂ ಅರ್ಚಿಸಿದಂತಾಗುವುದು. ಉದಾಃ ಪ್ರಥಮಾವರಣದಲ್ಲಿ ನಾವು ಪ್ರದಕ್ಷಿಣವಾಗಿ ಹೋಗುವಾಗ ದಕ್ಷಿಣ ದಿಕ್ಕಿಗೆ ಅಭಿಮುಖವಾಗಿರುವ ದೇವರನ್ನು ಅರ್ಚಿಸಿದರೆ ನಾವು ಉತ್ತರಾಭಿಮುಖವಾಗಿ ನಿಂತು ದೇವರನ್ನು ಅರ್ಚಿಸಿದಂತಾಗು ವುದು.

ಜಾನು ಪ್ರದಕ್ಷಿಣಂ

ಜಾನುಭ್ಯಾಂ ಸಹಪಾಣಿಭ್ಯಾಂ ಪಾಣಿಭ್ಯಾಂ ವಾ ಸಮಾಚರೇತ್।
ಜಾನುಪ್ರದಕ್ಷಿಣ ಮುಕ್ತ್ವಾ ಅನ್ತಃ ಸನ್ನಿಕಟೇ ವಿಭೋಃ।
ವಿರುದ್ಧಮ ಪರಂಚೈವ ಭಕ್ತಾನಾಂ ಚರಣಂ ಭ್ರಮಂ ।
ಏವಂ ಪ್ರದಕ್ಷಿಣೇಂಕೃತ್ವಾ ಕ್ಷಿಪ್ತ್ವಾ ಪುಷ್ಪಾಂಜಲಿಂ ತತಃ। 327

ಪಾರಮೇಶ್ವರ ಸಂ .6

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಜ್ಞಾನು=ಃ ಮೊಣಕಾಲುಗಳಿಂದಲೂ ಪ್ರದಕ್ಷಿಣೆ ಮಾಡಬಹುದು. ಎರಡು ಕೈಗಳನ್ನು ಜೋಡಿಸಿಕೊಂಡು ಅಂಜಲಿಹಸ್ತರಾಗಿ ಮೊಣಕಾಲಿನಿಂದ, (ಜಾನು) ಪ್ರದಕ್ಷಿಣವಾಗಿ ಬರಬಹುದು. ಇಲ್ಲವಾದಲ್ಲಿ ಕೈ ಮುಗಿದುಕೊಂಡು ಪ್ರದಕ್ಷಿಣವಾಗಿ ಬರಬಹುದು. ಈ ಜಾನು ಪ್ರದಕ್ಷಿಣವು ಗರ್ಭಗೃಹ ಸುತ್ತಲೂ ಇರುವ ಪ್ರದಕ್ಷಿಣ ಮಾರ್ಗವಾಗಿ ಬರಬಹುದು. ಪ್ರದಕ್ಷಿಣವಾಗಿ ಬರುವಾಗ ಕೈಯಲ್ಲಿರುವ ಪುಷ್ಪವನ್ನು ದೇವರ ಸನ್ನಿಧಿಯಲ್ಲಿ ಸಮರ್ಪಿಸಬಹುದು. ಇದಕ್ಕೆ ಪುಷ್ಪಾಂಜಲಿ ಎಂಬು ಹೆಸರು.

ದ್ವಿ ಚತುಷಟ್ಕ್ಧದಶಾಷ್ಟಾದ್ಯೈರ್ದೇವಂ ಕುರ್ಯಾತ ಪ್ರದಕ್ಷಿಣಾಂ ।।
ದೇವಸ್ಯ ನಿಕಟೇಕಾರ್ಯಂ ಸದ್ಭಿರ್ಜಾನುಪ್ರದಕ್ಷಿಣಂ । 72
ಚಕ್ರತದಾ ಭ್ರಮಯೇನ್ನಾಂಗಂ ಪೃಷ್ಠಭಾಗಂ ನ ದರ್ಶನಯೇತ್।
ಸನ್ನಿಧೌ ದೇವದೇವಸ್ಯ ನಚೋಚ್ಚೈ ಪ್ರಲಪೇತ್ತಥಾ।।

ಶಾಂ.ವಿ.ದ.ಶಾಸ್ತ್ರ

ಜಾನು ಪ್ರದಕ್ಷಿಣೆ ಮಾಡುವಾಗ 2, 4, 6, 8, 10 ಪ್ರದಕ್ಷಿಣೆ ಮಾಡಬಹುದು. ಈ ಜಾನು ಪ್ರದಕ್ಷಿಣವನ್ನು ದೇವರ ಸಮೀಪದಲ್ಲಿ ಮಾಡಬೇಕು. ಅರ್ಥಾತ್ ಪ್ರಥಮಾವರಣ (ಗರ್ಭಗುಡಿ ಸುತ್ತಲಿರುವ ಪ್ರದಕ್ಷಿಣ ಮಾರ್ಗ) ಪ್ರದಕ್ಷಿಣ ಮಾಡಬಹುದು. ಇದಕ್ಕೆ ಚಕ್ರವದಾ ಭ್ರಮಯೇನ್ನಾಂಗಂ ಎಂದು ಹೇಳುವುದು. ಆಗ ಪೃಷ್ಠ ಭಾಗವು ಕಾಣಬರುವುದಿಲ್ಲ.

ಅರ್ಥಾತ್ ದೇವರ ಮುಂದೆ ಚಕ್ರದಂತೆ ತಮಗೆ ತಾವು ಪ್ರದಕ್ಷಿಣೆ ಮಾಡಬಾರದು. ಏಕೆಂದರೆ ಆ ರೀತಿಯ ಪ್ರದಕ್ಷಿಣೆ ಮಾಡಿದರೆ ದೇವರಿಗೆ ಪೃಷ್ಠ ಭಾಗವು ಕಾಣಬಂದಂತಾಗುವುದು. ಆದ್ದರಿಂದ ಆ ರೀತಿ ನಿಂತು ತಮಗ್ಗೆ ತಾವು ಪ್ರದಕ್ಷಿಣೆ ಮಾಡಬಾರದು. ದೇವಸ್ಯ ನಿಕಟೇ ಕಾರ್ಯಂ ಎಂದರೆ ಪ್ರಥಮಾವರಣವು.

ಶಿವಾಲಯೇ ಪ್ರದಕ್ಷಿಣ ಪ್ರಕಾರಃ

ಪ್ರದಕ್ಷಿಣ ಪ್ರಕಾರಸ್ಯ ಲಕ್ಷಣಂ ಶೃಣುಸುವ್ರತ ।
ಸವ್ಯಂಚೈವಾಪಸವ್ಯಂಚ ತಥಾ ಸವ್ಯಾಪಸವ್ಯಕಮ್।
ಸವ್ಯಂ ಪ್ರದಕ್ಷಿಣಂ ಪ್ರೋಕ್ತಂ ಅಪಸವ್ಯಾಪ್ರದಕ್ಷಿಣಂ ।
ಸವ್ಯಾಪಸವ್ಯ ತಸ್ಸೋಮಸೂತ್ರಾಲಂಘನತಃ ಕೃತಮ್।

CC0. In Public Domain. Jangamwadi Math Collection, Varanasi.

Digitization by eGangotri and Sarayu Trust. Funding by MoE-IKS

ಪ್ರಾಸಾದ್ದಸ್ಯತು ವಿಸ್ತಾರಂ ತನ್ಮಾನಂ ಸೋಮಸೂತ್ರಕಮ್।
ಲಿಂಗಮೂಲಸ್ಯ ಪಾರ್ಶ್ವೇತು ಯೋಜಯೇ ಕೌಮಡೇಶಕೇ ः ।
ಯಾವತ್ಸೂತ್ರ ಮೇವಂ ಸ್ಯಾದ್ವರ್ಜಯೇತ್ತು ಪ್ರದಕ್ಷಿಣಮ್।
ಶಂಭೋ ಪ್ರದಕ್ಷಿಣಂ ಕುರ್ಯಾತ್ ಸೋಮಸೂತ್ರಂ ನ ಲಂಘಯೇತ್ ।
ಬೃಹನ್ನಾರದಯೇ

ಪ್ರದಕ್ಷಿಣ ನಮಸ್ಕಾರ ವಿಧಿಂವಕ್ಷ್ಯೇ ಸಮಾಸತಃ
ತಯೋ ಪ್ರದಕ್ಷಿಣಂ ತಾವತ್ ತ್ರಿವಿಧಂ ಪರಿಕೀರ್ತಿತಮ್ ।೧
ಆದ್ಯಂ ಪ್ರದಕ್ಷಿಣಾಖ್ಯಂ ಸ್ಯಾದ್ದೇವಾಯ ಪರಿಕಲ್ಪಿತಮ್ ।
ಸವ್ಯಾಪಸವ್ಯಮನ್ಯಚ್ಚ ಸರ್ವಾಂಗ್ಯೈಃ ಸ್ಯಾತ್ತೃತೀಯಕಮ್ ।
ತೇಷು ಪ್ರದಕ್ಷಿಣಂ ತ್ವಾದ್ಯಂ ಪ್ರದಕ್ಷಿಣ್ಯೇನ ಕಲ್ಪಿತಮ್ ।
ಸವ್ಯಾಪಸವ್ಯತಃ ಸೋಮಸೂತ್ರಾ ಲಂಘನತಃ ಕೃತಮ್ ।
ಸವ್ಯಾಪಸವ್ಯ ಮಿತ್ಯುಕ್ತಂ ದೀಕ್ಷಿತಾನಾಂತು ತದ್ಭವೇತ್ ।
ಅಂಗ ಪ್ರದಕ್ಷಿಣಂ ಯುಕ್ತತ್ಸರ್ವಾಂಗ್ಯೈಃ ಪರಿಕಲ್ಪಿತಮ್ । ೪

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಶಂಭೋಃ ಪ್ರದಕ್ಷಿಣಂ ಕುರ್ಯಾತ್ಸೋಮಸೂತ್ರಂ ನ ಲಂಘಯೇತ್ ।
ಸವ್ಯಾಪಸವ್ಯ ಮಾರ್ಗೇಣ ಶಿವಪ್ರೀತಿಕರಂ ಭವೇತ್ ।

(ಪ್ರದಕ್ಷಿಣಮಥಾಚರೇತ್)
ರೌರವಕ್ರಿಯಾ ೬೫ ಅನುಬಂಧ

ಪ್ರಸಂಗಾತ್ ಶಿವಾಲಯದಲ್ಲಿ ಮಾಡುವ ಪ್ರದಕ್ಷಿಣವು ಹೇಳಿರುವುದು. ವಾಠಕರಿಗೆ ತಿಳಿದಿರಲೆಂದು ಬರೆದಿರುವುದೇ ಏನಃ ಅನ್ಯಥಾ ಬರೆದಿರುವುದಿಲ್ಲ.

ಪ್ರದಕ್ಷಿಣ ಪ್ರಕಾರವು ಮೂರು ವಿಧವಾಗಿರುವುದು 1. ಸವ್ಯ 2.ಅಪಸವ್ಯ 3.ಸವ್ಯಾಪಸವ್ಯ ಎಂಬುದಾಗಿ ಅದರಲ್ಲಿ 1.ಸವ್ಯ ಎಂದರೆ ನಾವು ಯಾವುದನ್ನು ಪ್ರದಕ್ಷಿಣೆ ಮಾಡಬೇಕೆಂದಿರುವೆವ್ರೋ ಅದನ್ನು ನಮ್ಮ ಬಲಗಡೆಗೆ ಬಿಟ್ಟುಕೊಂಡು ಸುತ್ತಿಬರುವುದು. ಅರ್ಥಾತ್ ನಾವು ದೇವಸ್ಥಾನಕ್ಕೆ ಹೋದಾಗ ಬಲಿಪೀಠದ ಬಳಿ ನಮಸ್ಕಾರ ಮಾಡಿ ದೇವರ ಬಲಭಾಗದಿಂದ ಪ್ರದಕ್ಷಿಣವಾಗಿ ಬರುತ್ತೇವೆ-ಬರುವುದು.

2. ಅಪಸವ್ಯ ಃ ಎಂದರೆ ಮೇಲೆ ತಿಳಿಸಿದುದಕ್ಕೆ ವ್ಯತಿರಿಕ್ತವಾಗಿ ಅಪ್ರದಕ್ಷಿಣವಾಗಿ ಬರುವುದು.

3. ಸವ್ಯಾಪಸವ್ಯ ಃ ಎಂದರೆ ಪ್ರದಕ್ಷಿಣವಾಗಿ ಹೊರಟು ಗರ್ಭಗೃಹದ ಮೂಲ ಬೇರಕ್ಕೆ ಅಭಿಷೇಕವಾದ ತೀರ್ಥವು ಹರಿದುಬರುವ ಮಾರ್ಗಕ್ಕೆ ಸೋಮಸೂತ್ರ ಅಥವಾಗೋಮುಖವೆಂದು ಹೆಸರು. ಸೋಮಸೂತ್ರ ಅಥವಾ ಗೋಮುಖದ-ವರೆಗೂ ಬಂದು ಪುನಃ ಹಿಂದಕ್ಕೆ ಅಪ್ರದಕ್ಷಿಣವಾಗಿ ಬರುವುದು. ಇದಕ್ಕೆ ಸವ್ಯಾಪಸವ್ಯ ಎಂದು ಹೆಸರು. ಕಾರಣ ಗರ್ಭಗೃಹದಲ್ಲಿ ಅಭಿಷೇಕವಾದ ತೀರ್ಥವು ಸೋಮಸೂತ್ರ ಅಥವಾ ಗೋಮುಖದಲ್ಲಿ ಬಂದ ತೀರ್ಥವು ಮುಂದೆ ಹರಿದು ಹೋಗುತ್ತದೆ. ಆ ತೀರ್ಥವನ್ನು ದಾಟಬಾರದು. ಅಲ್ಲದೆ ಮೂಲ ಗರ್ಭಗೃಹದ ಮೇಲಿರುವ ವಿಮಾನ ಶಿಖರವು ದೇವರ ಶರೀರ ಭಾಗವಾದ್ದರಿಂದ ಆ ನೆರಳನ್ನು ದಾಟಬಾರದು. ಆದ್ದರಿಂದ ನಾವು ಹಿಂದಕ್ಕೆ ಬರಬೇಕು. ಅರ್ಥಾತ್ ನಾವು ಹೊರಟ ಸ್ಥಳವಾದ ಬಲಿಪೀಠ ವೃಷಭ ಸ್ಥಳಕ್ಕೆ ಬರಬೇಕು. ಇದಕ್ಕೆ ಸವ್ಯಾಪಸವ್ಯ ಎಂದು ಹೆಸರು. (ಪ್ರದಕ್ಷಿಣಾಪ್ರದಕ್ಷಿಣ) ಈ ರೀತಿ ಬಂದರೂ ಅದು ಪ್ರದಕ್ಷಿಣವಾಯಿತೆಂದೇ ಹೆಸರು.ಈ ರೀತಿ ಬರುವುದು ಶಂಭು=ಸದಾಶಿವನಿಗೆ ಪ್ರೀತಿಕರವು.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ದೇವಾಲಯ ಸ್ವವ್ಯ ಪ್ರದಕ್ಷಿಣ ಪ್ರಕಾರ :

ಪ್ರದಕ್ಷಿಣ ಪ್ರಕಾರಸ್ತು ದ್ವಿವಿಧೋವೇದಸಮ್ಮತಃ।
ಸವ್ಯಾಪಸವ್ಯಶ್ಚ ತತ್ರಾದ್ಯೋ ವಿಧಿರುಚ್ಯತೇ : ।
ವೃಷಂಚಣ್ಡಂ ವೃಷಂಚೈವ ಸೋಮಸೂತ್ರಂ ಪುನರ್ವೃಷಂ ।।
ಚಂಡಂಚ ಸೋಮಸೂತ್ರಂಚ ಪುನಶ್ಚಣ್ಡಂ ಪುನರ್ವೃಷಂ ।।
(ಪಾದದ್ವಾರಂ ದೇವ ದೇವಸ್ಯ ವೃಷ ಸ್ಥಾನಂ ಪ್ರಕೀರ್ತಿತಂ :)।
ದೇವಸ್ಯ ನೇಋತೇ ಭಾಗೇ ಚಂಡಸ್ಥಾನಂ ಪ್ರಕೀರ್ತಿತಮ್।
ಪಶ್ಚಿಮಾಭಿಮುಖೇ ಲಿಂಗೇ ಸ್ಥಾನಮೇತದುದೀರಿತಂ : ।
ಲಿಂಗೇ ತು ಪ್ರಾಂಗಮುಖೇಸ್ಥಾನಂ ಚಂಡಸ್ಯೇಶಾನ್ಯಮೇವ ಹಿ ।।
ಮಹೇಶಸ್ಯೋತ್ತರಸ್ಥಾನಂ ಸೋಮಸೂತ್ರ ಸ್ಥಲಂ ಸ್ಮೃತಂ ।
ಪಶ್ಚಿಮಾಭಿ ಮುಖೇ ಲಿಂಗೇ ಸೋಮಸೂತ್ರಂತು ಪೂರ್ವತಃ ।
ತ್ರೀಣ್ಯೇತಾನಿಸ್ಥಲಾನ್ಯೇವ ನವಸ್ಥಾನಾನಿಸತ್ತಮಃ।
ಉಪವಿಶ್ಯ ವೃಷಸ್ಥಾನೇ ಚಣ್ಡಸ್ಥಾನಂ ತತೋವ್ರಜೇತ್ : ।
ಪುನರ್ವೃಷಂ ಸಮಾಗತ್ಯ ಸೋಮಸೂತ್ರಂ ವ್ರ ಜೇತ್ತತಃ ।
ಪುನರ್ವೃಷೇಶಮಾಗತ್ಯ ಚಂಡಸ್ಥಾನಂ ತತೋವ್ರಜೇತ್।
ತತೋ ವೃಷೇಶ ಮಪ್ರಾಪ್ಯ ಸೋಮಸೂತ್ರಂವ್ರಜೇದ್ವಿಜಃ।
ಸೋಮಸೂತ್ರ ಮನುಲ್ಲಂಘ್ಯ ಚಂಡಸ್ಥಾನಾದ್ವೃಷ ವ್ರಜೇತ ।।
ಸ್ಥಾನಾನ್ಯೇವಂ ಸಮಾವೃತ್ಯ ವೃಷದೇಶಂ ಪುನರ್ಯಥಾ ।।
ಪ್ರಾಪ್ನುಯನ್ನಿಯತೋ ಭೂತ್ವಾ ತದೇವಂ ಸ್ಯಾತ ಪ್ರದಕ್ಷಿಣಮ್ ।।
ಸೋಮಸೂತ್ರಂಸಮುಲ್ಲಂಘ್ಯ ಗರ್ಭೇ ಸ ವೃಷಭೋಹಿಸಃ।
ವೃಷೋಯದಿ ಭವೇದ್ಗರ್ಭೇ ನೋಚೇತ್ತತ್ರ ನಸರ್ವಥಾ ।।
ಸೋಮಸೂತ್ರಂ ಸಮುಲ್ಲಂಘ್ಯ ಗರ್ಭೇ ಸ ವೃಷಭೋಹಿ ಸಃ।
ವಿಹಿತಂ ವಾತ್ಸ್ವ ವಿಹಿತಂ ಸೋಮಸೂತ್ರಂ ನಲಂಘಯೇತ್।
ಬಹಿಶ್ಚಾಪಿ ಹಿ ತತ್ಸೂತ್ರ ಮುಲ್ಲಂಘ್ಯಂ ನೈವಸರ್ವಥಾ :

ದೇವಾಲಯದಲ್ಲಿ ಎರಡು ವಿಧವಾದ ಪ್ರದಕ್ಷಿಣವು ವೇದ ಸಮ್ಮತವಾಗಿರುವುದು. ಅವುಗಳು ಸವ್ಯ ಅಪಸವ್ಯ ಎಂದು ಕರೆಯಲಾಗುವುದು. ಅವುಗಳಲ್ಲಿ ಮೊದಲನೆಯದು ಸವ್ಯಾಪಸವ್ಯವನ್ನು ಹೇಳುವುದು.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

1 ವೃಷಭಸ್ಥಾನದಿಂದ ಹೊರಟು ಚಂಡಿಕೇಶ್ವರರು ಇರುವ ಸ್ಥಳದವರೆಗೆ ಅಲ್ಲಿಂದ ಅಪ್ರದಕ್ಷಿಣವಾಗಿ ಪುನಃ ವೃಷಭದವರೆಗೆ ಬರುವುದು. ಇದಕ್ಕೆ ಸೋಮಸೂತ್ರವೆಂದು ಹೇಳಲಾಗುವುದು.

2. ಪುನಃ ವೃಷಭದಿಂದ ಚಂಡಿಕೇಶ್ವರರಿರುವ ಸ್ಥಳದವರೆಗೆ ಅಲ್ಲಿಂದ ಪುನಃ ವೃಷಭದವರೆಗೆ ಬರುವುದು.

3. ಪುನಃ ಮೂರನೆಯ ಆವೃತ್ತಿ ಎಂದರೆ ವೃಷಭದಿಂದ ಚಂಡಿಕೇಶ್ವರರಿರುವವರೆಗೆ ಪ್ರದಕ್ಷಿಣೆಯಾಗಿಯೂ, ಚಂಡಿಕೇಶ್ವರರಿಂದ ಅಪ್ರದಕ್ಷಿಣೆಯಾಗಿಯೂ ವೃಷಭದವರೆಗೆ ಬರುವುದು , ಇದಕ್ಕೆ ಸೋಮಸೂತ್ರವೆಂದು . ಹೆಸರು.

ದೇವ ದೇವನಾದ ಪರಮೇಶ್ವರನ ಎದುರಿಗಿರುವ ದ್ವಾರವು ವೃಷಭ ಸ್ಥಾನವಾಗಿರುವುದು. ದೇವ ದೇವನ ನೈಋತ ಭಾಗದಲ್ಲಿ ಚಂಡಿಕೇಶ್ವರನ ಸ್ಥಾನವು ಇದು ಎಂದರೆ ಶಿವಲಿಂಗವು ಪಶ್ಚಿಮಾಭಿಮುಖವಾಗಿರುವ ದೇವಾಲಯಕ್ಕೆ ಹೇಳಿರುವ ಪ್ರಕಾರವು.

ಶಿವಲಿಂಗವು ಪೂರ್ವಾಭಿಮುಖವಾಗಿದ್ದರೆ ಚಂಡಿಕೇಶ್ವರರ ಸ್ಥಾನವು ಈಶಾನ್ಯ ದಿಕ್ಕಿನಲ್ಲಾಗುವುದು. ಎಂದರೆ ಪರಮೇಶ್ವರ ಉತ್ತರ ಸ್ಥಾನವು ಸೋಮಸೂತ್ರ ಸ್ಥಾನವಾಗುವುದು.

ಲಿಂಗವು ಪಶ್ಚಿಮಾಭಿಮುಖವಾಗಿದ್ದರೆ ಆಗ ಪೂರ್ವಕ್ಕೆ ಸೋಮಸೂತ್ರವಾಗುವುದು.

ಮೇಲೆ ತಿಳಿಸಿದ ಈ ಮೂರು ಸ್ಥಾನಗಳೇ ಒಂಭತ್ತು ಸ್ಥಾನಗಳಾಗುವುದು.

1. ಆದ್ದರಿಂದ ವೃಷಭ ಸ್ಥಾನದಿಂದ ಹೊರಟು ಚಂಡಿಕೇಶ್ವರರ ಸ್ಥಾನದವರೆಗೆ ಹೋಗಿ ಪುನಃ ಅಲ್ಲಿಂದ ವೃಷಭ ಸ್ಥಾನದವರೆಗೆ ಬರಬೇಕು.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

2. ಪುನಃ ವೃಷಭ ಸ್ಥಾನದಿಂದ ಸೋಮಸೂತ್ರದವರೆಗೆ (ಚಂಡಿಕೇಶ್ವರನ ಸ್ಥಾನ)ಹೋಗಬೇಕು. ಪುನಃ ಅಲ್ಲಿಂದ ವೃಷಭ ಸ್ಥಾನದವರೆಗೆ ಬರಬೇಕು.

3. ಪುನಃ ವೃಷಭ ಸ್ಥಾನದಿಂದ ಹೊರಟು ಸೋಮಸೂತ್ರದವರೆಗೆ ಹೋಗಿ ಪುನಃ ವೃಷಭ ಸ್ಥಾನಕ್ಕೆ ಬರಬೇಕು.

ಸೋಮಸೂತ್ರವನ್ನು ಮೀರದಂತೆ ಚಂಡಸ್ಥಾನದಿಂದ ವೃಷಭಸ್ಥಾನವನ್ನು ಸೇರಬೇಕು. ನಿಯಮವಾಗಿ ಈ ಸ್ಥಾನಗಳನ್ನು ಪುನಃಪುನಃ ಮಾಡಿ ಕೊನೆಗೆ ವೃಷಭವನ್ನು ಸೇರಿದಲ್ಲಿ ಒಂದು ಪ್ರದಕ್ಷಿಣೆ ಎಂದು ಕರೆಯಲಾಗುವುದು.

ಸೋಮಸೂತ್ರಂ ಸಮುಲ್ಲಂಘ್ಯ ಗರ್ಭೇಸವೃಷಭೋಹೀಸಃ ।
ವಿಹಿತಂ ವಾತ್ಸ್ವವಿಹಿತಂ ಸೋಮಸೂತ್ರಂ ನ ಲಂಘಯೇತ್ ।
ಬಹಿಶ್ಚಾಪಿ ಹಿ ತತ್ಸೂತ್ರಮುಲ್ಲಂಘ್ಯಂ ನೈವ ಸರ್ವದಾ ।

ಗರ್ಭಗೃಹದಲ್ಲಿ ಸೋಮಸೂತ್ರ ವಿಧಿಯನ್ನು ಮೀರಿ ಪ್ರದಕ್ಷಿಣವನ್ನು ಮಾಡಬಹುದು. ಆದರೆ ಗರ್ಭಗೃಹದಲ್ಲಿ ನಂದಿಕೇಶ್ವರರನ್ನು ಸ್ಥಾಪಿಸಿದಲ್ಲಿ ಪೂರ್ಣ ಪ್ರದಕ್ಷಿಣೆ ಬರಬಹುದು. ನಂದಿಕೇಶ್ವರರು ಗರ್ಭಗೃಹದಲ್ಲಿಲ್ಲದಿದ್ದರೆ ಆ ರೀತಿ ಪ್ರದಕ್ಷಿಣೆ ಮಾಡಬಾರದು. ಗರ್ಭಗೃಹದಲ್ಲಿ ವೃಷಭವಿದ್ದರೆ ಸೋಮಸೂತ್ರ ವಿಧಿಯನ್ನು ಮೀರಿ ಪ್ರದಕ್ಷಿಣೆ ಮಾಡಬಹುದು. ಆ ರೀತಿ ಹೇಳಿದ್ದರೂ, ಹೇಳದೇ ಇದ್ದರೂ ಸೋಮಸೂತ್ರ ವಿಧಿಯನ್ನು ಮೀರಬಾರದು.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಸವ್ಯಾಪಸವ್ಯಾಮಿತ್ಯುಕ್ತಂ ದೀಕ್ಷಿತಾಂತುತದ್ಭವೇತ್।
ಅಜಿತಾಗಮ ಕ್ರಿಯಾ ೬೭ ರೌರವಕ್ರಿಯಾ ೬೫
ಅಪಸವ್ಯಂ ಯತೀನಾಂತು ಸವ್ಯಂತು ಬ್ರಹ್ಮಚಾರಿಣಾಂ ।
ಸವ್ಯಾಪಸವ್ಯಮಾರ್ಗೇಣ ವಾನಪ್ರಸ್ಥ ಗೃಹಸ್ಥಯೋಃ ।

ಸವ್ಯ ಪ್ರದಕ್ಷಿಣವು ಬ್ರಹ್ಮಚಾರಿಗಳಿಗೆ ಅಪಸವ್ಯ ಪ್ರದಕ್ಷಿಣವು ಯತಿಗಳಿಗೆ ಸವ್ಯಾಪಸವ್ಯ ಪ್ರದಕ್ಷಿಣವು ವಾನಪ್ರಸ್ತ ಮತ್ತು ಗೃಹಸ್ಥರಿಗೆ-ಇದು ಒಂದು ಪಕ್ಷ. ಸವ್ಯಪ್ರದಕ್ಷಿಣವು ಸಾಧಾರಣ ಪುರುಷರಿಗೆ- ಮತ್ತು ಯತಿಗಳಿಗೆ- ಸವ್ಯಾಪಸವ್ಯ ಪ್ರದಕ್ಷಿಣವು ದೀಕ್ಷಿತರಿಗೆ ಎಂದು ಹೇಳುವುದು-ಇನ್ನೊಂದು ಪಕ್ಷ-

ಅಂಗಪ್ರದಕ್ಷಿಣವು

ಅಂಗಪ್ರದಕ್ಷಿಣಂ ಕುರ್ಯಾತ್ ಕ್ಷಿಪ್ತ್ವಾಭೂಮೌ ನಿಜಾಂತನುಮ್ ।
ದಣ್ಡವದ್ಭಕ್ತಿ ಸಂಯುಕ್ತಃ ಪುಮಾತ್ಕೃತ ನತಾಂಜಲಿಃ ।
ಏವಂ ದಣ್ಡ ನತಿಂಕೃತ್ವಾ ಶಿವಾಗ್ರೇತು ಸಕೃನ್ನರಃ ।
ಪ್ರದಕ್ಷಿಣಂ ತತಃ ಕುರ್ಯಾದೇಕಂವಾ ತ್ರೀಣವಾ ದ್ವಿಜಾಃ ।
ಪಂಚಂವಾ ಸಪ್ತವಾ ವಿಪ್ರ ಸರ್ವಪಾಪಾನುತ್ತಯೇ ।
ಶೈವಾಗಮಸಾರೇ ಪುಟ ೧೨೧

ಒಂದೆ ಜಾನು ಪ್ರದಕ್ಷಿಣ ಎಂಬುದನ್ನು ತಿಳಿಸಿರುತ್ತೆ. ಅದರಂತೆಯೇ ಈಗ ಅಂಗ ಪ್ರದಕ್ಷಿಣವನ್ನು ತಿಳಿಸಲಾಗುವುದು. ಭೂಮಿಯ ಮೇಲೆ ದಂಡವತ್ ಮಲಗಿ ಉರುಳಿ ಪ್ರದಕ್ಷಿಣವಾಗಿ ಬರುವುದು. (ಉರುಳುಸೇವೆ) ಉರುಳುಸೇವೆ-ಅಂಗಪ್ರದಕ್ಷಿಣೆ ಮಾಡುವಾಗ ಕೈಯನ್ನು ತಲೆಯಮೇಲೆತ್ತಿ ಕೈಮುಗಿದುಕೊಂಡು ಒಂದಾವೃತ್ತಿ 1-3-5-7 ಆವೃತ್ತಿ ಪ್ರದಕ್ಷಿಣವಾಗಿ ಬರಬಹುದು-ಈ ಸೇವೆಯಿಂದ ಸರ್ವ ಪಾಪಗಳೂ ಪರಿಹಾರವಾಗಿ ಆರೋಗ್ಯವುಂಟಾಗುವುದು-ಈ ಅಂಗಪ್ರದಕ್ಷಿಣವು ಪುರುಷರಿಗೆ ಮಾತ್ರ ಹೇಳಿರುವುದರಿಂದಲೂ ಸ್ತ್ರೀಯರ ಶರೀರ ರಚನೆ ಬೇರೆಯಾಗಿ ರುವುದರಿಂದ ಸ್ತ್ರೀಯರು ಅಂಗ ಪ್ರದಕ್ಷಿಣೆ ಮಾಡಬೇಕಾದುದಿಲ್ಲವು.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಹಿಂದೆ 1-3-5-7 ಆವೃತ್ತಿ ಪ್ರದಕ್ಷಿಣೆ ಮಾಡಬಾರದೆಂದು ಹೇಳಿದೆ. ಆದರೆ ಅದು ನಿಂತು ಪ್ರದಕ್ಷಿಣೆ ಅಂಗಯು ಪ್ರದಕ್ಷಿಣೆಯಲ್ಲೀ ಮಾತ್ರ ಆ ನಿಯಮ ಏರುವುದಿಲ್ಲ.

ಅಂಗಪ್ರದಕ್ಷಿಣಂ ಚೇತ್ತು ಶಿವಸಾಯುಜ್ಯ ಕಾರಣಮ್ ।
ಪ್ರದಕ್ಷಿಣ ಸಹಸ್ರಂ ಸ್ಯಾದೇಕಮಂಗ ಪ್ರದಕ್ಷಿಣಮ್ ।
ಸ್ವಾಯಂಭುರಾಗಮ ಪೃಷ್ಠ ೩೨೯
ಕರಾಗ್ರೇ ಬಂಧಯಿತ್ವಾ ಪಾದೌ ಸ್ವಸ್ತಿಕಮಾಚರೇತ್ ।
ನೇಮವದ ಭ್ರಮಣಂ ಕೃತ್ವಾ ಪ್ರಾಸಾಧಾತ್ಪರಿತಸ್ತಥಾ ।
ಅಂಗಪ್ರದಕ್ಷಿಣಂ ಪ್ರೋಕ್ತಮೇವ ಮೇವಂ ಪ್ರದಕ್ಷಿಣಂ ।
ಪ್ರದಕ್ಷಿಣ ಸಹಸ್ರಂ ಸ್ಯಾದೇಕ ಮೇಕಂ ಪ್ರದಕ್ಷಿಣಮ್ ।

ಅಂಗ ಪ್ರದಕ್ಷಿಣ ಮಾಡುವಾಗ ಮೇಲೆ ತಿಳಿಸಿದಂತೆ ಅಂಗತೆರನಾಗಿ ಮಲಗಿ ಹೃದಯಮಧ್ಯದಲ್ಲಿ ಅಂಜಲಿಬದ್ಧನಾಗಿ ಒಂದು ಕಾಲನ್ನು ಇನ್ನೊಂದು ಕಾಲ ಮೇಲಿಟ್ಟು (ವೇಣುಗೋಪಾಲಕೃಷ್ಣರಂತೆ) ಇದಕ್ಕೆ ಸ್ವಸ್ತಿಕವೆಂದು ಹೆಸರು) ಆ ರೀತಿ ಅಂಗಪ್ರದಕ್ಷಿಣೆ ಮಾಡಬಹುದು.(ಅಂಗತೆರನಾಗಿ ಮಲಗಿ ಕೈಗಳನ್ನು ತಲೆಯಮೇಲೆತ್ತಿ ಅಂಜಲಿಬದ್ಧನಾಗಿಯೂ ಮಾಡಬಹುದು) (ಅಂಗಪ್ರದಕ್ಷಿಣೆ=ಉರುಳು ಸೇವೆ) ಅಂಗ ಪ್ರದಕ್ಷಿಣೆ ಮಾಡುವುದರಿಂದ ಅವರು ಶಿವ ಸಾಯುಜ್ಯವನ್ನು ಹೊಂದುವರು. ಸಾಧಾರಣವಾಗಿ ದೇವಸ್ಥಾನದಲ್ಲಿ ಒಂದು ಸಹಸ್ರ ಪ್ರದಕ್ಷಿಣೆ ಮಾಡಿದರೆ ಬರುವ ಫಲವು ಒಂದು ಸಲ ಅಂಗಪ್ರದಕ್ಷಿಣೆ ಮಾಡಿದರೆ ಆ ಫಲವು ಬರುವುದ್ದು.

ಅಂಗಪ್ರದಕ್ಷಿಣಂ ಕುರ್ವನ್ ಕೃತ್ವಾ ಭೂಮೌ ನಿಜಾಂತರಾನ್ ।೧೧
ದಣ್ಡವದ್ಬಾಹುಯುಗ್ಮೇನ ಸಹಬಧ್ವಾ ತತೋಂಜಲಿಮ್ ।
ಕೃತ್ವಾದಂಡ ನಮಸ್ಕಾರಂ ಶಿವಾಗ್ರೇತು ಸಕೃನ್ನರ ।
ಪ್ರದಕ್ಷಿಣಂ ತಥಾಕುರ್ಯಾದೇಕಂ ವಾ ತ್ರಯಮೇವವಾ ।
ಪಂಚವಾನಪ್ತವಾಚೈವ ಸರ್ವಪಾಪ ನಿವೃತ್ತಯೇ ।

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಕೃತ್ವಾ ಪುನಸ್ತಥಾಗ್ರೇತು ನಮಸ್ಕಾರಂಚ ಭವೇತ್ತತಃ ।
ಉತ್ಥಾಯ ಪ್ರಣತಿಂ ಭೂಯೋಭೂಯಃ ಕೃತ್ವಾ ಸಮಾಪಯೇತ್, ।,೧೪

ಅಜಿತಾಗಮ ಕ್ರಿಯಾ ೬೭

ಶೈವಾಗಮ ಕ್ರಿಯಾ ೧೨೧

ಕೃತ್ವಾಪ್ರದಕ್ಷಿಣಂ ಭಕ್ತ್ಯಾ ಶಿವಸ್ಯೈಕಂ ಸಮಾಹಿತಃ ।
ಅಶ್ವಮೇಧಸ್ಯ ಯಜ್ಞಸ್ಯ ಸುಖೇನ ಲಭತೇ ಫಲಂ । ೧೫
ಅನ್ತರ್ಹಾರಕೃತೆ ಪ್ರೋಕ್ತಂ ಫಲಮೇತತ ಪ್ರದಕ್ಷಿಣೇ ।
ತ್ರಿಗುಣಂ ಮಧ್ಯಹಾರೇತು ಮರ್ಯಾದಾಯಾಂ ಚತುರ್ಗುಣ ।
ಮಹಾಮರ್ಯಾದಿಕೇ ಚೈವ ಕೃತಂ ಪಂಚಗುಣಂ ಭವೇತ್ ।
ಕ್ಷೇತ್ರಾಧಿಕ್ಯ ಬಾಹ್ಯೇ ಭವೇಚ್ಛತಗುಣಂ ನೃಣಾಮ್ ।೧೭
ಏವಂ ಪ್ರದಕ್ಷಿಣಂ ಕುರ್ಯಾತ್...........।

ಅಜಿತಾಗಮ ಕ್ರಿಯಾ ೬೭

ನಾವು ದೇವಸ್ಥಾನಕ್ಕೆ ಹೋದಾಗ ಶಿವಪೆರುಮಾಳ್ ಎದುರಿಗೆ ಸಕೃತ್ (ಒಂದಾವೃತ್ತಿ) ಸಾಷ್ಟಾಂಗ ನಮಸ್ಕಾರ ಮಾಡಿ ಅನಂತರ ಭೂಮಿಯ ಮೇಲೆ ಅಂಗ ತೆರನಾಗಿ ಮಲಗಿ ಹೃದಯಮಧ್ಯದಲ್ಲಿ ಅಂಜಲಿಬದ್ಧನಾಗಿ ಅಂಗಪ್ರದಕ್ಷಿಣ ಬರಬಹುದು. (ಉರುಳು ಸೇವೆ) 1-3-5-7 ಆವೃತ್ತಿ ಅಂಗಪ್ರದಕ್ಷಿಣ ಬರುವುದರಿಂದ ಸರ್ವಪಾಪಗಳೂ ನಿವೃತ್ತಿಯಾಗಿ ಆರೋಗ್ಯವುಂಟಾಗುವುದು. ಈ ರೀತಿ ಪ್ರದಕ್ಷಿಣ ಬಂದಮೇಲೆ ಎದ್ದು ಪುನಃ ಶಿವಪೆರುಮಾಳಿಗೆ ಭಕ್ತಿಯಿಂದ ಸಾಷ್ಟಾಂಗ ನಮಸ್ಕಾರ ಮಾಡಬೇಕು. (ಎಷ್ಟಾವೃತ್ತಿ ಅಂಗಪ್ರದಕ್ಷಿಣೆ ಮಾಡಿದೆವೋ ಅಷ್ಟಾವೃತ್ತಿ ನಮಸ್ಕಾರ ಮಾಡಬಹುದು)

ಈ ರೀತಿ ಶಿವಭಗವಂತನೆದುರಿಗೆ ಭಕ್ತಿಯಿಂದ ಒಂದಾವೃತ್ತಿ ಅಂಗ ಪ್ರದಕ್ಷಿಣೆ ಮಾಡುವುದರಿಂದ ಅಶ್ವಮೇಧ ಯಜ್ಞಮಾಡಿದ ಫಲವುಂಟು-ದೇವಸ್ಥಾನದಲ್ಲಿ ಐದು ಪ್ರಾಕಾರಗಳಿವೆ. 1. ಅನ್ತರ್ಮಂಡಲ ಇದಕ್ಕೆ ಪ್ರಥಮ ಪ್ರಾಕಾರವೆಂದು ಹೆಸರು ಗರ್ಭಗೃಹ ಸುತ್ತಲೂ ಇರುವುದು. 2. ಅನ್ತರ್ಹಾರ (ದ್ವಿತೀಯ ಪ್ರಾಕಾರ) (ಮಧ್ಯಹಾರ ತೃತೀಯ ಪ್ರಾಕಾರ) 4 ಮರ್ಯಾದಾ (ನಾಲ್ಕನೆಯ ಪ್ರಾಕಾರ) ಶ್ರೀ ಮಹಾಮರ್ಯಾದೆ (5ನೆಯ ಪ್ರಾಕಾರ)-

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಈ ಪ್ರಾಕಾರಗಳಲ್ಲಿ ಮೊದಲಿನ ಅನ್ತರ್ಮಂಡಲ ಪ್ರಾಕಾರದಲ್ಲಿ ಅಂಗ ಪ್ರದಕ್ಷಿಣ ಹೇಳಿರುವುದಿಲ್ಲ. ಸಾಧಾರಣವಾಗಿ ಆ ಸ್ಥಳವು ಕಿಷ್ಕಿಂದವಾಗಿ ಇಲ್ಲಿ ಪ್ರಕಾರದ ಮೇಲು ಭಾಗವು ಮುಚ್ಚಲ್ಪಟ್ಟಿರುವುದರಿಂದ ಬೆಳಕು ಕಡಿಮೆಯಾಗಿರುವುದು.. ಎರಡನೆಯ ಪ್ರಾಕಾರ ಅನ್ತರ್ಹಾರದಲ್ಲಿ ಅಂಗ ಪ್ರದಕ್ಷಿಣೆ ಮಾಡುವುದರಿಂದ ಅಶ್ವಮೇಧ ಫಲವು ಮಧ್ಯಹಾರ (೩ನೆಯ ಪ್ರಾಕಾರ) ಇಲ್ಲಿ ಅಂಗ ಪ್ರದಕ್ಷಿಣೆ ಮಾಡುವುದರಿಂದ ಅದಕ್ಕೆ ಮೂರರಷ್ಟು ಫಲವುಂಟಾಗುವುದು. ಮರ್ಯಾದಾಹಾರ (ನಾಲ್ಕನೆಯ ಪ್ರಾಕಾರ)ದಲ್ಲಿ ಅಂಗಪ್ರದಕ್ಷಿಣೆ ಮಾಡುವುದರಿಂದ ನಾಲ್ಕರಷ್ಟು ಫಲವುಂಟಾಗುವುದು-ಮಹಾಮರ್ಯಾದಾ(೫ನೆಯ ಪ್ರಾಕಾರವು) ಈ ಆವರಣದಲ್ಲಿ ಅಂಗಪ್ರದಕ್ಷಿಣೆ ಮಾಡುವುದರಿಂದ ಐದರಷ್ಟು ಅರ್ಥಾತ್ ವಿವಿಧ ಫಲವುಂಟಾಗುವುದು-

ಕ್ಷೇತ್ರಭೂಮಿಯನ್ನೂ ಪ್ರದಕ್ಷಿಣೆ ಮಾಡಬಹುದು. ಎಂದರೆ ಗಿರಿಪ್ರದಕ್ಷಿಣೆ, ಚಿತ್ರಕೂಟಪ್ರದಕ್ಷಿಣೆ, ಗೋವರ್ಧನಗಿರಿ ಪ್ರದಕ್ಷಿಣೆ, ಅಯೋಧ್ಯೆ ಪ್ರದಕ್ಷಿಣೆ ಇತ್ಯಾದ ಕ್ಷೇತ್ರ ಸ್ಥಳಗಳಲ್ಲಿ ಪ್ರದಕ್ಷಿಣೆ ಮಾಡಿ ಬರುವರು. ದಕ್ಷಿಣ ದೇಶದಲ್ಲಿ ಇದಕ್ಕೆ ಅಷ್ಟತೀರ್ಥವೆಂದು ಕರೆಯುವರು. ಇದು ನಿಂತು ಪ್ರದಕ್ಷಿಣೆ ಮಾಡುವ ಕ್ರಮವು. ಭೂಪ್ರದಕ್ಷಿಣೆಯೂ ಉಂಟು. (ಸಂಪಾದಕರ ಅಭಿಪ್ರಾಯ) ಅಂಗಪ್ರದಕ್ಷಿಣೆಯಲ್ಲಿ ಸಾಧ್ಯಾ ಸಾಧ್ಯತೆಯನ್ನೂ ತಿಳಿಯಬೇಕು. ಅನ್ತರ್ಹಾರದಲ್ಲಿ ಏಳು (7) ಪ್ರದಕ್ಷಿಣವು, ಮಧ್ಯಹಾರದಲ್ಲಿ ಐದು (5) ಪ್ರದಕ್ಷಿಣವು, ಮರ್ಯಾದಾಹಾರದಲ್ಲಿ (ನಾಲ್ಕನೆಯ ಪ್ರಾಕಾರ) ಮೂರು(3) ಪ್ರದಕ್ಷಿಣವು. ಮಹಾಮರ್ಯಾದಾವರಣದಲ್ಲಿ (ಐದನೆಯ ಪ್ರಾಕಾರ) ಒಂದು ಅಂಗಪ್ರದಕ್ಷಿಣೆ ಮಾಡಬಹುದು. ಉದಾಹರಣೆಯಾಗಿ ಹೇಳುವುದಾದರೆ ತಿರುನಾರಾಯಣಪುರ (ಮೇಲುಕೋಟೆ) ದೇವಸ್ಥಾನವು ಎರಡು ಆವರಣಗಳಿಂದ ಕೂಡಿರುವುದು.ತಿರುಪತಿ ಶ್ರೀವೆಂಕಟೇಶ್ವರ ದೇವಸ್ಥಾನವು ಮೂರು ಆವರಣಗಳಿಂದ ಕೂಡಿರುವುದು. ಕಾಂಚೀಪುರ ಶ್ರೀವರದರಾಜಸ್ವಾಮಿ ದೇವಸ್ಥಾನವು ಐದಾವರಣಗಳಿಂದ ಕೂಡಿರುವುದು. ಶ್ರೀರಂಗಕ್ಷೇತ್ರ ಶ್ರೀರಂಗನಾಥಸ್ವಾಮಿ ದೇವಾಲಯವು ಸಪ್ತಾವರಣಗಳಿಂದ ಕೂಡಿರುವುದು. ಶ್ರೀರಂಗಪಟ್ಟಣ ಶ್ರೀರಂಗನಾಥಸ್ವಾಮಿ ದೇವಾಲಯವು ಮೂರು ಆವರಣಗಳಿಂದ ಕೂಡಿರುವುದು. ಇದೇ ರೀತಿಯಲ್ಲಿ ಶೈವ ದೇವಸ್ಥಾನಗಳ ಆವರಣವನ್ನೂ ತಿಳಿಯಬೇಕು.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಶಿವಲಿಂಗ ದರ್ಶನ

ವಾಹನಂ ಯಸ್ಯ ದೇವಸ್ಯ ತತ್ ಸ್ಯಾಗ್ರೇ ಪ್ರಕಲ್ಪಯೇತ್ ।
ದೀಪಾರ್ಣವಾ ೧೪ ಅಪರಾ ೧೧೫ (ಶ್ಲೋ)

ಭುಕ್ತಿ ಮುಕ್ತಿ ಫಲಪ್ರಾಪ್ತೇ ಶಿವಸಾಯುಜ್ಯ ಹೇತವೇ ।
ಪೂಜಾಪೀಠ ಸಮಸ್ಥಾನೇ ದರ್ಶನಂ ಶೃಂಗಮಧ್ಯಮೇ ।
ವೀರಾಗಮ.

ವೃಷಸ್ಯವೃಷಣಂ ಸ ಪೃಷ್ಟ್ವಾ ಚೇಶ್ವರಸ್ಯಾವಲೋಕನಂ ।
ಶೃಂಗಮಧ್ಯೇ ಶಿವಂ ದೃಷ್ಟ್ವಾ ಪುನರ್ಜನ್ಮ ನವಿದ್ಯತೇ ।
ಪೃಥಿವ್ಯಾ ಯಾನಿ ತೀರ್ಥಾನಿ ಸಾಗರಾಂತಾನಿ ಯಾನಿವೈ ।
ಅಂಡಮಾಶ್ರಿತ್ಯ ತಿಷ್ಠಂತಿ ದರ್ಶನಂ ಶೃಂಗಮಧ್ಯಮೇ ।
ಕಾರಣಾಗಮ.

ಭುಕ್ತಿ ಮುಕ್ತಿ ಎಂದರೆ ಇಹಲೋಕದಲ್ಲಿ ಸುಖವುಂಟಾಗುವುದಕ್ಕೂ ತದನಂತರ ಕಾಲದಲ್ಲಿ ಮುಕ್ತಿ ಪುನರಾವೃತ್ತಿ ರಹಿತವಾದ ಶಿವಸಾಯುಜ್ಯವನ್ನು ಹೊಂದುವುದಕ್ಕೂ ಪೂಜಾಪೀಠ ಸಮವಾಗಿರುವ (ವಿಷ್ಣು ಭಾಗ) ವೃಷಶೃಂಗದ ಮಧ್ಯೆ ಶಿವಲಿಂಗವನ್ನು ದರ್ಶಿಸಬೇಕು. ಅದಕ್ಕಾಗಿ ವೃಷಭವನ್ನು ಶಿವಲಿಂಗದ ಎದುರಿಗಿರುವ ಮಂಡಪದಲ್ಲಿ ಸ್ಥಾಪಿಸಬೇಕು.

ಸೃಷ್ಟಿಯಲ್ಲಿರುವ ಸಮಸ್ಥ ಪುಣ್ಯತೀರ್ಥಗಳೂ ನದಿಗಳೂ ಸಾಗರಾಂತರದವರೆಗೆ ಇರುವ ಎಲ್ಲಾ ತೀರ್ಥಗಳೂ ಪೃಥಿವಿ ಈ ಬ್ರಹ್ಮಾಂಡವನ್ನಾಶ್ರಯಿಸಿರುವುದು. ಕಾಮಧೇನುವಿನಂತೆ ವೃಷದ ಅವಯವಗಳಲ್ಲಿ ದೇವತಾಶಕ್ತಿಗಳೂ ಅಡಗಿವೆ. ವೃಷಸ್ಯ ವೃಷಣಂ ಪೃಷ್ಟ್ವಾ ಎಂದಲ್ಲಿ ಸೃಷ್ಟಿಗೆ ಕಾರಣವಾದ ವೃಷಣವನ್ನು ಮುಟ್ಟಿದಲ್ಲಿ ಅಂಡ (ಪೃಥ್ವಿ) ಆಶ್ರಯಿಸಿರುವ ಎಲ್ಲಾ ತೀರ್ಥಗಳಲ್ಲೂ ಪುಣ್ಯನದಿಗಳಲ್ಲೂ ಸ್ನಾನಮಾಡಿ ಪಾಪಗಳನ್ನು ಕಳೆದುಕೊಂಡು ಶುದ್ಧರಾಗುತ್ತೇವೆ. ಶುದ್ಧವಾದ ಮೇಲೆ ವೃಷಶೃಂಗದ ಮಧ್ಯೆ (ವಿಷ್ಣು ಮತ್ತು ಉಮೆ ಇವರ ಪುರುಷಕಾರದಿಂದ) ಶಿವನನ್ನು ಅವಲೋಕಿಸಿದಲ್ಲಿ ಇಹಲೋಕದಲ್ಲಿ ಸುಖವನ್ನೂ, ಪರಲೋಕದಲ್ಲಿ ಶಿವಸಾಯುಜ್ಯವನ್ನೂ ಹೊಂದುವರು.

ಶ್ರೀವೈಷ್ಣವರಲ್ಲಿ ಶ್ರೀಮಹಾಲಕ್ಷ್ಮಿಯು ಪುರುಷಕಾರಭೂತಿಯಾಗಿ ಈ ಚೇತನರನ್ನು ಭಗವದನುಗ್ರಹಕ್ಕೆ ಪಾತ್ರರಾಗುವಂತೆ ಹೇಗೆ ಮಾಡುವಳೋ ಅದೇ ರೀತಿಯಲ್ಲಿ ಶೈವ ಸಂಪ್ರದಾಯದಲ್ಲೂ ಕಾಣಬರುವುದು. ಶಂಕರನ ಪತ್ನಿ ಉಮೆಗೆ ಪುರುಷಕಾರಭೂತಿಯೆಂದು ಗ್ರಂಥಗಳಲ್ಲಿ ಹೇಳದಿದ್ದರೂ ಈ ಚೇತನರ ವಿಷಯದಲ್ಲಿ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಉಮೆಯು ಕರುಣಾರ್ದ್ರಚಿತ್ತಳಾಗಿರುವಳು. ಆದ್ದರಿಂದಲೇ ಎಲ್ಲಾ ದೇವಸ್ಥಾನಗಳಲ್ಲೂ ನಾವು ಪ್ರದಕ್ಷಿಣವಾಗಿ ಬರುವಾಗ ಮೊದಲು ತಾಯಿಯ ದರ್ಶನ ಮಾಡಿ ಅನುಗ್ರಹ ಪಡೆದು ಅಲ್ಲಿಂದ ಮುಂದೆ ಶ್ರೀ ನಾರಾಯಣ ಸನ್ನಿಧಿಯಲ್ಲಿ ಶ್ರೀ ಮಹಾವಿಷ್ಣುವಿನ ಅನುಗ್ರಹವನ್ನು ಪಡೆದು ಅನಂತರ ಶಿವಲಿಂಗದ ಎದುರಿಗೆ ನಿಲ್ಲುತ್ತೇವೆ. ಆದ್ದರಿಂದ ಶ್ರೀಮಹಾವಿಷ್ಣುವಿನ ಮತ್ತು ಉಮೆ ಇವರಿಬ್ಬರ ಅನುಗ್ರಹವು ಅತ್ಯಾವಶ್ಯಕವು. ಇವರು ಶೃಂಗ=ಉನ್ನತ ಸ್ಥಾನದಲ್ಲಿರುವವರು ಆದ್ದರಿಂದಲೇ ಇವರಿಬ್ಬರೂ ಶೃಂಗ ಮಧ್ಯೆ=ಉನ್ನತ ಸ್ಥಾನದಲ್ಲಿರುವುದರಿಂದಲೂ ವೃಷಭವು ಅವರಿಬ್ಬರಿಗೆ ಸಮಸ್ಥಾನದಲ್ಲಿರುವುದರಿಂದಲೂ ಶೃಂಗ ಮಧ್ಯೆ ವೃಷಭದ ಕೊಂಬಿನ ಮೂಲಕ (ಉನ್ನತ ಸ್ಥಾನದಲ್ಲಿರುವವರ ಸಹಾಯದಿಂದ)ಶಿವಲಿಂಗವನ್ನು ದರ್ಶಿಸಬೇಕು.

ಸಮನ್ವಯ ವಿಮರ್ಶೆ

ಶಿವಲಿಂಗವು ಬ್ರಹ್ಮ ವಿಷ್ಣು ರುದ್ರ ಇವರಿಂದ ಕೂಡಿದ ತ್ರಿಮೂರ್ತಿ ಸ್ವರೂಪವು, ಎಂದರೆ ಕೆಳಗಿನ ಭಾಗವು ಚತುಶ್ರಾಕಾರವಾಗಿದ್ದು ಬ್ರಹ್ಮಭಾಗವೆನಿಸಿ ಭೂಮಿಯಲ್ಲಿ ಹುದಗಿಸಲ್ಪಟ್ಟಿರುವುದು.

ಮಧ್ಯಭಾಗವು ಅಷ್ಟಾಶ್ರರೂಪವಾಗಿದ್ದು ವಿಷ್ಣುರೂಪವೆಂದು ಕರೆಯಲ್ಪಟ್ಟು ಪೀಠ ಭಾಗದಲ್ಲಿ ಅಡಗಿರುವುದು.

ಮೇಲಿನ ರುದ್ರಭಾಗವು ವರ್ತುಳಾಕಾರವಾಗಿದ್ದು, ಪೂಜಾ ಭಾಗವಾಗಿರುವುದು. ಪೀಠವು ವಿಷ್ಣುಂಶವಾಯಿತು.

ಯಸ್ಯ ದೇವಸ್ಯ ಯಾ ಪತ್ನೀ ತಾಂ ಪೀಠೇ ಪ್ರಕಲ್ಪಯೇತ್ ।
ಮತ್ಸ್ಯ ಪುರಾಣ.

ಯಾವ ಮೂರ್ತಿಯೇ ಆಗಲಿ ಲಿಂಗರೂಪವೇ ಆಗಲಿ ಆಗ ಅದರ ಪೀಠವು ಆ ದೇವರ = ಮೂರ್ತಿಯ ಪತ್ನೀ ಸ್ವರೂಪವಾಗಿರುವುದು.

ಉಮಾ ತು ಪೀಠಿಕಾಜ್ಞೇಯ ಲಿಂಗಂ ಶಂಕರ ಉಚ್ಯತೇ ।
ಅಪರಾಜಿತ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಶಿವಲಿಂಗ ಪೀಠವು ಉಮಾ ಸ್ವರೂಪವಾಗಿರುವುದು. ಅಲ್ಲದೇ ಆ ಪೀಠದಲ್ಲಿ ಎಂಟು ದಿಕ್ಕುಗಳಲ್ಲಿಯೂ, ಪೂರ್ವದಲ್ಲಿ ಭಾಸ್ಕರನು. ಆಗ್ನೇಯದಲ್ಲಿ ಗುಳಿಕನೂ, ದಕ್ಷಿಣ ಭಾಗದಲ್ಲಿ ಚಂಡನೂ , ನೈರುತ್ಯದಲ್ಲಿ ಬ್ರಹ್ಮನೂ, ಪಶ್ಚಿಮದಲ್ಲಿ ಸ್ವಭನೂ, ವಾಯುವ್ಯದಲ್ಲಿ ಗಣನಾಯಕನೂ, ಉತ್ತರದಲ್ಲಿ ಮಘವಾ (ಇಂದ್ರನೂ) ಈಶಾನ್ಯದಲ್ಲಿ ವ್ಯಾಳಾನಾಯಕನೂ (ವ್ಯಾಸ) ಆವಾಹಿತರಾಗಿ ಪೀಠವು ಸಕಲ ದೇವತಾತ್ಮವಾಗಿರುವುದು. ಅಲ್ಲದೆ ಭವ, ಶಿವ, ಶಂಕರ, ಉಗ್ರ, ಈಶಾನಾ, ಭೈರವ, - ರುದ್ರ, ಪಶುಪತಿ ಈ ರೀತಿ ಪೀಠದಲ್ಲಿ ಎಂಟು ದೇವತೆಗಳೂ ಆವಾಹಿತರಾಗಿರುವರು. ಇನ್ನು ವೃಷಭದ ಸ್ವರೂಪವನ್ನು ತಿಳಿಸುವಾಗ -

ವೃಷಭಸ್ಯೋಚ್ಛ್ರಯಂ ವಿಷ್ಣು ಭಾಗಾಂತ ದೃಷ್ಟಕಃ ।

ದೀಪಾರ್ಣವ (೧೪)(೫೨) ಅಪರಾ ೨೦೮

ಲಿಂಗದೈರ್ಘೇ ಸಮಾಯಾಮೇ ವಿಷ್ಣ್ವಂಶಾಂತೋನತೋವೃಷಃ ।

ವಾಸ್ತು ಮಂಜರಿ.

ನಂದಿಯ ಉತ್ಸೇಧವು ವಿಷ್ಣುಭಾಗ ಪೀಠಕ್ಕೆ ಮತ್ತು ಉಮೆಯ ಸ್ಥಾನ ಪೀಠ ಸಮಕ್ಕೆ ಎತ್ತರವಾಗಿರುವುದು. ಆಗ ನಾವು ಯಾವ ರೀತಿ ಹೇಗೆ ಶಿವದರ್ಶನ ಮಾಡಬೇಕು ?

ಶಿವನು ರುದ್ರಸ್ವರೂಪನು ಕಾಲಾಂತಕನು ಪ್ರಳಯಕಾಲಕ್ಕೆ ಅಧಿಕಾರಿಯು, ತ್ರಿನೇತ್ರ ಸ್ವರೂಪನು. ಅದೇ ಸಮಯದಲ್ಲಿ ಶಿವನು ಮಂಗಳಕರನು. ಶಂಕರನು ಸುಖವನ್ನು ಕೊಡತಕ್ಕವನು. ಅವನನ್ನು ಕಾಣಲು ಅವನಿಂದ ಅನುಗ್ರಹ ಹೊಂದಲು ಕಿಂಚಿತ್ ಇತರರ ಸಹಾಯ ಬೇಕಾಗಿರುವುದು. ಇಲ್ಲಿ ವೃಷಭದ ಶೃಂಗ ಮಧ್ಯೆ ದರ್ಶಿಸಬೇಕೆಂದು ಹೇಳುವುದರ ಅರ್ಥವೇನು ? ಆಗ ವೃಷಭದ ಉತ್ಸೇಧವು ಶಿವಲಿಂಗ ಪೀಠದ ಸಮಕ್ಕಿರುವುದರಿಂದ ಆ ಸ್ಥಳವು ವಿಷ್ಣುಭಾಗವಾಗಿರುವುದು. ಅಲ್ಲದೇ ಪತ್ನೀಸ್ವರೂಪ ಉಮಾ ಸ್ಥಾನವಾಗಿರುವುದು. ಶ್ರೀವೈಷ್ಣವರಲ್ಲಿ ಲಕ್ಷ್ಮಿಯು ಈ ಚೇತನರ ವಿಷಯದಲ್ಲಿ ಹೇಗೆ ಪುರುಷಕಾರ ಭೂತಿಯಾಗಿರುವಳೋ ಅದೇ ರೀತಿಯಲ್ಲಿ ವಿಷ್ಣುವೂ, ಅರ್ಧಾಂಗಿ ಉಮೆಯೂ, ಪುರುಷಕಾರಭೂತಿಯಾಗಿರುವುದರಿಂದ ವೃಷಭದ ಶೃಂಗ ಮಧ್ಯೆ (ಮಹಾವಿಷ್ಣು ಮತ್ತು ಉಮೆ) ಶಿವದರ್ಶನವನ್ನು ಮಾಡಿದಲ್ಲಿ ಇಹಲೋಕದಲ್ಲಿ ಸುಖವನ್ನೂ, ಪರಲೋಕದಲ್ಲಿ ಶಿವಸಾಯುಜ್ಯವನ್ನೂ ಹೊಂದುವರು.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಭಾಗ - 3

ಶ್ರೀ ಮಹಾಮಂಗಳಾರತಿ(ಶಾತ್ತುಮರೈ)

ಭಗವದ್ದರ್ಶನಕ್ಕೆ ಮೊದಲು ಶ್ರೀಯಾದಿದರ್ಶನಗಳು
ಶ್ರೀಮಹಾಲಕ್ಷ್ಮೀ ದರ್ಶನವು

ಪ್ರದಕ್ಷಿಣವಾಗಿ ಬರಲು ಮುಖ್ಯ ಕಾರಣ ಒಂದಿರುವುದು-ಅದೇನೆಂದರೆ -

ಭಗವದ್ದರ್ಶನೇ ಚಾದೌ ಶ್ರೀಯಾದೀನಾಂಚ ದರ್ಶನಂ ।
ಪುರುಷಕಾರ ಭೂತಂ ಸ್ಯಾದೇವಸ್ಯಾನುಗ್ರಹ ಪ್ರದಂ । ೧೭೫
ತಸ್ಮಾಶ್ರಿಚ್ಛದರ್ಶನಂ ತ್ವಾದೌ ಕೃತ್ವಾದೇವಸ್ಯ ದರ್ಶನಂ ।
ಪ.ಪು.ಸಂ. ೪

ಭಗವದ್ದರ್ಶನಕ್ಕೆ ಮುಂದಾಗಿ ಪುರುಷಕಾರರೂಪಿಣಿಯಾದ ಶ್ರೀಮಹಾಲಕ್ಷ್ಮೀ ಅಮ್ಮನವರನ್ನು ದರ್ಶನ ಮಾಡಿ ಅನಂತರವೇ ಶ್ರೀ ಹರಿಯನ್ನು ದರ್ಶಿಸಬೇಕು. ಅರ್ಥಾತ್ ಶ್ರೀಮನ್ನಾರಾಯಣನೂ-ಶ್ರೀಮಹಾಲಕ್ಷ್ಮಿಯು ನಮ್ಮ ಮಾತಾ ಪಿತೃಗಳೆಂದ ಮೇಲೆ ತಂದೆಯಾದ ಶ್ರೀಮನ್ನಾರಾಯಣನು

ಶ್ರುತಿ ಸ್ಮೃತಿ ಮಮೈವಾಜ್ಞಾ ಯಸ್ತಾಮುಲ್ಲಂಘ್ಯವರ್ತತೇ ।
ಆಜ್ಞಾಭೇದೀ ಮಮದ್ರೋಹೀ ರೌರವಂ ನರಕಂವ್ರಜೇತ್ ।

ಶ್ರುತಿ ಸ್ಮೃತಿ ಪುರಾಣಗಳು ಧರ್ಮಶಾಸ್ತ್ರಗಳು ನಾನು ಹೇಳುವ ಮಾತುಗಳು ನನ್ನಿಂದ ಬರೆಯಲ್ಪಟ್ಟಿವೆ. ಅದರಂತೆ ಈ ಚೇತನರು ನಡೆದುಕೊಳ್ಳ ಬೇಕು. ಆ ರೀತಿ ನಡೆಯದಿದ್ದಲ್ಲಿ ಕಠಿಣವಾಗಿ ಶಿಕ್ಷಿಸುತ್ತೇನೆ ಎಂದು ಹೇಳಿರುವನು.

ನಾವು ಅವನು ಹೇಳಿರುವಂತೆ ನಡೆಯುವುದಿಲ್ಲವಾದ್ದರಿಂದ ತಂದೆಯು ಶಿಕ್ಷಿಸುವನೆಂದು ಅವನ ಸಮೀಪಕ್ಕೆ ಹೋಗದೆ ಯಾವುದಿದ್ದರೂ ಅದಕ್ಕೆ ಅಮ್ಮನ ಹತ್ತಿರ ಹೋಗುತ್ತೇವೆ. ಎಂದರೆ ಪ್ರದಕ್ಷಿಣವಾಗಿ ಬರುವಾಗ ಲೋಕಮಾತೆ ಶ್ರೀಲಕ್ಷ್ಮೀ ಅಮ್ಮನವರ ಸನ್ನಿಧಿಗೆ ಬರುತ್ತೇವೆ. ಇಲ್ಲಿ ಶ್ರೀಮಹಾಲಕ್ಷ್ಮೀ ಅಮ್ಮನವರ ಅನುಗ್ರಹ ಪಡೆದಮೇಲೆ ಅಮ್ಮನ ಆಶ್ವಾಸನೆಯು -"ಹೆದರಬೇಡ ತಂದೆಯು ಹತ್ತಿರ ಹೋಗೆಂದು ಹೇಳಿದರೂ ನಾವು, ತಂದೆಯು ಶಿಕ್ಷಿಸುವನೆಂಬ ಹೆದರಿಕೆಯಿಂದ ಅವನ ಬಳಿ ಹೋಗುವುದಿಲ್ಲ" ಆಗ ತಾಯಿಯಾದವಳು, ಕರುಣಾರ್ದ್ರಚಿತ್ತ ಪುರುಷ ಕಾರಿಯಾದ್ದರಿಂದ ತನ್ನ ಮಕ್ಕಳ ಮೇಲಿನ ಪ್ರೀತಿ ವಾತ್ಸಲ್ಯದಿಂದ ನಾನು ಬರುತ್ತೇನೆ ನೀನು ತಂದೆಯ ಬಳಿ ಬರುವುದೆಂದು ಹೇಳಿ, ಅಮ್ಮನು ತಂದೆಯ ಬಳಿಗೆ ಬಂದು "ಪುತ್ರನು (ಈ ಚೇತನನು) ಬರುವನು. ನೀವು ಶಿಕ್ಷಿಸಬೇಡಿ ಶಿಕ್ಷಿಸಲು ಹೋದರೆ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಪುನಃ ಓಡಿಹೋಗುವನು ಅರ್ಥಾತ್ ಕರ್ಮವಶನಾಗಿ ಪುನರಪಿ ಜನ್ನನಂ-ಪುನರಪಿ ಮರಣಂ ಈ ಚಕ್ರಕ್ಕೆ ಸಿಕ್ಕಿಬೀಳುವನು. ಆದ್ದರಿಂದ ಅವನನ್ನು ರಕ್ಷಿಸಿ ಅನುಗ್ರಹಿಸಿ ಎಂದು ಹೇಳುವಳು. (ಲೋಕದಲ್ಲಿ ಪತಿಯಾದವನು ತನ್ನ ಪ್ರೀತಿ ಪಾತ್ರಳಾದ ಹೆಂಡತಿಯ ಮಾತನ್ನು ತೆಗೆದುಹಾಕಲಾರದೆ ಮಗ ದುಷ್ಟನಾಗಿದ್ದರೂ ಪ್ರೀತಿಸುವಂತೆ) ಭಗವಂತನು ಕರುಣಾಮೂರ್ತಿಯಾದ್ದರಿಂದ ತನ್ನ ಬಳಿಗೆ ಬಂದ ಈ ಚೇತನರಾದ ನಮ್ಮನ್ನು ಅನುಗ್ರಹಿಸುವನು. ಆಗ ಪರಿವಟ್ಟ(ಶೇಷವಸ್ತ್ರ) ಮಾಲೆ, ತೀರ್ಥ ಶ್ರೀಶಠಕೋಪ ಇವುಗಳಿಂದ ಅನುಗ್ರಹಿಸುವನು.

ಅದರಂತೆ ಪ್ರದಕ್ಷಿಣವಾಗಿ ಬರುವಾಗ ಶ್ರೀಮಹಾಲಕ್ಷ್ಮಿ ಸನ್ನಿಧಿಯಲ್ಲಿ ಅಮ್ಮನವರನ್ನು ದರ್ಶನ ಮಾಡಿ ಅನುಗ್ರಹ ಪಡೆದು ಅನಂತರ ಭಗವತ್ಸನ್ನಿಧಿಗೆ ಬರುತ್ತೇವೆ

ತಸ್ಮಾಚ್ಛಾಸ್ತ್ರ ಪ್ರಮಾಣಂ ತೇ ಕಾರ್ಯಾಕಾರ್ಯವಿಧಿನಿರ್ಣಯೇ ।
ಜ್ಞಾತ್ವಾ ಶಾಸ್ತ್ರ ವಿಧಿಯೋಕ್ತಂ ಕರ್ಮಕಾರ್ಯ ಮಹಾರ್ಣತಿ ॥

(ಈ ವಿಷಯವು ಅರ್ಥಾತ್ ಶ್ರೀಮಹಾಲಕ್ಷ್ಮೀ ಪುರುಷಕಾರ ವಿಚಾರವು ಶ್ರೀವೈಷ್ಣವರಿಗೆ ಅತಿ ಮುಖ್ಯವಾದುದು)

ಭಗವಂತನ ಸನ್ನಿಧಿಯಲ್ಲಿ

ತದಾಸರ್ವೇ ಮಹಾಭಕ್ತ್ಯಾ ತಿಷ್ಠನ್ನೇವ ಹರೇರ್ಗೃಹೇ।
ವರ್ಣಾಶ್ರಮಾದಿ ಭೇದೇನ ಸ್ತ್ರೀ ಪುಂ ಭೇದೇನ ಚದ್ವಿಜಾಃ । ೧೬
ಹರಿನಾಮಾನಿ ಸಂಕೀರ್ತ್ಯ ಮನಸಾ ಶ್ರದ್ಧಯಾನ್ವಿತಾಃ ।
ಅನ್ಯಸಂಭಾಷಣಂ ತ್ಯಕ್ತ್ವಾ ಸ್ವೀಕರೇ ತ್ಯೀರ್ಥಮಾದಿಕಾನ್ ॥
ಪ.ಪು.ಸಂ. ೧ ಅನುಬಂಧ.

ಆಸ್ತಿಕರೆಲ್ಲರೂ ಮಹಾಭಕ್ತಿಯಿಂದ ಮಹಾಮಂಗಳಾರತಿ ಕಾಲದಲ್ಲಿ ದೇವರ ಸನ್ನಿಧಿಮುಂದೆ ತಮ್ಮ ತಮ್ಮ ವರ್ಣಾಶ್ರಮ ಕ್ರಮವನ್ನನುಸರಿಸಿ ಸ್ತ್ರೀ ಪುರುಷರು ಬೇರೆ ಬೇರೆಯಾಗಿ ನಿಂತು ಶ್ರದ್ಧೆಯಿಂದ ತೀರ್ಥ-ಶಠಕೋಪಾದಿ ಮರ್ಯಾದೆಗಳನ್ನು ಸ್ವೀಕರಿಸಬೇಕು. ಈ ಸಮಯದಲ್ಲಿ ಭಗವನ್ನಾಮಸಂಕೀರ್ತನೆಯನ್ನು ಮಾಡಬೇಕು. ಇತರ ಸಾಂಸಾರಿಕ ಮಾತುಗಳನ್ನಾಡಬಾರದು.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಪ್ರತ್ಯಹಂ ದೇವ ದೇವಸ್ಯ ಮಂದಿರಂ ಯಸ್ತು ಗಚ್ಛತಿ।
ತಸ್ಯಾಭೀಷ್ಟಾನಿ ಸರ್ವಾಣಿ ದದಾತಿ ಪುರುಷೋತ್ತಮಃ ।೬೦
ಪ.ಪ್ರ.

ಪ್ರತಿದಿನವೂ ಭಗವಂತನ ದರ್ಶನ ಮಾಡುವುದರಿಂದ ತವನ ಕೋರಿಕೆಗ ಳೆಲ್ಲವೂ ನೆರವೇರುವುದು.-

ತಥಾಪಿ ಪಾದಮಾರಭ್ಯ ಮುಖಪರ್ಯಂತಮೀಕ್ಷಣಂ। ೧೭೬
ವೈಷ್ಣವಾನಾಂತು ವಿಹಿತಂ ಗೋಪ್ಯಮೇತನ್ಮುನೀಶ್ವರಾಃ
ಪ.ಪು.ಸಂ.೪

ಮಹಾಮಂಗಳಾರತಿ ಸಮಯದಲ್ಲಿ ನಿಂತಿರುವ ಭಗವದ್ಭಕ್ತರು ಭಗವಂತನ ಮೂರ್ತಿಯನ್ನು ಆಪಾದಮಸ್ತಕ ದರ್ಶನ ಮಾಡಬೇಕು. ಈ ವಿಷಯವು ಶ್ರೀವೈಷ್ಣವ ರಿಗೆ ಅತಿ ಮುಖ್ಯವು.-ಏಕೆಂದರೆ ಶೈವಾಗಮರೀತ್ಯ ಶಿವಲಿಂಗವು ತ್ರಿಮೂರ್ತಿಸ್ವರೂ ಪವು. ಆದರೆ ಅಲ್ಲಿ ದರ್ಶಿಸುವ ಸ್ಥಳದಲ್ಲಿ ಬ್ರಹ್ಮ ವಿಷ್ಣುರುಗಳು ಕಾಣುವುದಿಲ್ಲ.

ದೀಪ ವಿಷಯ - ಫಲಂ.

ದೀಪಂ ವಿಷ್ಣುಪ್ರಿಯಂ ಪ್ರೋಕ್ತಂ ಸರ್ವಸಿದ್ಧಿ ಪ್ರದಾಯಕಮ್। ೬೬
ಪ್ರಕೀರ್ಣಾಧಿಕಾರ ೧೯
ಆಲಯೇ ಸ್ಥಾಪಿತಂ ದೇವಂ ಸದಾ ನೀರಾಜಯೇದ್ಧರಿಮ್।
ಸಂಪೂರ್ಣಮಂಭಸಾ ಕುಂಭಂ ಹೇಮಾದಿದ್ರವ್ಯ ನಿರ್ಮಿತಂ। ೭೭
ಪಾದ್ಮ

ಸಂ.ಚರ್ಯೆ ೬
ನೀರಾಜನಂ ವಿಹೀನೇತು ಸರ್ವಕರ್ಮಾಸುರಂಭವೇತ್।
ಅನಿರುದ್ಧ ಸಂ.೨೬
ಅಥವಕ್ಷ್ಯೇ ವಿಶೇಷೇಣ ನೀರಾಜನ ವಿಧಿಕ್ರಮಮ್।
ಸರ್ವಕೃತ್ರಿಮ ನಾಶಾರ್ಥಂ ಸರ್ವಲೋಕ ಹಿತಾವಹಮ್।
ಪೂರ್ವಾಕಾರಣಾಗಮ ೧೪೩

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ದೀಪಂ ತು ದೇವದೇವಸ್ಯ ಸಕೃತ್ಕಾಲೇ ಪ್ರದಾಪಯೇತ್। ೧೩
ಲೋಕೇತು ದೀಪವತ್ಸೋಽಪಿ ಸರ್ವವಿತ್ತಾಪ್ಯತ ಸ್ಮೃತಃ।
ಮನಸಾ ಕರ್ಮಣಾ ವಾಚಾ ಶಿವಮುದ್ದಿಶ್ಯ ಯೋನರಃ।
ಸ್ನಾನಾಂತೇ ಭೋಜನಾಂತೇ ಚ ಅಲಂಕಾರಾಸನಾಂತಕೇ।
ಸಾಯಾಹ್ನೇತು ವಿಶೇಷೇಣ ನೀರಾಜನಮಥಾಚರೇತ್ । ೭೩
ಅನಿರುದ್ಧ ಸಂ.೧೭

ದೀಪವು ವಿಷ್ಣುಪ್ರಿಯಕರವಾದುದು. ದೇವರಿಗೆ ದೀಪವನ್ನು ಹಚ್ಚಿ ಇಟ್ಟರೆ ಅವರು ಸರ್ವಾಭೀಷ್ಟಗಳನ್ನೂ ಹೊಂದುವರು.

ದೇವಸ್ಥಾನದಲ್ಲಿ ದೇವರನ್ನು ಪ್ರತಿಷ್ಠಿಸಿದ ಮೇಲೆ ಅವರಿಗೆ ಯಾವಾಗಲೂ ದೀಪವಿರಬೇಕು. ಆದ್ದರಿಂದ ನಂದಾದೀಪವನ್ನು ಹಚ್ಚಿಡಬೇಕು. ಕುಂಭದೀಪವೆಂದರೆ ವಿಷ್ಣುವಿಗೆ ಬಹುಪ್ರೀತಿ. ಆದ್ದರಿಂದ ಜಲಪೂರಿತವಾದ ಹೇಮಾದಿ ನಿರ್ಮಿತ ಕುಂಭಾಕಾರದಲ್ಲಿ(ಘಟದೀಪ) ದೀಪದಿಂದ ನೀರಾಜನ ಮಾಡಬೇಕು. ಯಾವ ಕೆಲಸ ಕಾರ್ಯವೇ ಆಗಲಿ ಆರಂಭಿಸಿದಲ್ಲಿ ಆ ಕಾರ್ಯವು ಕೈಗೂಡಬೇಕಾದರೆ ಮೊದಲು ನೀರಾಜನ (ದೀಪವನ್ನು ಹಚ್ಚಬೇಕು) ದೀಪಹಚ್ಚದಿದ್ದರೆ ಆ ಕಾರ್ಯವು ಯಶಸ್ವಿಯಾಗುವುದಿಲ್ಲ. ಆದ್ದರಿಂದ ಮೊದಲು ನೀರಾಜನ ಕಾರ್ಯ ಮಾಡಬೇಕು.

ಭಗವಂತನಿಗೆ ನೀರಾಜನ ಕಾರ್ಯ ಮಾಡುವುದರಿಂದ ಕೃತ್ರಿಮ ಕಾರ್ಯಗಳು ನಡೆಯಲಾರವು. ಒಬ್ಬರು ಇನ್ನೊಬ್ಬರಿಗೆ ಅನ್ಯಾಯ ಮಾಡಲು ಯೋಚಿಸಿದರೆ ಮಾಡಿದಾಗ ಆಗ ನಾವು ದೇವರಿಗೆ ನಂದಾದೀಪ ಹಚ್ಚಿಟ್ಟರೆ ಆ ಕೃತ್ರಿಮ ಕಾರ್ಯವು ಭಂಗವಾಗುವುದು. ಆದ್ದರಿಂದ ದೇವರ ಮುಂದೆ ದೀಪವನ್ನು ಹಚ್ಚಿಟ್ಟರೆ ಸರ್ವಲೋಕ ಸುಖವುಂಟಾಗುವುದು.

ದೇವರಿಗೆ ದೀಪವನ್ನು ಸ್ವಲ್ಪಕಾಲ ಹಚ್ಚಿಟ್ಟರೆ ಮಹಾಫಲವುಂಟು ಲೋಕದಲ್ಲಿ ಈ ದೀಪದಿಂದಲೇ ಜ್ಞಾನ ಪ್ರಸಾರವಾಗುವುದು. ಆದ್ದರಿಂದ ಭಗವಂತನಿಗೆ ತ್ರಿಕರಣ ಶುದ್ಧಿಯಾಗಿ ದೀಪವನ್ನು ಹಚ್ಚಿಡಬೇಕು.

ದೇವರಿಗೆ ಅಭಿಷೇಕವಾದ ಮೇಲೆ ನಿವೇದನವಾದ ಮೇಲೆ ಅಲಂಕಾರವಾದ ಮೇಲೆ ಸಾಯಂಕಾಲದ ವೇಳೆಯಲ್ಲಿ ಆಗಿಂದಾಗ್ಗೆ ನೀರಾಜನ ಆರತಿ ಮಾಡುತ್ತಿರಬೇಕು.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಅಥ ನೀರಾಜನಪಾತ್ರಂ ಹೇಮರಜತ ತಾಮ್ರಕಾಂಸ್ಯ ನಾಮಾನ್ಯತಮೇನ।
ಚತುರ್ವಿಂಶತಿ ಷೋಡಶ ದ್ವಾದಶಾಂಗುಲ ವಿಸ್ತಾರಂ ಸಮವೃತ್ತಂ
ಅರ್ಧಾಂಗುಲ ಭಿತ್ತ್ಯುಚ್ಚಂ ತತ್ಸಮ ಸೀಮಾ ವಿಸ್ತಾರಂ ಪಾತ್ರಮಧ್ಯೇ।ತ್ರಿಭಾಗೈಕ
ಭಾಗೇನಾಬ್ಜದಲಯುತಂ ಏಕಾಂಗುಲೋನ್ನತಂ। ತತ್ಕರ್ಣಿಕಾ ಮಧ್ಯೇ।
ತ್ರ್ಯಂಗುಲೋತ್ಸೇಧಂ ಏಕಾಂಗುಲಂ ಪರೀಣಾಹಂ ಮಧ್ಯಾ ಮಧ್ಯಮಾದಿ।
ನವದಿಕ್ಷು ದೀಪಾಧಾರಯುಕ್ತಂ ಮಧ್ಯೇ ಮಧ್ಯೇ ಏವಂ ಪಿವ ಸಂಯ್ಯೋಜ್ಯ
ತತ್ಪೃಷ್ಠೇ। ಷಟ ಚತುರಂಗುಲಾಽಯತ ವಿಸ್ತಾರಂ ಪಾದಂ ಯೋಜಯೇತ್ ।

ವಿಮಾನಾರ್ಚನಕಲ್ಪೇ ೨೪ ಪುಟ ೧೮೪

ಚತುಸ್ತ್ರ ಯಾಂಗುಲೋತ್ಸೇಧಂ ದೀಪವರ್ತಿ ವಿರಾಜಿತಂ।
ಉಚ್ಚ್ರಿತ ಹೇಮಾದಿ ದ್ರವ್ಯಮಯ ಮಂಬಸಾಪೂರ್ಣಂ ।
ಸ್ರಗ್ವಾಣ ಮಕ್ಷತಾರ್ಚಿತಂ ಗಂಧೋದಕಾಭ್ಯುಷಿತಂ ।
ಮುಖೇಶ್ವತ್ಥದಳಾಯುತಂ. ಸಾಪಿದಾನಂ ಚತುರಂಗುಲೋತ್ಸೇಧ।
ವರ್ತಿಯುಕ್ತಂ ಮಹಾನಾಸಾಗ್ನಿ ವಾ ದೀಪ್ತ ನೀರಾಜನಕುಂಭಂ ।
ದೀಕ್ಷಿತ ಪರಿಚಾರಕೇಣ, ಬ್ರಾಹ್ಮಣ್ಯಾಂ।
ದೇವದಾಸ್ಯಾವಾ ಮಹಾನಾಸಾದಾನಾಯ್ಯ ಭಗವದಗ್ರೇ।
ಆಧಾರೋಪರ್ಯ ಸ್ಥಾಪ್ಯ- ಓಂ ರಂ ಜಗಜ್ಯೋತಿ ರೂಪಾಯ ನಮಃ।

?

ಪಂಚವಿಂಶಾಂಗುಲಾಯಾಮಂ ವಿಸ್ತಾರಂ ತತ್ಸಮಂಭವೇತ್ ।
ಮುಖಂನ್ನವಾಂಗುಲಂಪ್ರೋಕ್ತಂ ಪಾದಂಚ ಚತುರಂಗುಲಮ್।
ನಾಳಂ ಸಪ್ತಾಂಗುಲೋತ್ಸೇಧಮಷ್ಟಪತ್ರಂ ಸಕರ್ಣಿಕಮ್।
ಏವಮೇವ ಪ್ರಕಾರೇಣ ದೀಪಕುಂಭಸ್ಯ ಲಕ್ಷಣಮ್।

ಪಾಂಚರಾತ್ರ ಸಂಗ್ರಹೇ-ಹಿರಣ್ಯಗರ್ಭ ಸಂ.

ಹೈಮಂ ಚಾಢಕಪೂರಿತಂಚ ಕಲಶವಕ್ತ್ರಂ ಪಿಧಾನಾನ್ವಿತಂ।
ವೃತ್ತಾಕಾರ ಘಟೇನ ಶೋಭಿತ ಮಧೋ ವೃತ್ತಂಚ ಪಂಚಾಂಗುಲಮ್।
ತತ್ಕರ್ಣಂಚ ಕಲಾಂಗುಲೋ....ಚೋಷ್ಟಂ ವತುರ್ಭ್ಯಾನ್ವಿತಂ ।
ತಸ್ಯಾಚೋಪರಿ ಚಾಷ್ಟಪತ್ರ ಸಹಿತಂ ಪದ್ಮಂ ನಾಳಾನ್ವಿತಮ್।
ತನ್ಮಧ್ಯೇ ನವಪಂಚ ಚೈಕ ಮಥವಾ ವರ್ತೀಶ್ಚಾ ಸಂಯೋಜಯೇ।
ನಾಳೇಕಾಪಿಲ ಸರ್ಪಿಷಾ ಚ ವಿಧಿನಾ ದೀಪಂಸಮಾರೋಪಯೇತ್ ।

ಅರ್ಚನಾತಿಲಕಂ ೮

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ವಕ್ಷ್ಯೇ ನೀರಾಜನ ಸ್ಯಾಥಪಾತ್ರಂತು ಸುಮನೋಹರಂ।
ತಲಾಯತ ವಿಸ್ತೀರ್ಣಂ ವೃತ್ತಮಧ್ಯ ಸರೋರುಹಮ್।
ನವವಾ ಸಪ್ತವಾ ಪಂಚತ್ರೀಣಿ ಚೈಕಂತು ವಾಭವೇತ್।
ನೀರಾಜನಕ್ರಿಯಾಪಾತ್ರಂಸ್ವರ್ಣಾದಿ ದ್ರವ್ಯನಿರ್ಮಿತಂ।
ಏಕಾರ್ತಿಕ ಮಥೋವಕ್ಷ್ಯೇ ಶ್ರುಣುಧ್ವಂ ಭೂಸುರೋತ್ತಮಾಃ ।
ಕದಳೀಕೋರಕಾಕಾರಂ ಮಧ್ಯೇ ದೈರ್ಘ್ಯಂ ಪ್ರಕಲ್ಪಯೇತ್।
ಆರಾರ್ತಿಕಮಿದಂಖ್ಯಾತಂ ಮಧಿದೇವ್ಯೋ ಧನಂಜಯಃ ।
ಪಂಚಾರ್ತಿಕ ಮಥೋವಿಪ್ರಾಃ ಕಲ್ಪಯೇ ದುಕ್ತಮಾರ್ಗತಃ।
ಏಕಾಂಗುಲಂ ಸುವಿಸ್ತಾರಂ ಪಂಚವಕ್ತ್ರ ಸಮನ್ವಿತಮ್
ದ್ವಿಪಾದಾಂದೋಳದಂಡಾಢ್ಯಂತದೀಶಸ್ತು ಗಣಾಧಿಪಃ ।
ಪ್ರಸ್ಥಂ ಪ್ರಗ್ಯಾರ್ಧಮಾನಂತು ಪೂರಿತಂ ತಾಮ್ರಪತ್ರಕಂ।
ಕುಂಭಾರ್ತಿಕಮಿತಿಖ್ಯಾತಂ ದೀಪಸ್ಕಂಠಮಧ್ಯತಃ ।
ಕುಂಭಾಮೂಲೆ ಸ್ಥಿತೋಬ್ರಹ್ಮ ಮಧ್ಯೇ ಚೈವ ಜನಾರ್ಧನಃ ।
ಅಗ್ರೇ ಈಶಸ್ತ್ವಿತಿ ಖ್ಯಾತಾಃ ಕುಂಭರ್ತೇರಧಿಪಾಃ ಕ್ರಮಾತ್ ।
ಪ್ರದೇಶಮಾತ್ರಂ ತಾಮ್ರೇಣ ವೃತ್ತಂತುಪರಿಕಲ್ಪಯೇತ್ ।
ವಿಕಸಿತ್ಪಂಕಜಾಕಾರಂ ಮಧ್ಯೇ ಪತ್ರಾಷ್ಟಕಾನ್ವಿತಮ್।
ಮಂಗಳಾರ್ತಿಕಮೇದಂ ನ್ಯಾನ್ನಾಳಾಧಿಶೋ ದಿವಾಕರಃ।
ಶಿವಸ್ಯಾಗ್ರೇ ತ್ರಿಪಾದೂರ್ಧ್ವೇ ವಿನ್ಯಸ್ಯೇತ್ಪಾತ್ರ ಪಂಚಕಮ್।
ತೇಷುಸಂಪೂಜಯೇದ್ವಿಪ್ರಾ ಸದ್ಯೋಜಾತಾದಿ ದೇವತಾಃ ।
(ಶೈವಾಗಮಸಾರೇ ಪೇ. ೯೪)

ಕುಂಭಾರ್ತಿ - ಆಕಾರಂ-ಮಾನಂ - (ಘಟದೀಪಮ್)

ಹೇಮಾದಿ ದ್ರವ್ಯಜಂ ಪಾತ್ರಂ ಷಡ್ವಿಂಶಾಂಗುಲ ವಿಸ್ತೃತಮ್ ।೧೦೮೨
ಕೃತ್ವಾಸುವೃತ್ತಂ ತನ್ಮಧ್ಯೇ ಪದ್ಮಂ ಕುರ್ಯಾತ್ ಸಕರ್ಣಿಕಮ್।
ಪತ್ರಾಷ್ಟಕೇ ಕರ್ಣಿಕಾಯಾಂ ದೀಪಗರ್ತಂ ಪ್ರಕಲ್ಪಯೇತ್।
ದೀಪಾನ್ಪ್ರಜ್ವಾಲಯೇತ್ತತ್ರ ಷಡ್ವಂಗುಲ ಸಮುಚ್ಛ್ರಿತಾನ್।
ಪಾರಮೇಶ್ವರ ಸಂ.೧೪

ಸಂಪೂರ್ಣ ಮಂಭಸಾಕುಂಭಂ ಹೇಮಾದಿ ದ್ರವ್ಯ ನಿರ್ಮಿತಮ್।
ಸ್ರಗ್ವಿಣಂ ಸಾಪಿದಾನಂಚ ಮುಖೇಶ್ವತ್ಥದಲೈರ್ಯುತುಮ್।

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಅಕ್ಷತ್ತೈರರ್ಚಿತಂ ಗಂಧವಾರಿಣಾಭ್ಯೂಷಿತಂ ತದಾ । ೭೮
ಚತುಷ್ಷಷ್ಟ್ಯಂಗುಲೋತ್ಸೇಧಂ ದೀಪವರ್ತಿ ವಿರಾಜಿತಂ ।
ಪಾದ್ಮ ಸಂ ಚರ್ಯ ೬

ಕುಂಭಸ್ಯಗಳಮೇವ್ಪೋಕ್ತಂ ಪದ್ಮಾಕಾರಂ ಸಕೇಸರಮ್।
ಶಿವಾರ್ಥತೋಯಸಂಪೂರ್ಣಾಂಚ ಸಮನೇತ್ರಾಂ ಸಮಾಕೃತಾಮ್।
ನಾರಾಯಣ ಸಂ. ೧೬

ಕುಂಭಸ್ಯ ವಕ್ತ್ರೋಪರಿಚೋರ್ಧ್ವನ್ ಪದ್ಮಂಮಧ್ಯನಾಳಂನವೈರ್ದಳೈಃ ಕರ್ಣಿಕ।
ಶೈವಾಗಮಸಾರೇ- ಅರ್ಚನಾಪಟಲಃ-

ಚಾಮೀಕರೇ ರೌಪ್ಯಮಯೇಚ ತಾಮ್ರೇ ಕುಂಭಾರ್ತಿಕೇ ಲಕ್ಷಣಮೇವ ಮೀರ್ಯತೇ - ಕುಂಭಸ್ಯವಕ್ತ್ರೋಪರಿ ಚೋರ್ಧ್ವ ಪದ್ಮಂನವೈರ್ದಳೈ ಕರ್ಣಿಕ ಮಧ್ಯನಾಳಮ್ - ಶೈವಾಗಮಸಾರೇ

ಸೌವರ್ಣರಜತೇಥ ಪಿತ್ತಳೆವರೇಸ್ತಾಮ್ರ ಕಾಂಸ್ಯೇನವಾ।
ಕೃತ್ವಾಬಾಧಕ ಪೂರ್ಥಕುಷಿತಮಧಃ ಪಾದಂಚ ವೇದಾಂಗುಲಮ್।
ತನ್ನಾಳಾತ್ಪೃಥಿತಾಂಗುಲಾರ್ಕ ಗುಣಿತಂ ಪ್ರಾದೇಶ ವೃತ್ತಂತಲಮ್।
ಬತ್ವಾರ್ಯಂಗುಲ ವಿಸ್ತ್ರತಂ ಚ ವದನಂ ಚೋಷ್ಟಂವಳಿಭ್ಯಾಯುತಂ ।
ಕಂಠಂ ದ್ವ್ಯಂಗುಲ ಮುನ್ನತಂ ತದಥರೇ ರೇಖಾತ್ರಯಂ ಸಾಕ್ಷತಮ್।
ವಕ್ತ್ರಾಬ್ಧದನಮಷ್ಟಪತ್ರ ಸಹಿತಂ ಭೂತಾಖ್ಯನಾಳಾಯುತಮ್।
ಏಕ್ಮಂ ವಾ ದಳಮಧ್ಯಕಂ ಚ ಚಷಕಂ ಭಾಗಾಂಗುಲಂ ಚೋನ್ನತಂ ।
ಕೃತ್ವೈವಂ ಘಟದೀಪ ವದಾ ನವಿಭವಾ ನ್ನಿತ್ಯಂ ಶ್ರೀಯಾಮೋದತೇ।
ಅರ್ಚನಾತಿಲಕಂ ೧೮

ದೇವಸಾಸೀ ಗಣಾನ್ಸರ್ವಾನ್ ಸರ್ವಾಲಂಕಾರ ಶೋಭಿತಾನ್ ।
ಮಹಾನಸಂ ದ್ವಾರಮಾಸಾದ್ಯ ದೀಪಾನ್ ಪ್ರಜ್ವಾಲಯೇದ್ಬಹೂನ್।
ಸರ್ವೇಪತ್ರಕರಾದಿ ಪ್ರಗಚ್ಛೇಯುರ್ದೇವ ಸನ್ನಿಧೌ।
ಶ್ರೇಣೀಬದ್ಧಾಸ್ತಥಾಸರ್ವೇ ಗೀತವಾದ್ಯ ಪುರಸ್ಸರಂ । ೩
ಅನಿರುದ್ಧ ಸಂ. ೨೬

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ತಥಾವಿಧಾನಿ ಪಾತ್ರಾಣಿ ಕರ್ೈರುದ್ಧೃತ್ಯಯೋಷಿತಃ ।
ಕಲ್ಯಾಣ ವಸ್ತ್ರಧರಣಾ ನಿರ್ಗತಾಶ್ಚ ಮಹಾನಸಾತ್।
ಶ್ರೇಣೀಬಂಧಾಃ ಪುರೋಗೀತ ನೃತ್ತವಾದ್ಯ ಸಮನ್ವಿತಾಃ ।
ಅನ್ತಿಕೇ ದೇವದೇವಸ್ಯ ವಿನ್ಯಸೇಯುರ್ಮಹೀತಲೇ ।೭೨।

ಪಾದ್ಮ ಸಂ.ಚರ್ಯಾ ೫

ವೇಶ್ಯಾ ವಧೂ ದ್ರಾವಿಡ ವೇಷಯುಕ್ತಾ ಪ್ರಜ್ವಾಲ್ಯ ಕುಂಭಂ ಪ್ರಮದಾಸ್ತಿತಾಚ

ಶೈವಾಗಮಸಾರೇ-

ವೇಶ್ಯಾಂಗನಾ ದ್ರಾವಿಡವೇಷಧಾರೀ ಪ್ರಜ್ವಾಲ್ಯ ನೀರಾಜನ ಕುಂಭವಾರೀ।
ದೀಪಂ ಮೌನವ್ರತಸ್ಥ ನವರಂಗ ಮಧ್ಯೇ ಸಂಸ್ಥಾಪಯೇತ್ ।
ಪ್ರವರ್ತತೇ ವೇದಘೋಷೇಕಾಂಡ ವಸ್ತ್ರೈವ್ಯಪ್ರೋಹಿತೇ ।
ಸೇವಾರ್ಥಂ ವೈಷ್ಣವಾದೀನಾಂ ಘಟದೀಪಾರ್ಚನಂ ಚರೇತ್ । ೪೨೪
ಘಟದೀಪಂ ಸಮುದ್ದೀಪ್ಯ ದೇವದಾಸ್ಯೋ ಮಹಾನಸಾತ್।
ಆಧಾರ ಪಾತ್ರೇ ದೇವಸ್ಯ ಸ್ಥಾಪಯೇಯುಃ ಪುರೋಭುವಿ । ೪೨೪

ಶ್ರೀವಿಷ್ಣುತಿಲಕ ಸಂ.೩

ಪ್ರದೀಪಂ ಮಲ್ಲಕೇ ಕೃತ್ವಾ ಸಕುಂಭಂ ವಿನಿವೇಶಯೇತ್।
ಅಗ್ರತೋ ದೇವ ದೇವಸ್ಯ ಸದಾಧಾರೋಪರಿಸ್ಥಿತಮ್। ೧೦೧೩

ಪಾರಮೇಶ್ವರ ಸಂ.೧೦

ಆಧಾರಪಾತ್ರೇ ದೇವಸ್ಯಸ್ಥಾಪಯೇಯುಪುರೋಭುವಿ। ೪೨೪

ಶ್ರೀವಿಷ್ಣುತಿಲಕ ಸಂ.೩

ಸರ್ವವಾದ್ಯ ಸಮಾಯುಕ್ತಂ ತಂ ದೀಪಂ ಪರಿಗೃಹ್ಯಚ ।
ಶಿಷ್ಯೋವಾ ಗಣಕೋವಾಪಿ ದೇವಾಗಾರಂ ಪರಿತ್ಯಚ ।೧೯೦
ವಿಸೃಜೇ ತಂ ದೇವಂ ಪೃಷ್ಠೇ ಯುಧಾದಿಪಸ್ಯಚ ।
ತದ್ದೀಪ ದರ್ಶನಾನ್ನೃಣಾಂ ಆಯು ಶ್ರೀ ಪುತ್ರ ಸಂಪದಃ ।
ಸಂಭವನ್ತಿ ನ ಸಂದೇಹೋ ವಿಷ್ಣೋರ್ನೀರಾಜನಂ ಹಿ ತತ್।

ಪ್ರಕೀರ್ಣಾಧಿಕಾರ. ೧೮

ಅರ್ಚನಾ ನವನೀತಂ ಪೇ.೭೬

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ದೀಕ್ಷಿತರಲ್ಲದ ಮತ್ತು ದೀಕ್ಷಿತರಾದ ದೇವದಾಸಿಗಳೆಲ್ಲರೂ (ದ್ರಾವಿಡ ವೇಷದಿಂದ (ಒಳಕಚ್ಚೆ)ಮತ್ತು ಸರ್ವಾಲಂಕಾರ ಶೋಭಿತರಾಗಿ ಮಹಾನಸ (ಪಾಕಶಾಲೆ)ದ್ವಾರವ ಒಳಗೆ ಬಂದು ಅನೇಕ ವಿಧವಾದ ಆರತಿ ಮತ್ತು ಕುಂಭ ದೀಪವನ್ನು ಹತ್ತಿಸಿ ಪಂಕ್ತಿಯಾಗಿ ನಿಂತು, ಎರಡು ಕಡೆಯೂ ಶ್ರೇಣೀರೂಪದಲ್ಲಿ ಗೀತವಾದ್ಯ ಸಮೇತರಾಗಿ ಬರುವರು-ಬರಬೇಕು.

ಅವರು ಕೈಯಲ್ಲಿ ವಿವಿಧ ದೀಪಪಾತ್ರೆಗಳನ್ನು ಎತ್ತಿಹಿಡಿದಿರುವರು. ಕಲ್ಯಾಣ ವಸ್ತ್ರಗಳಿಂದ ಅಲಂಕೃತರಾಗಿ (ಕಲ್ಯಾಣ ವಸ್ತ್ರ-ಒಳಕಚ್ಚೆ-ದ್ರಾವಿಡವೇಷ) ಮಹಾನಸ (ಪಾಕಶಾಲೆ) ದಿಂದ ಶ್ರೇಣೀಬದ್ಧರಾಗಿ ಮೌನವ್ರತರಾಗಿ ಅವರ ಮುಂದೆ ಗೀತ ನೃತ್ಯವಾದ್ಯಗಳಿಂದ ಕೂಡಿ ಹೊರಟು ಬಂದು ದೇವರ ಮುಂದೆ ನವರಂಗದಲ್ಲಿರುವ ತ್ರಿಪಾದ ಪೀಠದ ಮೇಲಿಡಬೇಕು.

ಸರ್ವವಾದ್ಯಗಳೂ ಭೋರ್ಗರೆಯುತ್ತಿರುವಾಗ ಶಿಷ್ಯ-ಪರಿಚಾರಕ, ಅಥವಾ ಗಣಿಕೆಯರು-ದೇವದಾಸಿಯರು ಮಹಾನಸದಿಂದ ದೀಪವನ್ನು ತಂದು ದೇವರ ಮುಂದೆ ಇಡುವರು. ಆ ದೀಪವನ್ನು ದರ್ಶಿಸಿದವರು ಆಯು ಶ್ರೀ ಪುತ್ರಾದಿಗಳನ್ನು ಹೊಂದುವರು.

ಹೊರಕಚ್ಚೆ (ಮಹಾರಾಷ್ಟ್ರರಂತೆ) ಎಂದು ಅಷ್ಟದಿಕ್ಪಾಲಕರು ವಿಮಾನ ದೇವತೆಗಳು ಪ್ರಾಕಾರ ದೇವತೆಗಳಿಗನುಸಾರವಾಗಿ(ನೃತ್ತ ಗೀತ ವಾದ್ಯಗಳಿಗನುಸಾರ ವಾಗಿ)

ಘಟದೀಪ ದರ್ಶನ - ಫಲ

ವೇಶ್ಯಾವಧೂ ದ್ರಾವಿಡ ವೇಷಯುಕ್ತಾ ಪ್ರಜ್ವಾಲ್ಯ ಕುಂಭಂ ಪ್ರಮದಾಸ್ಸಿ ತಾಚ।-ಶೈವಾಗಮಸಾರೇ.

ವೇಶ್ಯಾಂಗನಾ ದ್ರಾವಿಡ ವೇಷಧಾರೀ ಪ್ರಜ್ವಾಲ್ಯ ನೀರಾಜನ ಕುಂಭಧಾರೀ
ದೀಪಂ ಮೌನವ್ರತಸ್ಥಾ ನವರಂಗ ಮಧ್ಯೇ ಸಂಸ್ಥಾಪಯೇತ್। ಸಂ.?

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಘಟದೀಪಂತು ಯಃ ಪಶ್ಯೇತ್ ದೇವಸ್ಯ ಪುರತಃ ಸ್ಥಿತಃ ।೪೨೬
ಸಪ್ತಜನ್ಮಾರ್ಜಿತಂ ಪಾಪಂ ತತಕ್ಷಣಾದೇವನಶ್ಯತಿ।

ಶ್ರೀವಿಷ್ಣುತಿಲಕ ಸ೦.೬

ತದ್ದೀಪದರ್ಶನಾನ್ನೃಣಾಮ್ ಆಯು ಶ್ರೀ ಪುತ್ರಸಂಪದಃ ।
ಸಂಭವನ್ತಿ ನ ಸಂದೇಹೋ ವಿಷ್ಣೋರ್ನೀರಾಜನಂ ಹಿ ತತ್।

ಪ್ರಕೀರ್ಣಾಧಿಕಾರಃ ೧೮

ಅರ್ಚನಾತಿಲಕಂ ೮ ಅರ್ಚನಾನವನೀತಂ ಪೇ.೭೬
ಸಾಲೋಕ್ಯಾದಿ ಮಾಪ್ನುವಂತಿ ಹಿ ಪದಂ ಸಂದರ್ಶನಾತ್ಸಾಧಕಃ ।
ಅರ್ಚನ ನವನೀತಂ ಪೇ.೭೬ ಪ್ರಕೀರ್ಣಾಧಿಕಾರ ೧೮

ದೇವರಿಗೆ ಮಹಾಮಂಗಳಾರತಿ ನಡೆಸಲು ವೇಶ್ಯಾವಧು (ಆಗಮ ರಾಸ್ತ್ರಾನುಸಾರ ವಾಗಿ ದೀಕ್ಷೆಯನ್ನು ಪೊಂದಿದ ಅಲಂಕಾರದಾಸಿ=ದೇವದಾಸಿ)
ದ್ರಾವಿಡವೇಷವನ್ನು ಧರಿಸಿ (ಒಳಕಚ್ಚೆ) ಮೌನವ್ರತದಿಂದ ಕುಂಭಾರತಿಯನ್ನು ಹತ್ತಿಸಿ ಪಾಕಶಾಲೆಯಿಂದ ತಂದು ನವರಂಗದ ಮಧ್ಯ (ದೇವರ ಮುಂದೆ) ತ್ರಿಪಾದ ಪೀಠದ ಮೇಲೆ ಇಟ್ಟಿರುವ ಘಟದೀಪವನ್ನು ಯಾರು ನೋಡುವರೋ ಅವರು ಮಾಡಿರುವ ಸಪ್ತ ಜನ್ಮಾರ್ಜಿತ ಪಾಪಗಳೆಲ್ಲವೂ ನಾಶವಾಗಿ ಅವರಿಗೆ ಆಯು-ಶ್ರೀ-ಸಂತಾನ ವೃದ್ಧಿಯುಂಟಾಗುವುದು. ಅಂತ್ಯದಲ್ಲಿ ಮೋಕ್ಷವನ್ನು ಪೊಂದುವರು.

ಕುಂಭ ಅಧಿಷ್ಠಾನ ದೇವತಾಃ

೧.ಕುಂಭಸ್ಯಾಭಿಮುಖೇರುದ್ರಂ ಮಧ್ಯೇ ವಿಷ್ಣುಂ ನ್ತ ಥೈವಚ ।
ಪೃಷ್ಠೇ ಪ್ರಜಾಪತಿಃ ಪ್ರೋಕ್ತಂ ಕುಕ್ಷಿರಗ್ರೇ ಸರಸ್ವತೀ ।
ಪಾರ್ಶ್ವಯೋಸ್ಸರ್ವದೇವಾಂಶ್ಚ ದೀಪಕುಂಭಾಧಿದೇವತಾಃ ।

ಪಾಂಚರಾತ್ರ ಸಂಗ್ರಹ

೨. ವರಾಹಂ ನಾರಸಿಂಹಂಚ ವಾಮನಂ ಚ ತ್ರಿವಿಕ್ರಮಮ್ ।೧೮೭।
ದಲೇಷ್ವಭ್ಯರ್ಚ್ಯ ವಿಧಿನಾ ದೀಪಲಕ್ಷ್ಮೀಂ ಸಮರ್ಚಯೇತ್ ।
ವರ್ತಿಕಾಯಾಂ ಶ್ರಿಯಂಚೈವ ಧೂಮೇಽಭ್ಯರ್ಚ್ಯ ಭವಂ ತಥಾ । ೧೮೮
ಪ್ರೋಕ್ಷ್ಯೋಪಚಾರೈರಭ್ಯರ್ಚ್ಯ ಪುಷ್ಪಗನ್ಧಾದಿಭಿಃ ಕ್ರಮಾತ್।
ಶುಭ್ರಾ ಜ್ಯೋತಿರಿತಿ ಪ್ರೋಚ್ಯ ಕರಾಭ್ಯಾಂ ಪರಿಗೃಹ್ಯಚ । ೧೮೯

ಪ್ರಕೀರ್ಣಾಧಿಕಾರಃ ೧೮

ಅರ್ಚನಾ ನವನೀತಂ ಪೇ.೭೭

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

೩.ತತ್ಕುಕ್ಷೌ ವರುಣಂ ಕಮಲಜಂ ಚಂದ್ರಂ ಓಧಾನೇsರ್ಚಯೇ ।
ಜ್ವಾಲಾಗ್ರೇಚ ಸರಸ್ವತೀಂ ಚ ವಿಮಲಾಂ ದೀಪೇಶ್ರಿಯಂಚಾರ್ಚಯೇತ್।
ಶುಭ್ರೇಜ್ಯೋತಿದುದೀರ್ಯ ಪಾಣಿಯುಗಳೇನೋದ್ಧೃತ್ಯ ನೇತ್ರಾಂತಕಂ।
ಅರ್ಚನಾ ತಿಲಕಂ ೧೭

೪. ದೀಪಪಾತ್ರಾದಿದ್ದೈವತ್ಯಂ ಮುಖಂಪಾವಕದೇವತಾ।
ಪಾದಯೋಶ್ಚಂದ್ರಸೂರ್ಯೌಚ ದೀಪಾನಾಮಧಿದೇವತಾಃ ।
ಪಂಚರಾತ್ರ ಸಂಗ್ರಹಃ

೫. ವಾರಾಹಂ ನಾರಸಿಂಹ ವಾಮನ ಮಥೋತ್ರೈವಿಕ್ರಮಂ ದಿಕ್ಷುಚ ।
ತನ್ಮಧ್ಯೇ ಶ್ರಿಯಮಭ್ಯರ್ಚ್ಯ ಗಂಧ ಕುಸುಮೈರ್ಧೂಪೈಶ್ಚ ದೀಪೈರಪಿ ।
ಅರ್ಚನಾ ತಿಲಕಂ ೮

೬. ಕುಂಭಮೂಲೇ ಸ್ಥಿತೋಬ್ರಹ್ಮಾ ಮಧ್ಯೇ ಚೈವ ಜನಾರ್ದನಃ।
ಅಗ್ರೇ ಈಶಸ್ತ್ವಿತಿ ಖ್ಯಾತಾಃ ಕುಂಭಾರ್ತೇರಧಿಪಾಃ ಕ್ರಮಾತ್!
ಶೈವಾಗಮಸಾರೇ ಪೇ. ೯೪

1. ಕುಂಭದ ಅಭಿಮುಖ-ರುದ್ರದೇವತೆ
ಕುಂಭದ ಮಧ್ಯೆ ವಿಷ್ಣು
ಕುಂಭದ ಪೃಷ್ಠೇ ಪ್ರಜಾಪತಿ
ಕುಂಭದ ಕುಕ್ಷಿ ಸರಸ್ವತೀ
ಕುಂಭದ ಪಾರ್ಶ್ವಭಾಗದಲ್ಲಿ ಸರ್ವದೇವತೆಗಳು

2. ದಳಭಾಗದಲ್ಲಿ ಕ್ರಮವಾಗಿ ಪೂರ್ವದಿಂದ ವಾರಾಹ, ನಾರಸಿಂಹ, ವಾಮನ, ತ್ರಿವಿಕ್ರಮ ದೇವತೆಗಳು ನಾಲ್ಕು ದಿಕ್ಕುಗಳಲ್ಲೂ, ಮಧ್ಯ ದೀಪಲಕ್ಷ್ಮಿಯನ್ನೂ ವರ್ತಿಕೆಯಲ್ಲಿ ಶ್ರೀದೇವಿಯನ್ನೂ, ಧೂಮಭಾಗದಲ್ಲಿ ಭವದೇವತೆಯನ್ನೂ ಆಹ್ವಾನಿಸಿರುವರು.

3. ಕುಕ್ಷಿಭಾಗದಲ್ಲಿ ವರುಣದೇವತೆಯೂ, ಲಕ್ಷ್ಮಿಯೂ, ಚಂದ್ರನೂ ಜ್ವಾಲಾಗ್ರದಲ್ಲಿ ಸರಸ್ವತಿಯೂ, ಆವಾಹಿತರಾಗಿರುವರು.

4. ಮುಖಭಾಗದಲ್ಲಿ ಪಾವಕ ದೇವತೆಯೂ, ಪಾದಭಾಗದಲ್ಲಿ ಚಂದ್ರ, ಸೂರ್ಯರೂ ದೀಪಕುಂಭದ ಅಧಿದೇವತೆಗಳಾಗಿರುವರು.

5. ವಾರಾಹ, ನಾರಸಿಂಹ, ವಾಮನ, ತ್ರಿವಿಕ್ರಮ ಈ ದೇವತೆಗಳು ಕ್ರಮವಾಗಿ ಪೂರ್ವದಿಂದ ನಾಲ್ಕು ದಿಕ್ಕುಗಳಲ್ಲಿಯೂ(ಭಾಗಗಳಲ್ಲಿ) ಮಧ್ಯೇ ಶ್ರೀಮಹಾಲಕ್ಷ್ಮಿ ಯೂ, ಆವಾಹಿತರಾಗಿರುವರು.

6. ಕುಂಭಮೂಲದಲ್ಲಿ ಬ್ರಹ್ಮನೂ, ಮಧ್ಯಭಾಗದಲ್ಲಿ ಜನಾರ್ಧನನೂ. ಭಾಗದಲ್ಲಿ ಈಶನೂ ಕುಂಭದ ಅಧಿದೇವತೆಗಳಾಗಿರುವರು.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಆಧಾರೇಷು ತತಃ ಪಾತ್ರಾಣ್ಯರ್ಚಯೇದ್ವಿಶ್ವವಿದ್ಯಯಾ । ೭೨
ಅರ್ಚನಾವಿಶ್ವಮಂತ್ರೇಣ ಘಟದೀಪಸ್ಯ ಪದ್ಮಜ ।
ಪಾದ್ಮ ಸಂ.ಚರ್ಯಾ ಶ್ರೀವಿಷ್ಣುತಿಲಕೇ
ದೀಪಮಾರೋಪಯೇನ್ಮಂತ್ರೀ ಉದ್ದೀಪ್ಯಸ್ಯೇತಿ ಮಂತ್ರತಃ ।
ಅನಿರುದ್ಧ ಸಂ.

ನವರಂಗದಲ್ಲಿರುವ ಆ ನೀರಾಜನ ಪಾತ್ರವನ್ನು ವಿಶ್ವ ವಿದ್ಯೆಯಿಂದ (ವಿಶ್ವಮಂತ್ರ) ಅರ್ಚಿಸಬೇಕು ಅಥವಾ ಉದ್ದೀಪ್ಯಸ್ಯ ಮಂತ್ರದಿಂದ ಅರ್ಚಿಸಬೇಕು.

ಆಚಾರ್ಯೋಧ್ರುವಬೇರಾದೌಷಡಂಗನ್ಯಾಸಮಾಚರೇತ್ ।
ಇಷ್ಟ್ವಾಚದೇವಮರ್ಘ್ಯಾದ್ಯೈ ದೀಪಪಾತ್ರಾಣಿ ಪೂಜಕಃ।
ಉದ್ಧೃತ್ಯ ಭ್ರಾಮಯೇದ್ದೇವ ಮಾಪಾದತಲಮಸ್ತಕಂ ।
ಗುಣಮಂತ್ರೈಸ್ತ್ರಿಭಿಃ ಪಾತ್ರಾಣ್ಯನುಯೋಷಿತ್ಸು ನಿಕ್ಷಿಪೇತ್।
ಅರ್ಚನಾಮೇವ ಮನ್ಯಾಸಾಂ ಪಾತ್ರಾಣ್ಯೇಕೈಕಶಃ ಕ್ರಮಾತ್।
ಭ್ರಾಮಯೇನ್ಮೂಲಬೇರಸ್ಯ ಯದ್ವಾಸರ್ವಾಣಿ ಪದ್ಮಜ ।
ದೀಪಂನೀರಾಜನಂ ದೇವ್ಯೋ ಶ್ರೀಭೂಮ್ಯೋರಿಷ್ಯತೇಪೃಥಕ್
ಪಾದ್ಮ ಸಂ.ಚರ್ಯ ೫

ಷಡಂಗನ್ಯಾಸಂ ಕೃತ್ವಾ ಭ್ರಾಮಯೇದ್ದೇವ ಮೂರ್ಧನಿ ।
ದಕ್ಷಿಣಂಪಾದ ಮಾರಭ್ಯ...............ಅನಿರುದ್ಧ ಸಂ. ೨೬
ಪ್ರಾಗನ್ನಪಿ ಭ್ರಮಣಾದಸ್ತೇ ಧೂಮೋತ್ಥ ಭಸ್ಮನ್ । ೧೦೭೬
ರಕ್ಷಯಾ ಸಂಪುಟೀಕುರ್ಯಾದೇವಂ ನೀರಾಜನಂದ್ವಿಜ ।
ಪಾರಮೇಶ್ವರ ಸಂ.೧೫

ಇಲ್ಲಿ ಮೂಲಬೇರ ವಿಷಯದಲ್ಲಿ ಷಡಂಗನ್ಯಾಸ ಹೇಳಿರುವರು. ಗುಣಮಂತ್ರ, ಶ್ರೀರಾಮ ಮಂತ್ರ ಇತ್ಯಾದಿಗಳನ್ನು ಹೇಳಿರುವರು. ಅರ್ಚಕರು. ಆಗಮಿಕರು ಅವರ ಹಿರಿಯರು ಹೇಳಿರುವ ಪ್ರಯೋಗದಂತೆ ಗಂಧ ಪುಷ್ಪಾದಿಗಳಿಂದ ಅರ್ಚಿಸಿ ಭಗವಂತನಿಗೆ ಮೂರಾವೃತಿ ಪ್ರದಕ್ಷಿಣೆಯಾಗಿ ಆರತಿ ಮಾಡಬಹುದು.

ಮಹಾಮಂಗಳಾರತಿ- ನೀರಾಜನ-ಅಡಕಾರತಿ-(ನಕ್ಷತ್ರಾರತಿ)

ಶ್ರೀಭೂಮಿಸಹಿತಂ ದೇವಮಲಂಕಾರೈರಲಂಕೃತಮ್।
ಮಹಾನೃತಂ ದರ್ಶಯಿತ್ವಾ ದೇವಂ ನೀರಾಜನಂ ಚರೇತ್ । ೫
ಸಹಸ್ರಂ ವಾ ನಾತದರ್ಧಂ ವಾ ತದರ್ಧಂವಾ ದೇಶಿಕಃ ।

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಶತಂವಾಪಿ ತದರ್ಧಂವಾ ತದರ್ಧಂ ವಾಪಿ ಕಾರಯೇತ್ ।
ಸರ್ವಪಾತ್ರಕರಾಶ್ಚೈವ ತಿಷ್ಠೇಯುರ್ದೇವ ಸನ್ನಿಧೌ।
ಆಭಾರ್ಣೈ ಸಮಲಂಕೃತ್ಯ ಉತ್ತರೀಯೋಷ್ಣೀಷಭೂಷಣೈಃ ।

ಅನಿರುದ್ಧ

ಸಂ.೨೬

ನಾಳದಂಡಂ ಹಸ್ತಮಾನಂ ತ್ರಿಪಾದ್ವಾ ದ್ವಿಪಾದಕಂ ।
ಪ್ರೋತಾನಾಂ ದೀಪಪಾತ್ರಾಣಾಂ ಚಕ್ರಾಕಾರೇಣ ಶೋಭನಂ ।
ಸಪ್ತಾವಾ ಪಂಚವಾ ತ್ರಿರ್ವಾ ಕ್ರಮಹೀನಂತು ವೈಭವೇತ್ ।
ಪ್ರಥಮೋ ದೀಪಪಾತ್ರೇಚ ವರ್ತಿಸ್ಥಾನಂ ಶತಂಭವೇತ್
ದ್ವಿತೀಯಾದಿಷು ಹೀನಂಸ್ಯಾದಂತೇ ಕುಮುದ ಕುಟ್ಮಲಂ ।
ದೀಪಪಾತ್ರಮಿದಂ ಪ್ರೋಕ್ತಂ .... ಸಂ. ?
ಒಹುದೀಪ ಸಮಾಯುಕ್ತಂ ನೀರಾಜನ ಪರಿಸ್ಥಿತಮ್ ।೭೪
ದ್ವಯಂ ಚತುರ್ಥಂ ಪುಟಕಂವಾ ಅಷ್ಟಕಂ ದಶಕಂ ತು ವಾ ।
ದ್ವಾದಶಂ ಷೋಡಶಂ ವಾಪಿ ವಿಂಶಕಂ ತ್ರಿಂಶಕಂ ಮಥಾಪಿವಾ। ೭೫

ಅನಿರುದ್ಧ ಸಂ. ೧೭

ದ್ವಾತ್ರಿಂಶದ್ವರ್ತಿ ಸಂಯುಕ್ತಂ ಷೋಡಶ ದ್ವಾದಶಾಷ್ಟವಾ ।
ಮಧ್ಯೇ ದೀಪ ಸಮಾಯುಕ್ತಂ ದೀಪಲಕ್ಷಣ ಮುಚ್ಯತೇ ।
ಏಕವರ್ತಿ ದ್ವಿವರ್ತಿವಾ ಪಂಚಸಪ್ತ ನವಾಥವಾ ।
ಮಧ್ಯಮಾಽಧಮ ದೀಪಸ್ತು ಸಪ್ತಾಂಗುಲ ಸಮುಚ್ಛ್ರಯಃ ।

ಅರ್ಚನಾ ನವನೀತಂ ಪೇ.೭೪

ಪಂಚದೀಪಂ ನಿವೃತ್ಯಾನೇಕ ದೀಪಂ ಸರಸ್ವತೀ ।
ಅಷ್ಟದೀಪಂತು ಶಕ್ತ್ಯಾಚ ದ್ವಾದಶಂ ಕೇಶವಾರ್ಚನೇ ।

ತ್ರೈಲೋಕ್ಯ ಮೋಹನ ಸಂ.

ಮೂಲ ದೇವರಮುಂದೆ ಉತ್ಸವ ದೇವರು ಉಭಯನಾಚ್ಚಿಮಾರು ಶ್ರೀ ಭೂಮಿಯರೊಂದಿಗೆ ಬಿಜಯಮಾಡಿಸಿರುತ್ತಾರೆ. ಮಹಾಮಂಗಳಾರತಿ ಕಾಲದಲ್ಲಿ ಸಕಲವಾದ್ಯಗಳೂ, ಮಹಾನೃತ್ತವು ನಡೆಯುತ್ತಿರುವಾಗ ವಿವಿಧವರ್ತಿ ದೀಪಾಕೃತಿಗಳಿಂದ ಆರತಿ ಮಾಡಬಹುದು. ಅಡಕಾರತಿ ಎನ್ನುವುದು 1, 3, 5, 7 ಚಕ್ರಾಕಾರದ ತಟ್ಟೆ ಒಂದರ ಮೇಲೆ ಒಂದು ಇರಬಹುದು. ಮಧ್ಯೆ ಅಂತರ ಬಿಟ್ಟಿರಬೇಕು. (ಚಿತ್ರದಲ್ಲಿ ಕಾಣಬಹುದು) ಈ ತಟ್ಟೆಗಳಲ್ಲಿ ೧೦೦೦-೫೦೦, ೨೫೦ ವರ್ತಿದೀಪಗಳಿರಬಹುದು ಅಥವಾ ೫೦೦, ೨೫೦, ೧೨೫ ಇರಬಹುದು ೫೦೦, ೧೦೦, ೫೦, ೨೫ ಇರಬಹುದು..

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

2, 4, 6, 8, 10, 12, 16, 20, 30 ವಿವಿಧಾಕಾರದಲ್ಲಿರಬಹುದು. 32, 24, 20, 16, 12, 8, 1, 2, 5, 7, 9 ಈ ರೀತಿ ಇರಬಹುದ್ದು, ಈ ರೀತಿ ವಿವಿಧಾಕಾರದಲ್ಲಿ ಆರತಿ ಮಾಡಬಹುದು. ಒಂದು ದೀಪ ಸರಸ್ವತಿಗೂ ಶಕ್ತಿದೇವತೆ ಯಾಗಿದ್ದಲ್ಲಿ (ಪಾರ್ವತಿ, ದುರ್ಗಾ, ಚಂಡಿ, ಚಾಮುಂಡಿ, ಕಾಳಿ ಇತ್ಯಾದಿ) ಎಂಟು ವಿಧ ದೀಪದಿಂದಲೂ ಕೇಶವ ದೇವರಿಗೆ (ಮಹಾ ವಿಷ್ಣು) ೧೨ ವಿಧ ದೀಪದಿಂದಲೂ ಆರತಿ ಮಾಡಬಹುದು (ದೃಷ್ಟಿಪರಿಹಾರವು)

ದೀಪಕುಂಭಂತು ಪಾಣಿಭ್ಯಾಂ ಉದ್ಧೃತ್ಯ ಪರಿಚಾರಿಣಾ ।
ದೇವಸ್ಯ ದಕ್ಷಿಣಂ ಪಾದಮಾರಭ್ಯೇತರ ಪಶ್ಚಿಮಂ ।
ಭ್ರಾಮಯೇತ್ ಸರ್ವತೋಂಗಾನಿ ಏಕಧಾ ವಾ ದ್ವಿಧಾತ್ರಿಧಾ ।

ಈಶ್ವರ ಸಂ. ೪
ಶೈವಾಗಮಸಾರೇ

ಘಟದೀಪಂಚ ದೀಪಂಚ ಪಾತ್ರ ಕರ್ಪೂರ ದೀಪಕಂ ।
ಸರ್ವಾನ್‌ದೇವಾನ್ ಸಮಭ್ಯರ್ಚ್ಯ ಚಕ್ರಕಾರಂತ್ರಿನೇಷ್ಟಯೇತ್ ।

ಹಿರಣ್ಯಗರ್ಭಸಂ.

ಆರಭ್ಯದಕ್ಷಿಣಂಪಾದಂ ವಾಮಪಾದಾವಸಾನಕಂ।
ಭ್ರಾಮಯೇತ್ಸರಿತೋಂಗಾನಿ ಏಕಧಾವಾದ್ವಿಧಾತ್ರಿಧಾ ।
ಉಚ್ಚೈರಾದಾಯ ಹಸ್ತಾಭ್ಯಾಂ ಮಾಪಾದತಲಮಸ್ತಕಾನ್ ।

ಪಾದ್ಮ ಸಂ. ಚರ್ಯಾ ೬

ಸೇವಾರ್ಥ ವೈಷ್ಣವಾದೀನಾಂ ಘಟದೀಪಾರ್ಚನಂ ಚರೇತ್

ವಿಷ್ಣು ತಿಲಕೇ

ಲಿಂಗಸ್ಯ ಮೂರ್ಧ್ನಿ ಪೃಶ್ಚತ್ರಿಧಾ ಸಂಭ್ರಾಮ್ಯಕರ್ಮಣಾ ।
ತ್ರಿಪ್ರದಕ್ಷಿಣ ಮಾವೃತ್ಯ ಪಾಣಿಭ್ಯಾಂ ದೇವ ಮೂರ್ದನೀ । ೧೦೭೫

ಪಾರಮೇಶ್ವರ ಸಂ.೧೫
ಅರ್ಚನಾತಿಲಕಂ ೮ ೧೫

ಪ್ರಕೀರ್ಣಾಧಿಕಾರಃ೧೮ಅರ್ಚನಾನವನೀತಂ ಪು.೭೬ಶ್ರೀವಿಷ್ಣುತಿಲಕ ಸಂ. ೩

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ದಕ್ಷಿಣಂಪಾದಮಾರಭ್ಯ ವಾಮಪಾದಂತು ಪಶ್ಚಿಮಂ।
ಖಿಲಾಧಿಕಾರ ೨೨ (೪೪) ಅನಿರುದ್ಧ ನಂ. ೨೬ ೦
ನೀಲಾಜನಂ ತತಃ ಕುರ್ಯಾತ್ ಆಪಾದತಲಮಸ್ತಕವ್ ೯೦೭
ಸಾರಸಮುಚ್ಚಯ ಸಂ. ೩೬
ಶ್ರೀ ವಿಷ್ಣುತಿಲಕ ಸಂ. ೩ (೪೦೭)
ಘಟದೀಪಂ ವಿಶೇಷೇಣ ದೀಕ್ಷಿತೇನ ಪರಿಷ್ಕೃತಂ ।
ಅರ್ಚಯೇದರ್ಘ್ಯಪುಷ್ಪಾದ್ಯೈ ದೇವಂ ತುಷ್ಟ್ವಾಯಥಾಕ್ರಮಮ್।
ಭ್ರಾಮಯೇದ್ದೇವದೇವೇಶಂ ಆಪಾದತಲಮಸ್ತಕಮ್।
ಧೌತವಸ್ತ್ರದ್ವಯೇನೈವ ಶಿರೋಗಾತ್ರಂ ಪ್ರಮಾರ್ಜಯೇತ್ ।
ಅನಿರುದ್ಧ ಸಂ. ೧೭

ದೀಕ್ಷಿತರಾದ ಅರ್ಚಕರು ಘಟದೀಪವನ್ನು ತೆಗೆದುಕೊಂಡು ಅದಕ್ಕೆ ಅರ್ಘ್ಯಪಾದ್ಯ ಆಚಮನೀಯ ಪುಷ್ಪಾದಿಗಳಿಂದ ಮರ್ಯಾದೆಯನ್ನು ಮಾಡಿ ಆಪಾದತಲಮಸ್ತಕ ಆರತಿ ಮಾಡಿದ ಮೇಲೆ ಉಪಚಾರಾರ್ಥವಾಗಿ ಧೌತವಸ್ತ್ರದಿಂದ (ಪ್ಲೋತವಸ್ತ್ರ) ಶಿರೋ ಪಾದಗಳನ್ನು ಒತ್ತಿ ಉಪಚಾರವನ್ನು ತೋರಿಸಬೇಕು.

ದಕ್ಷಿಣಾಂಘ್ರಿ ಸಮಾರಭ್ಯ ವಾಮಪಾದಾವಸಾನಕಮ್ ।
ನೇತ್ರಾನ್ತಂ ದರ್ಶಯೇದ್ದೀಪಂ ಪ್ರಣವಾಕಾರತಃ ಪೃಥಕ್ ।೪೪

ಘಟದೀಪವನ್ನು ತೆಗೆದುಕೊಂಡು ದೇವರ ದಕ್ಷಿಣಪಾದದಿಂದ ಆರಂಭಿಸಿ ವಾಮಪಾದದವರೆಗೆ ಆಪಾದಮಸ್ತಕ ಮೂರಾವೃತ್ತಿ ಪ್ರದಕ್ಷಿಣವಾಗಿ ಆರತಿ ಮಾಡ ಬೇಕು. ಅಥವಾ ದಕ್ಷಿಣಪಾದದಿಂದಾರಂಭಿಸಿ ನೇತ್ರಾನ್ತದವರೆಗೆ ಎತ್ತಿ ಮೂರಾವೃತ್ತಿ ಆರತಿ ಮಾಡಬಹುದು. (ಪ್ರಣವಾಕಾರ ಹೇಗೆ?) ಇಲ್ಲಿ ಪ್ರಣವಾಕಾರ ಪೃಥಕ್ ಎನ್ನುವುದರಿಂದ ಇದು ಪ್ರತ್ಯೇಕವಾದ ಆರತಿಯಲ್ಲಿ ಎಂದರೆ ಅಡಕಾರತಿ (ವರ್ತಿದೀಪ) ಇದು ಕೆಳಗಿನಿಂದ ಮೇಲಕ್ಕೆ 5, 3, 1 ಇತ್ಯಾದಿ ತಟ್ಟೆಗಳಿಂದ ಕೂಡಿದುದಾಗಿರುವುದು ಅದರಲ್ಲಿ ಮೇಲು ಭಾಗದಲ್ಲಿರುವ ಚಿಕ್ಕ ತಟ್ಟೆಯ ಮೇಲೆ ಓಂ ಕಾರ ರೂಪದಲ್ಲಿ ಬರೆದಿರುವುದು. (ಲೋಹರೂಪ) ಓಂ, ಈ ಅಡಕಾರತಿ ಯನ್ನು ಮಾಡಬಹುದು. ಆಪಾದಮಸ್ತಕ ಒಂದಾವೃತ್ತಿ ಮಾಡಬಹುದು. ಎರಡಾವೃತ್ತಿ ಮಾಡಬಹುದು ಮೂರಾವೃತ್ತಿ ಮಾಡಬಹುದು. ಅಥವಾ ದೇವರ ಮುಖ ಮಧ್ಯ ದಲ್ಲೇ ಮೂರಾವೃತ್ತಿ ಆರತಿ ಮಾಡಬಹುದು. (ದೃಷ್ಟಿ ಪರಿಹಾರವು)

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಶುಭ್ರ ಜ್ಯೋತಿರುದೀರ್ಯ ಪಾಣಿಯುಗಳೇ ನೋದ್ಧೃತ್ಯ ನೇತ್ರಾನ್ತರಂ। ತದ್ದೀಪಂ ನಿನಯೇತ ಪ್ರದಕ್ಷಿಣಂ ತಥಾ ಆಪಾದಚೂಡಾನ್ತಕಂ ।೧೫

ನೇತ್ರಾನ್ತಾ ಪ್ರತಿವಕ್ಷಸೇ ಪ್ರತಿವಶಾತ್ ಶ್ರೀರಾಮಮಂತ್ರಂ ಪ್ರತಿ ।

ಅರ್ಚನಾತಿಲಕಂ ೧೮

ಶುಭ್ರಾಜ್ಯೋತಿರುದೀರ್ಯ ಪಾಣಿಯುಗಳೇನೋದ್ಧೃತ್ಯ ನೀರಾಜನಂ ।

ಪ್ರಾದಕ್ಷಿಣ್ಯೇನ ವಶೇನಮೂರ್ಧ್ನಿ ವದನೇ ವಕ್ಷಃಸ್ತ್ರಿರಾವೃತ್ತಯೇ ।

ಸಾಧಾರಣವಾಗಿ ಎಲ್ಲಾ ದೇವಸ್ಥಾನಗಳಲ್ಲೂ ಶ್ರೀ ಭೂಮಿ ಸಹಿತವಾದ ಉತ್ಸವ ಮೂರ್ತಿಯನ್ನು ಮೂಲದೇವರ ಮುಂಭಾಗದಲ್ಲಿ ಬಿಜಯಮಾಡಿಸಿರುವರು ಸ್ಥಳಸಂಕೋಚವಾದಲ್ಲಿ ಪ್ರತ್ಯೇಕವಾಗಿಯೂ ಇರಿಸಬಹುದು.

ಅಲಂಕಾರಯುತವಾದ ಶ್ರೀ ಭೂಮಿ ಸಹಿತರಾದ ಉತ್ಸವಮೂರ್ತಿಯುತ ಮೂಲ ದೇವರಿಗೆ ನೀರಾಜನವನ್ನು ಮಾಡಬೇಕು. ಘಂಟಾನಾದ ಮತ್ತು ಸುಷಿರ ತನ್ತೀ ಚರ್ಮ ಕಾಂಸ್ಯ, ಶಂಖವಾದ್ಯಗಳು ಭೋರ್ಗರೆಯುತ್ತಿರುವಾಗ ದೇವದಾಸಿಯರು, ನೃತ್ಯ, ಗೀತ, ವಾದ್ಯಗಳನ್ನು ನಡೆಸುತ್ತಿರುವಾಗ-
ಪರಿಚಾರಕರು ಅಡಕಾರತಿ ಗುಂಭಾರತಿಗಳನ್ನು ಕೊಡಲು ಅರ್ಚಕರು ಅವುಗಳನ್ನು ತೆಗೆದುಕೊಂಡು ದೇವರ ದಕ್ಷಿಣಪಾದದಿಂದ ಆರಂಭಿಸಿ ಪ್ರದಕ್ಷಿಣವಾಗಿ ಪಶ್ಚಿಮದ ವರೆಗೆ ಮೂರಾವೃತ್ತಿ ಆಪಾದಮಸ್ತಕ ನೀರಾಜನ ಆರತಿ ಮಾಡುವದು ಮಾಡಬೇಕು.

ದಕ್ಷಿಣಪಾದದಿಂದ ನೇತ್ರಾಂತದವರೆಗೆ ಎತ್ತಿ ಆಪಾದಮಸ್ತಕ ಆರತಿ ಮಾಡಬೇಕು. ಅಥವಾ ದಕ್ಷಿಣಪಾದದಿಂದಾರಂಭಿಸಿ ಪಶ್ಚಿಮಪಾದದವರೆಗೆ ಮುಖ ಮಂಡಲ, ೨ ವದನ=ಬಾಯಿ ೩ ವಕ್ಷ=ಹೃದಯ ಅಲ್ಲಿಯವರೆಗೆ ಮೂರಾವೃತ್ತಿ ಆರತಿ ಮಾಡಬೇಕು. ಅರ್ಥಾತ್ ಮೊದಲನೇಪ್ರ ದಕ್ಷಿಣವು ದೇವರ ದಕ್ಷಿಣಪಾದ ದಿಂದಾರಂಭಿಸಿ ಆಪಾದತಲಮಸ್ತಕವು -೨ನೆಯ ಪ್ರದಕ್ಷಿಣವು ಸ್ವಲ್ಪ ತಗ್ಗಿಸಿ ವದನ-ಬಾಯಿವರೆಗೆ (ನೇತ್ರಾಂತದವರೆಗೆ ಆಗಬಹುದು.)೩ನೆಯ ಪ್ರದಕ್ಷಿಣವು ವಕ್ಷ ಹೃದಯದವರೆಗೆ ಈ ರೀತಿಯಲ್ಲೂ ಆರತಿ ಮಾಡಬಹುದು.

ನೀರಾಜನ ಸಮಯದಲ್ಲಿ

ಘಂಟಾನಾದಂ ಹರೇರ್ಧಾಮ್ನಿ ಕೃತ್ವಾ ಬ್ರಹ್ಮಗ್ರಹಾಪಿ ಚ । ೧೩೭

ಗಚ್ಛಂತಿ ದೂರತ ಶೀಘ್ರಂ ನಾಗ ಮಿಷ್ಯಂತಿ ತೇ ಪುನಃ। ಪ.ಪು.ಸಂ. ೪

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ನೀರಾಜನ ಸಮಯದಲ್ಲಿ ಘಂಟಾನಾದ ಮಾಡುವುದರಿಂದ ದುಷ್ಟಗ್ರಹಗಳು (ದುಷ್ಟಶಕ್ತಿ) ಕ್ಷಯವಾಗುವುದು. ತಿರುಗಿ ಬರುವುದಿಲ್ಲ.

ನೀರಾಜನೇತನ್ಯ ಮಾನೇ ತೂರ್ಯಘೋಷಮುದೀರಯೇತ್।
ನೃತ್ತಗೀತ ಪ್ರಕಾರಾಂಶ್ಚ ಕುರ್ಯಾರ್ವಾರ ಪುರಂಧ್ರಯಃ । ೭೭
ಪದ್ಮ ಸಂ.ಚರ್ಯ ೫

ಮಹಾನೃತ್ತಂ ದರ್ಶಯಿತ್ವಾ ದೇವಂ ನೀರಾಜನಂ ಚರೇತ್ ।
ಅನಿರುದ್ಧ ೨೬ ಪಾದ್ಮ ಸಂ.ಚರ್ಯಾ ೫

ತಾಳಮದ್ದಳ ತನ್ತ್ರೀವಾದ್ಯ ನಿಚಯೈರ್ಗಾನ್ಯೈ ಮಹಾಸ್ತರೈಃ ।
ಸ್ತತ್ಕಾಲೇಪಿಚ ತಾಳ ಪಂಚಕಮಥೋ ಸಂಘೋಷಯೇ ತಾಕ್ಷಣಮ್।
ಅರ್ಚನಾ ತಿಲಕಂ ೧೮

ಶಂಖಾದ್ಯೈ ನೃತ್ಯಗೀತಾಭ್ಯಾಂ ವಿನಾ ನೀರಾಜನಂಕೃತಂ ।
ಯದಿಸ್ಯಾನ್ನಿಷ್ಫಲಂ ತತೋಸ್ಯಾತ್ ತಸ್ಮಾತ್ತೈಸಾರ್ದಮಾಚರೇತ್।

ಸುಷಿರ, ತನ್ತ್ರೀ, ಚರ್ಮ, ಕಾಂಸ್ಯ, ಘಂಟಾನಾದ ವಾದ್ಯ ಶಬ್ದಗಳಿಂದ ದುಷ್ಟಶಕ್ತಿಗಳು ಮಾಯವಾಗುವುದೆಂದು ಮೊದಲೇ ತಿಳಿಸಿರುವುದು. ಆದ್ದರಿಂದ ಭಗವಂತನ ನೀರಾಜನ ಕಾಲದಲ್ಲಿ (ಮಹಾಮಂಗಳಾರತಿ) ದುಷ್ಟಶಕ್ತಿಗಳು ತೊಲಗಿ ಭಗವಂತನಿಗೆ ಪ್ರೀತಿಕರವಾಗಿರಲು ಘಂಟಾಶಬ್ದದೊಂದಿಗೆ ನೃತ್ಯ, ಗೀತ, ತೂರ್ಯ ಘೋಷ ತಾಳ, ಮದ್ದಳ, ತನ್ತ್ರೀವಾದ್ಯ (ವೀಣಾ) ಶಂಖವಾದ್ಯಗಳು ಇತ್ಯಾದಿಗಳನ್ನು ನುಡಿಸಬೇಕು.

ಭ್ರಾಮಯೇ ದ್ದೇವದೇವಸ್ಯ ಮುಖಮಧ್ಯೇ ವಿಸರ್ಜಯೇತ್ ।
ಅನಿರುದ್ಧ ಸಂ. ೨೬

ಈ ರೀತಿಯಲ್ಲಿ ಭಗವಂತನಿಗೆ ನಡೆಸುವ ಎಲ್ಲಾ ವಿಧವಾದ ಆರತಿಯನ್ನೂ ದಕ್ಷಿಣಪಾದದಿಂದ ಆರಂಭಿಸಿ ಆಪಾದತಲಮಸ್ತಕ ಮೂರಾವೃತ್ತಿ ತ್ರಿಪ್ರದಕ್ಷಿಣ ನೀರಾಜನ ಆರತಿಗಳನ್ನು ಮಾಡಿ ಮುಖಮಧ್ಯದಲ್ಲಿ ವಿಸರ್ಜಿಸಬೇಕು. (ದೃಷ್ಟಿಪರಿಹಾರವು)

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಏವಂ ನೀರಾಜನ ಪ್ರೋಕ್ತಂ ಸಾತ್ವಿಕಂ ನಾಮನಾಮತಃ । ೧೦೫೦
ಪಾರಮೇಶ್ವರ ಸಂ. ೧೫

ಈ ರೀತಿಯಲ್ಲಿ ಮಾಡಿದ ನೀರಾಜನಕ್ಕೆ ಸಾತ್ವಿಕ ನೀರಾಜನವೆಂದು ಕರೆಯಲಾಗುವುದು. -

ತ್ರಿಪರಿಭ್ರಮ್ಯ ದೇವೇಶಂ ಬಲಿಪೀಠೇ ವಿನಿಕ್ಷಿಪೇತ್। ೭೯
ಪಾದ್ಮ ಸಂ ಚರ್ಯಾ ೬

ಪೂರ್ವತ್ರಿಪರಿಭ್ರಾಮ್ಯ ನಿಕ್ಷಿಪೇನ್ಮಂಟಪಾದ್ಬಹಿಃ ।೪೨೫
ಶ್ರೀವಿಷ್ಣುತಿಲಕ ಸಂ. ೩

ತ್ರಿಪ್ರದಕ್ಷಿಣಮಾವೃತ್ಯ ಕ್ಷಿಪೇದಾವರಣಾದ್ಬಹಿಃ । ೯೦೭
ಪಾರಸಮುಚ್ಚಯ ಸಂ ೩೬

ದೀಪಪಾತ್ರಾಣಿ ಸರ್ವಾಣಿ ಬಲಿಪೀಠೇ ಸಮುತ್ಸೃಜೇತ್ । ೭೭
ಪಾದ್ಮ ಸಂ ಚರ್ಯಾ ೫

ತದ್ದೀಪಂ ಪರಿಚಾರಕಸ್ತು ನಯತೇ ವಾರಾಂಗನಾಯಾನ್ತಿಕಂ ।

ಸಾಭಕ್ತ್ಯಾತು ಕೃತಾಂಜಲ ಸ್ಸುವಿದ್ಧೃತಾ ರಂಗೇತ್ರಿಪಾದೇ ನ್ಯಸೇತ್
ಅರ್ಚನಾ ತಿಲಕಂ ೧೮

ಮೇಲೆ ತಿಳಿಸಿದ ರೀತಿಯಲ್ಲಿ ಭಗವಂತನಿಗೆ ಮೂರಾವೃತ್ತಿ ಪ್ರದಕ್ಷಿಣವಾಗಿ ಮಾಡಿದ ನೀರಾಜನವನ್ನು ಪರಿಚಾರಕರು ತೆಗೆದುಕೊಂಡು ಅದನ್ನು ವಾರಾಂಗನೇಯರಲ್ಲಿ ಕೊಡಬೇಕು. ಅವರು ಭಕ್ತಿಯಿಂದ ಅದನ್ನು ಗರ್ಭಗೃಹ ಸನ್ನಿಧಿ ಹೊರಗೆ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಅಥವಾ ಬಲಿಪೀಠದ ಮುಂದೆ ಅಥವಾ ರಂಗ ಮಂಡಪದಲ್ಲಿ ತ್ರಿಪಾದ ಕಾಲು ಮಣೆಯ ಮೇಲೆ ಇಡಬೇಕು.

ಕರ್ಪೂರಾರತಿ

ಸಾತ್ವಿಕಂ ರಾಜಸಂ ಚೈವ ತಾಮಸಂ ಚಕ್ರಮೇವತು ।
ಕರ್ಪೂರಾವರ್ತಿತಂ ದೀಪಂ ದಾಪಯೇತ್ ಸರ್ವಸಿದ್ಧಿದಮ್ ।
ಶ್ರೇಷ್ಠಂ ಯುಗಾಂಗುಲಂ ಜ್ವಾಲಾ ಮಧ್ಯಮಂತು ಗುಣಾಂಗುಲಮ್ ।
ಅಧಮಂ ದ್ವ್ಯಂಗುಲಂ ಜ್ವಾಲಾ ದೀಪಮೇವಂ ಪ್ರಕೀರ್ತಿತಮ್ ।

ಪೂರ್ವ ಕಾರಣಾಗಮ ೩೧

ಏಕ ದ್ವಿತ್ರ್ಯಂಗುಲ ಜ್ವಾಲಾ ಶ್ರೇಷ್ಠ ಮಧ್ಯಾಧಮ ಸ್ಮೃತಾಃ ।
ಕರ್ಪೂರವರ್ತಿಕಾ ಜ್ವಾಲಾ ಸರ್ವಸಿದ್ಧಿ ಪ್ರದಾ ಶುಭಾ ।
ಸದಾಶಿವಾಯ ಮಹತೇ ಘೃತದೀಪಂ ದದಾತಿಯಃ ।

ತ್ರೈಲೋಕ್ಯಮೋಹನ ಸಂ.
ಶೈವಾಗಮಸಾರೇ ಪೇ. ೯

ಅಷ್ಟಾಂಗುಲೋಚ್ಛ್ರಯ ಜ್ವಾಲೋ ದೀಪ ಉತ್ತಮ ಉಚ್ಯತೇ ।
ತದರ್ಧಂ ಮಧ್ಯಮೇ ದೀಪ ತಸ್ಯಾರ್ಧಮಧಮಂ ವಿಧುಃ
ಅಧಮಾನಾಂಗುಲೋತ್ಸೇಧ ನಿತ್ಯಾಽನಿರ್ವಾಣ ದೀಪಿಕಾ । ೪೮
ಕರ್ಪೂರಾಂದ್ಯೈಸ್ತು ವಾ ಗನ್ಧಾ ದ್ಯುಷಿತ ಸ್ನೇಹ ಸಂಪ್ಲುತಾಮ್ ।
ವರ್ತಿಂಕೃತ್ವಾ ಽಥವಾ ದದ್ಯಾದ್ದೀಪಂ ಪ್ರಿಯತಮಂ ಹರೇಃ ।೪೯

ಖಿಲಾಧಿಕಾರ ೨೨

ಭಗವಂತನಿಗೆ ಕರ್ಪೂರಾರತಿ ಮಾಡುವುದರಿಂದ ಪ್ರೀತಿಯುಂಟಾಗುತ್ತದೆ. ಆದರಿಂದ, ಸರ್ವಸಿದ್ಧಿಗಳೂ ಉಂಟಾಗುತ್ತವೆ. ಕರ್ಪೂರವು ಅಧಿಕವಾಗಿದ್ದು ಅದರ ಜ್ವಾಲೆಯು ಅಧಿಕವಾಗಿದ್ದಷ್ಟು ಭಗವಂತನಿಗೆ ಅಧಿಕ ಪ್ರೀತಿಯುಂಟಾಗುವುದು. ಅದು ಈ ರೀತಿಯಲ್ಲಿರುತ್ತದೆ. ಕರ್ಪೂರವಿಲ್ಲದಿದ್ದರೆ ತುಪ್ಪದಿಂದಕೂಡಿದ ವರ್ತಿ ದೀಪದಿಂದ ಆರತಿ ಮಾಡಬಹುದು.

ನೀರಾಜನ ದರ್ಶನೇ ಫಲಂ -

ಏವಂ ನೀರಾಜನಂ ಪ್ರೋಕ್ತಂ ಘೋರ ಶಾನ್ತ್ಯರ್ಥಂ ಪುಷ್ಟಿವರ್ಧನಂ । ೮೦

ಪಾದ್ಮ ಸಂ. ಚರ್ಯ ೬

ಈ ರೀತಿ ನಿಯಮವನ್ನನುಸರಿಸಿ ನೀರಾಜನ ಕಾರ್ಯವನ್ನು ಲೋಕಶಾನ್ತ್ಯರ್ಥವಾಗಿಯೂ ಪ್ರಜೆಗಳ ಆಯುರಾರೋಗ್ಯ ಸಂಪತ್ಸಮೃದ್ಧಿಗಾಗಿಯೂ ನಡೆಸಬೇಕು.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಶ್ರೀ ಭೂ ನೀಳಾದಿ ಸಹಿತಂ ಹರೇರ್ದರ್ಶನ ಮುತ್ತಮಮ್ । ೬೭
ಶ್ರೀಪ್ರಶ್ನ ಸಂ.೩೭
ಯೋಗಿನಾದುರ್ಲಭಚ್ಚೈತ ನಿಶ್ಚಯಂ ಮುನಿಪುಂಗವಾಃ । ೧೬೯

ಪ.ಪು.ಸಂ.೪
ನೀರಾಜನ ಸಮಯೇ ದೃಶ್ಯತೇ ಯೋಜಗತ್ಪತಿಮ್ । ೮೪
ಧೂತಪಾಪೋ ನರೋಭೂಯಾದೈಶ್ವರ್ಯಂ ಚ ಮಹಲ್ಲಭೇತ್।

ಪ.ಪು.ಸಂ.೪
ತದ್ದೀಪದರ್ಶನಾನ್ನೃಣಾ ಆಯು ಶ್ರೀ ಪುತ್ರ ವೃದ್ಧಯಃ ।
ಅರ್ಚನಾ ನವನೀತಂ ಪೇ ೭೬

ಸಾಲೋಕ್ಯಾಧಿಕ ಮಾಪ್ನುವಂತಿ ಹಿ ಪದಂ ಸಂದರ್ಶನಾತ್ಸಾಧಕಃ । ೧೬
ಸಪ್ತಜನ್ಮಾರ್ಜಿತಂ ಪಾಪಂ ತಕ್ಷಣಾದೇವ ನಶ್ಯತಿ ।
ಶ್ರೀ ವಿಷ್ಣು ತಿಲಕಂ ಸಂ
ತದ್ದೀಪಸ್ಯತು ವೀಕ್ಷಿಗಾದಪಿ ಸದಾ ಶ್ರೀ ಪುಷ್ಟಿ ಶಾನ್ತಿರ್ಭವೇತ್ ।
ಧೀರ್ಘಚಾಮಮಥಾಸ್ಯ ಪಾದಯುಗಳಂ ವಸ್ತ್ರೇಣ ಸಂಶೋಧಯೇತ್।
ಅರ್ಚನಾ ತಿಲಕಂ ೮

ಈ ರೀತಿಯಲ್ಲಿ ಮೂಲ ಮೂರ್ತಿ (ಧ್ರುವಬೇರ) ಮತ್ತು ಅವರ ಮುಂದಿರುವ ಶ್ರೀ ಭೂ ಸಹಿತರಾದ ಉತ್ಸವ ಮೂರ್ತಿಗೆ ನಡೆಸುವ ಸಾತ್ವಿಕ ನೀರಾಜನ ಪ್ರಕ್ರಿಯೆಯನ್ನು ಪರ್ಶಿಸುವುದು ಬಹುಭಾಗ್ಯ ವಿಶೇಷವು. ಇದನ್ನು ನೋಡಲು ಯೋಗಿಗಳಿಗೂ ದುರ್ಲಭವು. ಏಕೆಂದರೆ ಅವರು ಯಾವಾಗಲೂ ಧ್ಯಾನಮಗ್ನರಾಗಿರುವುದರಿಂದ ಅವರಿಗೆ ಅವಕಾಶವಿಲ್ಲವು.

ಯಾರು ಪರಾತ್ಪರ ವಸ್ತು ಜಗತ್ಪತಿಗೆ ನಡೆಸುವ ನೀರಾಜನ ಪ್ರಕ್ರಿಯೆಯನ್ನು ವೀಕ್ಷಿಸುವರೋ ಅವರ ಸಕಲ ಪಾಪಗಳೂ ಕಳೆದು ಮನ ಶಾಂತಿ ಯುಂಟಾಗಿ ಆಯುರಾರೋಗ್ಯ ಐಶ್ವರ್ಯಾದಿಗಳನ್ನು ಹೊಂದುವುದಲ್ಲದೆ ಪುತ್ರ ಪೌತ್ರ ವಂಶಾಭಿವೃದ್ಧಿಯನ್ನು ಹೊಂದುವರು. ಅಲ್ಲದೆ ಅಂತ್ಯದಲ್ಲಿ ಪಾಪಗಳನ್ನೆಲ್ಲಾ ಕಳೆದು. ಸಾಲೋಕ್ಯ, ಸಾಯುಜ್ಯ, ಸಾರೂಪ್ಯ, ಸಾಮಿಪ್ಯಗಳಿಂದ ಮೋಕ್ಷ ಸಾಮ್ರಾಜ್ಯ ಭಗವತ್ಸನ್ನಿಧಾನವನ್ನು ಸೇರುವರು.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ನೀರಾಜನ ಮತ್ತು ಕುಂಭಾರ್ತಿ ಆದರ ಅರ್ಥ ಮತ್ತು ಫಲ

ಪ್ರಥಮಂ ಭೂಮಿ ರಕ್ಷಾರ್ಥಂ ದ್ವಿತೀಯಂ ಅಂತರಿಕ್ಷಿಕಮ್ ।
ತೃತೀಯಂ ಸ್ವರ್ಗ ರಕ್ಷಾರ್ಥಂ ಭ್ರಾಮಯೇದ್ವಟದೀಪಕಮ್ ।

ನಾರಾಯಣ ಸಂ. ೬

ಪ್ರಥಮಂ ಲೋಕರಕ್ಷಾರ್ಥಂ ದ್ವಿತೀಯಂ ಗ್ರಾಮ ರಕ್ಷಕಮ್।
ತೃತೀಯಂ ಭೂಮಿರಕ್ಷಾರ್ಥಂ ತ್ರಿವಾರಂ ತ್ರಿಪ್ರದಕ್ಷಿಣಮ್।

ಪೂರ್ವಕಾರಣಾಗಮ ೩೨

ಸರ್ವಲೋಕ ಹಿತಾಯೈಕ ಮನ್ಯದಾ ಗ್ಗಮ ಸಮೃದ್ಧಯೇ ।
ರಾಜಸ್ಥಾನ ಸಮೃದ್ಧ್ಯರ್ಥಂ ತ್ರಿಧಾ ಭ್ರಮಣ ಮಾಚರೇತ್।
ತದ್ದೀಪ ದರ್ಶನಾನ್ನೃಣಾ ಮಾಯು ಶ್ರೀ ಪುತ್ರ ವೃದ್ಧಯಃ।

ಅರ್ಚನಾನವನೀತಂ ಪೇ.೭೬

ಚೇತನಾ ಚೇತನದಿಂದೊಡಗೂಡಿದ ಈ ಬ್ರಹ್ಮಾಂಡವೆಲ್ಲವೂ ಸುಖಮಯ ವಾಗಿರಬೇಕೆಂಬ ಅಭಿಪ್ರಾಯದಿಂದ ಭಗವಂತನ ಅನುಗ್ರಹ ಹೊಂದಲು ಇಷ್ಟ ಪ್ರಯುಕರವಾದ ಅಡಕಾರತಿ , ಕರ್ಪೂರಾರತಿ-ಕುಂಭಾರತಿಯನ್ನು ಆಪಾದಮಸ್ತಕ ಮೂರಾವೃತ್ತಿ ಪ್ರದಕ್ಷಿಣವಾಗಿ ಆರತಿಯನ್ನು ಮಾಡಬೇಕು. ಮಾಡುತ್ತೇವೆ.

ಮೊದಲನೆಯ ಪ್ರದಕ್ಷಿಣ ಆರತಿಯು ಭೂಮಿ ರಕ್ಷಾರ್ಥವಾಗಿಯೂ (ಶುದ್ಧಿ) ಎರಡನೆಯ ಪ್ರದಕ್ಷಿಣವು ಅಂತರಿಕ್ಷ ಶಾಂತಿಯಾಗಿರಬೇಕೆಂದೂ (ಅಂತರಿಕ್ಷ ಶುದ್ಧಿ) ಮೂರನೆಯ ಪ್ರದಕ್ಷಿಣವು ಸ್ವರ್ಗ ರಕ್ಷಾರ್ಥವಾಗಿಯೂ ಮಾಡಬೇಕು.

ಸಂಹಿತಾ ಭೇದ- ಮೊದಲನೆಯ ಪ್ರದಕ್ಷಿಣವು ಲೋಕರಕ್ಷಾರ್ಥವಾಗಿಯೂ, - ಎರಡನೆಯ ಪ್ರದಕ್ಷಿಣವು ಗ್ರಾಮ ರಕ್ಷಾರ್ಥವಾಗಿಯೂ, ಮೂರನೆಯ ಪ್ರದಕ್ಷಿಣವು ಭೂಮಿ ರಕ್ಷಾರ್ಥವಾಗಿಯೂ ಆರತಿ ಮಾಡಬೇಕು. (ಸಂಹಿತಾ ಭೇದ) ಮೊದಲ ನೆಯ ಪ್ರದಕ್ಷಿಣವು ಸರ್ವಲೋಕ ಹಿತಾರ್ಥವಾಗಿಯೂ, ಎರಡನೆಯ ಪ್ರದಕ್ಷಿಣವು ಗ್ರಾಮರಕ್ಷಾರ್ಥವಾಗಿಯೂ, ಮೂರನೆಯ ಪ್ರದಕ್ಷಿಣವು ರಾಜಕುಲ, ರಾಜ್ಯ ಸಮೃದ್ಧ್ಯರ್ಥ ವಾಗಿಯೂ ಇರಲು ಮೂರಾವೃತ್ತಿ ಪ್ರದಕ್ಷಿಣವಾಗಿ ಆರತಿ ಮಾಡಬೇಕು.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ತಥಾಪಿ ಪಾದಮಾರಭ್ಯ ಮುಖಪರ್ಯಂತ ಮೀಕ್ಷಣಮ್ । ೧೭೬
ವೈಷ್ಣವಾನಾಂತು ವಿಹಿತಂ ಗೋಪ್ಯಮೇತನ್ಮುನೀಶ್ವರಾಃ ।

ಪ.ಪು.ಸಂ. ೪

ಭಗವಂತನಿಗೆ ಆಪಾದಮಸ್ತಕ ಆರತಿ ಮಾಡುವುದನ್ನು ದರ್ಶಿಸಬೇಕು. ಇದು ವಿಷ್ಣು ಭಕ್ತರಿಗೆ ಅತಿ ಮುಖ್ಯವು. ಏಕೆಂದರೆ ಶೈವಾಗಮ ರೀತ್ಯಾ ಶಿವಲಿಂಗವು ಬ್ರಹ್ಮ, ವಿಷ್ಣು ಶಿವ ಭಾಗಗಳಿಂದ ಕೂಡಿ ತ್ರಿಮೂರ್ತಿ ಸ್ವರೂಪವಾಗಿರುವುದು. ಅಲ್ಲಿ ಆರತಿ ಮಾಡುವಾಗ ಪೂಜಾ ಭಾಗವಾದ ರುದ್ರಭಾಗವನ್ನು ಮಾತ್ರ ಕಾಣುತ್ತೇವೆ. ಮಿಕ್ಕ ಬ್ರಹ್ಮಭಾಗ, ವಿಷ್ಣುಭಾಗಗಳಿದ್ದರೂ ಆ ಭಾಗಗಳು ಅಂತರಿಕವಾಗಿವೆ. ಬ್ರಹ್ಮ ಭಾಗವು ಭೂಮಿಯಲ್ಲೂ ವಿಷ್ಣುಭಾಗವು ಪೀಠದಲ್ಲೂ ಸೇರಿರುವುದರಿಂದ ನಮಗೆ ಕಾಣುವುದಿಲ್ಲ. ಪೂಜಾ ಭಾಗವು ಮಾತ್ರ ಕಾಣಬರುವುದು. ವಿಷ್ಣು ರೂಪಕ್ಕೆ ಆಪಾದಮಸ್ತಕ ಒಂದೇ ರೂಪವಾಗಿರುವುದರಿಂದ ಆಪಾದಮಸ್ತಕ ದರ್ಶಿಸಬೇಕು. ಶಿವಾಲಯದಲ್ಲಿ ಆರತಿ ಕ್ರಮವೂ ಇದೇ ರೀತಿಯಲ್ಲಿ ನಡೆಯುವುದು.

ಪ್ರಾಗನ್ನಪಿ ಭ್ರಮಣಾದನ್ತೇ ಧೂಮೋತ್ಥ ಭಸ್ಮನಾ । ೧೦೭೬
ರಕ್ಷಯಾ ಸಂಪುಟೀಕುರ್ಯಾದೇವಂ ನೀರಾಜನಂ ದ್ವಿಜ ।

ಪಾರಮೇಶ್ವರ ಸಂ. ೧೫

ಭ್ರಾಮಯೇದ್ದೇವ ದೇವೇಶಂ ಆಪಾದತಲಮಸ್ತಕಂ ।
ಧೌತವಸ್ತ್ರ ದ್ವಯೇನೈವ ಶಿರೋಗಾತ್ರಂ ಪ್ರಮಾರ್ಜಯೇತ್ ।

ಅನಿರುದ್ಧ ಸಂ. ೧೭

ದೃಷ್ಟಿ ದೋಷ ಪರಿಹಾರಾರ್ಥವಾಗಿ ವಿವಿಧ ಆರತಿಗಳನ್ನು ಬೆಳಗಿದ ಮೇಲೆ ದೇವರಿಗೆ ರಕ್ಷೆಯಾಗಿ ಧೌತವಸ್ತ್ರದಿಂದ (ಪ್ಲೋತವಸ್ತ್ರ) ದೇವರ ಶಿರೋ ಪಾದಗಳನ್ನು ಒತ್ತುವಂತೆ ಉಪಚರಿಸಬೇಕು. ಅನಂತರ ಭಗವಂತನನ್ನು ಸ್ತೋತ್ರ ಮಾಡಬೇಕು.

ಹರಿಃ ಓಮ್ ತಸ್ಯೈವಂ ವಿದುಷೋ ಯಜ್ಞಸ್ಯಾತ್ಮಾ ಯಜಮಾನ ಶ್ರದ್ಧಾ ಪತ್ನೀ ಶರೀರ ಮಿಧ್ಮ ಮುರೋ ವೇದಿರ್ಲೋಮಾನಿ ಬರ್ಹಿ ವೇದ ಶಿಖಾ ಹೃದಯಂ ಯೂಪಃ ಕಾಮ ಆಜ್ಯಂ ಮನ್ಯುಃ ಪಶು ಸ್ತಪೋಽಗ್ನಿ ದಮ ಶ್ಯಮಯಿತಾ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ದಕ್ಷಿಣಾ ವಾಙ್ಹೋತಾ ಪ್ರಾಣ ಉದ್ಗಾತಾ ಚಕ್ಷುರಧ್ವರ್ಯುರ್ಮನೋಽಬ್ರಹ್ಮಾ ಶ್ರೋತ್ರಮಗ್ನೀ ದ್ಯಾವದ್ಧ್ರಿಯತೇ ಸಾ ದೀಕ್ಷಾ ಯದಶ್ನಾತಿ ತದ್ಧ ವೀರ್ಯಂತ್ಪಿಬತಿ ತದಸ್ಯ ಸೋಮಪಾನಂ ಯದ್ರಮತೇ-ತದುಪಸದೋ ಯತ್ಸಂಚರ ತ್ಯು ಉಪವಿಶತ್ಯುತ್ತಿಷ್ಠತೆ ಚ ಸಪ್ರವರ್ಗ್ಯೋ-ಯನ್ಮುಖಂ ತದಾವಹನೀಯೋ ಯಾವ್ಯಾಹೃತಿ ರಾಹುತಿರ್ಯದಸ್ಯ ವಿಜ್ಞಾನಂ ತಜ್ಜುಹೋತಿ ಯತ್ಸಾಯಂ ಪ್ರಾತರತ್ತಿ ತತ್ಸಮಿಧಂ , ಯತ ಪ್ರಾತರ್ಮಧ್ಯಂ ದಿನಗ್ಂ ಸಾಯಂಚ ತಾನಿ ಸವನಾನಿ ಯೇ ಅಹೋರಾತ್ರೇ ತೇ ದರ್ಶಪೂರ್ಣ ಮಾಸೌ ಯೇರ್ಧಮಾಸಾಶ್ಚ ಮಾಸಾಶ್ಚ ತೇ ಚಾತುರ್ಮಾಸ್ಯಾನಿ ಯ ಋತವಸ್ತೇ ಪಶುಬಂಧಾ ಯೇ ಸಂವತ್ಸರಾಶ್ಚ ಪರಿವತ್ಸರಾಶ್ಚ ತೇಽಹರ್ಗಣಾ ಸ್ಸರ್ವವೇದಸಂ ವಾ ಏತತ್ಸತ್ರಂ ಯನ್ಮರಣಂ ತದವಭೃತ. ಏತದ್ವೈ ಜರಾಮರ್ಯಮಗ್ನಿಹೋತ್ರಗ್ಂ-ಸತ್ರಂ ಯ ಏವಂ ವಿದ್ವಾನುದಗಯನೇ -ಪ್ರಮೀಯತೇ-ದೇವಾನಾಮೇವ ಮಹಿಮಾನಂ ಗತ್ವಾಽಽದಿತ್ಯಸ್ಯ ಸಾಯುಜ್ಯಂ ಗಚ್ಛತ್ಯಥ ಯೋ ದಕ್ಷಿಣೇ ಪ್ರಮೀಯತೇ-ಪಿತೃಣಾ ಮೇವ-ಮಹಿಮಾನಂ ಗತ್ವಾ ಚಂದ್ರಮಸ-ಸಾಯುಜ್ಯಗ್ಂ ಸಲೋಕತಾ ಮಾಪ್ನೋ ತೇತೌ ವೈ ಸೂರ್ಯಾ ಚಂದ್ರಮಸೌರ್ಮಹಿಮಾ-ಬ್ರಾಹ್ಮಣೋ ವಿದ್ವಾನಭಿಜಯತಿ ತಸ್ಮಾದ ಬ್ರಹ್ಮಣೋ ಮಹಿಮಾನ ಮಾಪ್ನೋತಿ ತಸ್ಮಾದ ಬ್ರಹ್ಮಣೋ ಮಹಿಮಾನ ಮಿತ್ಯುಪನಿಷತ್-ಹರಿಃ ಓಮ್.

ಶಿತ್ತಂ ಶಿರುಕಾಲೇ ವಂದುನ್ನೈಚ್ಚೇವಿತ್ತು ಉನ್।
ಪೊತ್ತಾಮರೈಯಡಿಯೇ ಪೋತ್ತುಂ ಪೊರುಳ್ ಕೇಳಾಯ್।
ಪೆತ್ತಮ್ಮೇಯತ್ತುಣ್ಣುಂ ಕುಲತ್ತಿಲ್ ಪಿರಂದು ನೀ ।
ಕುತ್ತೇವಲಂಗಳೈಕೊಳ್ಳಾಮಲ್- ಪೋಹಾದು।
ಇತ್ತಪರೈಕೊಳ್ವಾನನ್ರು ಕಾಣ್ ಗೋವಿಂದಾ ।
ಎತ್ತೈಕ್ಕುಂ ಏಳೇಳ್ ಪಿರವಿಕ್ಕುಂ ಉನ್ತನ್ನೋಡು ।
ಉತ್ತೋಮೇ ಯಾವೋಂ ಉನಕ್ಕೇನಾಮಾಳಶೈವೋಂ।
ಮತ್ತನಂಕಾಮಂಗಳ್ ಮಾತ್ತೇ ಲೋರೆಂಬಾವಾಯ್।೨೬

ವಂಗಕ್ಕಡಲ್ ಕಡೈಂದ ಮಾಧವನ್ನೈ ಕ್ಕೇಶವನ್ನೈ।
ತಿಂಗಳ್ ತಿರುಮುಹತ್ತು ಚ್ಚೇಯಿಳೈ ಯಾರ್ ಶೆನ್ರಿರೆಂಜಿ।
ಅಂಗಪ್ಪರೈ ಕೊಂಡುವಾತ್ತೈ ಅಣಿಪುದುವೈ ।
ಪೈಂಗಮಲ ತ್ತಂಡರಿಯಲ್ ಪಟ್ಟರಪಿರಾನ್ ಕೋದೈಶೊನ್ನ।
ಶಂಗತ್ತಮಿಳ್ ಮಾಲೈ ಮುಪ್ಪದುಂ ತಪ್ಪಾಮೇ।

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಇಂಗೈಪ್ಪರಿಶುರೈಪ್ಪಾರ್ ಈರಿರಂಡು ಮಾಲ್ವರೈತ್ತೋಳ್
ಶೆಂಗಣ್ ತಿರುಘುಹತ್ತು ಚ್ಚೆಲ್ವತ್ತಿರುಮಾಲಾಲ್
ಎಂಗುಂ ತಿರುವರುಳ್ ಪೆತ್ತು ಇನ್ಬುರುವರೆಂಬಾವಾಯ್ । ೩೦
(ಮೇಲಿನ ಪದ್ಯದ ಅರ್ಥವನ್ನು ಹಿಂದೆಯೇ ತಿಳಿಸಿದ್ದುತ್ತೆ)
ಈ ರೀತಿ ಅನುಸಂಧಿಸಿದ ಮೇಲೆ

ಭಗವಂತನ ಪಾದುಕೆ ಶ್ರೀಶಠಕೋಪ (ಭಗವದನುಗ್ರಹ)

ಭಗವಂತನ ಪಾದದಿಂದ ಲೋಕಪಾವನೆ ಪುಣ್ಯಸ್ವರೂಪಿಣಿಯಾದ ಗಂಗೆಯು ಉತ್ಪನ್ನಳಾದಳು. ಮಹಾವಿಷ್ಣು ಸ್ವರೂಪಿ ಶ್ರೀರಾಮಚಂದ್ರನ ಪಾದ ಸ್ಪರ್ಶದಿಂದ ಅಹಲ್ಯೆಗೆ ಶಾಪ ವಿಮೋಚನವಾಯಿತು. ಭರತನು ಭಗವಂತನ ಪಾದುಕಾಪಟ್ಟಾಭಿಷೇಕ ಮಾಡಿ ರಾಜ್ಯವನ್ನಾಳಿದನು. ಗುಹನು ಶ್ರೀರಾಮಚಂದ್ರನ ಪಾದಗಳನ್ನು ತೊಳೆದು ಪುನೀತನಾದನು. ಆದ್ದರಿಂದ ನಾವು ಅವರಂತೆಯೇ ಭಗವಂತನ ಪಾದದ್ವಯಗಳನ್ನು ನಮ್ಮ ಶಿರಸ್ಸಿನಲ್ಲಿ ಅಗತ್ಯ ಧರಿಸಬೇಕು. ಆದ್ದರಿಂ ದಲೇ ನಮಗೆ ದೇವಸ್ಥಾನದಲ್ಲಿ ನಮ್ಮ ಶಿರಸ್ಸಿನ ಮೇಲೆ ಭಗವಂತನ ಪಾದುಕಾರೂಪದ ಕಿರೀಟವನ್ನಿಟ್ಟು ಆಶೀರ್ವದಿಸುವರು-ಅನಂತರ ನಾವು ಭಗವತ್ತೀರ್ಥವನ್ನು ಸ್ವೀಕರಿಸುತ್ತೇವೆ.

ಭಗವತ್ಪಾದುಕಾ (ಶ್ರೀ ಶಠಕೋಪ) ಆಕಾರ-ರೂಪ-ಮಾನ

ವಿಷ್ಣುಪಾದುಕ ಸಂಸ್ಥಾಪನ ನಿರ್ಮಾಣಂ

ಚತುರ್ವಿಂಶಾಂಗುಲಂ ದೂರ್ಧ್ವಂ ತದರ್ಧಂ ಚ ತಥೈವಚ।
ದಶಾಂಗುಲೋನ್ನತಂ ಚೈವ ಅಷ್ಟಷಷ್ಠೋನ್ನತಂ ತಥಾ ।
ಆಯುತಂ ವರ್ತುಳಾಕಾರಂ ಪೂರ್ಣಚಂದ್ರ ಸಮಪ್ರಭಮ್ ।
ನಾನಾಲಂಕಾರ ಸಂಯುಕ್ತಂ ನವರತ್ನಾನಿ ಕೀರ್ತಿತಮ್ ।
ಸುವರ್ಣ ರಚಿತಂ ತಾಮ್ರಂ ಲೋಹಮೇವ ಯಥಾಕ್ರಮಮ್।
ಯಥಾವಿತ್ತಾನುಸಾರೇಣ ತೇನ ಶಾಸ್ತ್ರೇಣ ಮಾಚರೇತ್ ।
ತದೂರ್ಧ್ವಮ್ ಪಾದುಕೇನ್ಯೈವ ಲಕ್ಷಣೇನ ಸಮನ್ವಿತಮ್ ।
ಶೌನಕ ಸಂ. ೨೦ ಕೆ.ಎಸ್.ಎ. ೧೭೪೪ ಟಿಇಲ್ ಪೇ ೧೮೧

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಶ್ರೀ ಶಠಕೋಪ-ತೀರ್ಥ-ನಿರ್ಮಾಲ್ಯ (ಗಂಧ ಪುಷ್ಪ ತಾಂಬೂಲ)

ಪೂಜಾನ್ತೇ ದೇವ ದೇವಸ್ಯ ಪಾದೋದಕ ನಿಷೇವಣಂ ।
ಪಾದುಕಾಧಾರಣಂ ತಸ್ಯಗಂಧ ಪುಷ್ಪಾದ್ಯಲಂಕೃತಮ್ ।

ಸಂ. ?

ಪ್ರತ್ಯಹಂ ದೇವದೇವಸ್ಯ ಅರ್ಚನಾನಂತರಂ ಭುವಿ ।
ನಿತ್ಯನೈಮಿತ್ತಿಕೇಚೈವ ಪ್ರಾತ ಸ್ಸಾಯಂಚ ಭೂತಲೇ । ೧೪
ತತ್ರಸ್ಥ ವೈಷ್ಣವಾದೀನಾಂ ಸರ್ವೇಷಾಂಚ ಬುಧೋತ್ತಮಾಃ ।
ಹರಿತೀರ್ಥ ಪ್ರಸಾದಾದೀನ್ ದದ್ಯಾಚ್ರೀ ಹರಿಪಾದುಕೌ।೧೫

ಪ.ಪು.ಸಂ. ೧ ಅಧ್ಯ.

ಪ್ರತಿನಿತ್ಯವೂ ನಿತ್ಯ ನೈಮಿತ್ತಿಕದಲ್ಲೂ ಭಗವಂತನ ಆರಾಧನೆ (ಪೂಜ) ಆದ ನಂತರ ಮಹಾಮಂಗಳಾರತಿಯಾದ ಮೇಲೆ ಸ್ತೋತ್ರವನ್ನು ಹೇಳಿದ ನಂತರ ಶ್ರೀವೈಷ್ಣವರು ಮತ್ತು ಎಲ್ಲಾ ಭಕ್ತರಿಗೂ, ಶ್ರೀಶಠಕೋಪ (ಶ್ರೀಭಗವಂತನ ಅನುಗ್ರಹ) ತೀರ್ಥ ತುಳಸೀ ಪ್ರಸಾದಗಳನ್ನು ಕೊಡುವದು.-ಕೊಡಬೇಕು.

ಶಠಕೋಪಮರ್ಯಾದಾ- (ಭಗವಂತನ ಅನುಗ್ರಹ)

ಶಠಕೋಪ ಇತಿಖ್ಯಾತಃ ಶ್ರೀಹರೇಃ ಪಾದುಕಾದ್ವಯಂ ।
ಸಾಕ್ಷಾತ್ ಶ್ರೀಪತಿ ಭಾವೇನ ಶಿರೋಧಾರ್ಯಂ ಸದಾಭವೇತ್ ।

ಶ್ರೀ ಭಗವತ್ಪಾದುಕೆಗೆ ಶ್ರೀ ಶಠಕೋಪವೆಂದು ಹೆಸರು. ಆ ಶಠಕೋಪವನ್ನು ಎಲ್ಲರೂ ಶ್ರೀಮನ್ನಾರಾಯಣನ ಪಾದಗಳೆಂದೇ ತಿಳಿದು ಶಿರಸ್ಸಿನಲ್ಲಿ ಧರಿಸಬೇಕು-(ಶ್ರೀಶಠಕೋಪ ವಿಚಾರ ಹಿಂದಿನ-ಅಧ್ಯಾಯದಲ್ಲಿ ತಿಳಿಸಿರುವುದು)

ಶಠಗೋಪ ಪ್ರಧಾನೇ ತ್ರಿವಾರ ನಿರೂಪಣಮ್ -

ಶಠಗೋಪ ಪ್ರಧಾನೇತು ತ್ರಿವಾರಂ ಯದಿ ದೀಯತೇ ।
ಪ್ರಥಮಂ ಶಿರಸಾದ್ಧೃತ್ವಾ-ತದನುದಕ್ಷಿಣೆ ಭುಜೇ।
ಪುನಶ್ಚ-ಶಿರಸಾ ಚೈವ ತ್ರಿವಾರಂ ಧಾರಯೇದ್ದ್ವಿಜಾಃ ।

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಪಂಚ ವಾರಂ -

ಶಠಕೋಪ ಪ್ರಧಾನ್ಯೇತು ಪಂಚವಾರಂ ಯಥಾ ಭವೇತ್।
ತದಾ ಚಾಗ್ರೇತು ಶಿರಸಾ ತದನುರ್ದಕ್ಷಿಣೇ ಭುಜೇ ।
ವಾಮೇಚಾಂಜಲಿನಾ ಚೈವ ತತಸ್ತು ಶಿರಸಾ ಪುನಃ ।
ಏವಂ ಕ್ರಮೇಣ ವೈ ಪಂಚವಾರಂ ತದ್ಧಾರಯೇದ್ಬುಧಃ ।

ತ್ರಿವಾರ (ಮೂರಾವೃತ್ತಿ) ಮಾಡುವಾಗ ಮೊದಲು ಶಿರಸ್ಸು ನಂತರ ದಕ್ಷಿಣಭುಜ ಪುನಃ ಶಿರಸ್ಸು ಈ ರೀತಿ ಇಡಬೇಕು.-

ಪಂಚವಾರ ಮರ್ಯಾದೆ-

ಮೊದಲು ಶಿರಸ್ಸು ಅನಂತರ ದಕ್ಷಿಣಭುಜ. ಅನಂತರ ಉತ್ತರಭುಜ (ಎಡ ಭುಜ) ಅಂಜಲಿ ಹಸ್ತ-ಪುನಃ ಶಿರಸ್ಸು-

ಭಗವತ್ಪಾದುಕೌ ಯಸ್ತು ಶಿರಸಾ ನಚ ಧಾರಯೇತ್ ।
ತಸ್ಯಭೂಯಾ ನ್ಮಹಾಪಾಪಂ ರೌರವಂ ನರಕಂಭುವಿ।

\+ + +

ಯಸ್ತು ಮತ್ತೋಧನಾದಿಭ್ಯಃ ಅಧಿಕಾರೋಗರ್ವಿತಃ
ಶ್ರೀಧರೇಃ ಪಾದುಕಾಸ್ವೀಯಾ ಗೃಹಾಗಮನ ಮಿಚ್ಛತೇ ।
ತಸ್ಯವಂಶಕ್ಷಯಂ ಭೂಯಾ ತದಾ ಗ್ರಾಮಸ್ಯ ಕ್ಷಯಂ ಧ್ರುವಮ್!

ದೇವಸ್ಥಾನದಲ್ಲಿ ಪ್ರತಿಷ್ಠಿತವಾಗಿರುವ ಭಗವತ್ಪಾದುಕೆಯನ್ನು (ಶ್ರೀಶಠಕೋಪ) ನನಗೆ ಭಕ್ತಿಯಿದೆ ಅಲಂಕಾರ ರೂಪದಲ್ಲಿ ಕಿರೀಟದಂತೆ ಶಿರಸ್ಸಿನ ಮೇಲೆ ಧರಿಸುತ್ತೇನೆ." ಎಂದು ಹೇಳಿ ಧರಿಸಿದಲ್ಲಿ ಅಂವನಿಗೆ ರೌರವಾದಿ ನರಕಗಳುಂಟಾಗುತ್ತವೆ. ಅಲ್ಲದೇ ಧನಿಕನಾದವನು ತನಗೆ ಅಧಿಕಾರವಿದೆ ಎಂಬ ಅಹಂಕಾರದಿಂದ ದೇವಸ್ಥಾನದಲ್ಲಿರುವ ಶ್ರೀಶಠಕೋಪವನ್ನು ಮನೆಯಲ್ಲೇ ಪೂಜೆ ಮಾಡುತ್ತೇನೆಂದು ಭಗವಂತನ ಪಾದುಕೆಯನ್ನು ತೆಗೆದುಕೊಂಡು ಹೋಗಬೇಕೆಂದು ತಿಳಿದಲ್ಲಿ ತೆಗೆದು ಕೊಂಡು ಹೋದಲ್ಲೂ ಅಂಥವರ ಕುಲಕ್ಷಯವಾಗುವುದಲ್ಲದೇ ಆ ಗ್ರಾಮಕ್ಕೂ ಕೆಡಕುಂಟಾಗುವುದು.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಶಠಕೋಪ ಮರ್ಯಾದೆಯೆನ್ನುವುದು (ನಮ್ಮ ತಲೆಯಮೇಲೆ ದೇವರ ಪಾದ) ಭಗವಂತನ ಅನುಗ್ರಹವೆಂದು ತಿಳಿಸಲಾಗಿದೆ. ಅದು ಚಾತುವರ್ಣಕ್ಕೂ ಸಮವು. ಏಕೆ? ಇಡೀ ಚರಾಚರ ಜಗತ್ತಿಗೂ ಸಮವು. ಅದನ್ನು ಸ್ವೀಕರಿಸಲು ಸ್ತ್ರೀ, ಬಾಲ, ಯುವ, ವೃದ್ಧ ಎಲ್ಲರಿಗೂ ಅಧಿಕಾರವುಂಟು. ತಂದೆ ತಾಯಿಗಳ ಅನು ಗ್ರಹಕ್ಕೆ ಎಲ್ಲರೂ ಸಮಭಾಗಿಗಳು. ನಿಯಮವೇನೆಂದರೆ ಆ ಕಿರೀಟ ರೂಪದಲ್ಲಿರುವ ಆ ಪಾದುಕೆಯನ್ನು ನಮ್ಮ ಮನೆಗೆ ತೆಗೆದುಕೊಂಡು ಹೋಗಬಾರದು. ಅದನ್ನು ನಮ್ಮ ಕೈಯಿಂದ ಮುಟ್ಟಬಾರದು. ನಮ್ಮ ತಲೆಯ ಮೇಲೆ ಆ ಪಾದುಕೆಯನ್ನಿಟ್ಟಾಗ ನಾವು ಶುದ್ಧರಾಗಿರಲಿ, ಇಲ್ಲದಿರಲಿ ಆ ಭಗವಂತನ ಪಾದುಕೆಗೆ ಯಾವ ಅಶುದ್ಧವೂ ಅಂಟುವುದಿಲ್ಲ. ಅದೇ ಕಾಲದಲ್ಲಿ ನಾವು ಶುದ್ಧರಾಗುತ್ತೇವೆ.

ಮಹಾಮಂಗಳಾರತಿ ಕಾಲದಲ್ಲಿ ತೀರ್ಥ ಪ್ರಸಾದ ಶ್ರೀಶಠಕೋಪ(ಭಗವಂತನ ಅನುಗ್ರಹ) ಮರ್ಯಾದೆ ನಡೆಸುವಾಗ ಮೊದಲಿನಿಂದ ಕೊನೆಯವರೆಗೂ ಒಂದೇ ಸಮನಾಗಿ ನಡೆಯುವುದು. ಯಾರಿಗೂ ಯಾವ ಅಧಿಕ ನ್ಯೂನತೆ ನಡೆಯುವುದಿಲ್ಲ. ಎಲ್ಲವೂ ವರ್ಣಾಶ್ರಮ ಕ್ರಮದಲ್ಲಿ ನಡೆಸಲಾಗುವುದು. ಇದು ಆಗಮ ಶಾಸ್ತ್ರ ನಿಯಮವು.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಮಹಾಮಂಗಳಾರತಿ ಕಾಲದಲ್ಲಿ ಅಗ್ರ ಮರ್ಯಾದೆ ಎಂದು ಹೇಳಿ ಮೊದಲು ನಿಂತವರಿಗೆ ಮೂರಾವೃತ್ತಿ ತೀರ್ಥ ಮೂರಾವರ್ತಿ ಅಥವಾ ಐದಾವೃತ್ತಿ ಶಠಕೋಪ ಮರ್ಯಾದೆ ಕಾಣಬರುತ್ತೆ. ಇತರರಿಗೆಲ್ಲ ಒಂದು ಉದ್ದರಣೆ ತೀರ್ಥ, ಒಂದಾವೃತ್ತಿ ಶ್ರೀಶಠಕೋಪ ಮರ್ಯಾದೆ ನಡೆಯುವುದು. ಇದು ಭೇಧವಲ್ಲವೇ? ಎಲ್ಲರಿಗೂ ಶಾಸ್ತ್ರನಿಯಮವನ್ನನುಸರಿಸಿ ಮೂರಾವೃತ್ತಿ ತೀರ್ಥ ಎರಡಾವೃತ್ತಿ ಪ್ರಸಾದ ಮೂರಾವೃತ್ತಿ ಅಥವಾ ಐದಾವೃತ್ತಿ ಶಠಕೋಪ ಮರ್ಯಾದೆ ನಡೆಯಬೇಕ-ಲ್ಲವೇ ? ನ್ಯಾಯ, ಎಲ್ಲರಿಗೂ ಸಮವಾಗಿ ನಡೆಯಬೇಕಾದುದು ಧರ್ಮ. ಸಾಧು-ಆದರೆ ಕಾಲವನ್ನು ಅನುಸರಿಸಬೇಕಾಗಿರುವುದು. ಕಾಲವನ್ನು ಹೇಗೆ ಒದಗಿಸುವುದು-ಪ್ರತಿಯೊಬ್ಬರಿಗೂ ಆ ರೀತಿ ಮರ್ಯಾದೆ ನಡೆಸುವುದಾದರೆ ಕಾಲ ವ್ಯತ್ಯಾಸದಿಂದ ಇತರ ಕೆಲಸಗಳಿಗೆ ಕುಂದುಂಟಾಗಿ ಅವ್ಯವಸ್ಥೆಯುಂಟಾಗುವುದು.

ನಾವು ಯಾರಿಗೂ ಪ್ರತಿನಿಧಿಗಳಾಗಿ ದೇವಸ್ಥಾನಕ್ಕೆ ಬಂದಿರುವುದಿಲ್ಲ. ನಾವು ಯಾರಿಗೆ ಪ್ರತಿನಿಧಿಗಳು? ನಾವೇ ಪ್ರತ್ಯಕ್ಷವಾಗಿ ಬಂದಿರುತ್ತೇವೆ. ಹಾಗಿರುವಾಗ-ಆಳ್ವಾರಾಚಾರ್ಯರುಗಳಿಗೂ ನಮಗೂ ಸಹ ಪ್ರತಿನಿಧಿಗಳಾಗಿ ಅಗ್ರತೀರ್ಥ ಶ್ರೀಶಠಕೋಪ ಮರ್ಯಾದೆಯನ್ನು ಹೊಂದುವ ಹಿರಿಯರೂ, ಗುರುಗಳೂ, ಮಠಾಧಿಪತಿಗಳೂ ಆಚಾರ್ಯರೂ, ಅಧ್ಯಾಪಕರೂ, ಎಂಬ ಮರ್ಯಾದಾಭೇದಭಾವ-ವನ್ನು ಮರೆತು ನಾವು ಯಾರಿಗೂ ಕಡಿಮೆ ಇರುವುದಿಲ್ಲ. ನಾವೂ ಸಮ ಎಂಬ ಅಹಂಭಾವವುಂಟಾಗಿ ನಮ್ಮ ಜ್ಞಾನ ಭಕ್ತಿ, ನೈಚ್ಯ ಭಾವಕ್ಕೆ ಆತಂಕವುಂಟಾಗುವುದ ಲ್ಲದೇ ಭಗವಂತನ ಅನುಗ್ರಹಕ್ಕೂ ಪಾತ್ರರಾಗುವುದಿಲ್ಲ. ಆದ್ದರಿಂದ ಇದನ್ನು ತಿಳಿದ ನಮ್ಮ ಹಿರಿಯರು ಗುರುಗಳು ಆಗಮಶಾಸ್ತ್ರವನ್ನನುಸರಿಸಿ ಮಹಾಮಂಗಳಾರತಿ ಸಮಯವಲ್ಲಿ ಎಲ್ಲರಿಗೂ ಸಮವಾಗಿ ಒಂದು ಉದ್ದರಣೆ ತೀರ್ಥ ಒಂದಾವೃತ್ತಿ ಶ್ರೀಶಠಕೋಪ ಮರ್ಯಾದೆ ಒಂದಾವೃತ್ತಿ ಪ್ರಸಾದ ವಿನಿಯೋಗ ಎಂದು ಏರ್ಪಡಿಸಿ ದುವರು. ಒಂದೇ ಆವೃತ್ತಿಯಾದರೂ ಅದು ಪೂರ್ಣವೆಂದು ತಿಳಿಯಬೇಕು.

ಪ್ರತಿನಿಧಿ ಸಮನ್ವಯ

ಮೂರಾವೃತ್ತಿ-ಶ್ರೀ ಶಠಕೋಪ ಮರ್ಯಾದೇ ಸಮನ್ವಯ

1.ಶಿರಸ್ಸು - 2. ದಕ್ಷಿಣ ಭುಜ 3.ಪುನಃ ಶಿರಸ್ಸು

1. ಎಲ್ಲಾ ಜ್ಞಾನಾನುಷ್ಠಾನಪರರಾದ ಬ್ರಾಹ್ಮಣರೇ ಆದಿಯಾಗಿ ಆಳ್ವಾರಾಚಾರ್ಯ-ರುಗಳಿಗಾಗಿ-

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

2. ದಕ್ಷಿಣ ಭುಜ (ಬಲಭುಜ) ರಾಜ, ರಾಜ್ಯ, ಪ್ರಜೆಗಳು, ಇದರಲ್ಲಿ ಕ್ಷತ್ರಿಯ, - ವೈಶ್ಯ, ಶೂದ್ರ ಎಲ್ಲಾ ಪ್ರಜೆಗಳೂ ಸೇರಿರುವುದು-ಅವರಿಗಾಗಿ.

3. ಪುನಃ ಶಿರಸ್ಸು- ಪ್ರತಿನಿಧಿಗಳಾಗಿ ನಿಂತವರಿಗೆ-

ಐದಾವೃತ್ತಿ (ಸಮನ್ವಯ)-ಮೇಲಿನ ಅರ್ಥವನ್ನೇ ವಿಶದೀಕರಿಸುವುದು

1. ಶಿರಸ್ಸು- ಪ್ರಧಾನ ಅಂಗ- (ಬ್ರಾಹ್ಮಣೋಸ್ಯ ಮುಖಮಾಸೀತ್) ವರ್ಣಾಶ್ರಮದ ಎಲ್ಲಾ ಬ್ರಾಹ್ಮಣರ ಪರವಾಗಿ (ಪ್ರತಿನಿಧಿಯಾಗಿ)

2. ದಕ್ಷಿಣಭುಜ(ಬಲಭುಜ-ಬಾಹೂ, ರಾಜನ್ಯಕೃತಃ) ರಾಜ, ಮಹಾರಾಜ, ಸಾರ್ವಭೌಮ-ರಾಜ್ಯದ ಎಲ್ಲಾ ಕ್ಷತ್ರಿಯರ, ಅಧಿಕಾರಿಗಳ ಪರವಾಗಿ (ಪ್ರತಿನಿಧಿಯಾಗಿ)

ವಾಮಭುಜ (ಎಡಭುಜ-ಊರೂತದಸ್ಯಯದ್ವೈಶ್ಯಃ) ಎಲ್ಲಾ ವೈಶ್ಯರ ಪರವಾಗಿ (ಪ್ರತಿನಿಧಿಯಾಗಿ)

ಎರಡು ಭುಜಗಳ ಸಮನ್ವಯ.-

ಕ್ಷತ್ರಿಯರು, ಮತ್ತು ವೈಶ್ಯರು ಇಬ್ಬರೂ ವೇದಾಧಿಕಾರಿಗಳು ಆದರೆ ಇಬ್ಬರೂ ಅಧ್ಯಯನಾಧಿಕಾರಿಗಳು ಆದರೆ ಅಧ್ಯಾಪನವಿರುವುದಿಲ್ಲ. ಆದ್ದರಿಂದ ಇಬ್ಬರೂ ಸಮವು-ಸಮಾನರು-ಅವರಿಗಾಗಿ ಅವರ ಪ್ರತಿನಿಧಿಯಾಗಿ.

4.ಅಂಜಲಿ ಹಸ್ತ- (ಪದ್ಭ್ಯಾಂಗಂ ಶೂದ್ರೋಽಜಾಯತ) ಭಗವಂತನ ಪಾದ ಕಮಲದಲ್ಲಿ ಉತ್ಪನ್ನರಾದವರು. ದಾಸ್ಯಭಾವ, ಅಂಜಲಿ ಹಸ್ತದವರು-ಭಗವಂತನ ಹೃದಯ ಕಮಲದಲ್ಲಿರತಕ್ಕವರು. ಆತ್ರೇಯ ವರ್ಣದವರು ಅವರಿಗಾಗಿ ಅವರ ಪ್ರತಿನಿಧಿಯಾಗಿ.

5. ತದನಂತರ ಪುನಃ ಶಿರಸ್ಸು-ನಮ್ಮ ಪ್ರತಿನಿಧಿಯಾಗಿ ನಿಂತವರಿಗೆ-ಈ ರೀತಿ ಚಾತುರ್ವರ್ಣದವರಿಗೆ ಅವರ ಪ್ರತಿನಿಧಿಯಾಗಿ ಮರ್ಯಾದಾ ಕ್ರಮವು ನಡೆಯುವುದು.

ಇದಕ್ಕೆ ಪ್ರಮಾಣ ಶ್ಲೋಕವು

ಸ್ಥಾನಾಧಿಪಂ ಸಮಾರಭ್ಯ ಅರ್ಚಕಾಧ್ಯಾಪಕಾನ್ ತಥಾ ।
ತದನು ವೈಷ್ಣವಾದೀಂಚ ತಥಾನ್ಯಮತ ಬ್ರಾಹ್ಮಣಾನ್। ೧೮
ಕ್ಷತ್ರಿಯಾ.ದಿಕ ಭಕ್ತಾನ್ ಚ ವೈಶ್ಯಾನ್ ಶೂದ್ರಾನ್ ತಥೈವ ಚ ।

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಏತೇಷುಚ ಮಹಾವಿಷ್ಣು ಮತಸ್ಥಾನ್ ಪ್ರಥಮಂಭುವಿ ।
ತತ್ತದ್ವರ್ಣೇಷ್ವಾಶ್ರಮೇಷು ಸಂವೀಷ್ಯ ವಿಬುಧೋತ್ತಮಾ: ।
ತೇಷುಚೈವ ದೇವಸ್ಯ ಸೇವಕಾದೀನ್ ತು ವೈಪುರಾ ।
ಸಂತರ್ಪಯೇತ್ ಪ್ರಸಾದಾದ್ಯೈರ್ಯಥಾ ವಿಧಿ ಮುನೀಶ್ವರಾ।
ಶ್ರೀ ವೈಷ್ಣವ ದ್ವಿಜಾನಾಂಚ ರಾಜ್ಞ್ಯಾಂ ಚಾಪಿ ತಥೈವಚ ।
ಮತಾಧ್ಯಕ್ಷಾಧಿಕಾನಾಂಚ ಯತೀನಾಂಚ ತಪಸ್ವಿನಾಂ । ೨೧
ತತ್ತದದ್ಯೋಗ್ಯಾದಿಕಂ ವೀಕ್ಷ್ಯ ತ್ರಿವಾರಂಹರಿತೀರ್ಥಕಂ ।೨೨
ದ್ವಿವಾರಂ ತು ಪ್ರಸಾದಂ ಚ ತ್ರಿವಾರಂ ವಾಥ ಪಂಚವಾ ।
ಶ್ರೀಹರೇ ಶಠಕೋಪಂಚ ದದ್ಯಾವ್ವೈ ಮುನಿಪುಂಗವಾಃ ।
ಪ.ಪು.ಸಂ.ಅನು.೧

ನಿರ್ಮಾಲ್ಯಂ

ಸ್ವೀಕರೋಮಿ ಜಗನ್ನಾಥ ಸಂಸಾರಾತ್ತಾರಯ ಪ್ರಭೋ ।
ಮನ್ತ್ರಮೇವಂ ಸಮುಚ್ಚಾರ್ಯ ಗಂಧಂ ಸಮುಲಿಪ್ಯಚ ।
ಶಿರಸಾಧಾರಯೇನ್ನಿತ್ಯಂ ಮೂಲ್ಯಾನಿ ಕುಸುಮಾನಿವ ।
ತಾಂಬೂಲಮಪಿ ಸಂಪ್ರಾಪ್ತಂ ದೇವದೇವಸ್ಯ ಸನ್ನಿಧೌ। ೫೬
ರೋಗಘ್ನಂ ಚೈವ ಪಾಪಘ್ನಂ ಭಕ್ಷಯಾಮಿ ದಿನೇ ದಿನೇ ।
ಮನುಮೇವಂ ಸಮುಚ್ಚಾರ್ಯ ತಾಂಬೂಲಮಪಿ ಭಕ್ಷಯೇತ್।
ವಕ್ಷ್ಯಮಾಣಂ ಸಮುಚ್ಚಾರ್ಯ ತುಲಸೀಮಪಿ ಭಕ್ಷಯೇತ್।
ಯತ್ಪಾಪಂ ಯೌವನೇ ಬಾಲ್ಯೇ ಕೌಮಾರೇ ವಾರ್ಧಕೇಕೃತಮ್ ।೫೮
ತತ್ಪಾಪಸ್ಯವಿನಾಶಾರ್ಥಂ ಭಕ್ಷ್ಯಾಮಿ ತುಲಸೀ ದಳಮ್।
(ಅತ್ರಿ ಸಂ. ೭೮)
ಪೂಜಾಂತೇ ದೇವದೇವಸ್ಯ ಪಾದೋದಕ ನಿಷೇವಣಂ।
ಪಾದುಕಾಧಾರಣಂ ತಸ್ಯ ಗಂಧ ಪುಷ್ಪಾದ್ಯಲಂಕೃತಂ।

ಮಹಾಮಂಗಳಾರತಿ ಆದನಂತರ ಸಂಸ್ಕೃತವೇದ ದ್ರಾವಿಡವೇದ(ಪ್ರಬಂಧ)ಗಳನ್ನನುಸಂಧಿಸಿದ ಮೇಲೆ ಶ್ರೀಶಠಕೋಪವೆಂಬ ಭಗವದನುಗ್ರಹವಾದ ಮೇಲೆ ಭಗವಂತನು ಧರಿಸಿದ ನಿರ್ಮಾಲ್ಯ ವಸ್ತುಗಳಾದ ಗಂಧ, ಪುಷ್ಪ, ತುಳಸೀ, ತಾಂಬೂಲಗಳನ್ನು ವಿನಿಯೋಗಿಸುವರು. ಅದನ್ನು ಗೋಷ್ಠಿಯವರು ಸ್ವೀಕರಿಸಬೇಕು.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ತಾಂಬೂಲ ಮತ್ತು ತುಳಸೀದಳವನ್ನು ಭಕ್ತಿಯಿಂದ ಭಕ್ಷಿಸುವುದರಿಂದ ಮನ್ನೋಭಾವವನ್ನ-ನುಸ್ಮರಿಸ್ಲಿ; ನರಗಳು ವ್ಯತ್ಯಾಸವಾಗಿ ಶರೀರದಲ್ಲಿ ಆರೋಗ್ಯವುಂಟಾಗುವುದು. ಕೌಮಾರಾ, ಬಾಲ್ಯ, ಯೌವನ, ವಾರ್ಧಕ್ಯದಲ್ಲಿ ಮಾಡಿದ ಪಾಪಗಳು ಪರಿಹಾರವಾಗುವುದು.

ಶ್ರೀ ಭಗವತ್ತೀರ್ಥ (ಪಂಚತೀರ್ಥ)

ಸಾಲಗ್ರಾಮಂಚ ಚಕ್ರಂಚ ಸೂಕ್ತ ಪೌರುಷಮೇವಚ।
ತುಳಸೀ ಶಂಖತೋಯಂ ಚ ಪಂಚತೀರ್ಥಂ ಪ್ರಕಲ್ಪಯೇತ್।

1. ಸಾಲಗ್ರಾಮ 2.ಚಕ್ರಾಯುಧ (ಅಥವಾ ಸ್ನಪನಬೇರ) 3. ಪುರುಷಸೂಕ್ತ (ವೇದ ಮಂತ್ರ) 4. ತುಳಸೀ ಮಿಶ್ರ ತೀರ್ಥ 5. ಶಂಖ.

ತುಳಸೀ ಮಿಶ್ರವಾದ ತೀರ್ಥವನ್ನು ವೇದಮಂತ್ರವಾದ ಪುರುಷಸೂಕ್ತದಿಂದ ಶಂಖದ ಮೂಲಕ ಸಾಲಗ್ರಾಮ ಮತ್ತು ಚಕ್ರಾಯುಧಕ್ಕೆ (ಸ್ನಪನ ವಿಗ್ರಹ) ಅಭಿಷೇಕ ಮಾಡಿ ಬಂದ ತೀರ್ಥಕ್ಕೆ ಪಂಚತೀರ್ಥವೆಂದು ಹೆಸರು.

ಭಗವತ್ಪಾದ ತೀರ್ಥಂತು ನಿತ್ಯಂ ಯಃಪಿಬತೇನರಃ ।
ತಸ್ಯಾರೋಗ್ಯಂ ಸದಾಭೂಯಾ ತ್ಸಾಯುಜ್ಯಂ ಲಭತೇಧ್ರುವಂ ।೪೭
ಸಾಲಗ್ರಾಮ ಶಿಲಾವಾರಿ ತುಳಸೀದಳ ಸಂಯುತಂ ।
ಸರ್ವರೋಗಾದಿ ಶಮನಂ ಸರ್ವಪಾಪಹರಂ ಭವೇತ್ ॥ ೪೮
ಪ.ಪು.ಸಂ.೪
ವಿಶೇಷ ಸ್ನವನೇಕಾಲೇ ದೇವಸ್ಯ ಮಧುವಿದ್ವಿಷಃ ।
ಸ್ನಾನೋದಕಂ ಪಿಬೇದ್ಯಸ್ತು ಸರ್ವಕಾಮಾನವಾಪ್ನುಯಾತ್ ।

ತುಳಸೀದಳ ಮಿಶ್ರಿತ ತೀರ್ಥವನ್ನು ಮೇದಮಂತ್ರವನ್ನು ಉಚ್ಚರಿಸುತ್ತಾ ಸಾಲಗ್ರಾಮಕ್ಕೆ ಅಭಿಷೇಕ ಮಾಡಿದ ತೀರ್ಥವನ್ನು ಯಾರು ಪ್ರತಿದಿನವೂ ತೆಗೆದುಕೊಳ್ಳುತ್ತಾರೋ ಅವರಿಗೆ ಯಾವ ವ್ಯಾಧಿಯೂ ಬರುವುದಿಲ್ಲ. ಅಲ್ಲದೆ ಸರ್ವ ಪಾಪ ಪರಿಹಾರವಾಗುತ್ತದೆ. ಅಲ್ಲದೆ ಸರ್ವಾಭಿಷ್ಟವೂ ಉಂಟಾಗುತ್ತದೆ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಪೂಜಾನ್ತೇದೇವದೇವಸ್ಯ ಪಾದೋದಕ ನಿಷೇವಣಂ ।
ಪಾದಾಂಬುವಾ ಪಿಬೇತ್ ಪೂರ್ವಂ ಗಂಗಾತೀರ್ಥ ಸಮಂ ಶುಭಂ।

—ಶ್ರೀಪ್ರಶ್ನ ಸಂ

ಪೂಜೆಯಾದ ಮೇಲೆ ಭಗವಂತನ ಅಭಿಷೇಕ ತೀರ್ಥವನ್ನು ತೆಗೆದುಕೊಳ್ಳಬೇಕು. ಅದು ಗಂಗಾ ತೀರ್ಥಕ್ಕೆ ಸಮವು. ಗಂಗಾತೀರ್ಥ ಮತ್ತು ದೇವರ ತೀರ್ಥ ಎರಡೂ ಒಂದೇ ಆಗಿರುವುದು. ಗಂಗಾತೀರ್ಥವೂ ಭಗವಂತನ ಪಾದದಿಂದಲೇ ಹರಿದುಬಂದಿರುವುದು.

ಪ್ರತ್ಯಹಂ ದೇವದೇವಸ್ಯ ಅರ್ಚನಾನಂತರಂ ಭುವಿ ।
ನಿತ್ಯನೈಮಿತ್ತಿಕೇ ಚೈವ ಪ್ರಾತಸ್ಸಾಯಂಚ ಭೂತಲೇ ।೧॥

ತತ್ರಸ್ಥ ವೈಷ್ಣವಾದೀನಾಂ ಸರ್ವೇಷಾಂಚ ಬುಧೋತ್ತಮಾಃ ।
ಹರಿತೀರ್ಥ ಪ್ರಸಾದಾದೀನ್ ದದ್ಯಾಚ್ಚ್ವ ಹರಿಪಾದುಕಾ।

ಪ.ಪು.ಸಂ.ಅನು ೧

ಪ್ರತಿನಿತ್ಯವೂ ನಿತ್ಯ ವೈಮಿತ್ತಿಕದಲ್ಲೂ ಭಗವಂತನ ಆರಾಧನೆ-ಪೂಜೆಯಾದ ನಂತರ ಮಹಾಮಂಗಳಾರತಿ ಸಮಯದಲ್ಲಿ ಬಂದ ಶ್ರೀ ವೈಷ್ಣವರು ಮತ್ತು ಎಲ್ಲಾ ಭಕ್ತರಿಗೂ ಭಗವಂತನ ಸನ್ನಿಧಿಯಲ್ಲಿ ಎಲ್ಲರಿಗೂ ತೀರ್ಥ (ಪಂಚತೀರ್ಥ) ಪ್ರಸಾದ ಗಳನ್ನು ಅನಂತರ ಶ್ರೀಶಠಕೋಪ ಮರ್ಯಾದೆಯನ್ನೂ ಹಗಲು ರಾತ್ರಿ ಎರಡು ವೇಳೆಯಲ್ಲೂ ನಡೆಸಬೇಕು.

ತದಾಸರ್ವೇ ಮಹಾಭಕ್ತ್ಯಾ ತಿಷ್ಠನ್ನೇವ ಹರೇರ್ಗೃಹೇ ।
ವರ್ಣಾಶ್ರಮಾದಿ ಭೇದೇನ ಸ್ತ್ರೀ ಪುಂ ಬೇದೇನಚ ದ್ವಿಜಾಃ ।
ಹರಿನಾಮಾನಿ ಸಂಕೀರ್ತ್ಯಮನಸಾ ಶ್ರದ್ಧಯಾನ್ವಿತಾಃ ।
ಅನ್ಯಸಂಭಾಷಣಂ ತ್ಯಕ್ತ್ವಾ ಸ್ವೀಕರೇ ತೀರ್ಥ ಮಾದಿಕಾನ್ ।

ತೀರ್ಥ ವಿನಿಯೋಗ ಸಮಯದಲ್ಲಿ ಭಕ್ತರೆಲ್ಲರೂ ತಮ್ಮ ತಮ್ಮ ವರ್ಣಾಶ್ರಮ ಕ್ರಮವನ್ನನುಸರಿಸಿ ಸ್ತ್ರೀ ಪುರುಷರು ಬೇರೆ ಬೇರೆಯಾಗಿ ನಿಂತು ತೀರ್ಥ ಪ್ರಸಾದಗಳನ್ನು ಸ್ವೀಕರಿಸಬೇಕು. ಈ ಸಮಯದಲ್ಲಿ ಭಗವನ್ನಾಮ ಸಂಕೀರ್ತನೆ ಮಾಡಬೇಕು. ಇತರ ಸಂಭಾಷಣೆ ಮಾತುಗಳನ್ನಾಡಬಾರದು.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ತೀರ್ಥ ಪ್ರಾಶನ ಕ್ರಮ ಮತ್ತು ಉದ್ದೇಶ

ವಸ್ತ್ರಂಚ ತ್ರಿಗುಣೀಕೃತ್ಯ ಪಾಣೌ ಪಾಣಿಂ ನಿವೇಶ್ಯಚ ।
ತತ್ರ ತೀರ್ಥಂಚ ಸಂಯೋಜ್ಯ ತ್ರಿಃ ಪಿಬೇದ್ಬಿಂದು ವರ್ಜಿತಂ।
ಅತ್ರಿ ಸಂ.೭೮
ಅವಿದ್ಯಾ ಮೂಲನಾಶಾಯ ಜನ್ಮ ಕರ್ಮನಿವೃತ್ತಯೇ । ೪೩
ಜ್ಞಾನವೈರಾಗ್ಯ ಸಿದ್ಧ್ಯರ್ಥಂ ವಿಷ್ಣೋಃ ಪಾದೋದಕಂ ಶುಭಮ್ ।
ಪರಮಾಣು ಸಮಂ ತೀರ್ಥಂ ಮಹಾಪಾತಕ ನಾಶನಮ್। ೪೪
ತಥೈವಾಷ್ಟಗುಣಂ ಪಾಪಂ ತದ್ಭೂಮೌ ಪತಿತಂ ಯದಿ । ಅತ್ರಿ ಸಂ. ೭೮

ವಸ್ತ್ರವನ್ನು ಮೂರವೃತ್ತಿ ಮಡಿಸಿ ಅದರ ಮೇಲೆ ನಮ್ಮ ಎಡದ ಕೈ ಅದರ ಮೇಲೆ ಬಲದ ಕೈ ಇಟ್ಟು ತೀರ್ಥವನ್ನು ಬಿಂದು ವರ್ಜಿತವಾಗಿ ಮೂರಾವೃತ್ತಿ ಸ್ವೀಕರಿಸಬೇಕು.

ಅವಿದ್ಯೆಯು ನಾಶವಾಗುವುದಕ್ಕೂ ಜನ್ಮ ಕರ್ಮ ಎಂದರೆ ಪುನರ್ಜನ್ಮ ಇಲ್ಲದೇ ಇರುವುದಕ್ಕೂ ಜ್ಞಾನ ವೈರಾಗ್ಯ ಉಂಟಾಗುವುದಕ್ಕೂ ಮಹಾವಿಷ್ಣುವಿನ ಪಾದೋದಕ ತೀರ್ಥವನ್ನು (ವೇದ ಮಂತ್ರಗಳಿಂದ ಸಾಲಿಗ್ರಾಮಕ್ಕೂ [illegible]ವೆಂಬ ದೇವರ ಪಾದಕ್ಕೂ ಅಭಿಷೇಕ ಮಾಡಿದ ತೀರ್ಥ) ಸ್ವೀಕರಿಸಬೇಕು. ಒಂದು ಪರಮಾಣು ತೀರ್ಥವೇ ಆದರೂ ನಾವು ಸ್ವೀಕರಿಸಿದಲ್ಲಿ ಅದು ನಾವು ಮಾಡಿರುವ ಮಹಾ ಪಾತಕಗಳನ್ನೂ ಹೋಗಲಾಡಿಸುವುದು. ತೀರ್ಥವನ್ನು ಸ್ವಲ್ಪವೂ ಕೆಳಗೆ ಚೆಲ್ಲದೆ ತೆಗೆದುಕೊಳ್ಳಬೇಕು. ಅರ್ಥಾತ್ ಕೆಳಗೆ ಚೆಲ್ಲಿದರೆ ಮಹಾ ದೋಷವುಂಟಾಗುವುದು. ಶರೀರಶುದ್ಧಿ ಮನೋಶುದ್ಧಿ ವಾಕ್ ಶುದ್ಧಿ ಇರಬೇಕೆಂದರ್ಥವು.

ಅಕಾಲಮೃತ್ಯು ಹರಣಂ ಸರ್ವವ್ಯಾಧಿ ವಿನಾಶನಂ ।
ವಿಷ್ಣೋಃ ಪಾದೋದಕಂ ತೀರ್ಥಂ ಶಿರಸಾಧಾರಯಾಮ್ಯಹಂ ।
ವಿಷ್ಣುಪಾದೋದಕಂ ತೀರ್ಥಂ ಪೀತ್ವಾ ನಕ್ಷಾಳ ಹೇತಕರಂ ।
ಕ್ಷಾಳಯೇದ್ಯದಿ ಮೋಹೇನ ಪಂಚಪಾತಕಮಾಪ್ನುಯಾತ್।
ಆಮ್ರೇಕ್ಷಂ ಖಂಡ ತಾಂಬೂಲಂ ಚರ್ವಣೇ ಸೋಪಾನಕೇ ।
ವಿಷ್ಣ್ವಂಘ್ರಿತೋಯಪಾನೇಚ, ನಾದ್ಯಂತಾಚಮನಂಸ್ಮೃತಂ ।

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಭಗವಾನ್ ಪವಿತ್ರಂ ಭಗವತ್ಪಾದೋದಕಂ ಪವಿತ್ರಂ।
ತತ್ಪಾನೇನಾಚಮನಂ ಯಥಾಹಿ ಸೋಮೇಷ್ವೇತಿ ।
ವೈದ್ಯನಾಥೀಯೇ ಆಹ್ನಿಕ ಕಾಂಡ ಪುಟ ೩೦೭
ಪಾರಮೇಷ್ಠ್ಯ ಸಂ.

ಭಗವಂತನು ಶ್ರೇಷ್ಠನು, ಭಗವಂತನ ಪಾದೋದಕವು ಪವಿತ್ರವು. ಅರ್ಥಾತ್ ಭಗವಂತನ ಪ್ರತಿನಿಧಿ ಸಾಲಗ್ರಾಮ ಮತ್ತು ಶಠಕೋಪವೆಂಬ ಭಗವತ್ಪಾದುಕೆಯನ್ನು ವೇದ ಮಂತ್ರಗಳಿಂದ ಅಭಿಷೇಕ ಮಾಡಲ್ಪಟ್ಟ ತೀರ್ಥವನ್ನು ತೆಗೆದುಕೊಳ್ಳುತ್ತೇವೆ. ಆ ರೀತಿ ತೆಗೆದುಕೊಂಡಮೇಲೆ. ಬಾಯಿ ಅಶು.ದ್ಧಿಯಾಯಿತು, ಕೈ ಅಶುದ್ಧಿಯಾಯಿತು ಎಂದು ಹೇಳಿ ಶುದ್ಧಿಗಾಗಿ ಕೈ ತೊಳೆಯಬಾರದು. ಆಚಮನ ಮಾಡಬಾರದು. ಅಶ್ರದ್ಧೆ ಅಥವಾ ಅಜ್ಞಾನ ಅಹಂಕಾರದಿಂದ ಕೈತೊಳೆಯುವುದಾಗಲಿ, ಆಚಮನ ಮಾಡುವುದಾಗಲಿ ನಿಷೇಧವು. ಆ ರೀತಿ ಮಾಡಿದಲ್ಲಿ ಪಂಚಮಹಾ ಪಾತಕಕ್ಕೆ ಒಳಗಾಗುತ್ತಾರೆ.

ಮಾವಿನಹಣ್ಣು ಕಬ್ಬು, ತಾಂಬೂಲ ಇವುಗಳನ್ನು ತಿಂದರೂ, ಸೋಮಪಾನ ಮಾಡಿದಮೇಲೂ ಆಚಮನ ಮಾಡಬೇಕಾದುದಿಲ್ಲವು. ಇದು ಧರ್ಮಶಾಸ್ತ್ರವು.

ಪ್ರಥಮಂ ದೇಹಶುದ್ಧಿಂಚ ದ್ವಿತೀಯಂ ಪಾಪನಾಶನಂ ।
ತೃತೀಯಂ ಮೋಕ್ಷ ಸಿದ್ಧಿಂಚ ವಿಷ್ಣು ಪಾದೋದಕಂ ಶುಭಂ ।
ಪಾರಮೇಶ್ಯಷ್ಠ್ಯ ಸಂ.

ಭಗವತ್ಪಾದತೀರ್ಥವನ್ನು ಭಕ್ತಿಯಿಂದ ತೆಗೆದುಕೊಳ್ಳುವುದರಿಂದ ಅಕಾಲ ಮೃತ್ಯು ಇರುವುದಿಲ್ಲ. ಸರ್ವವ್ಯಾಧಿ ನಿವಾರಣೆಯಾಗುವುದು. ಮೊದಲನೇ ಉದ್ಧರಣೆ ತೀರ್ಥದಿಂದ ಶರೀರ ಶುದ್ಧಿ . ಎರಡನೇಯ ಉದ್ಧರಣೆ ತೀರ್ಥದಿಂದ ನಾವು ಮಾಡಿದ ಪಾಪ ನಾಶನವು. ೩ನೇ ಉದ್ಧರಣೆ ತೀರ್ಥದಿಂದ ಪುನರ್ಜನ್ಮ ರಹಿತವಾದ ಮೋಕ್ಷ, ಭಗವಂತನ ಸಾಮೀಪ್ಯವನ್ನು ಹೊಂದುವರು. ಮೇಲಿನ ಶ್ಲೋಕವನ್ನು ಹೇಳುತ್ತಾ ತೀರ್ಥವನ್ನು ಸ್ವೀಕರಿಸಬಹುದು.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ತೀರ್ಥ ವಿನಿಯೋಗ ಕ್ರಮ

ಸಿದ್ಧಾನಾಂಚ ಮಹರ್ಷೀಣಾಂ ಯತೀನಾಂ ಬ್ರಹ್ಮವಾದಿನಾಮ್ । ೧೦೧
ವೈಷ್ಣವಾನಾಂ ಬ್ರಾಹ್ಮಣಾನಾಂ ವೇದವೇದಾರ್ಥಸೇವಿನಾಂ ।
ಕ್ಷತ್ರಿಯಾಣಾಂಚ ವೈಶ್ಯನಾಂ ಭಕ್ತಾನಾಂ ಪಾದ ಜನ್ಮನಾಮ್ ।೧೦೨
ಕ್ರಮತೋ ದೇವದೇವಸ್ಯ ಪಾದತೀರ್ಥಂ ಪ್ರದಾಪಯೇತ್ ।

ಶ್ರೀಪ್ರಶ್ನ

ಮೊದಲು ಸಿದ್ಧರು, ಎರಡನೇಯದಾಗಿ ಮಹರ್ಷಿಗಳು, ಮೂರನೇಯದಾಗಿ ಮಠಾಧಿಪತಿಗಳಾದ ಯತಿಗಳು, ಅನಂತರ ಬ್ರಹ್ಮವಾದಿಗಳು (ಮಹಾ ವಿದ್ವಾಂಸರು) ಆಚಾರ್ಯ ಪುರುಷರು ಅನಂತರ ಗೃಹಸ್ಥರು (ಶ್ರೀವೈಷ್ಣವ) ಅನಂತರ ಬ್ರಾಹ್ಮಣಾದಿ ಚಾತುರ್ವರ್ಣ ಕ್ರಮವಾಗಿ ತೀರ್ಥ ಮರ್ಯಾದಾ ಕ್ರಮವು.

ಮೇಲೆ ತಿಳಿಸಿದ ಕ್ರಮದ ಮಧ್ಯದಲ್ಲಿ ದೇವಸ್ಥಾನದ ಸನ್ನಿಧಿ ಪರಿಚಾರಕರನ್ನು ಆಯಾ ಆಲಯ ಮರ್ಯಾದೆ -ಸ್ಥಳದ ಗೌರವ ಸನ್ನಿವೇಶಗಳನ್ನನುಸರಿಸಿ ಸೇರಿಸಿಕೊಳ್ಳಬೇಕು. ಏಕೆಂದರೆ ಶಾತ್ತುಮರೈ (ಮಹಾಮಂಗಳಾರತಿ) ಕಾಲದಲ್ಲಿ ಆವರವರ ಸ್ಥಾನ ನಿರ್ಣಯಿಸಲ್ಪಟ್ಟಿರುವುದು.

ಅರ್ಚಕಃ ಸನ್ನಿಧೌ ತಿಷ್ಠನ್ ಪರಿಚಾಕೋಽರ್ಧ ಮಂಡಪೇ।
ಅನ್ಯೇಷಾಂ ಮಂಡಪೇ ಚೈವ ಅನುಲೋಮ ಸ್ಸುದೂರತಃ ।

ಅರ್ಚಕರು ಸನ್ನಿಧಿ ಪಕ್ಕದಲ್ಲೂ ಅರ್ಚಕರಿಗೆ ಸಹಾಯಕರಿಗಿರುವ ಪರಿಚಾರಕರು ಅರ್ಧ ಮಂಟಪದಲ್ಲೂ (ಅರ್ಚಕರ ಪಕ್ಕದಲ್ಲೂ) ಅನಂತರ ಅಧ್ಯಾಪಕರು ಇತ್ಯಾದಿಗಳಾಗಿ ನಿಲ್ಲಬಹುದು. ಅರ್ಚಕರಿಗೆ ಪ್ರಥಮ ತೀರ್ಥ ಎಂಬ ವಿಷಯದಲ್ಲಿ ಅರ್ಚಕರೇ ತೀರ್ಥ ಕೊಡುವವರಾದ್ದರಿಂದ ಅವರಿಗೆ ಯಾವ ರೀತಿ ಮೊದಲು ತೀರ್ಥ ಎನ್ನುವುದನ್ನು ವಿವರಿಸಿದೆ. ಇಲ್ಲಿ ಅರ್ಚಕರು ಸನ್ನಿಧಿ ಪಕ್ಕದಲ್ಲಿ ನಿಂತರೆ ಹೇಗೆ ತೀರ್ಥ ಕೊಡುವುದು ?

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಆಳ್ವಾರಾಚಾರ್ಯ ಪ್ರತಿನಿಧಿಗಳಿಗೆ ಅಗ್ರತೀರ್ಥ ಮರ್ಯಾದೆಯಾದ ನಂತರ ತೀರ್ಥ ಕೊಡುವ ಅರ್ಚಕರ ಸಂಬಂಧಿ ಅರ್ಚಕರು ಅಥವಾ ಇತರ ಸನ್ನಿಧಿ ಅರ್ಚಕರು ಎಂದರ್ಥವು. ಅನಂತರ ಪರಿಚಾರಕ ಅಧ್ಯಾಪಕರು ಇತ್ಯಾದಿ ಆಗ ತೀರ್ಥಕಾರರೆಂದು ಹೇಳುವ ಆಚಾರ್ಯ ಪುರುಷರು, ಮಠಾಧಿಪತಿಗಳು, ಸ್ನಾನಾಚಾರ್ಯರು ಇತ್ಯಾದಿ ಇವರಿಗೆ ಮರ್ಯಾದೆ ಆದ ನಂತರ ಸನ್ನಿಧಿ ಅರ್ಚಕರು ಪರಿಚಾರಕರು ಎಂದು ಹೇಳುವಾಗ ಗೋಷ್ಠಿಗೆ ಮೊದಲು ತೀರ್ಥಕೊಟ್ಟಂತಾಗುವುದು. ಇದೇ ಅರ್ಚಕರಿಗೆ ಮೊದಲು ಮರ್ಯಾದೆ ಎಂದರ್ಥವು. ಅಲ್ಲಿಗೆ ಎಲ್ಲವೂ ಸಮಂಜಸವಾಯಿತು. ಮುಂದೆ ಕ್ರಮವಾಗಿ ನಡೆಯುವುದು.

ಸ್ನಾನಾಧಿಪಂ ಸಮಾರಭ್ಯ ಅರ್ಚಕಾಧ್ಯಾಪಕಾನ್ತಥಾ । ೯೯
ತದನು ವೈಷ್ಣವಾದೀಂಚ ತಥಾನ್ಯಮತಬ್ರಾಹ್ಮಣಾನ್ । ೧೮
ಕ್ಷತ್ರಿಯಾದಿಕ ಭಕ್ತಾಂಚ ವೈಶ್ಯಾನ್ ಶೂದ್ರಾನ್ ತಥೈವಚ ।
ಏತೇಷು ಚ ಮಹಾವಿಷ್ಣುಮತಸ್ಥಾನ್ ಪ್ರಥಮಂಭುವಿ ।
ತತ್ತದ್ವರ್ಣೇಷ್ವಾಶ್ರಮೇಷು ಸಂವೀಕ್ಷ್ಯ ಬುಧೋತಮಾಃ ।
ತೇಷುಚೈವ ಚ ದೇವಸ್ಯ ಸೇವಕಾದೀನ್ ತು ವೈಪುರಾ। ೨೦
ಸಂತರ್ಪಯೇ ಪ್ರಸಾದಾದ್ಯೇರ್ಯಥಾ ವಿಧಿಮುನೀಶ್ವರಾಃ।
ಶ್ರೀ ವೈಷ್ಣವ ದ್ವಿಜಾನಾಂಚ ರಾಜ್ಞಾಂಚಾಪಿ ತಥೈವಚ ।
ಮಠಾಧ್ಯಕ್ಷ್ಯಕಾನಾಂಚ ಯತೀನಾಂಚ ತಪಸ್ವಿನಾಂ ।
ತತ್ತದ್ಯೋಗ್ಯಾದಿಕಂ ವೀಕ್ಷ್ಯ ತ್ರಿವಾರಂ ಹರಿತೀರ್ಥಕಂ ।
ದ್ವಿವಾರಂ ತುಪ್ರಸಾದಂಚ ತ್ರಿವಾರಂ ವಾ ಥ ಪಂಚವಾ ।
ಶ್ರೀ ಹರೇಶ್ಯಠಕೋಪಂಚ ದದ್ಯಾದ್ವೈ ಮುನಿಪುಂಗವಾಃ ।

ಪ.ಪು.ಸಂ. ಅನು.೧ .

ತೀರ್ಥ ಪ್ರಸಾದಗಳನ್ನು ಸ್ನಾನಾಚಾರ್ಯರು ಮೊದಲಾಗಿ ಅನಂತರ ಅರ್ಚ-ಕರು, ತದನಂತರ ಇತರ ಶ್ರೀವೈಷ್ಣವರು, ಅನಂತರ ತದಿತರಮತ ಬ್ರಾಹ್ಮ-ಣರು ಅನಂತರ ರಾಜರು (ಕ್ಷತ್ರಿಯರು) ವೈಶ್ಯರಿಗೂ ಭಾಗವತಿರಿಗೂ ಶೂದ್ರ-ರಿಗೂ ವರಸೆಯಾಗಿ ಕೊಡಬೇಕು. ಅರ್ಥಾತ್ ಇದರಲ್ಲಿ ಶ್ರೀ ವೈಷ್ಣವರಿಗೆ ಮೊದಲು ಕೊಟ್ಟು ಅನಂತರ ವರ್ಣಾಶ್ರಮಧರ್ಮ ಎಂದರೆ ಬ್ರಾಹ್ಮಣ, ಕ್ಷತ್ರಿಯ ವೈಶ್ಯ ಶೂದ್ರ ಕ್ರಮವಾಗಿ ಎಂದರ್ಥವು. ಆಶ್ರಮ ಧರ್ಮವು ಬ್ರಹ್ಮಚಾರೀ, ಗೃಹಸ್ಥ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ವಾನಪ್ರಸ್ಥ ಸನ್ಯಾಸಿ ಎಲ್ಲರೂ ಗೋಷ್ಠಿಯಲ್ಲಿ ಮಿಳಿತವಾಗಿಯೇ ಇರುವು ದರಿಂದ ನೋಡಿಕೊಡಬೇಕು. ದೇವಾಲಯದಲ್ಲಿ ಕೈಂಕರ್ಯ ಮಾಡುವ ಪರಿ-ಚಾಲಕರೂ ಸೇವಕಾದಿಗಳಿಗೂ ತೀರ್ಥ ಪ್ರಸಾದವನ್ನು ಮುಂದಾಗಿ ಕೊಡಬೇಕು. ಅಲ್ಲದೇ ಶ್ರೀವೈಷ್ಣವಮತಸ್ಥರು, ಬ್ರಾಹ್ಮಣರಿಗೂ, ದೇಶಾಧೀಶ್ವರರಾದ ರಾಜ ಮಹಾರಾಜರಿಗೂ ಮತಾಧ್ಯಕ್ಷರು, ಯತಿಗಳು ತಪಸ್ಸು ಧ್ಯಾನ ಮಾಡುವ ಯೋಗಿಗಳಿಗೂ ಅವರವರ ಯೋಗ್ಯತೆಗನುಸಾರ ಭಗವತ್ತೀರ್ಥವನ್ನೂ ಮೂರಾವೃತ್ತಿ-ಪ್ರಸಾದವನ್ನು ಎರಡಾವೃತ್ತಿ (ಅವರಿಗೊಂದು+ಅಧ್ಯಾಪಕತನಕ್ಕಾಗಿ ಒಂದು) ಕೊಡಬೇಕು. ಶಠಕೋಪ ಮರ್ಯಾ ದೆಯನ್ನು ಮೂರಾವೃತ್ತಿಯಾಗಲಿ ಅಥವಾ ಐದಾವೃತ್ತಿಯಾಗಲೀ ಮರ್ಯಾದಿಸಬೇಕು.

ಪ್ರಸಾದ ವಿನಿಯೋಗ

ತದಾಸರ್ವೇ ಮಹಾಭಕ್ತ್ಯಾ ತಿಷ್ಠನ್ನೇವ ಹರೇರ್ಗೃಹೇ ।
ವರ್ಣಾಶ್ರಮಾದಿ ಭೇದೇನ ಸ್ತ್ರೀ ಪುಂ ಭೇದೇನಚ ದ್ವಿಜಃ ।
ಹರಿನಾಮಾನಿ ಸಂಕೀರ್ತ್ಯ ಮನಸಾಶ್ರದ್ಧಯಾನ್ವಿತಾಃ ।
ಅನ್ಯಸಂಭಾಷಣಂ ತ್ಯಕ್ತ್ವಾ ಸ್ವೀಕರೇತೀರ್ಥಮಾದಿಕಾನ್ ।

ಈ ರೀತಿಯಲ್ಲಿ ಎಂದರೆ ತೀರ್ಥ ಪ್ರಸಾದ ಕೊಡುವ ಸಮಯದಲ್ಲಿ ಅವರವರ ವರ್ಣಾಶ್ರಮದ ಪ್ರಕಾರವಾಗಿ ಸ್ತ್ರೀ ಪುರುಷರನ್ನು ಬೇರೆ ಬೇರೆಯಾಗಿ ನಿಲ್ಲಿಸಿ ಅನಂತರ ತೀರ್ಥ ಪ್ರಸಾದಗಳನ್ನು ನಿಂತುಕೊಂಡು ಸ್ವೀಕರಿಸಬೇಕು.-

ಆ ಸಮಯದಲ್ಲಿ ಭಗವನ್ನಾಮ ಸಂಕೀರ್ತನೆಯನ್ನು ಮಾಡಬೇಕು. (ವೇದ ಮತ್ತು ಸ್ತೋತ್ರ ಪಾಠಗಳು) ತೀರ್ಥ ಪ್ರಸಾದ ಕೊಡುವ ಸಮಯದಲ್ಲಿ (ಸ್ವೀಕರಿ ಸುವ ಸಮಯದಲ್ಲಿ) ಇತರವಾದ ಸಾಂಸಾರಿಕ ಮಾತುಗಳನ್ನಾಡಬಾರದು.

ವಿನಿಯೋಗ ಕ್ರಮ

ಸ್ಥಾನಾಧಿಪಂ ಸಮಾರಭ್ಯ ಅರ್ಚಕಾಧ್ಯಾಪಕಾನಿಚ ।
+++ +++ +++
ಮತಾಧ್ಯಕ್ಷಾದಿಕಾನಾಂಚ ಯತೀನಾಂಚ ತಪಸ್ವಿನಾಮ್।
ತತ್ತದ್ಯೋಗ್ಯಾದಿಕಂ ಪೇಕ್ಷ್ಯ ....।
ದ್ವಿವಾರಂ ತು ಪ್ರಸಾದಂಚ..........।

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಮಹಾಮಂಗಳಾರತಿ ಕಾಲದಲ್ಲಿ ಗೋಷ್ಠಿ ತೀರ್ಥವನ್ನು ಕೊಟ್ಟ ಕ್ರಮದಲ್ಲಿ ಪ್ರಸಾದವನ್ನೂ ವಿನಿಯೋಗಿಸುವುದು-ಇಲ್ಲಿ ಪ್ರಸಾದ ಮರ್ಯಾದಸ್ಥರಿಗೆ ಎರಡಾವೃತ್ತಿ ಮೂರಾವೃತ್ತಿ ಕೊಡಬಹುದು. (ಒಂದು ಅವರಿಗಾಗಿ+ ಇನ್ನೊಂದು ಅಧ್ಯಾಪಕರ ಕಾರ್ಯಗೌರವಕ್ಕಾಗಿ)

ಅರ್ಪಿತಂ ದಮನೀಮಾಲಾಂ ಪಾತ್ರೇನಿಕ್ಷಿಪ್ಯ ದೇಶಿಕಃ ।
ಆಚಾರ್ಯಋತ್ವಿಜಾಂಚೈವ ಸೇವಕಾನಾಮತಃ ಪರಂ ।
ವೈಷ್ಣವಾನಾಂ ವರ್ಣಾಶ್ರಮವಿಭೇದತಃ ।
ಪ್ರಸಾದಂ ಶಿರಸಾಭಕ್ತ್ಯಾ ಯೋಭಿಭರ್ತಿನರೋತ್ತಮಃ ।
ತಸ್ಯಕಾಯ ಗತಿಂಪಾಪಂ ತಕ್ಷಣಾದೇವ ನಶ್ಯತಿ ।
ತನ್ಮಾತ್ಸರ್ವಪ್ರಯತ್ನೇನ ಪ್ರಸಾದಂ ಧಾರಯೇತ್ಸದಾ ।
ಶುಭಂಚವಾಂಚಿತಾರ್ಥಂಚ ಜ್ಞಾನದ್ಂ ಚಾಮೃತಪ್ರದಂ ।
ತನ್ಮದ್ಭಾಗವತಾದೀನಾಂ ಪ್ರಸಾದಂ ದಾಪಯೇತ್ಕ್ರಮಾತ್ ।

ನಳಕೂಬರ ಸಂ.

ತೀರ್ಥಪ್ರಸಾದಂ ನೀತ್ವಾ ಚ ಆಚಾರ್ಯಾಯ ಪ್ರದಾಪಯೇತ್ ।
ಯತೀಸಾಂಚಮುನೀನಾಂಚ ವೈಷ್ಣವಾನಾಂತಥೈವಚ ।
ದೀಕ್ಷಿತ ಬ್ರಾಹ್ಮಣಾನಾಂಚ ದಾಪಯೇತ್ಕ್ರಮಯೋಗತಃ ।
ಕ್ಷತ್ರಿಯಾಣಾಂವಿಶಾಂ ಚೈವ ಶೂದ್ರಾದೀನಾಂ ಯಥಾವಿಧಿ ।

ಮಾರ್ಕಂಡೇಯ ಸಂ.

ದೃಷ್ಟಿದೋಷಂ ಸ್ಪೃಷ್ಟದೋಷಂ ನ ವಿಚಾರ್ಯಹರೇಗೃಹೇ ।
ಸರ್ವೈರಪಿ ಪರಿಗ್ರಾಹ್ಯೋ ಪ್ರಸಾದೋ ಮುನಿಸತ್ತಮಾಃ । ೯
ಯಃ ಕರೋತಿ ವಿಭೇದೋಸ್ಮಿ ತಸ್ಯವಂಶಕ್ಷಯಂ ಭವೇತ್ ।
ಪ್ರಸಾದಂ ನಿಂದಕೋಯಸ್ತು ಸಗಚ್ವೇನ್ನರಕಂ ಧ್ರುವಂ ।೧೦

ಪ.ಪು.ಸಂ. ೪

ಭಗವತ ಪ್ರಸಾದ ಶ್ರೇಷ್ಠವೆಂದು ಹೇಳಿ ಸ್ವೀಕರಿಸಿದರೆ ಅನಂತ ಪುಣ್ಯ ಫಲ ವೆಂಬುದಾಗಿ ಹೇಳಿದ ಮೇಲೆ ಅಂಥ ಭಗವತ ಪ್ರಸಾದವನ್ನು ಕೊಡುವಾಗ ಅವರು ನೋಡಿದರು ಇವರು ನೋಡಿದರು ದೃಷ್ಟಿದೋಷವಾಯಿತು ಯಾರು ಯಾರೋ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಮುಟ್ಟಿದರು ಮುಂತಾಗಿ ಹೇಳಿ ಪ್ರಸಾದವನ್ನು ಸ್ವೀಕರಿಸದಿದ್ದಲ್ಲಿ ಅವರ ವಂಶ ಕ್ಷಯ ಮತ್ತು ಅವರು ನರಕಭಾಗಿಗಳಾಗುವರು. ಆದ್ದರಿಂದ ಪ್ರಸಾದ ನಿಂದನೆ ಮಾಡಬಾರದು.

ವಿನಿಯೋಗಸ್ಯ ಸಮಯೇ ಪ್ರಸಾದಸ್ಯ ಶ್ರೀಯಃಪತೇಃ । ೬೫
ಅನ್ಯಸಂಭಾಷಣಾದೀನಿ ವರ್ಜಯೇ ತ್ತತ್ರಭುವಿ ।

ಭಗವತ ಪ್ರಸಾದವನ್ನು ವಿನಿಯೋಗ ಮಾಡುವ ಕಾಲದಲ್ಲಿ ಇತರ ಮಾತುಗಳು-ಸಾಂಸಾರಿಕ-ಲೋಕವಾರ್ತೆಗಳನ್ನಾಡಬಾರದು-ಭಕ್ತಿಭಾವ ಪ್ರೀತಿಯಿಂದ ಪ್ರಸಾದವನ್ನು ಸ್ವೀಕರಿಸಬೇಕು.

ಗ್ರಾಮಪ್ರದಕ್ಷಿಣೇಕಾಲೇ ದೇವಸ್ಯ ಮಧುದ್ವಿಷಃ । ೬೬
ಸನ್ನಿಧಿಂ ಪ್ರಾಪ್ಯ ಸರ್ವೇಪಿ ಪಾದುಕಾ ಶಿರಸಾವಹೇತ್ ।

ಭಗವಂತನ ಗ್ರಾಮೋತ್ಸವ ಕಾಲದಲ್ಲೂ ದೇವಸ್ಥಾನದಲ್ಲಿ ಮಹಾಮಂಗಳಾರತಿ ಸಮಯದಲ್ಲೂ ದೇವರ ಮುಂದೆ ಎಲ್ಲರೂ ಶ್ರೀಶಠಕೋಪವನ್ನು ಶಿರಸ್ಸಿನಲ್ಲಿ ಧಾರಣೆ ಮಾಡಬಹುದು-(ಅರ್ಚಕರು ನಮ್ಮ ತಲೆಯ ಮೇಲೆ ಇಡುವರು)

ಯಸ್ತು ಗಚ್ಛೇದ್ಧರೇರ್ಗೇಹಂ ಹರಿದರ್ಶನ ಕಾಮ್ಯಯಾ । ೫
ಫಲಪುಷ್ಪಾದಿಕೈರ್ಯುಕ್ತೋ ಯಥಾಶಕ್ತಿ ಬುಧೋತ್ತಮಾಃ ।
ಸತುನಿರ್ಮಲ ಭಕ್ತ್ಯಾ ವೈ ಪಾದುಕೌಶಿರಸಾ ವಹೇತ್ । ೫
ವಿನಾತತ್ಪಾದ. ವಹನಾ ತ್ಸರ್ವಂ ಸ್ಯಾನ್ನಿಷ್ಫಲಂಭುವಿ।
ತಸ್ಮಾತ ಪ್ರತ್ಯಹಮೇತೌ ಶ್ರೀಪಾದುಕೌ ಶಿರಸಾವಹೇತ್ ।
ಪ.ಪು.೧ ಅನಂ.೧

ಯಾರು ಪ್ರತಿದಿನವೂ ಮಹಾಭಕ್ತಿ ಶ್ರದ್ಧೆಯಿಂದ ತಮ್ಮ ತಮ್ಮ ಶಕ್ತ್ಯಾನುಸಾರ ಪುಷ್ಪ ಫಲಾದಿಗಳನ್ನು ತೆಗೆದುಕೊಂಡು ಭಗವದ್ದರ್ಶನಾರ್ಥವಾಗಿ ದೇವಾಲಯವನ್ನು ಕುರಿತು ಹೋಗುವರೋ ಅಂಥಃವರು ಭಗವತ್ಪಾದವನ್ನು (ಭಗವಂತನ ಅನುಗ್ರಹ) ಅಗತ್ಯ ಹೊಂದಬೇಕು. ಆ ರೀತಿ ಅನುಗ್ರಹವನ್ನು (ಶ್ರೀ ಶಠಕೋಪ ಮರ್ಯಾದೆ) ಹೊಂದದೆ ಇರುವವರಿಗೆ ಅವರು ಮಾಡಿದ ಭಗವದ್ದರ್ಶನ ಫಲವು ಉಂಟಾಗುವು

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ದಿಲ್ಲ. ಮುಖ್ಯವಾಗಿ ಪ್ರತಿನಿತ್ಯವೂ ಶಠಕೋಪ ಮರ್ಯಾದೆಯನ್ನು (ಭಗವಂತ ಅನುಗ್ರಹ) ಭಕ್ತರಾದವರು ಶಿರಸಾವಹಿಸಬೇಕು-ನಾವು ಯಾವಾಗಲೂ ಭಗವಂತನ ಸೇರಿದವರು ಎಂದರ್ಥವು.

ಶಠಕೋಪಂ ಗರ್ಭಾಗೃಹಾದ್ಬಹಿರಾನೀತೇಕರ್ತವ್ಯವಿಧಿಃ -

ಭಗವತ್ಪಾದುಕ ಯಸ್ಮಿನ್ ಕಾಲೇ ಗರ್ಭಗೃಹಾದ್ಬಹಿಃ ।
ಸಮಾನೀತೌ ಭವೇತ್ತಸ್ಮಿನ್ ಕಾಲೇತು ಮುನಿಸತ್ತಮಾಃ ।
ಸರ್ವಮಂಗಳ ವಾದ್ಯಾದೀನ್ ಅನ್ಯಾನ್ ಶ್ರೀ ಹರಿಲಾಂಛನಾನ್ ।
ಕರದೀಪಾದಿ ಸಕಲಾನ್ ವೇದ ಘೋಷಾದಿಕಾನ್ ತಥಾ । ೨೮
ಪ್ರಕಲ್ಪಯೇ ದ್ವಿಜಶ್ರೇಷ್ಠಾಯಥಾ ಶೌರೇರಿವ ದ್ವಿಜಾಃ ।
ಅನ್ಯಥಾ ಕುರುತೇ ಯಸ್ತು ಕ್ರೋಧಲೋಭಾದಿ ಹೇತುಭಿಃ ।
ತದ್ರಾಷ್ಟ್ರಂ ಚಾಧಿಪೋರಾಜಾ ಸರಾ ಸ್ಪರ್ದೇ ನಶ್ಯಂತಿಚ ।
ತಸ್ಯಭೂಯಾತ್ಸರ್ವನಾಶಂ ಸರ್ವದಾ ಚ ಮುನೀಶ್ವರಾಃ ।

ಯಾವಾಗಲಾದರೂ ಶ್ರೀಶಠಕೋಪವನ್ನು ಗರ್ಭಾಲಯದಿಂದ ಹೊರಕ್ಕೆ ತರಬೇಕಾದ ಸಮಯದಲ್ಲಿ ಭಗವಂತನ ಲಾಂಛನಗಳಾದ ಛತ್ರ, ಚಾಮರ, ಕೈದೀಪ ಸಕಲವಾದ ಮಂಗಳವಾದ್ಯಗಳಿಂದಲೂ ಅರ್ಚಕರು-ಪರಿಚಾರಕರು-ಅಧ್ಯಾಪಕರುಗಳು ಂದಿಗೂ ವೇದಘೋಷಗಳಿಂದಲೂ ಬಿಜಯಮಾಡಿಸಬೇಕೇ ಹೊರತು ಸುಮ್ಮನೆ ತರಬಾರದು ಅರ್ಥಾತ್ ಭಗವಂತನೇ ಬಿಜಯ ಮಾಡಿಸುವನೆಂ-ದರ್ಥವು. ಯಾರು ಹೀಗೆ ಮಾಡಲಿ ಅಥವಾ ಯಾವ ಕಾರಣವನ್ನಿಟ್ಟೇ ಆಗಲಿ ಕಾಮಕ್ರೋಧ ಲೋಭಾದಿ ಕಾರಣದಿಂದ ನಿಯಮಗಳನ್ನು ಬಿಟ್ಟು ಕಾರ್ಯ ನಡೆಸಿದಲ್ಲಿ ಅವರಿಗೆ ಸರ್ವನಾಶ ವಾಗುವುದಲ್ಲದೆ ಆದೇಶದ ರಾಜ (ಅಧಿಕಾರಿವರ್ಗ) ನಿಗೂ , ಪ್ರಜೆಗಳಿಗೂ ಕೂಡ ದೋಷವುಂಟಾಗಿ ನಾಶಸಂಭವಿಸುವುದು-ಅರ್ಥಾತ್ ಸರ್ವಮಂಗಳವಾದ್ಯ ಮರ್ಯಾದೆಗಳಿಂದ ಹೊರಕ್ಕೆ ತರಬೇಕು.

ಯದಾ ಶ್ರೀಹರಿ ಸೇವಾರ್ಥಮಾಗಚ್ಛಂತಿ ಮಹಾತ್ಮನಃ ।
ಶ್ರೀವೈಷ್ಣವಮತ ಸ್ಥಾಪನಾಚ್ಚಾರ್ಯೋದ್ಯಾಸ್ತಥೈವಚ।
ಸಾರ್ವಭೌಮಾಶ್ಚ ರಾಜಾಧಿರಾಜಾ ಶ್ಚೈವಧರಾತಲೇ ।
ತದ್ಗೌರವಾರ್ಥಮೇತೌ ಪಾದುಕೌ ಸರ್ವಲಾಂಛನೈಃ ।

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಛತ್ರಚಾಮರ ವಾದ್ಯೈಶ್ಚ-ನೀತ್ವಾ-ದ್ವಾರಾ ದ್ವಹಿಸ್ತಥಾ ।
ಪ್ರಥಮಾವರಣೇ ವಾಪಿ ದ್ವಿತೀಯಾವರಣೇ ಪಿವಾ ।
ತೃತೀಯೌವರಣೇವಾಥ ಆಗತಸ್ಯಾಧಿಕಾರತಃ ।
ಸಮ್ಮಾನಮಾಚರೇತ್ಗಂಧ ಪುಷ್ಪ ಮಾಲ್ಯಾಂಬರಾದಿಕೈಃ ।

ಪ.ಪ್ರ.ಸಂ.ಅನು.೧

ಭಗವದ್ದರ್ಶನಾರ್ಥವಾಗಿ ಬರುವ ಗೌರವಯುತ ಮಹಾತ್ಮರು ಶ್ರೀವೈಷ್ಣವ ಮತಸ್ಥಾಪಕರು (ಆಚಾರ್ಯ ಪುರುಷರು ೭೪ ಸಿಂಹಾಸನಾಧಿಪತಿಗಳು) ಮಠಾಧಿಪತಿಗಳು, ಸಿಂಹಾಸನಾಧಿಪತಿಗಳು ಇತ್ಯಾದಿ ರಾಜಮಹಾರಾಜರು, ಸಾರ್ವಭೌಮ ಚಕ್ರವರ್ತಿಗಳು, ಇತರ ಗೌರವಾನ್ವಿತ ಅಧಿಕಾರಿ ಪುರುಷರು ಅವರು ದೇವಸ್ಥಾನಕ್ಕೆ ಬಂದಾಗ ಅಥವಾ ದೇವಸ್ಥಾನದವರು, ಸಮುದಾಯದವರು ಕರೆದಾಗ ಅವರಿಗೆ ಅಧಿಕಾರಾನುಗುಣವಾಗಿ ಶ್ರೀಶಠಕೋಪ ಮರ್ಯಾದೆ ಮಾಡುವರು (ಅರ್ಥಾತ್ ಭಗವಂತನಲ್ಲಿ ಭಕ್ತಿ ಭಾವದಿಂದ ಅವರು ಭಗವಂತನನ್ನು ದರ್ಶಿಸಲು ಹೋದಾಗ ಭಗವಂತನೇ ನಮ್ಮನ್ನು ಪ್ರೀತಿಯಿಂದ ಕರೆಯಿಸಿಕೊಂಡು ಮರ್ಯಾದಿಸುವನು ಎಂದರ್ಥವು.

ಛತ್ರ ಚಾಮರ ದೀವಟಿಗೆ ವಾದ್ಯಗಳಿಂದೊಡಗೂಡಿ ಅಧ್ಯಾಪಕರು ವೇದಪಾರಾಯಣ ಅಧಿಕಾರಿಗಳೊಂದಿಗೆ ಹೊರಟು ಶ್ರೀಶಠಕೋಪವನ್ನು ಪಲ್ಲಕ್ಕಿಯಲ್ಲಿ ಬಿಜಯ ಮಾಡಿಸಿಕೊಂಡು ಬಂದವರ ಆಧಿಕ್ಯವನ್ನನುಸರಿಸಿ ಅವರಿರುವ ಸ್ಥಳಕ್ಕೆ ಹೋಗಿ ಎಂದರೆ ಪ್ರಥಮಾವರಣ, ದ್ವಿತೀಯಾವರಣ, ತೃತೀಯಾವರಣ ಸ್ಥಳದಲ್ಲಿ ಶ್ರೀಶಠಕೋಪ ಮರ್ಯಾದೆಯನ್ನು ನಡೆಸಿ ಅವರಿಗೆ ಭಗವತ್ ಪ್ರಸಾದಗಳಾದ ಗಂಧ ಪುಷ್ಪ ಮಾಲೆ, ಪರಿವಟ್ಟ (ದೇವರ ಶೇಷ ವಸ್ತ್ರ) ಇತ್ಯಾದಿಗಳಿಂದ ಮರ್ಯಾದಿಸುವರು (ಸನ್ಮಾನಿಸಬೇಕು)

ಸನ್ಮಾನಿತರಾದವರೂ ಸಹ ಅದೇ ರೀತಿಯಲ್ಲಿ -

ತಥಾಸಮ್ಮಾನಿತಾಶ್ಚೈವ ಯಥಾ ವಿಭವವಿಸ್ತರಂ ।
ಧನ ಭೂಷಣ ವಸ್ತ್ರಾದೀನ್ ಶ್ರೀಹರೇಶ್ಚ ಸಮರ್ಪಯೇತ್।
ಅರ್ಚಕಾಂಚ ಯಥಾಶಕ್ತಿ ತೋಷಯೇ ದ್ಭಗವತಿ ್ರಿಯಂ ।
ತಥಾತ್ಪಿತರ ಭಕ್ತಾನಾಂ ಸಂತೃಪ್ತಿಂಚ ಸಮಾಚರೇತ್ ।

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಈ ರೀತಿಯಲ್ಲಿ ಭಗವಂತನ ಅನುಗ್ರಹದಿಂದ ಸನ್ಮಾನಿತರಾದವರೂ ಸಹ ತಮ್ಮ ಶಕ್ತಿಗನುಸಾರವಾಗಿ ಧನಕನಕಾದಿ ವಾಹನ ವಸ್ತ್ರಾಭರಣಗಳನ್ನು ಭಗವಂತನಿಗೆ ಸಮರ್ಪಿಸಬಹುದು-ಅದೇ ರೀತಿಯಲ್ಲಿ ಅವರವರ ಶಕ್ತಿಯನ್ನನುಸರಿಸಿ ದೇವಸ್ಥಾನದ ಕೈಂಕರ್ಯದವರಿಗೆ, ಅರ್ಚಕರು, ಪರಿಚಾರಕರು, ಅಧ್ಯಾಪಕರು, ಇತರ ಭಕ್ತರು, ನೌಕರರಾದಿಯಾಗಿ ಎಲ್ಲರಿಗೂ ಕಿಂಚಿತ್-ಕಿಂಚಿತ್ ಯಥಾಶಕ್ತಿ ಮರ್ಯಾದಿಸಬಹುದು. ಇದು ಭಗವಂತನಿಗೆ ಪ್ರೀತಿಯಾಗುವದು-ಏಕೆಂದರೆ ಭಗವಂತನ ಕೈಂಕರ್ಯಪರರಿಗೆ ಮರ್ಯಾದಿಸುವುದರಿಂದ ಭಗವಂತನಿಗೆ ಪ್ರಿತಿಯುಂಟಾಗುವುದು.

ದೇವಸ್ಥಾನದಲ್ಲಿ ಮಹಾಮಂಗಳಾರತಿ ತೀರ್ಥ, ಶ್ರೀಶಠಕೋಪ ಮರ್ಯಾದೆ ಪ್ರಸಾದ ವಿನಿಯೋಗ ಎಂಬ ನಿತ್ಯ ಪೂಜಾ ವಿಧಾನಗಳು ಮುಗಿದ ಮೇಲೆ ಶ್ರೀಶಠಕೋಪವೆಂಬ ಭಗವತ್ಪಾದುಕೆಯು ದೇವಸ್ಥಾನದಿಂದ ಹೊರಕ್ಕೆ ಬರಬೇಕಾದಲ್ಲಿ ಅದಕ್ಕಿರುವ ವಿಧಿ ನಿಯಮಗಳನ್ನು ತಿಳಿಸಿದ್ದಾಯಿತು.

ಮಹಾಮಂಗಳಾರತಿ ನಿತ್ಯ ಪೂಜಾ ವಿಧಾನವು ಮುಗಿದಮೇಲೆ ಭಗವಂತನ ದರ್ಶನಾಪೇಕ್ಷೆಯಿಂದ ಮಂಗಲಾಶಾಸನ ಮಾಡಲು ದಯಮಾಡಿಸುವ ಶ್ರೀ ವೈಷ್ಣವ ಮತಸ್ಥರು, ಮಠಾಧಿಪತಿಗಳು ಅವರಿಗೆ ಶ್ರೀಶಠಕೋಪ ಮರ್ಯಾದೆ , ಅವರ ಅವರ ಅಧಿಕಾರ ಗೌರವವನ್ನನುಸರಿಸಿ ಅವರಿರುವ ಸ್ಥಳ ಇತ್ಯಾದಿಗಳನ್ನನುಸರಿಸಿ ಅವರಿಗೆ ಮರ್ಯಾದೆಯಾದ ಮೇಲೆ ಅವರು ಮೇಳ ತಾಳದೊಡನೆ ದೇವಸ್ಥಾನಕ್ಕೆ ಪ್ರದಕ್ಷಿಣವಾಗಿ ಬಂದು ಶ್ರೀಮಹಾಲಕ್ಷ್ಮಿ ಅಮ್ಮನವರನ್ನೂ ಪ್ರಧಾನ ಮೂರ್ತಿ ಭಗವಂತನನ್ನೂ ಮಂಗಲಾಶಾಸನ ಮಾಡಿ ಅನಂತರ ಆಳ್ವಾರಾಚಾರ್ಯರು ಮತ್ತು ಇತರ ಪರಿವಾರ ದೇವತಾ ಮೂರ್ತಿಗಳನ್ನೂ ಸೇವಿಸಿ ಎಲ್ಲರನ್ನೂ ಮಂಗಲಾ-ಶಾಸನ ಮಾಡಿ ಅನಂತರ ಭಗವಂತನ ತೀರ್ಥ ಪ್ರಸಾದ, ಶ್ರೀಶಠಕೋಪ ಮರ್ಯಾದೆ ಶೇಷವಸ್ತ್ರ ಪಟ್ಟು, ಪೀತಾಂಬರ, ಗಂಧ ಪುಷ್ಪ ಮರ್ಯಾದೆ ಆದ ನಂತರ ಅವರವರು ಅವರವರ ಸ್ಥಳಕ್ಕೆ ದಯಮಾಡಿಸುವರು.

ಉತ್ಸವೇಷು ಚ ಸರ್ವೇಷು ದೇವ ದೇವಸ್ಯ ಶಾರ್ಙ್ಗಿಣಃ ।
ಭಾರದಂಡಾಂತರೇ ಶಠಕೋಪಂ ಭುದೋತ್ತಮಃ ।
ದಂಡಾಂತರಮತಿಕ್ರಮ್ಯ ಲಘುಸಂಪ್ರೊ ೀಕ್ಷಣ ಮಾಚರೇತ್।

ಶೌನಕ ಸಂಹಿತಾ. (ಕೆ.ಎಸ್.ಎ.ಪು.೧೬೩.ಪಿ.ಓ.ಲ್.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಉತ್ತವ ಕಾಲದಲ್ಲಿ ಅರ್ಚಕರೂ ಸಹ ಶ್ರೀಶಠಕೋಪವನ್ನು ಕೈಯಲ್ಲಿ ಹಿಡಿದು ಬರುವನು. ಆಗ ನಾವು ಭಕ್ತಿಯಿಂದ ಮುಂದೆ ಬಂದು ತಲೆ ಬಗ್ಗಿ ನಮಸ್ಕರಿಸಿ ಶ್ರೀಶಠಕೋಪವನ್ನು ಸ್ವೀಕರಿಸಬೇಕು. ಉತ್ಸವ ಮೂರ್ತಿಯನ್ನು ಹೊತ್ತು ತರುವಾಗ ಅರ್ಚಕರು ಭಾರದಂಡದ ಮಧ್ಯದಲ್ಲಿರುವ ಅರ್ಚಕರ ಸಮೀಪಕ್ಕೆ ಭಕ್ತರು ಬಂದಾಗ ಮಾತ್ರ ಶ್ರೀಶಠಕೋಪದಿಂದ ಮರ್ಯಾದಿಸಬೇಕು. ಭಾರದಂಡದ ಹೊರಗೆ ಇರುವಾಗ ಶ್ರೀ ಶಠಕೋಪ ಮರ್ಯಾದಿಸಬಾರದು.

ಶ್ರೀಮತೇ ರಾಮಾನುಜಾಯ ನಮಃ
ಸಂಸ್ಕೃತ ವೇದ-ದ್ರಾವಿಡವೇದ - ದ್ರಾವಿಡವೇದ ಸಮರ್ಥನೆ

ಪರಾತ್ಪರ ವಸ್ತುವನ್ನು ನಿರ್ಣಯಿಸುವ ದೇದವನ್ನು ಸ್ವತಃ ಪ್ರಮಾಣ ಅಪೌರುಷೇಯ ಎಂಬುದಾಗಿ ಭಾರತಾದ್ಯಂತ ಒಪ್ಪಿರುವರು. ಅದಕ್ಕೆ ಪ್ರತಿ ಸ್ಪರ್ಧಿಯಾಗಿ ದ್ರಾವಿಡವೇದ ಎಂಬುದಾಗಿ ಒಂದು ಕಾಣಬರುವುದು-ಹಾಗಿದ್ದಲ್ಲಿ ಹಿಂದಿ ವೇದ, ರಾಜಸ್ಥಾನಿ ವೇದ, ಮಹಾರಾಷ್ಟ್ರ ವೇದ, ಆಂಧ್ರವೇದ, ಕರ್ಣಾಟಕ ವೇದ, ಉತ್ಕಲ, ಗೂರ್ಜರ , ಬಂಗಾಳವೇದ ಎಂಬುದಾಗಿ ಇರಬೇಕಾಗಿದ್ದಿತು. ಅವುಗಳು ಏಕೆ ಕಾಣಬರುವುದಿಲ್ಲ? ಕಾರಣವೇನು? ಪರಾತ್ಪರ ವಸ್ತುವಾದ ಭಗವಂತನ ವಿಚಾರವಾದ ಸ್ತೋತ್ರಗಳನ್ನು ಆ ಭಾಷೆಗ-ಳಲ್ಲಿ ಹೇಳಲಿಲ್ಲವೇ? ಒಂದು ವೇಳೆ ಹೇಳಿದ್ದರೂ ಏಕೆ ಅವರು ತಮ್ಮ ಭಾಷೆಯ ವೇದವೆಂದು ಹೇಳಿಕೊಳ್ಳುವುದಿಲ್ಲ?

ವೇದ ವಿಚಾರ

1. ವೇದವುಂಟು. ಬರೆದವರಿಲ್ಲ ಆದ್ದರಿಂದ ಅನಾದಿ-ನಿತ್ಯ ಸ್ವತಃಪ್ರಮಾಣ ಅಪೌರುಷೇಯ ಆದ್ದರಿಂದ ಭರತಖಂಡದ ಆಸೇತು ಹಿಮಾಲಯ ಪರ್ಯಂತ ಸಂಸ್ಕೃತ ವೇದವನ್ನು ಅಂಗೀಕರಿಸಿರುವರು-

ಅಧ್ಯೇತವ್ಯಂ ದ್ವಿಜಶ್ರೇಷ್ಠ ವೇದರೂಪಮಿದಂ ಕೃತಂ ।

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಎನ್ನುವ ಪ್ರಮಾಣದಂತೆ ದ್ವಿಜರಾದವರಿಗೆ ದ್ರಾವಿಡವೇದಾಧ್ಯಯನವು ದ್ರಾವಿಡ ಪ್ರಬಂಧ ಅವಶ್ಯ ಕರ್ತವ್ಯವೆಂದೂ ತಿಳಿಸಿರುವುದು-ಅಲ್ಲದೇ

"ಅರಿಯಕ್ಕಟ್ರವಲ್ಲಾರ್ ವೈಷ್ಣವರಾಲ್ ಕಡಲ್‌ಜ್ಞಾನತ್ತುಳ್ಳೇ" ಎನ್ನುವ ಶ್ರೀ ಪರಾಂಕುಶ ಸೂಕ್ತಿ ಪ್ರಮಾಣದಂತೆ (ನಮ್ಮೊಳ್ವಾರ್ ಸೂಕ್ತಿ) ದ್ರಾವಿಡ ವೇದಾಧ್ಯಯನವನ್ನು ಮಾಡಿದವರಿಗೆ ವೈಷ್ಣವತ್ವವು ಸಿದ್ಧಿಸುವುದು-"

ವೇದವೆಂದರೆ ಚಂದ್ರ, ಚಾಂದ್ರ ಪಾಣಿನೀ ಮೊದಲಾದವರ ವ್ಯಾಕರಣ ಸಂಸ್ಕೃತ ಭಾಷಾ ಶಬ್ದವಾಗಿರುವುದು.

ದ್ರಾವಿಡ ಭಾಷಾರೂಪ ಶಬ್ದರಾಶಿ ವೇದವು ಮೇಲೆ ತಿಳಿಸಿದ ವೇದದಂತೆ ಇಲ್ಲದ್ದರಿಂದ ವೇದ ಶಬ್ದ ಹೇಳಬಾರದೆಂದೂ.ದ್ರಾವಿಡ ಭಾಷೆಯು ಆಂಧ್ರಭಾಷಾ, ಕರ್ಣಾಟಕ ಭಾಷೆಯಂತೆ ಆಯಾ ದೇಶಗಳಿಗೆ ಮಾತ್ರ ಸೀಮಿತವಾಗಿ ಕಲ್ಪಿತವಾದ್ದರಿಂದ ಅರ್ವಾಚೀನವು. ಎಂದು ಕೆಲವರು ವಾದಿಸುವರು. ಆ ರೀತಿ ಹೇಳುವುದು ಯುಕ್ತವಲ್ಲವು.

2.ದ್ರಾವಿಡ ವೇದ- ಬರೆದವರುಂಟು, ದಕ್ಷಿಣ ಭಾರತದಲ್ಲಿ ಮಾತ್ರ, ಕೆಲವರು ಮಾತ್ರ ಅನುಸಂಧಿಸಿ ಬರುವರು-ಎಲ್ಲರೂ ಪ್ರಮಾಣವಾಗಿ ಅಂಗೀಕರಿಸುವುದಿಲ್ಲ-

3.ಇತರ ಭಾಷಾವೇದ - ಕರ್ತರೂ ಇಲ್ಲ- ವಿಷಯವೂ ಇಲ್ಲ. ಆದ್ದರಿಂದ ಆ ಪ್ರಸ್ತಾವಕ್ಕೆ ಅವಕಾಶವೇ ಇರುವುದಿಲ್ಲ. ಒಂದುವೇಳೆ ಇದ್ದರೂ ದ್ರಾವಿಡ ವೇದ ಪ್ರಚಾರಕ್ಕೆ ಬಂದ ನಂತರ ಅರ್ವಾಚೀನವಾಗಿ ಬಂದುದರ ಫಲವಾಗಿ ಅದಕ್ಕೆ ಆ ಹೆಸರು ಬರಲಿಲ್ಲ. ಅಲ್ಲದೇ ಅವುಗಳು ವೇದಕ್ಕೆ ನಿಕಟ ಸಂಬಂಧ ವಿಷಯಗಳು ಕಾಣಬರುವುದಿಲ್ಲ.

ಪ್ರಕೃತ ೧ ಸಮಸ್ಕೃತ ವೇದ ೨ ದ್ರಾವಿಡ ವೇದ ಇದರಲ್ಲಿ ಯಾವುದು ಮೊದಲು? ಯಾವುದು ಆನಂತರ ? ಈ ಎರಡರಲ್ಲಿ ಯಾವುದು ಹೆಚ್ಚು ಉತ್ಕರ್ಷ? ಕಾರಣ ತಿಳಿಯಬೇಕು. ಸಂಸ್ಕೃತ ವೇದವು ಅಪೌರುಷೇಯರಾಗಿ ಸ್ವತಃ ಪ್ರಮಾಣವಾಗಿ ಸರ್ವೋತ್ಕರ್ಷವಲ್ಲವೇ ?

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

2. ಸಂಸ್ಕೃತವೇದ, ದ್ರಾವಿಡ ವೇದ ಈ ವಿಭಾಗವು ಹೇಗೆ ಬಂದಿತು? ಯ್ಯಾವಾಗ? ಸರ್ವತ್ರ ವೇಳ್ಪವಲ್ಲವೇ ವ್ಯವಹಾರದ ಮಾತು. ಸಂಸ್ಕೃತ ವೇದವು ಋಗ್ಯಜು, ಸಾಮ, ಅಥರ್ವ ಎಂಬುದಾಗಿ ನಾಲ್ಕು ಭಾಗಗಳು-ಹಾಗಿರುವಾಗ ದ್ರಾವಿಡ ವೇದವೆನ್ನುವುದು ಎಲ್ಲಿ? ಹೇಗೆ?-

ಸಮಾಧಾನ- ವೇದವು ಎರಡು ವಿಧವು- ೧ಸಂಸ್ಕೃತ ವೇದ-ದ್ರಾವಿಡ ವೇದ- ಎಂಬುದಾಗಿ-

ಸಂಸ್ಕೃತ ವೇದ-

1. ಸಂಸ್ಕೃತ ವೇದವು ಋಗ್ಯೆಜಸ್ಸಾಮ ಅಥರ್ವ ಎಂಬುದಾಗಿ ನಾಲ್ಕು ಭಾಗಗಳು.
2. ವೇದ ಶಬ್ದವು ಕೇವಲ ಸಂಸ್ಕೃತ ವೇದ ಪ್ರಮಾಣವೆನ್ನುವವರ ಗೋಷ್ಠಿಯಲ್ಲ ವ್ಯವಹರಿಸಲ್ಪಡುವುದು.
3. ಸಂಸ್ಕೃತ ವೇದಜ್ಞಾನ ಭಕ್ತಿಪ್ರದಾಯಕವು.
4. ಸಂಸ್ಕೃತ ವೇದದಲ್ಲಿ ಪರಾತ್ಪರವಸ್ತುವನ್ನು ನಿರ್ಣಯಿಸಿರುವುದು.

ದ್ರಾವಿಡ ವೇದ-

1 .ದ್ರಾವಿಡ ವೇದವು ಮೊದಲು ಸಾವಿರ.ಎರಡನೇ ಸಾವಿರ, ಮೂರನೇ ಸಾವಿರ ನಾಲ್ಕನೇ ಸಾವಿರ ಎಂಬುದಾಗಿ ನಾಲ್ಕು ಭಾಗಗಳು.

2. ವೇದಶಬ್ದ ಇಲ್ಲದ್ದರಿಂದ, ದ್ರಾವಿಡ ಪ್ರಬಂಧವೆನ್ನುವವರಿಗೆ ನಷ್ಟವಿಲ್ಲ. ವ್ಯವಹಾರವು ದ್ರಾವಿಡವೇದ ಎಂದು ಹೇಳುವ. ವ್ಯವಹಾರಕ್ಕೆ ಬಾಧಕವಿಲ್ಲ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

3. ದ್ರಾವಿಡ ವೇದ ಪ್ರಪತ್ತಿಯೋಗ ಪ್ರತಿಪಾದಕವು.

4. ದ್ರಾವಿಡ ವೇದದಲ್ಲಿ ಪರಾತ್ಪರವಸ್ತುವನ್ನು ನಿರ್ಣಯಿಸುವುದು.

ಹಾಗಾದರೆ ಸಂಸ್ಕೃತವೇದ, ದ್ರಾವಿಡ ವೇದ ಎರಡೂ ಸಮವೆಂದು ಹೇಳಿದಹಾಗಾಯಿತು.

ಸಂಸ್ಕೃತವೇದವೂ, ದ್ರಾವಿಡವೇದವೂ ಸಮವೆಂದಮೇಲೆ ವೇದ ಪ್ರಾಮಾಣ್ಯವನ್ನು ಅಂಗೀಕರಿಸುವ ತ್ರಿಮತಸ್ಥರೂ ದ್ರಾವಿಡ ವೇದವನ್ನು ಅಂಗೀಕರಿಸಬೇಕಾಯಿತು.

ಉಭಯ ವೇದ ಪ್ರಮಾಣ ಅಂಗೀಕರಿಸುವ ಗೋಷ್ಠಿಯಲ್ಲಿ ಉಭಯ ವೇದಾಂತ ಪ್ರವರ್ತಕರು ಎನ್ನುವ ವ್ಯವಹಾರವಿರುವುದಲ್ಲವೇ? ಹಾಗಿದ್ದಾಗ್ಯೂ ವೇದ ಪ್ರಮಾಣ್ಯವನ್ನು ಒಪ್ಪುವ ತ್ರಿವತಸ್ಥರು ದ್ರಾವಿಡವೇದವನ್ನೇಕೆ ಅಂಗೀಕರಿಸುವುದಿಲ್ಲ? ಕಾರಣ- ಆ ರೀತಿ ಒಪ್ಪಲು ಅವರ ಮತಕ್ಕೆ ದ್ರಾವಿಡವೇದವು ವಿರೋಧವಾಗುವುದೆಂಬ ಭಯದಿಂದ ಅಂಗೀಕರಿಸುವುದಿಲ್ಲ. ಅವರ ಮತಕ್ಕೆ ವಿರೋಧವೇನು?

ದ್ವೈತಾ ದ್ವೈತ ವಿಶಿಷ್ಟಾದ್ವೈತವೆಂಬ ತ್ರಿಮತಸ್ಥರು ಸಂಸ್ಕೃತವೇದವು ತಮಗೆ ಸೇರಿರುವುದೆಂದು ಸಮನ್ವಯ ಮಾಡಲು ಸಾಧ್ಯವಿರುವುದು. ಅಸಮನ್ವಯವು ಪರಮ

ವೈದಿಕಾಗ್ರೇಸರಿಂದ ಶ್ರುತಿನ್ಯಾಯ ಬಲದಿಂದ ನಿರ್ಣಯವಾಗುವುದು... ಅಲ್ಲದೆ ಸಂಸ್ಕೃತವೇದ ಮಂತ್ರದ್ರಷ್ಠರಾದ ವ್ಯಾಸ ಪರಾಶರರನ್ನು ಸಹ ತಮ್ಮ ಮತದವರೆಂದೂ ಅವರವರ ವೇದಾಂತ ಮತಕ್ಕೆ ಮೂಲ ಪುರುಷರೆಂದೂ ಹೇಳಲು ಅವಕಾಶವಿರುವು-ದೆಂದು ಸಮನ್ವಯ ಮಾಡುವರು.

ಆದರೆ ದ್ರಾವಿಡವೇದದಲ್ಲಿ ಅವರ ವೇದಾಂತವನ್ನು ಸ್ಥಾಪಿಸಲು ಅವಕಾಶವಿಲ್ಲವಾಗಿದೆ. ದ್ರಾವಿಡವೇದ ಮಂತ್ರದ್ರಷ್ಟರಾದ ಪರಾಂಕುಶರೆನ್ನುವವರು ಪರಮ ವೈದಿಕ ವಿಶಿಷ್ಟಾದ್ವೈತ ಸಿದ್ಧಾಂತದವರೆಂದು ನಿರ್ಣಯವು. ಆದ್ದರಿಂದ ಅವರನ್ನೂ ಅವರಿಂದ ಉತ್ಪನ್ನವಾದ ದ್ರಾವಿಡವೇದ ಪ್ರಬಂಧವನ್ನೂ ಪರಿಗ್ರಹಿಸುವುದಿಲ್ಲ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಸಂಸ್ಕೃತವೇದ ಪ್ರಮಾಣ್ಯವನ್ನು ಒಪ್ಪುವವರು ಈ ದ್ರಾವಿಡ ವೇದ ಪ್ರಾಮಾಣ್ಯವನ್ನೊಪ್ಪದಿದ್ದ ಮಾತ್ರಕ್ಕೆ ದ್ರಾವಿಡವೇದಕ್ಕೆ ನಷ್ಟವೇನೂ ಇರುವುದಿಲ್ಲ. ಉಪನಿ ಮೀಮಾಂಸಕರು ಪೂರ್ವಮೀಮಾಂಸವನ್ನು ಪರಿಗ್ರಹಿಸದೆ ಇರುವುದರಿಂದ ಉಪನಿ ಷದ್ರೂಪವಾದ ಉತ್ತರ ಭಾಗಕ್ಕೆ ವೇದತ್ವ ಭಂಗ ಬರುವುದಿಲ್ಲ. ಉತ್ತರ ಭಾಗವನ್ನು ಒಪ್ಪಿ ಪೂರ್ವಭಾಗವನ್ನು ಒಪ್ಪದಿದ್ದರೂ ಪೂರ್ವಭಾಗಕ್ಕೆ ಭಂಗ ಬರುವುದಿಲ್ಲ. ಅದರಂತೆ ದ್ರಾವಿಡ ವೇದವನ್ನು ಒಪ್ಪದ ಸಂಸ್ಕೃತ ವೇದವನ್ನು ಮಾತ್ರ ಒಪ್ಪುವ ವೆಂದಾಗಲೀ, ಸಂಸ್ಕೃತವೇದವನ್ನು ಒಪ್ಪಿದೆ ದ್ರಾವಿಡ ವೇದವನ್ನು ಒಪ್ಪುವುದಿಲ್ಲವೆಂ ದಾಗಲೀ ಹೇಳಿದಲ್ಲಿ · ದ್ರಾವಿಡವೇದಕ್ಕೆ ಯಾವ ಭಂಗವೂ ಬರುವುದಿಲ್ಲ. ಅರ್ಥಾತ್ ಉಪನಿಷತ್ತಿನಂತೆ ದ್ರಾವಿಡವೇದಕ್ಕೆ ಶ್ರೇಷ್ಠತೆಯು ಇದ್ದೇ ಇರುವುದು-

ಕರ್ಮಮಾರ್ಗ ಪ್ರತಿಪಾದಿಸುವ ಪೂರ್ವಮೀಮಾಂಸಾ ಭಾಗಕ್ಕೆ ಸಾಮಾನ್ಯ ಪ್ರಮಾಣವು. ಬ್ರಹ್ಮಭಾಗ ಪ್ರತಿಪಾದಿಸುವ ಉತ್ತರ ಭಾಗಕ್ಕೆ ವಿಶೇಷ ಪ್ರಾಮಾಣ್ಯವು- ಪರಬ್ರಹ್ಮ ರೂಪ ನಾಮ ಗುಣಗಳನ್ನು ಪ್ರತಿಪಾದಿಸಿ ನಿರ್ಣಯಿಸುವ ದ್ರಾವಿಡ ವೇದಕ್ಕೆ ಅತಿ ವಿಶೇಷ ಪ್ರಾಮಾಣ್ಯವು. ಅಲ್ಲದೇ ಸಂಸ್ಕೃತ ವೇದದಲ್ಲಿ ಕರ್ಮಯೋಗ ಪ್ರತಿಪಾದಕವಾಗಿರುವುದು-ಉತ್ತರ ಭಾಗವು ಜ್ಞಾನ ಭಕ್ತಿ ಪ್ರತಿಪಾದಕವಾಗಿ ಪ್ರಮಾಣ ತರವಾಗಿರುವುದು.-ದ್ರಾವಿಡವೇದವು ಪ್ರಪತ್ತಿಯೋಗ ಪ್ರತಿಪಾದಕವಾಗಿ ಪ್ರಮಾಣತಮ ವಾಗಿರುವುದು.

ಸಂಸ್ಕೃತ ವೇದದಲ್ಲಿ ಪೂರ್ವಭಾಗ -ಉತ್ತರ ಭಾಗ ಎರಡೂ ಸಂಸ್ಕೃತ ಭಾಷೆಯೇ ಆಗಿರುವುದು. ಅವೆರಡರ ಐಕ್ಯವು ಸರಿಹೋಗುವುದು. ನೀವು ಹೇಳು ವುದು ದ್ರಾವಿಡ ಭಾಷೆ-ಆದ್ದರಿಂದ ಮೊದಲು ಹೇಳಿದ ಎಂದರೆ ಸಂಸ್ಕೃತ ವೇದಾ ಂತ ಭಿನ್ನವಾಗಿರುವುದಲ್ಲವೇ? ಸಂಸ್ಕೃತ ವೇದಕ್ಕೂ ದ್ರಾವಿಡ ಭಾಷೆಯ ಪ್ರಭಂಧಕ್ಕೂ ಐಕ್ಯಕಂತವು ಹೇಗೆ? ಪ್ರಮಾಣವಿರುವುದಿಲ್ಲ. ಆದರೆ ವಿಮರ್ಶಿಸಿದಲ್ಲಿ ದ್ರಾವಿಡ ವೇದಕ್ಕೂ ಸಂಸ್ಕೃತವೇದಕ್ಕೂ ಐಕ್ಯವು ಇರುವುದು ಹೇಗೆ? ಎಲ್ಲಿ? ಸಂಸ್ಕೃತ ವೇದ ವಿಷಯವನ್ನು ದ್ರಾವಿಡವೇದದಲ್ಲಿ ಅಲ್ಲಲ್ಲಿ ಪ್ರಯೋಗ ಕಂಡುಬರುವುದು. ದ್ರಾವಿಡ ವೇದ ವಿಷಯವು ಸಂಸ್ಕೃತದಲ್ಲಿ ಎಲ್ಲಿಯೂ ಕಾಣಬರುವುದಿಲ್ಲ. ಆದ್ದರಿಂದ ಸಂಸ್ಕೃತ ವೇದ ಮೊದಲು , ಅನಂತರ ಕಾಲದಲ್ಲಿ ದ್ರಾವಿಡ ವೇದವು ಹುಟ್ಟಿತು ಎಂದು ಸ್ಪಷ್ಟವಾಗಿ ತಿಳಿದುಬರುತ್ತದೆ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ವೇದವೆಂದರೆ ಸರ್ವಕಾಲದಲ್ಲಿಯೂ, ಇರುವುದೆಂದೂ, ಒಂದು ಕಾಲದಲ್ಲಿ ಹುಟ್ಟಿತೆಂದೂ ಹೇಳಲಾಗದು. ಸಂಸ್ಕೃತವೇದದಲ್ಲಿ ದ್ರಾವಿಡವೇದ ಪ್ರಸ್ತಾವನೆಯು ಇಲ್ಲವೆಂದು ಹೇಳುವುದೂ ಅಜ್ಞಾನವು. **ಯಾಚೋದಿತಾ, ಯಾಚಾನುದಿತಾ ತಸ್ಯೈ ವಾಚೇ ನಮೋನಮಃ** ಎಂದು ಸಂಸ್ಕೃತವೇದವು-ಇಲ್ಲಿ ಉದಿತ ಎಂದರೆ ದ್ರಾವಿಡವೇದವು-ಅನುದಿತ ಎಂದರೆ ಸಂಸ್ಕೃತ ವೇದವು . ಉದಿತ ಎಂದರೆ ಹುಟ್ಟಿದ್ದು ಅನುದಿತ ಎಂದರೆ ಹುಟ್ಟದೇ ಇರುವುದು. ಉದಿತ ಎಂದರೆ ಸೃಷ್ಟಿ ಅನಂತರ ಹುಟ್ಟಿದ್ದು ಎಂದರ್ಥವು. ಈ ದ್ರಾವಿಡ ವೇದವಲ್ಲದೇ ಬೇರೆ ಅರ್ಥ ಹೇಳಲಾಗುವುದಿಲ್ಲ. ಸೃಷ್ಟಿಗೆ ಮೊದಲು ಯಾವುದೂ ಇಲ್ಲವಾದ್ದರಿಂದ ಆ ಕಾಲದಲ್ಲಿ ಹುಟ್ಟಿದ ಸಂಸ್ಕೃತವೇದವು ಹುಟ್ಟಿದೇ ಇರುವಂತೆ ಕಾಣುವುದು. ಆದ್ದರಿಂದ ಸಂಸ್ಕೃತ ವೇದಕ್ಕೆ ಅನುದಿತವು ಎಂದು ಹೇಳಲಾಯಿತು. ಇನ್ನು ದ್ರಾವಿಡವೇದವು ಅಗಸ್ತ್ಯರ ತಪಃಫಲವಾಗಿ ಭಗವಂತನಿಂದ ಕಲಿಯುಗದಾದಿಯಲ್ಲಿ ಪರಮ ಯೋಗಿಗಳ ಮುಖದಿಂದ ಪ್ರವರ್ತಿಸಲ್ಪಟ್ಟಿದ್ದರಿಂದ ಉದಿತ ಎಂದೂ, ವ್ಯವಹರಿಸಲ್ಪಡುವುದು-ದ್ರಾವಿಡ ವೇದಕ್ಕೆ ಉದಿತ ಎಂಬ ಪ್ರಯೋಗ ಮಾಡುವುದರಿಂದ ಅದರ ಸ್ವತಃ ಪ್ರಮಾಣಕ್ಕೆ ಭಂಗಬರುವುದಿಲ್ಲವೇ? ಅದರ ಉತ್ಪತ್ತಿ ವ್ಯವಹಾರ ಮಾತ್ರವೇ ಸಹಸ್ರ ಶಾಖಾಂ ಯೋದ್ರಾಕ್ಷಂದ್ರಾವಿಡೀಂ ಬ್ರಹ್ಮಸಂಹಿತಾಂ-ಸಹಸ್ರ ಶಾಖಾವುಳ್ಳ ದ್ರಾವಿಡ ವೇದವನ್ನು ದರ್ಶಿಸಿದರು-ಎಂದು ಹೇಳುವುದರಿಂದ ವ್ಯಾಸಾದಿಗಳಂತೆ ಪರಾಂಕುಶಾದಿಗಳು ಮಂತ್ರದ್ರಷ್ಟರೇ ಆಗುವರು-ಆದ್ದರಿಂದ ದ್ರಾವಿಡವೇದವು ತದನಂತರ ಕಾಲದಲ್ಲಿ ಉತ್ಪನ್ನವು ಎನ್ನುವ ಮಾತು ನಿರಸನ ಮಾಡಲ್ಪಟ್ಟಿತು. ಅಪ್ರಪನ್ನರಿಗೆ ದ್ರಾವಿಡವೇದಾಧಿಕಾರವಿರುವುದಿಲ್ಲ ಎನ್ನುವ ಕಾರಣದಿಂದಲೂ, ಸಂಸ್ಕೃತವೇದವು ಅಪ್ರಪನ್ನರೂ ಓದುವುದರಿಂದಲೂ ಸಂಸ್ಕೃತವೇದವು ಯೂಚೋದಿತಾ ಎಂಬುದಾಗಿ ದ್ರಾವಿಡವೇದವನ್ನು ಗೂಢವಾಗಿ ಹೇಳಿರುವುದು. ದ್ರಾವಿಡವೇದವು ಮೇಲೆ ತಿಳಿಸಿದ ಕಾರಣಗಳಿಲ್ಲದೇ ಇರುವುದರಿಂದ ಸಂಸ್ಕೃತ ವೇದ ಪ್ರಶಂಸೆಯನ್ನು ಸುಸ್ಪಷ್ಟವಾಗಿ ಹೇಳಿರುವುದು.

ವೇದವು ಹಯಗ್ರೀವನಿಂದ ಕಬಳಿಸಲ್ಪಟ್ಟಿತೆಂದೂ ವೇದವ್ಯಾಸರಿಂದ ವಿಸ್ತರಿಸಲ್ಪಟ್ಟಿತೆಂದೂ ಹೇಳಿರುವುದಷ್ಟೇ-ಅದು ಸಂಸ್ಕೃತ ವೇದಕ್ಕೆ ಮಾತ್ರವೇ? ಅಥವಾ ದ್ರಾವಿಡ ವೇದಕ್ಕೂ ಅನ್ವಯಿಸುತ್ತದೆಯೇ? ಮೊದಲು ಪಕ್ಷದಲ್ಲಿ ಸಂಸ್ಕೃತ ವೇದವು ಕಬಳಿಸಲ್ಪಟ್ಟಿತು ಎಂದು ಹೇಳಲಾಗಿದೆ. ವೇದವು ಕಬಳಿಸಲ್ಪಟ್ಟಿತೆಂದು ಹೇಳುವುದರಿಂದ ದ್ರಾವಿಡವೇದಕ್ಕೆ ವೇದತ್ವವು ಇಲ್ಲವೆಂದಾಗುವುದು. ಎರಡನೇ

JAGADGURU VISHWARADHYA JNANA SIMHASAN JNANAMANDIR LIBRARY Jangamawadi Math, Varanasi Acc. No.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಪಕ್ಷದಲ್ಲಿ ಋಗ್ಯಜು ಸ್ಸಾಮಾಥರ್ವ ವಿಭಾಗದಿಂದ ವೇದವನ್ನು ವ್ಯಾಸರು ವಿಸ್ತರಿಸಿದರು ಎನ್ನುವುದರಿಂದಲೂ ದ್ರಾವಿ-ಡವೇದದಲ್ಲಿ ಆ ವಿಭಾಗವಿಲ್ಲದ್ದರಿಂದಲೂ ದ್ರಾವಿಡಕ್ಕೆ ವೇದತ್ವವು ಸಿದ್ಧಿಸುವುದಿಲ್ಲ.

ಸಮಾಧಾನ- ಹಯಗ್ರೀವನು ಕಬಳಿಸುವ ಸಮಯದಲ್ಲಿ ಸಂಸ್ಕೃತವೇದ ಒಂದೇ ಇದ್ದಿತು. ಅದನ್ನೇ ವ್ಯಾಸರು ವಿಸ್ತಾರ ಮಾಡಿದರು. ಆ ಸಮಯದಲ್ಲಿ ದ್ರಾವಿಡವೇದವು ಯಾರಿಗೂ ತಿಳಿದಿರಲಿಲ್ಲ. ಆದುದರಿಂದ ಸಂಸ್ಕೃತವೇದವು ಕಬಳಿಸಲ್ಪಟ್ಟಿತು. ಸಂಸ್ಕೃತ-ವೇದವು ವಿಸ್ತರಿಸಲ್ಪಟ್ಟಿತು. ಎಂದು ಹೇಳದೆ ಕೇವಲ ವೇದವೆಂದೇ ಹೇಳಲ್ಪಟ್ಟಿತು. ತಿಳಿಯದವರ ವ್ಯವಹಾರವು ತಿಳಿದವರ ವ್ಯವಹಾರಕ್ಕೆ ಪ್ರತಿಬಂಧಕವಿರುವುದಿಲ್ಲ. ಬ್ರಹ್ಮನನ್ನು ಸೃಷ್ಟಿಸಿ ಸೃಷ್ಟಿಕಾರ್ಯದಲ್ಲಿ ನಿಯಮಿಸಿ ಅವನಿಗೆ ಬೇಕಾದ ಜ್ಞಾನಕ್ಕೆ ಅನುಸಾರವಾಗಿ ಭಗವಂತನು ಬ್ರಹ್ಮನಿಗೆ ಸಂಸ್ಕೃತವೇದವನ್ನು ಮಾತ್ರವೇ ಉಪದೇಶಿಸಿದನು-ಅದೇ ರೀತಿಯಲ್ಲಿ ಕಲಿಯುಗದಲ್ಲಿ ಕರ್ಮಜ್ಞಾನದಿಂದ ಸಂಸಾರಸಾಗರದಲ್ಲಿ ಬಿದ್ದು ಅಶಕ್ತರಾದ ಜನರನ್ನು ಉದ್ಧರಿಸಲು ಪರಾಂಕುಶಾದಿಗಳ ಮುಖದಿಂದ ದ್ರಾವಿಡವೇದವನ್ನು ಜನರಿಗೆ ಉಪದೇಶಿಸಿದನು ಎಂಬುದಾಗಿ ತಿಳಿಯಬೇಕು.

ಇನ್ನೊಂದು ನಿರ್ವಾಹ - ಭಗವಂತನು ಬ್ರಹ್ಮನಿಗೆ ಸಂಸ್ಕೃತ ಮತ್ತು ದ್ರಾವಿಡ ವೇದ ಎರಡನ್ನೂ ಉಪದೇಶಿಸಿದನು. ಆ ದೋಷದಿಂದ ಹಯಗ್ರೀವನಿಂದ ಸಂಸ್ಕೃತವೇದವು ಕಬಳಿಸಲ್ಪಟ್ಟಿತು. ಭಗವಂತನು ಸಂಸ್ಕೃತವೇದವನ್ನು ಪುನಃ ಸಂಪಾದಿಸಿ ಬ್ರಹ್ಮನಿಗೆ ಉಪದೇಶಿಸಿದನು. ಇದನ್ನು ನೋಡಿ ಬ್ರಹ್ಮನು ದ್ರಾವಿಡವೇದಕ್ಕೆ ಅಧಿಕಾರಿಯಲ್ಲವೆಂದು ತಿಳಿದು ಗೂಢವಾಗಿ ಕಾಪಾಡಿ ಕಾಲಾಂತರದಲ್ಲಿ ಪ್ರಕಾಶಪಡಿಸಿದನು. ಆದ್ದರಿಂದಲೇ ಆ ಎರಡು ವೇದಗಳಿಗೂ ಉದಿತ-ಅನುದಿತ ಎಂಬ ವ್ಯವಹಾರವು ಏರ್ಪಟ್ಟಿತ್ತು.

ಹಾಗಾದರೆ ದ್ರಾವಿಡವೇದವು ಎಂದು ಹೇಳಿದ ಮೇಲೆ ಇದಕ್ಕೆ ದಿವ್ಯ ಪ್ರಬಂಧ ಎನ್ನುವ ವ್ಯವಹಾರವು ಹೇಗೆ ಬಂದಿತು? ಅಲ್ಲದೇ ನಾಲ್ಕು ಸಾವಿರ ಸಂಖ್ಯೆಯುಳ್ಳ ದ್ರಾವಿಡ ಪ್ರಬಂಧಕ್ಕೆ ಚತುರ್ವೇದ ಸಾರವು ಎಂದು ಹೇಗೆ ಹೇಳಲಾಯಿತು? ಸಂಸ್ಕೃತವೇದಕ್ಕೆ ಕೇವಲ ವೇದತ್ವ ಮಾತ್ರ ಇರುವುದು.

ಪ್ರಕೃತ ವಿಷಯವು ಕಿಂಚಿತ್ ಗ್ರಂಥಬಾಹುಳ್ಯವಾದ್ದರಿಂದಲೂ ವಿಷಯಕ್ಕೆ ವೈದಿಕ, ಲೌಕಿಕ ಸಲಕರಣೆಗಳು ಅತ್ಯಾವಶ್ಯಕವಾದ್ದರಿಂದ ನಿಲ್ಲಿಸಲಾಗಿದೆ. ವಿಷಯವನ್ನು ಪೂರ್ತಿ ಬರೆಯಲಾಗದೆ ಇರುವುದರಿಂದ ಕ್ಷಮೆಯನ್ನು ಕೋರಿ ಇದೇ ರೀತಿಯ ಇನ್ನೂ ಅನೇಕ ಸಂಸ್ಕೃತ ... ಗ್ರಂಥಗಳನ್ನು ಪ್ರಕಾಶಪಡಿಸುವ ಅಭಿಪ್ರಾಯ... ವಿವರಿಸಲಾಗುವುದೆಂದು ತಿಳಿಸುತ್ತೇವೆ.

SRI JAGADGURU VISHWARADHYA
JNANA SIMHASAN JNANAMANDAL
LIBRARY
Jangamawadi Math, Varanasi
Acc. No. 8288

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಇದೇ ಗ್ರಂಥಕರ್ತರಿಂದ ಬರೆಯಲ್ಪಟ್ಟ ಗ್ರಂಥಗಳು

ಮುದ್ರಿತ

೧. **ಆಗಮ ಪ್ರಕಾಶ :-** ಶೈವ, ವೈಖಾನಸ ಪಾಂಚರಾತ್ರಾಗಮಶಾಸ್ತ್ರ ವಿಭಾಗ ಸಮಯಾಚಾರ ವಿಧಿ (ಪ್ರತಿಗಳು ಮುಗಿದಿವೆ)

೨. **ಭರತಖಂಡದ ದೇವಾಲಯಗಳು :-** (5 ಭಾಗಗಳು 6 ವಾಲ್ಯೂಂಗಳಲ್ಲಿ) ಪ್ರಥಮ ಭಾಗ (Vol. 1) ಸಿದ್ಧವಾಗಿದೆ. ಉಳಿದ ಭಾಗಗಳು ಅಚ್ಚಿನಲ್ಲಿವೆ.

(ಮುದ್ರಣಕ್ಕೆ ಸಿದ್ಧವಾಗಿರುವ ಇತರ ಗ್ರಂಥಗಳು)

೩. **ಆಗಮೋಕ್ತ ಮೂರ್ತಿಗಳು :-** ಆಲಯಗಳಲ್ಲಿ ಪೂಜಿಸಲ್ಪಡುವ ವಿಗ್ರಹಗಳು, ಮೂರ್ತಿಗಳು ಅವುಗಳ ಭೇದ, ಲಕ್ಷಣ, ವಿನ್ಯಾಸ ಮಾನಗಳ ವಿವರಣೆ.

೪. **ಪ್ರತಿಷ್ಠಾ ಪೂಜಾದಿಗಳು :-** ಪ್ರತಿಷ್ಠಾಕ್ರಮ, ಭೇದಗಳು, ಪೂಜಾವಿಧಿ, ಮಂತ್ರಭೇದ ಇತ್ಯಾದಿಗಳನ್ನೊಳಗೊಂಡಿದೆ.

೫. **ಉತ್ಸವ–ಸ್ನಪನ :-** ಇದರಲ್ಲಿ ವಿವಿಧ ಉತ್ಸವಗಳು, ಅವುಗಳ ಫಲ ಸ್ನಪನ ಭೇದಗಳು, ಕಲಶವಿನ್ಯಾಸ ಕ್ರಮಗಳು ಹೇಳಲ್ಪಟ್ಟಿವೆ.

೬. **ಮುದ್ರಾ–ಮಂಡಲ :-** ಪೂಜೋಪಯುಕ್ತವಾದ ಮುದ್ರವಿನ್ಯಾಸಗಳು ಮತ್ತು ಮಂಡಲಗಳ ರಚನೆ, ಭೇದಗಳು, ಪೂಜಾವಿಧಾನಗಳು ವಿವರಿಸಲ್ಪಟ್ಟಿವೆ.

೭. **ಶಿವಲಿಂಗಗಳು :-** ಮಾನ, ಲಕ್ಷಣ, ಮತ್ತು ಶಿರೋವರ್ತನಗಳಿಂದ ಉಂಟಾಗುವ ಲಿಂಗಗಳ ಅನೇಕ ಭೇದಗಳು ನಿರೂಪಿಸಲ್ಪಟ್ಟಿವೆ.

೮. **ಪಂಚ ಸಂಸ್ಕಾರ :-** ಇದರ ತತ್ವ, ಅವಶ್ಯಕತೆ, ಅಧಿಕಾರಿ ಮುಂತಾದ ವಿಷಯಗಳು.

೯. **ಪುಂಡ್ರಗಳು :-** ಊರ್ಧ್ವ ಮತ್ತು ತಿರ್ಯಕ್ಪುಂಡ್ರಗಳ ಭೇದಗಳ ವಿವೇಚನೆ.

೧೦. **ಹಬ್ಬ ಹರಿದಿನಗಳು:-** ವರ್ಷದಲ್ಲಿ ಆಚರಿಸಲ್ಪಡುವ ಹಬ್ಬ ಹರಿದಿನಗಳ ಉದ್ದೇಶ ಮತ್ತು ಫಲಗಳು, ಅವುಗಳ ಆಚರಣಾಕ್ರಮ

೧೧. **ವಸ್ತ್ರ ವಿನ್ಯಾಸ :-** ಹಿಂದೂ ಸ್ತ್ರೀಪುರುಷರ ನಾನಾ ವಿಧ ಉಡುಪುಗಳ ಶಾಸ್ತ್ರೋಕ್ತ ಕ್ರಮಗಳ ವರ್ಣನೆ.

೧೨. **ಹಯಶೀರ್ಷ ಸಂಹಿತಾ :-** (ಪಾಂಚರಾತ್ರ)

೧೩. **ಸುಪ್ರಭೇದಾಗಮ :-** (ಶೈವಾಗಮ)

CC0. In Public Domain. Jangamwadi Math Collection, Varanasi